೪೨೭
೪೨೮

ವಿಶೇಷಾಂಕ

ಪ್ರಕಟನೆಯ ೫೧ನೆಯ ವರ್ಷ

ಸಂಕ್ರಮಣ



ಸಂಪಾದಕ: ಚಂದ್ರಶೇಖರ ಪಾಟೀಲ

ಮಾರ್ಚ್ - ಏಪ್ರಿಲ್
ಮೇ - ಜೂನ್
೨೦೧೭

ಸಂಕ್ರಮಣ ಪ್ರಕಾಶನ, ಬೆಂಗಳೂರು



ಉದ್ಘಾಟನೆ : ೧೨ ಮಾರ್ಚ್ ೨೦೧೬



ಗಿರಡ್ಡಿ ಗೋವಿಂದರಾಜ ಸಿದ್ಧಲಿಂಗ ಪಟ್ಟಣಶೆಟ್ಟಿ ಚಂದ್ರಶೇಖರ ಪಾಟೀಲ

ಸಂಕ್ರಮಣ

ಸಾಹಿತ್ಯ ಸಂಕಲನ

ಸಂಪುಟ : ೫೧ ಸಂಚಿಕೆ : ೦೨-೦೩

ಮಾರ್ಚ-ಜೂನ್ ೨೦೧೬

ಸಂಪಾದಕ : ಚಂದ್ರಶೇಖರ ಪಾಟೀಲ (ಚಂಪಾ)

ವ್ಯವಸ್ಥಾಪಕ : ಸುನಿಲ ಪಾಟೀಲ

ಪ್ರಥಮ ಸಂಕ್ರಮಣ
ಸಾಹಿತ್ಯ ಸಮ್ಮೇಳನ ವಿಶೇಷಾಂಕ

ವಾರ್ಷಿಕ ಚಂದಾ : ರೂ. ೨೦೦

ಐದು ವರ್ಷಕ್ಕೆ : ರೂ. ೯೦೦

ಆಜೀವ ಚಂದಾ : ರೂ. ೩,೦೦೦

ಮಹಾ ಪೋಷಕತ್ವ : ರೂ. ೫,೦೦೦

ಸಂಕ್ರಮಣ ಪ್ರಕಾಶನ
ಜ್ಯೋತಿ ಲೇಔಟ್, ಮೇನ್-೨,
ಜರಗನಹಳ್ಳಿ, ವಾರ್ಡ್-೧೮೬, ಜೆ. ಪಿ.
ನಗರ ಅಂಚೆ, ಬೆಂಗಳೂರು ೫೬೦ ೦೭೮
ಫೋನು: ೦೮೦-೨೬೩೨ ೩೩ ೪೪
ಮೊಬೈಲ್: ೯೪೪೯೦-೬೯೩೪೪

ಸಂಕ್ರಮಣ ಪ್ರಕಾಶನ : ಬ್ಯಾಂಕ್ ಖಾತೆ
ಕರೆಂಟ್ ಅಕೌಂಟ್
ಸಂಖ್ಯೆ : ೫೪೦೨೧೨-೫೫೭೪೯
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (SBM)
ಬಸವನಗುಡಿ ಶಾಖೆ, ಬೆಂಗಳೂರು - ೦೪.
IFSC No. SBMY 00 40014
ಯಾವ ಹೆಚ್ಚಿನ ವೆಚ್ಚವೂ ಇಲ್ಲದೆ ಈ ಖಾತೆಗೆ ನೀವು ಚಂದಾ ಸಂದಾಯ ಮಾಡಬಹುದು. ನಿಮ್ಮ ಬ್ಯಾಂಕ್ ಮ್ಯಾನೇಜರರ ಸಲಹೆ ಪಡೆಯಿರಿ.
ಹೀಗೆ ಮಾಡಿದ ನಂತರ ನೀವು ***ನಮಗೆ ಒಂದು ಪತ್ರ ಬರೆಯಬೇಕು.***

ಲಿಪಿ ಜೋಡಣೆ ಹಾಗೂ ಮುದ್ರಣ
ನೇತ್ರಾ ಪ್ರಿಂಟರ್ಸ್
ಬೆಂಗಳೂರು-೫೬೦ ೦೧೮

ಆಪ್ ಸಾತ್

ಪ್ರಿಯ ಸಂಗಾತಿಗಳೇ,

ನನ್ನದೊಂದು ಕನಸು, ಕನಸು ಅಂತ ಹೇಳುತ್ತಿದ್ದೆನಲ್ಲ ಆ ಕನಸು ಈ ವರ್ಷದ ಮಾರ್ಚ ೧೨-೧೩ರಂದು ನನಸಾಗಿದೆ. ನಮ್ಮ ಪ್ರಥಮ ಸಂಕ್ರಮಣ ಸಾಹಿತ್ಯ ಸಮ್ಮೇಳನ ರಾಜಧಾನಿ ಬೆಂಗಳೂರಿನ ಭವ್ಯ ಕಟ್ಟಡವೊಂದರಲ್ಲಿ - 'ಶಿಕ್ಷಕರ ಸದನ'ದಲ್ಲಿ - ಸಾಂಗವಾಗಿ ನೆರವೇರಿದೆ. ಐವತ್ತು ವರ್ಷಗಳ ಹಿಂದೆ ಧಾರವಾಡ ಎಂಬ ಪುಟ್ಟ ನಗರವೊಂದರಲ್ಲಿ 'ಹೊಟೇಲ ಧಾರವಾಡ'ದ ಚಿಕ್ಕ ಸಭಾಂಗಣದಲ್ಲಿ ನಮ್ಮ ಮೊಟ್ಟ ಮೊದಲ ಸಂಚಿಕೆ ಬಿಡುಗಡೆಯಾಗಿತ್ತು. ಅದೇ ನೆನಪು ನನಗೆ ಮತ್ತೆ ಮತ್ತೆ. ಆಗ ೪೦-೫೦ ಮಂದಿ ಸೇರಿರಬೇಕು. ಈಗೋ ನಾಡಿನ ಎಲ್ಲ ದಿಕ್ಕುಗಳಿಂದ ಬಂದ ನೂರಾರು ಗೆಳೆಯರು. ಎರಡು ದಿನದ ಎರಡು ಊಟದ್ದಷ್ಟೇ ನಾವು ಮಾಡಿದ ವ್ಯವಸ್ಥೆ. ಆದರೆ ಎಲ್ಲರಲ್ಲೂ ಎಷ್ಟೊಂದು ಉಮೇದು, ಎಷ್ಟೊಂದು ಸಡಗರ. ತಮ್ಮ ತಮ್ಮ ಖರ್ಚಿನಲ್ಲಿ ಬಂದವರು. ಸಮ್ಮೇಳನಕ್ಕೆ ಅಂತ ತಮ್ಮ ಕೈಲಾದಷ್ಟು - ಕೆಲವರು ಕೈಮೀರಿ - ದೇಣಿಗೆ ಕೊಟ್ಟವರು. ಅದೊಂದು ಖರೇವಂದರೂ ಬಳಗದ ಬಂಗಾರ ಹಬ್ಬ. 'ಎಮ್ಮವರು ಬೆಸಗೊಂಡೊಡೆ' ಅನ್ನುತ್ತಾರಲ್ಲ, ಹಾಗೆ. ಸರಕಾರದಿಂದ ಹಣ ಪಡೆಯುವ ಸಲಹೆ ಬಂದಿತ್ತು. ಇರಲಿ ಅಂತ ಅರ್ಜಿ ಗುಜ ರಾಯಿಸಿದೆ. ಅದೇನೋ ಅವರ 'ನಿಬಂಧನೆ' ಗಳಿಗೆ ಅನುಗುಣವಾಗಿ ಸಾಧ್ಯವಿಲ್ಲ ಅಂತ ಉತ್ತರ ಬಂತು. ನಾನೇನೂ ತಲೆ ಕೆಡಿಸಿ ಕೊಳ್ಳಲಿಲ್ಲ.

ಸಭಾಗೃಹದ ಬಾಡಿಗೆ, ಊಟದ ಖರ್ಚು, ವೇದಿಕೆಯ ಅಲಂಕಾರ, ಸಮ್ಮೇಳನದ ಪ್ರಚಾರ, ಸಂಗೀತ ಕಾರ್ಯಕ್ರಮ, ಸಾಕ್ಷ್ಯಚಿತ್ರ ಪ್ರದರ್ಶನ, ಸಾರಿಗೆ ಸೌಲಭ್ಯ - ಎಲ್ಲವನ್ನೂ ನಾ ಮುಂದೆ ತಾ ಮುಂದೆ ಅಂತ ಜವಾಬ್ದಾರಿ ಹೊತ್ತುಗೊಂಡು ಹೂವು ಎತ್ತಿದ ಹಾಗೆ ಎಲ್ಲ ನಿಭಾಯಿಸಿದವರು ಬಳಗದ ಗೆಳೆಯರು. ಏನು ಪ್ರೇರಣೆ ಅಂತ ನನಗೆ ಅಚ್ಚರಿ. ಹೊಳೆದ ಉತ್ತರ ನಿಚ್ಚಳ : ಪಾಲುಗೊಳ್ಳುವಿಕೆ, ಇನ್‌ವಾಲ್ವಮೆಂಟ್. ಇದು ನನ್ನ ಕಾರ್ಯಕ್ರಮ - ಎಂದೇ ಎಲ್ಲರ ಭಾವನೆ. ಅನಗತ್ಯ ಆಡಂಬರ ಇಲ್ಲದೆ ಒಂದು ಒಳ್ಳೆಯ ಕಾರ್ಯಕ್ರಮ ಹೇಗೆ ಮಾಡಬಹುದು ಎಂಬುದಕ್ಕೆ ನಮ್ಮ ಸಮ್ಮೇಳನ ಒಂದು ಯಶಸ್ವೀ 'ಪ್ರಯೋಗ'ವಾಗಿತ್ತು.

ನಮಗೆ ಸಿಕ್ಕ ಮಾಧ್ಯಮಗಳ ಸಹಕಾರ ಅದ್ಭುತವಾಗಿತ್ತು. ಇದಕ್ಕೇ ನಾಂದಿ ಹಾಡಿದ್ದು 'ವಿಶ್ವವಾಣಿ'ಯ ಗೆಳೆಯ ವಿಶ್ವೇಶ್ವರ ಭಟ್ಟರು. ಮೂರು ದಿನ ನಿರಂತರ ಇಡೀ ಪುಟವನ್ನೇ ಮೀಸಲಾಗಿಟ್ಟ ಈ ಗೆಳೆಯ - ನನ್ನ ಆತ್ಮೀಯ ಮತ್ತು 'ಒಂದು ನಮೂನೆ'ಯ ಹಳೇ ವಿದ್ಯಾರ್ಥಿ. ಪ್ರಜಾವಾಣಿ, ವಿಜಯವಾಣಿ, ಉದಯವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ - ಎಲ್ಲರೂ ಎಲ್ಲರೂ ಈ ಸಾಂಸ್ಕೃತಿಕ ವಿದ್ಯಮಾನಕ್ಕೆ ಪ್ರಚಾರಕೊಟ್ಟರು. ಎಲ್ಲರಿಗೂ ನಾನು ರುಣಿ.

•

ಸಮ್ಮೇಳನದ ಎಂಟೂ ಗೋಷ್ಠಿಗಳು ಗಂಭೀರ ಚಿಂತನೆಗೆ, ವಾದ-ವಿವಾದಗಳಿಗೆ ಅವಕಾಶ ಮಾಡಿಕೊಟ್ಟವು. ಬರಬೇಕಾಗಿದ್ದ ಹಲವರು ಬರಲಿಲ್ಲ; ಆದರೆ ಇದ್ದವರು ಆ ಕೊರತೆ ತುಂಬಿದರು. ನಿರ್ವಹಣೆಯ ಕೆಲಸದಲ್ಲಿ ಮುಂಚೂಣಿಯಲ್ಲಿದ್ದವರು ಹಿರಿಯರಾದ ಡಾ. ಎಚ್. ಎಸ್. ಎಂ. ಪ್ರಕಾಶ ಅವರು. ಡಾ. ಕೆ. ಪುಟ್ಟಸ್ವಾಮಿ, ಶ್ರೀ ಶಿವಶಂಕರ ಹಿರೇಮಠ, ಡಾ. ಸು.ಶಿ. ಕಾಡನಕುಪ್ಪೆ, ಡಾ. ಬೋರೇಗೌಡ ಚಿಕ್ಕಮರಳಿ, ಶ್ರೀ ಜಿ. ಎನ್. ರಂಗನಾಥರಾವ್ - ಅವರ ಒಡನಾಡಿಗಳು. ಸಭಾಂಗಣಕ್ಕೆ ಭಾವಗೀತೆಗಳ ಗುಂಗು ತುಂಬಿದವರು - ವೆಂಕಟೇಶ ಮೂರ್ತಿ ಶಿರೂರ, ಮೃತ್ಯುಂಜಯ ದೊಡ್ಡವಾಡ ಮತ್ತು ಪಂ. ಸತೀಶ ಹಂಪಿಹೊಳಿ. ಕೆ.ಎಸ್. ಪರಮೇಶ್ವರ ತೋರಿಸಿದ ಡಾ. ಕಲಬುರ್ಗಿ ಕುರಿತ ಸಾಕ್ಷ್ಯಚಿತ್ರ ನೋವಿನ ನಾದ ಮಿಡಿದಿತ್ತು... ಮೂರು ಕವಿಗೋಷ್ಠಿಗಳಲ್ಲಿ ಪಾಲುಗೊಂಡವರು ನೂರಾರು ಕವಿಗಳು : ಹಿರಿಯರು-ಕಿರಿಯರು, ಹಳಬರು-ಹೊಸಬರು..

•

ವಿಶೇಷಾಂಕಕ್ಕೆಂದು ಜಾಹೀರಾತು ನೀಡಿದ ಕ.ರಾ. ಮಾಲಿನ್ಯ ನಿಯಂತ್ರಣ ಮಂಡಳಿ - ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗಳಿಗೆ ಕೃತಜ್ಞತೆಗಳು.

– ಚಂಪಾ

ವಿಶೇಷಾಂಕ

ಡಾ. ಶಿವರಾಜ ಪಾಟೀಲ
೦೮೦-೨೩೬೧ ೬೬೪೪

೨೫೪, ಸ್ಪರ್ಶ, ಕ್ರಾಸ್-೧೮, ಸದಾಶಿವ ನಗರ
ಬೆಂಗಳೂರು - ೫೬೦ ೦೮೦.

ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
೯೪೪೮೬ ೩೦೬೩೭

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ
ಧಾರವಾಡ ೫೮೦ ೦೦೪.

ಡಾ. ಮನು ಬಳಿಗಾರ
೯೪೪೮೪ ೮೪೧೯೫

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ
ಬೆಂಗಳೂರು ೫೬೦ ೦೧೮.

ಡಾ. ಎಚ್.ಎಸ್.ಎಂ. ಪ್ರಕಾಶ
೮೧೦೫೯ ೨೯೩೦೬

#೦೯, ಕ್ರಾಸ್-೧, ಮೇನ್-೧, ಟೀಚರ್ಸ್ ಕಾಲನಿ
ದಯಾನಂದ ಕಾಲೇಜು ರಸ್ತೆ, ಬೆಂಗಳೂರು ೫೬೦ ೦೭೮.

ಡಾ. ಮುಜಾಫ್ಫರ್ ಅಸ್ಸಾದಿ
೯೪೪೮೧ ೮೬೨೯೫

ರಾಜ್ಯಶಾಸ್ತ್ರ ವಿಭಾಗ, ಮೈಸೂರು ವಿ.ವಿ.
ಮಾನಸ ಗಂಗೋತ್ರಿ, ಮೈಸೂರು ೫೭೦ ೦೦೬.

ಡಾ. ಬಿ.ಎಲ್. ಶಂಕರ
೯೮೪೫೦ ೬೮೭೧೦

#೭೨, ಕ್ರಾಸ್-೪, ಆರ್.ಎಂ.ವಿ., ಫೇಜ್-೨
ಬೆಂಗಳೂರು ೫೬೦ ೦೯೪.

ಡಾ. ರಾಜೇಂದ್ರ ಚೆನ್ನಿ
೯೪೪೯೫ ೫೩೩೪೯

ಇಂಗ್ಲಿಷ್ ವಿಭಾಗ, ಕುವೆಂಪು ವಿ.ವಿ.,
ಶಂಕರಘಟ್ಟ (ಶಿವಮೊಗ್ಗ) ೫೭೭ ೪೫೧.

ಅಗ್ನಿ ಶ್ರೀಧರ
೯೯೦೦೦ ೦೨೩೨೪

ಅಗ್ನಿ-ಸಾಪ್ತಾಹಿಕ, ೩-ಎ, ೯-ಬಿ ಮೇನ್, ಪ್ರಶಾಂತಿನಗರ
ಬೆಂಗಳೂರು - ೫೬೦ ೦೭೮.

ಡಾ. ಸಿ.ಎನ್. ರಾಮಚಂದ್ರನ್
೯೮೮೬೮ ೬೧೪೯೫

#ಎ-೭, ಎಲಿಟಾ ಅಪಾರ್ಟಮೆಂಟ್, ಮೇನ್-೧೮
ಹಂತ-೭, ಜೆ.ಪಿ.ನಗರ, ಬೆಂಗಳೂರು ೫೬೦ ೦೭೮.

ಡಾ. ತುಮಕೂರು ಚಂದ್ರಕಾಂತ
೯೯೮೦೭ ೭೮೫೮೦

#೨೭೧/೧, ಕ್ರಾಸ್-೧೪, ಸಿ.ಎಂ.ಎಚ್. ರಸ್ತೆ
ಇಂದಿರಾನಗರ II , ಬೆಂಗಳೂರು ೫೬೦ ೦೩೮.

ಬಿ. ಸುರೇಶ
೯೮೪೫೦ ೬೯೬೭೬

#೧೧೬೨, ಮೀಡಿಯಾ ಹೌಸ್, ಕ್ರಾಸ್-೨೨, ಮೇನ್-೨೩
ಬನಶಂಕರಿ II, ಬೆಂಗಳೂರು ೫೬೦ ೦೭೦.

ಡಾ. ವಿ. ಪಿ. ನಿರಂಜನಾರಾಧ್ಯ
೯೪೪೮೯ ೮೬೯೧೩
#೪೦೪, ಮಹಡಿ-೪, ಬ್ಲಾಕ್-ಎ, ಸಾಯಿ ಗಂಗೋತ್ರಿ
ಅಪಾರ್ಟ್‌ಮೆಂಟ್, ಬೆಂಗಳೂರು ೫೬೦ ೦೫೬.

ಡಾ. ಬಿ.ಎಂ. ಪುಟ್ಟಯ್ಯ
೯೪೪೮೯ ೮೦೧೦೫
ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿ.ವಿ. ಹಂಪಿ
ವಿದ್ಯಾರಣ್ಯ (ಬಳ್ಳಾರಿ) ೫೮೩ ೨೭೬.

ಡಾ. ಎಚ್.ಎಸ್. ಅನುಪಮಾ
೯೪೮೦೨ ೧೧೩೨೦
ಜಲಜ ಕ್ಲಿನಿಕ್, ಕವಲಕ್ಕಿ
ಹೊನ್ನಾವರ (ಉ.ಕ.) ೫೮೧ ೩೩೪

ಡಾ. ಹಾಲತಿ ಸೋಮಶೇಖರ
೯೮೮೬೬ ೨೨೮೩೩
#೩೬೬, ನವಿಲು ರಸ್ತೆ, ಕುವೆಂಪುನಗರ
ಮೈಸೂರು ೫೭೦ ೦೨೩

ಡಾ. ಹಿ.ಶಿ. ರಾಮಚಂದ್ರೇಗೌಡ
೯೯೮೦೨ ೯೦೦೦೮
#೨೨೨, ಹೊಂಬಾಳೆ, ಮೇನ್-೧, ಬೋಗಾದಿ
ಬಾಪೂಜಿ ಬಡಾವಣೆ, ಮೈಸೂರು ೫೭೦ ೦೦೬.

ಡಾ. ಸಿದ್ದನಗೌಡ ಪಾಟೀಲ
೯೪೪೮೦ ೮೭೫೯೪
ಸಂಪಾದಕರು: ಹೊಸತು-ಮಾಸಿಕ, ನವಕರ್ನಾಟಕ ಪ್ರಕಾಶನ
ಕ್ರೆಸೆಂಟ್ ರಸ್ತೆ, ಕೆ.ಪಿ.(ಪೂ), ಬೆಂಗಳೂರು ೫೬೦ ೦೦೧.

ಡಾ. ಆರ್. ಪೂರ್ಣಿಮಾ
೯೯೦೦೦ ೯೫೨೦೪
#೧೫೪೧, ಸಿರಿಗಂಧ, ಮೇನ್-೧೬
ವಿಜಯನಗರ, ಬೆಂಗಳೂರು ೫೬೦ ೦೪೦

---

*ಈ ವಿಶೇಷಾಂಕದ ಎಲ್ಲ ಲೇಖನಗಳು ಸಂಕ್ರಮಣ ಪ್ರಕಾಶನದ ಬಿಡಿ ಪ್ರಕಟಣೆಯಾಗಿ **ಸುವರ್ಣ ಸಂಕ್ರಮಣ** ಶೀರ್ಷಿಕೆಯಲ್ಲಿ ಹೊರಬರಲಿವೆ. ಹೆಚ್ಚುವರಿಯಾಗಿ **ಸಮ್ಮೇಳನದ ಬಣ್ಣದ ಫೋಟೋಗಳು** ಮತ್ತು ಸಂಕ್ರಮಣ ಕುರಿತ ಕೆಲ ಲೇಖನಗಳು ಅದರಲ್ಲಿ ಅಡಕಗೊಳ್ಳಲಿವೆ. (ಪುಟ : ೨೦೦) ನಿಮ್ಮ ಪ್ರತಿಗಾಗಿ ಬರೆಯಿರಿ.*

– ಚಂಪಾ


ಅರ್ಧ ಶತಮಾನದ ನಿರಂತರ ಪ್ರಕಟಣೆ : ೧೯೬೪-೨೦೧೫


ಸಂಕ್ರಮಣ

ಬಳಗದ ಬಂಗಾರ ಹಬ್ಬ









ಪ್ರಥಮ ಸಂಕ್ರಮಣ ಸಾಹಿತ್ಯ ಸಮ್ಮೇಳನ

ಮಾರ್ಚ್ ೧೨-೧೩, ೨೦೧೬: ಶನಿವಾರ-ಭಾನುವಾರ

ಸ್ಥಳ : ಶಿಕ್ಷಕರ ಸದನ (ಮೈಸೂರು ಬ್ಯಾಂಕ್ ಹತ್ತಿರ) ಬೆಂಗಳೂರು

ಉದ್ಘಾಟನೆ

ಮಾರ್ಚ್ ೧೨ : ಮುಂಜಾನೆ ೧೦-೦೦ ರಿಂದ ೧೧-೦೦

*

ಸ್ವಾಗತ : **ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ**

ಪ್ರಸ್ತಾವನೆ : **ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)**

ಉದ್ಘಾಟನೆ : **ನ್ಯಾಯಮೂರ್ತಿ ಶ್ರೀ ಶಿವರಾಜ ಪಾಟೀಲ**

ಅತಿಥಿ : **ಡಾ. ಮನು ಬಳಿಗಾರ**

*

ನಿರ್ವಹಣೆ : ಡಾ. ಎಚ್. ಎಸ್. ಎಂ. ಪ್ರಕಾಶ

ನಮ್ಮ ಬಂಗಾರ ಹಬ್ಬಕ್ಕೆ ನೀವೆಲ್ಲಾ ಬರ್ರಿ

– ಚಂಪಾ

– ನೀಲಾ ಪಾಟೀಲ

ಮೊದಲ ದಿನ : ಮಾರ್ಚ್ ೧೨

೧೧-೦೦ ರಿಂದ ೧೨-೦೦ : ಕವಿಗೋಷ್ಠಿ - ಒಂದು

: ಸಂಕ್ರಮಣ ಬಳಗದ ಹಿರಿಯ ಕವಿಗಳು :

ನಿರ್ವಹಣೆ : ಆರ್.ಜಿ. ಹಳ್ಳಿ ನಾಗರಾಜ, ರಾಜಶೇಖರ ಮಠಪತಿ (ರಾಗಂ), ಸುಜಾತಾ ಕುಮಟಾ

೧೨-೦೦ ರಿಂದ ೧-೩೦

ಗೋಷ್ಠಿ ೧ : ಜಾಗತಿಕ ಮೂಲಭೂತವಾದ ಮತ್ತು ನಮ್ಮ ನಡುವಿನ ಭಾರತ

ಡಾ. ಮುಜಾಫ್ಫರ್ ಅಸ್ಸಾದಿ * ಶ್ರೀ ಕೆ.ಎಸ್. ಪಾರ್ಥಸಾರಥಿ * ಶ್ರೀಮತಿ ಬಿ. ಎನ್. ಸುಮಿತ್ರಾ ಬಾಯಿ

ನಿರ್ವಹಣೆ : ಆರ್. ವೆಂಕಟರಾಜು

೨-೦೦ ರಿಂದ ೩-೩೦

ಗೋಷ್ಠಿ ೨ : ಭಾರತದ ಸಂವಿಧಾನ : ಆಶಯಗಳು-ಸವಾಲುಗಳು

ಡಾ. ಬಿ. ಎಲ್. ಶಂಕರ * ಶ್ರೀಮತಿ ಪ್ರಮೀಳಾ ನೇಸರಗಿ * ಶ್ರೀ ಎಸ್.ಎಚ್. ಪಟೇಲ

ನಿರ್ವಹಣೆ : ಶ್ರೀ ಸಿ. ಎಸ್. ದ್ವಾರಕಾನಾಥ

೩-೩೦ ರಿಂದ ೫-೦೦

ಗೋಷ್ಠಿ ೩ : ಇಂಡಿಯಾದಲ್ಲಿ ಸೆಕ್ಯುಲರಿಸಂ ಸ್ವರೂಪ

ಡಾ. ರಾಜೇಂದ್ರ ಚೆನ್ನಿ * ಶ್ರೀಮತಿ ಕೆ. ನೀಲಾ * ಶ್ರೀ ಅಗ್ನಿ ಶ್ರೀಧರ

ನಿರ್ವಹಣೆ : ಶ್ರೀ ಬಿ. ಎಂ. ಷಂಸುದ್ದೀನ್

೫-೦೦ ರಿಂದ ೬-೩೦

ಗೋಷ್ಠಿ ೪ : ಕನ್ನಡ ಚಿತ್ರೋದ್ಯಮ ಮತ್ತು ಡಬಿಂಗ್ ಸಂಸ್ಕೃತಿ

ಡಾ. ಸಿ. ಎನ್. ರಾಮಚಂದ್ರನ್ * ಶ್ರೀ ಬಿ. ಸುರೇಶ * ಡಾ. ತುಮಕೂರು ಚಂದ್ರಕಾಂತ

ನಿರ್ವಹಣೆ : ಡಾ. ಕೆ. ಪುಟ್ಟಸ್ವಾಮಿ

೬-೩೦ ರಿಂದ ೭-೩೦

ಭಾಗ ಸಂಕ್ರಮಣ : ಹಿರಿಯ ಕವಿಗಳ ಭಾವಗೀತೆಗಳ ಗಾಯನ

ಸಾರಥ್ಯ : ಶ್ರೀ ಮೃತ್ಯುಂಜಯ ದೊಡ್ಡವಾಡ, ಅಧ್ಯಕ್ಷರು, ಸಂಗೀತಧಾಮ

ಗಾಯಕರು : ಎಸ್. ಸುನೀತಾ, ಜ್ಯೋತಿ ರವಿಪ್ರಕಾಶ, ಸ್ಪರ್ಶ, ರಾಜಶೇಖರ ನುಲಿ, ವೆಂಕಟೇಶ ಮೂರ್ತಿ ಶಿರೂರ. ನಿರ್ವಹಣೆ : ಪಂಡಿತ್ ಸತೀಶ ಹಂಪಿಹೊಳಿ

ನಿರೂಪಣೆ : ಕಲಾದೇಗುಲ ಶ್ರೀನಿವಾಸ

೭-೩೦ ರಿಂದ ೮-೩೦ : ಕವಿಗೋಷ್ಠಿ - ಎರಡು

ನಾಡಿನ ನಾನಾ ಭಾಗದ ಸಂಕ್ರಮಣ ಕವಿಗಳು

ನಿರ್ವಹಣೆ : ಸುಕನ್ಯಾ ಮಾರುತಿ, ಪ್ರಕಾಶ ಹಲಗೇರಿ, ಬಸವರಾಜ ಸಬರದ

ಎರಡನೇ ದಿನ : ಮಾರ್ಚ್ ೧೩

೧೦-೦೦ ರಿಂದ ೧೧-೩೦

ಗೋಷ್ಠಿ ೫ : ಶಿಕ್ಷಣದಲ್ಲಿ ಸಮಾನತೆಯ ಹುಡುಕಾಟ

ಡಾ. ವಿ.ಪಿ. ನಿರಂಜನಾರಾಧ್ಯ * ಶ್ರೀಮತಿ ಹೇಮಲತಾ ಮಹಿಷಿ * ಡಾ. ಬಿ.ಎಂ. ಪುಟ್ಟಯ್ಯ

ನಿರ್ವಹಣೆ : ಶ್ರೀ ಶಿವಶಂಕರ ಹಿರೇಮಠ

೧೧-೩೦ ರಿಂದ ೧-೦೦

ಗೋಷ್ಠಿ ೬ : ಮಹಿಳಾ ಚಳುವಳಿ – ಇಂದು ಮತ್ತು ನಾಳೆ

ಡಾ. ಎಚ್. ಎಸ್. ಅನುಪಮಾ * ಡಾ. ಆರ್. ಸುನಂದಮ್ಮ * ಡಾ. ಹಾಲತಿ ಸೋಮಶೇಖರ

ನಿರ್ವಹಣೆ : ಡಾ. ಸು. ಶಿ. ಕಾಡನಕುಪ್ಪೆ

೧-೩೦ ರಿಂದ ೩-೦೦

ಗೋಷ್ಠಿ ೭ : ಕರ್ನಾಟಕದ ರೈತ ಚಳುವಳಿಗಳು : ತಾಳಿಕೆಯ ಮಾರ್ಗಗಳು

ಡಾ. ಹಿ.ಶಿ. ರಾಮಚಂದ್ರೇಗೌಡ * ಶ್ರೀಮತಿ ಕೆ.ಎಸ್. ನಂದಿನಿ ಜಯರಾಮ * ಡಾ. ಸಿದ್ದನಗೌಡ ಪಾಟೀಲ

ನಿರ್ವಹಣೆ : ಡಾ. ಬೋರೇಗೌಡ ಚಿಕ್ಕಮರಳಿ

೩-೦೦ ರಿಂದ ೪-೩೦

ಗೋಷ್ಠಿ ೮ : ಮಾಧ್ಯಮಗಳು : ಸಂಕಷ್ಟ ಮತ್ತು ಜವಾಬ್ದಾರಿ

ಶ್ರೀ ಗಂಗಾಧರ ಹಿರೇಗುತ್ತಿ * ಡಾ. ಆರ್. ಪೂರ್ಣಿಮಾ * ಶ್ರೀ ರವೀಂದ್ರ ರೇಶ್ಮೆ

ನಿರ್ವಹಣೆ : ಶ್ರೀ ಜಿ. ಎನ್. ರಂಗನಾಥರಾವ್

೪-೩೦ ರಿಂದ ೬-೦೦ : ಕವಿಗೋಷ್ಠಿ – ಮೂರು

ರಾಜಧಾನಿಯ ಕವಿಗಳು

ನಿರ್ವಹಣೆ : ಬಿ. ಆರ್. ನಾಗೇಶ * ಕೆ. ಶರೀಫಾ * ನೇ.ಭ. ರಾಮಲಿಂಗಶೆಟ್ಟಿ

೬-೦೦ ರಿಂದ ೭-೩೦

ಡಾ. ಎಂ. ಎಂ. ಕಲಬುರ್ಗಿ ಬದುಕು-ಬರಹದ ಸಾಕ್ಷ್ಯಚಿತ್ರ

ಮಾರ್ಗಕ್ಕೆ ಕೊನೆಯಿಲ್ಲ

ನಿರ್ಮಾಣ : ಹಿರೇಮಲ್ಲೂರು ಈಶ್ವರನ್ ಕಾಲೇಜು, ಧಾರವಾಡ

ನಿರ್ದೇಶನ : ಕೆ. ಎಸ್. ಪರಮೇಶ್ವರ

ತಂಡ : ಕಲಾಮಾಧ್ಯಮ ಮೀಡಿಯಾ ವರ್ಕ್ಸ್, ಬೆಂಗಳೂರು

೭-೩೦ ರಿಂದ ೮-೦೦ : ವಂದನೆಗಳೊಂದಿಗೆ ಸಮಾರೋಪ

* * *

ಬಂಗಾರ ಹಬ್ಬಕ್ಕೆ ಆಶಯ ನುಡಿ

• ಎಚ್.ಎಸ್.ಎಂ. ಪ್ರಕಾಶ

ಆಗಸ್ಟ್ ೧೯೬೪ರಲ್ಲಿ ಪ್ರೊ. ಚಂದ್ರಶೇಖರ ಪಾಟೀಲರ, ಪ್ರೊ. ಗಿರಡ್ಡಿ ಗೋವಿಂದರಾಜ ಮತ್ತು ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ ನೇತೃತ್ವದಲ್ಲಿ ಸಾಹಿತ್ಯ ಸಂಗೀತಗಳ ಸಂಗಮದ ಧಾರವಾಡದಲ್ಲಿ ಚಿಗುರೊಡೆದ ಬಳ್ಳಿಯು ವಿಜ್ಞಾನ ನಗರಿಯಾದ ಬೆಂಗಳೂರಿನಲ್ಲಿ ಅರಳಿ ೪೨೪ ಪುಷ್ಪಗಳ ಮೂಲಕ ಸಾಹಿತ್ಯ ಪರಿಮಳವನ್ನು ನಾಡಿನಾದ್ಯಂತ ಹರಡುತ್ತಿದೆ. ಇದೀಗ ತನ್ನ ಪ್ರಪ್ರಥಮ ಸಂಕ್ರಮಣ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿಕೊಂಡಿದೆ. ಇಂದಿನ ನಮ್ಮ ಈ ಬಂಗಾರ ಹಬ್ಬಕ್ಕೆ ಬಂದವರಿಗೆಲ್ಲ ಹೊನ್ನಿನ ನುಡಿಗಳ ಸಿರಿ ದೊರಕಲಿದೆ. ನಾಡಿನ ನುಡಿಸಂಪದವನ್ನು ವೃದ್ಧಿಸುವ ಕಾರ್ಯದಲ್ಲಿ ನಿರತರಾಗಿರುವ ಸಾಹಿತಿಗಳ ಬಂಗಾರದಂಥ ಮಾತುಗಳನ್ನು ಕೇಳುವ ಸಂದರ್ಭವಿದು.

ಐವತ್ತು ಸಾರ್ಥಕ ವರ್ಷಗಳನ್ನು ಕ್ರಮಿಸಿರುವ ಈ ಸಾಹಿತ್ಯ ಪತ್ರಿಕೆಯು ನಿರಂತರವಾಗಿ, ನಿಯಮಿತವಾಗಿ ಸಂಚಿಕೆಗಳನ್ನು ಓದುಗರ ಕೈತಲುಪಿಸಿದೆ. ಇವುಗಳಲ್ಲಿ ೧೯೬೪ ರಿಂದ ಇಂದಿನವರೆಗೂ ಸಾಗಿ ಬಂದ ಸಾಹಿತ್ಯದ ಬೆಳವಣಿಗೆಗಳು, ಪ್ರಯೋಗಗಳು, ಹೋರಾಟಗಳು, ಚಳುವಳಿಗಳು, ಸಂಘರ್ಷಗಳು, ದರ್ಶನಗಳು, ಮಾರ್ಗಗಳು, ಮಾರ್ಗದರ್ಶನಗಳು ಹೀಗೆ ಹತ್ತು ಹಲವಾರು ರೀತಿಯ ಹೆಜ್ಜೆ ಗುರುತುಗಳು ಕಂಡುಬರುತ್ತವೆ. ಸಂಕ್ರಮಣ ತನ್ನದೇ ಆದ ಛಾಪನ್ನು ಕನ್ನಡದ ಓದುಗರಲ್ಲಿ ಸ್ಥಾಪಿಸಿಕೊಂಡಿದೆ. ತನ್ನದೇ ಆದ ೨೫೦೦ ಚಂದಾದಾರರನ್ನು ಒಳಗೊಂಡಿದೆ. ತನ್ನದೇ ಆದ ಓದುಗ ಬಳಗವನ್ನು ಸೃಷ್ಟಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಅಕ್ಷರ ಲೋಕದ ಆಚೆ ಈಚೆಗಿನ ಅನೇಕ ವಲಯಗಳು ಸಂಕ್ರಮಣವನ್ನು ತಮ್ಮ ಅಧ್ಯಯನ, ಸಂಶೋಧನೆಗಳಿಗಾಗಿ ಒಂದು ಆಕರವನ್ನಾಗಿ ಕಾಣುತ್ತಿವೆ. ಎಸ್. ಆರ್. ಹಿರೇಮಠರು 'ಸಾಹಿತ್ಯ ಪತ್ರಿಕೆಯಾಗಿ ಸಂಕ್ರಮಣ' ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದಿರುವುದು ಈ ಪತ್ರಿಕೆಯ ಉಪಯುಕ್ತತೆ ಬಗೆಗಿನ ಸಾಕ್ಷಿಯಾಗಿದೆ.

ಸಂಕ್ರಮಣದ ಮೊದಲ ಸಂಚಿಕೆಯ 'ನಮ್ಮ ಮಾತು' : ಸಂಪಾದಕೀಯದ ನುಡಿಗಳಿವು : "ಇಂದು ಕನ್ನಡ ಸಾಹಿತ್ಯವು ವಿವಿಧ ಅನುಭವಗಳ ಜೀವಂತವಾಣಿಯಾಗಿ ಹೊರಹೊಮ್ಮುತ್ತಿದೆ. ನವೀನ ಜೀವನ ಪ್ರಜ್ಞೆಯೊಂದು ಈಗೀಗ ಅರಳುತ್ತಿದೆ. ಇಂಥ ಪ್ರಜ್ಞೆಯುಳ್ಳ ಚೇತನಗಳ ಅಭಿವ್ಯಕ್ತಿಗೆ ಸರಿಯಾದ ವೇದಿಕೆಯನ್ನು ಒದಗಿಸಿಕೊಡುವ ಒಂದು ಪ್ರಯತ್ನ ಈ 'ಸಂಕ್ರಮಣ'. ದೇಶದ ಎಲ್ಲಾ ಕಡೆಯ ಕನ್ನಡಿಗರಿಂದ ಈ ದಿಶೆಯಲ್ಲಿ ಸಿಕ್ಕ ಬೆಂಬಲ ಚೇತೋಹಾರಿಯಾಗಿದೆ.

ಇಲ್ಲಿ ವ್ಯಕ್ತವಾಗುವ ವಿಚಾರಗಳ ಬಗ್ಗೆ ಸಹೃದಯರ ಪ್ರತಿಕ್ರಿಯೆಗೆ ಯಾವಾಗಲೂ ಸ್ವಾಗತವಿದೆ."

ಇಂಥ ಉನ್ನತ ಧ್ಯೇಯದೊಂದಿಗೆ ಆರಂಭವಾದ 'ಸಂಕ್ರಮಣ' ತನ್ನ ಪ್ರತಿ ಸಂಚಿಕೆಯಲ್ಲಿಯೂ ತನ್ನೆಲ್ಲ ಆಶಯಗಳನ್ನು ಜೀವಂತವಾಗಿಟ್ಟುಕೊಂಡು ಹೊಸ ಹೊಸ ವಿಚಾರ ಮಂಡನೆಗಳಿಗೆ ವೇದಿಕೆಯಾಗಿ, ಸಮಾಜದ ಹೊರ ಮತ್ತು ಒಳ ಹರಿವುಗಳನ್ನು ಗುರುತಿಸಿ, ವಾದ-ಪ್ರತಿವಾದಗಳಿಗೆ ಚಾವಡಿಯಾಗಿ ಮೂರು ತಲೆಮಾರಿನ ಹಿರಿಯ-ಕಿರಿಯ ಸಾಹಿತಿಗಳೆಲ್ಲರ ಅಚ್ಚು-ಮೆಚ್ಚಿನ ವಿವಾದಾತೀತ ಸಾಹಿತ್ಯ ಪತ್ರಿಕೆಯಾಗಿ ಹೊರಹೊಮ್ಮಿದೆ. ಇಂಥ ಅನೇಕ ಪತ್ರಿಕೆಗಳು ಕಾಲಕ್ರಮೇಣ ಕಣ್ಮರೆಯಾದರೂ ತನ್ನ ಸಾತ್ವಿಕ ಬಲದಿಂದ, ಅತಿ ಕಡಿಮೆ ಆರ್ಥಿಕ ಬಲದಿಂದ ಜೀವಂತವಾಗಿ ನಡೆದುಬಂದಿದೆ. ದೇಶದ ಅನೇಕ ಸರ್ಕಾರಿ ಮತ್ತು ಸರ್ಕಾರೇತರ ಸಾಹಿತ್ಯ ಪತ್ರಿಕೆಗಳಿಗೆ ಮಾದರಿಯಾಗಿದೆ. ಯಾರ ಮುಲಾಜಿಗೂ ಒಳಪಡದೆ ಜಾಹೀರಾತುಗಳಿಗೆ ಹಂಬಲಿಸದೆ ನೇರ ನಿಲುವಿನಿಂದ ಎಲ್ಲರ ಮೆಚ್ಚುಗೆಯನ್ನು ಗಳಿಸಿದೆ. ಪ್ರಕಟಣಾ ಕಾರ್ಯದಲ್ಲಿ ಕೆಲವೊಮ್ಮೆ ತೊಡಕಾದರೂ ಎಲ್ಲವನ್ನೂ ನಿಭಾಯಿಸಿಕೊಂಡು ಇಂದಿನ ಐವತ್ತರ ಮೈಲುಗಲ್ಲನ್ನು ಸ್ಥಾಪಿಸಿಕೊಂಡಿದೆ. ಇದರ ಮುಂಚೂಣಿಯಲ್ಲಿರುವವರು ಚಂದ್ರಶೇಖರ ಪಾಟೀಲರು, ಅವರ ಹಿಂದಿನ ಪ್ರೇರಣೆ ಶ್ರೀಮತಿ ನೀಲಾ ಪಾಟೀಲರು. ಇವರ ಆರಂಭಿಕ ಭಾಗೀದಾರರಾದ ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಗಿರಡ್ಡಿ ಗೋವಿಂದರಾಜ ಇವರೆಲ್ಲರೂ ಕನ್ನಡದ ಸಹೃದಯ ಸಾರಸ್ವತ ಆರಾಧಕರೆಲ್ಲರ ಹಾರ್ದಿಕ ಅಭಿನಂದನೆಗಳಿಗೆ ಪಾತ್ರರು.

ನಮ್ಮ ನಾಡಿಗೆ ಮಕರ 'ಸಂಕ್ರಮಣ' ವರುಷಕ್ಕೊಮ್ಮೆ ಬಂದು ಎಳ್ಳು-ಬೆಲ್ಲದ ಸವಿಯನ್ನು ಎಲ್ಲರಿಗೂ ಬೀರುತ್ತದೆ. ಈ ಸಂಕ್ರಮಣ ಮಾತ್ರ ವರುಷಕ್ಕೆ ಆರು ಬಾರಿ ಬರುವಂತೆ ಶ್ರಮಿಸಿ ಅದರ ಮೂಲಕ ಒಳ್ಳೆಯ ಮಾತು ಅಂದರೆ ನಲ್ನುಡಿ ಮತ್ತು ಸಿಹಿನುಡಿಗಳನ್ನು ಓದುಗರ ಮನೆಯಂಗಳಕ್ಕೆ ಸಮಯಕ್ಕೆ ಸರಿಯಾಗಿ ತಲುಪುವಂತೆ ಮಾಡುತ್ತಿದ್ದಾರೆ. ಒಂದು ಸಂಸ್ಥೆ ಮಾಡಬಹುದಾದ ಕೆಲಸವನ್ನು ಒಬ್ಬ ವ್ಯಕ್ತಿಯಾಗಿ, ಒಂದು ಶಕ್ತಿಯಾಗಿ ಶ್ಲಾಘನೀಯ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ. ಕನ್ನಡ ಕಟ್ಟುವ ಕಾರ್ಯದಲ್ಲಿ 'ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ' ಎಂದು ಎಲ್ಲರನ್ನೂ ಒಳಗೊಂಡಿರುವ, ಜೊತೆಯಾಗಿಸಿಕೊಂಡಿರುವ ಚಂಪಾರವರು ಈ ಪತ್ರಿಕೆಯ ಸಾರಥ್ಯವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ ಅರ್ಧಶತಮಾನ ಪೂರೈಸಿರುವ ಈ ಶುಭಸಂದರ್ಭದಲ್ಲಿ ಮುಂದಿನ ಅರ್ಧಶತಮಾನದಲ್ಲಿಯೂ ಅವರದೇ ಸಾರಥ್ಯದಲ್ಲಿ ಮುನ್ನಡೆದು ನೂರರ ಗಡಿ ದಾಟಲಿ ಎಂದು ಮನತುಂಬಿ ಹಾರೈಸುತ್ತೇನೆ.

■

ನಿಮಗೆ ನಮ್ಮ ಸ್ವಾಗತ

• ಸಿದ್ಧಲಿಂಗ ಪಟ್ಟಣಶೆಟ್ಟಿ

ಹೊಸಗನ್ನಡ ಸಾಹಿತ್ಯದ ಮಹತ್ವದ ಸಂಕ್ರಮಣ ಕಾಲದಲ್ಲಿ ಒಂದು ಅನಿರೀಕ್ಷಿತ ಶಕ್ತಿಯ ಪ್ರಕಾಶ ಪುಂಜದಂತೆ ಅವತರಿಸಿದ ಸಾಹಿತ್ಯ ಪತ್ರಿಕೆ "ಸಂಕ್ರಮಣ" ದ್ವೈಮಾಸಿಕ. ೧೯೬೪ರಲ್ಲಿ ಧಾರವಾಡದಲ್ಲಿ ಆರಂಭವಾದ ಈ ಪತ್ರಿಕೆ ಅಂದಿನಿಂದ ಇಂದಿನ ವರೆಗೆ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನವನ್ನು ಸಮೃದ್ಧಗೊಳಿಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿರುವುದು ಜಾಗೃತ ಮನಸ್ಸು ಹೊಂದಿದ ನಾಡಿನ ಎಲ್ಲ ಕ್ಷೇತ್ರಗಳ ಜನರಿಗೆ ತಿಳಿದಿರುವ ವಿಷಯ. ೧೯೬೪ರಿಂದ ಅರ್ಧ ಶತಮಾನ ಕಾಲ ತನ್ನ ಅಸ್ತಿತ್ವದ ಸುಭದ್ರತೆಗಾಗಿ ಹೋರಾಡುತ್ತಲೇ, ಎಲ್ಲ ಅರ್ಥದಲ್ಲಿ ಕನ್ನಡದ ಅಸ್ಮಿತೆಯನ್ನು ಕಟ್ಟುತ್ತ ಬಂದಿರುವ 'ಸಂಕ್ರಮಣ'ವನ್ನು ಸಮಸ್ತ ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಪ್ರಾತಿನಿಧಿಕ ಶಕ್ತಿ ಎನ್ನುವಂತೆ ಬೆಳೆಸಿದ ಕನ್ನಡ ಮನಸ್ಸಿಗೆ, ಕನ್ನಡ ಚೇತನಕ್ಕೆ ನಾವು ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತೇವೆ.

ಒಬ್ಬ ವ್ಯಕ್ತಿಯ ಜೀವನದಲ್ಲಿ ಬರುವ ಹಾಗೆಯೇ ಸಂಸ್ಥೆಗಳ ಜೀವಮಾನ ಕಾಲದಲ್ಲಿಯೂ ಅಡೆ-ತಡೆಗಳು, ಏರು-ಪೇರುಗಳು ಬಂದೇ ಬರುತ್ತವೆ. ಆದರೆ ಅಂಥವನ್ನು ಎದುರಿಸುತ್ತ, ಸಹಿಸುತ್ತ, ಗೆಲ್ಲುತ್ತ; ಸಂಚಿಕೆಯಿಂದ ಸಂಚಿಕೆಗೆ ಗಟ್ಟಿಗೊಳ್ಳುತ್ತ ಐವತ್ತು ವರ್ಷಗಳಿಂದ ದಣಿವರಿಯದೆ, ಕ್ರಮಿಸುತ್ತ ಬಂದಿರುವ ಕನ್ನಡದ ಏಕಮಾತ್ರ ಪತ್ರಿಕೆ ಎನ್ನುವ ಖ್ಯಾತಿಯ ಕಿರೀಟವನ್ನು "ಸಂಕ್ರಮಣ"ಕ್ಕೆ ನೀಡಿದವರು ಸಮಸ್ತ ಕನ್ನಡ ಸಾಹಿತಿಗಳು, ಸಾಹಿತ್ಯಾಸಕ್ತರು ಮತ್ತು ಸಂಘ ಸಂಸ್ಥೆಗಳು.

ನಮ್ಮ ಬೆನ್ನ ಹಿಂದಿನ ಬೆಳಕನ್ನು ನೋಡಲೆತ್ನಿಸುವುದು, ನಮ್ಮ ಕಳೆದ ದಿನಗಳ ನೆನಪುಗಳನ್ನು ಮರುಕಳಿಸಿಕೊಳ್ಳುವುದು ಸಹ ಪರೋಕ್ಷವಾಗಿ ನಮ್ಮ ಗತೇತಿಹಾಸದ ಪುಟಗಳನ್ನು ತಿರುವಿ ಓದಿ ನೋಡಿದಂಥ ಅನುಭವವೇ. ನಮ್ಮ ಕಲ್ಪನೆ, ಆಕಾಂಕ್ಷೆ, ಪ್ರಯತ್ನಗಳ ಕೂಸಾಗಿದ್ದ "ಸಂಕ್ರಮಣ"ದ ಮೊದಲ ಸಂಚಿಕೆ ಧಾರವಾಡದಲ್ಲಿ ಬಿಡುಗಡೆಯಾಗಿದ್ದು ೧೯೬೪ ಆಗಸ್ಟ್ ೧೫ರಂದು. ಆಗ ಗೋವೆಯ ಮಡಗಾಂವದ ಚೌಗಲೆ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ, ಕನ್ನಡದಲ್ಲಿ ಚೇತೋಹಾರಿಯಾಗಿ ಬರೆಯುತ್ತಿದ್ದ ಸುಮತೀಂದ್ರ ನಾಡಿಗ ಅವರು ನಮ್ಮ ಆತ್ಮೀಯ ಕರೆಯನ್ನು ಮನ್ನಿಸಿ, ಧಾರವಾಡಕ್ಕೆ ಬಂದು ಸಂಕ್ರಮಣದ ಮೊದಲ ಸಂಚಿಕೆಯನ್ನು ಲೋಕಾರ್ಪಣೆ ಮಾಡಿದ್ದರು.

ನಾನು ಮತ್ತು ಚಂಪಾ ಕೂಡಿಕೊಂಡು ೧೯೬೪ರ ಮೇ ತಿಂಗಳಲ್ಲಿ ಬೆಂಗಳೂರಿಗೆ ಹೋಗಿದ್ದೆವು. ಇದು ನಮ್ಮಿಬ್ಬರ ಮೊದಲ ಬೆಂಗಳೂರು ಪ್ರವಾಸ.

ಕಾಲೇಜುಗಳ ಇಂಗ್ಲಿಷ್ ಅಧ್ಯಾಪಕರಿಗಾಗಿ ಅಲ್ಲಿ ಒಂದು ಕಾರ್ಯಾಗಾರವನ್ನು ವಿ.ಕೃ. ಗೋಕಾಕರು ನಡೆಸುತ್ತಿದ್ದರು. ಕರ್ನಾಟಕ ಕಾಲೇಜಿನಲ್ಲಿ ನಮ್ಮ ಗುರುಗಳಾಗಿದ್ದ ಗೋಕಾಕರು ಈಗ ಹೈದರಾಬಾದ್ ಸಿಐಇದಿಂದ ಬಂದಿದ್ದು, ಅವರನ್ನು ಕಾಣುವ ಇಚ್ಛೆ ನಮ್ಮದು. ಅಲ್ಲಿ ಗೋಕಾಕರಲ್ಲದೆ ಪಿಎಂ ಹೆಗಡೆ, ಬಿಟಿ ದೇಸಾಯಿ ಮುಂತಾದ ನಮ್ಮ ಅನೇಕ ಮಿತ್ರರನ್ನು ಕಂಡೆವು. ಒಂದು ಸಂಜೆ ಗೋಕಾಕರು ಆಯೋಜಿಸಿದ ಕವಿಗೋಷ್ಠಿಯಲ್ಲಿ ಕವಿತೆ ಓದಿದೆವು; ಆ ಹೊತ್ತಿಗಾಗಲೇ ಚಂಪಾನ 'ಬಾನುಲಿ' ಮತ್ತು ನನ್ನ 'ನೀನಾ' ಕವನಸಂಗ್ರಹ ಪ್ರಕಟವಾಗಿದ್ದುವು.

೨-೩ ದಿನಗಳ ಬೆಂಗಳೂರು ವಾಸ್ತವ್ಯದಲ್ಲಿ ನಾವು ಜಿಪಿ ರಾಜರತ್ನಂ, ವಿಸೀ, ಕೆಎಸ್‌ನ, ಡಿವಿಜಿ ಮುಂತಾದ ಪ್ರತಿಷ್ಠಿತರನ್ನು ಕಂಡೆವು. ಅಲ್ಲಿಂದ ಮೈಸೂರು ನೋಡಿಕೊಂಡು ಬರೋಣವೆಂದು ಹೊರಟೆವು. ಮೈಸೂರು ಪ್ರವಾಸ ನಮ್ಮ ಅಲೆದಾಟಕ್ಕೆ ಒಂದು ಅನಿರೀಕ್ಷಿತ ನಿಶ್ಚಿತ ನಿಲುವನ್ನು ನೀಡಿತ್ತು, ದಿಕ್ಕು ತೋರಿಸಿತ್ತು. ಅಲ್ಲಿ ಗೋಪಾಲಕೃಷ್ಣ ಅಡಿಗ, ಬಿ.ಎನ್. ಶ್ರೀರಾಮ, ರಾಮದಾಸ, ಪೂಚಂತೇ ಮುಂತಾದವರನ್ನು ಕಂಡಿದ್ದು ನಮ್ಮ ಆತ್ಮವಿಶ್ವಾಸಕ್ಕೆ ಹೊಸ ರೆಕ್ಕೆ ಮೂಡಿಸಿತ್ತು. ಆ ಹೊತ್ತಿಗಾಗಲೇ ಪೂಚಂತೇ ಮತ್ತು ಶ್ರೀರಾಮ ಗೆಳೆಯರು ಪ್ರಕಟಿಸುತ್ತಿದ್ದ, ಕವಿತೆಗೆ ಮೀಸಲಿದ್ದ 'ಲಹರಿ' ಎಂಬ ಪತ್ರಿಕೆಯನ್ನೂ ಅದಕ್ಕಿಂತ ಮೊದಲು ಬೆಂಗಳೂರಿನ ಕೆಲವು ಗೆಳೆಯರು ತರುತ್ತಿದ್ದ 'ಕವಿತಾ' ಮತ್ತು ಅನಿಯತಕಾಲಿಕ ಎಂದು ಘೋಷಿಸಿಕೊಂಡಿದ್ದ ಅಡಿಗರ 'ಸಾಕ್ಷಿ' ಸಂಚಿಕೆಯನ್ನೂ ಗಮನಿಸಿದ್ದೆವು. ಅವುಗಳಿಗಿಂತ ಭಿನ್ನವಾದ, ಹೊಸ ಬಗೆಯ, ಸಾಹಿತ್ಯದ ವಿಶಾಲ ದೃಷ್ಟಿಕೋನದ ತಳಹದಿಯ ಮೇಲೆ ನಿಲ್ಲುವಂಥ, ಒಂದು ನಿಯತಕಾಲಿಕ ಪತ್ರಿಕೆಯನ್ನು ಧಾರವಾಡದಿಂದ ನಾವೇ ಆರಂಭಿಸೋಣ ಎಂಬ ಸಂಕಲ್ಪ ನಮ್ಮದಾಗಿತ್ತು.

ಧಾರವಾಡಕ್ಕೆ ಬಂದ ಮೇಲೆ ಉತ್ಸಾಹದಿಂದ ಗೆಳೆಯ ಗಿರಡ್ಡಿ ನಮ್ಮ ಜೊತೆ ಸೇರಿದ್ದು ನಮ್ಮ ಬಲ ಹೆಚ್ಚುವಂತಾಯಿತು. ನಾನು ತರಿಸುತ್ತಿದ್ದ ಇದೇ ಮಾದರಿಯ ಹಿಂದಿಯ 'ಮಾಧ್ಯಮ್', 'ನಯೀ ಕವಿತಾ', 'ಕಖಗ' ಮೊದಲಾದ ಸಾಹಿತ್ಯ ಸಂಕಲನಗಳನ್ನು ಮಿತ್ರರಿಗೆ ತೋರಿಸಿದೆ. ನಮ್ಮದಕ್ಕೆ "ಸಂಕ್ರಮಣ" ಎಂದು ಹೆಸರಿಡಲು ನಿರ್ಧರಿಸಿದೆವು. ಮೂವರೂ ತಲಾ ಹತ್ತು ರೂಪಾಯಿಯಂತೆ ಹಾಕಿ ಕೆಲಸ ಆರಂಭಿಸಿದೆವು. ಪತ್ರಿಕೆಯ ಆರಂಭದ ಹೊಳಹು, ಲೇಖನಗಳಿಗಾಗಿ ಕೋರಿಕೆ, ಚಂದಾದಾರರು, ವಾರ್ಷಿಕ ಹಣ, ಮುದ್ರಣ, ಉದ್ರಿ ಕಾಗದ ಇತ್ಯಾದಿ ಬಗ್ಗೆ ಯೋಚಿಸಿದೆವು. ನಮ್ಮ ನಮ್ಮ ಸೈಕಲ್ಲು, ಕಾಲು, ಕಾಲ ಎಲ್ಲವನ್ನೂ ಹೊಸ ಹಾದಿಯ ಮೇಲೆ ಸವೆಸತೊಡಗಿದೆವು. ಸಂಕ್ರಮಣ, ಸಾಹಿತ್ಯ ಸಂಕಲನ, ಅಷ್ಟದಳ ಕಿರೀಟಾಕಾರ, ೬೪ ಪುಟ, ದ್ವೈಮಾಸಿಕ, ವಾರ್ಷಿಕ ಚಂದಾ ಐದು ರೂಪಾಯಿ, ವರ್ಷದ ಆರೂ ಸಂಚಿಕೆಗಳಿಗೆ ಬೇರೆ ಬೇರೆ ಬಣ್ಣಗಳಲ್ಲಿ ಒಂದೇ ಡಿಜೈನಿನ ಮುಖಪುಟ. ಈ ೧೯೬೪ ಆಗಸ್ಟ್ ೧೫ರಂದು ಮೊದಲ ಸಂಚಿಕೆ

ಬಿಡುಗಡೆ – ನಮ್ಮ ಎಲ್ಲ ನಿರ್ಧಾರಗಳು ನಮ್ಮ ಸ್ನೇಹ, ಸಾಹಿತ್ಯಿಕ ವ್ಯಕ್ತಿತ್ವ, ನಿಲುವು, ಕಾರ್ಯಶೀಲತೆಗಳನ್ನು ಭದ್ರಗೊಳಿಸಿದುವು. ನಮ್ಮ ಸಮ್ಮಿಲಿತ ಶಕ್ತಿ, ಪರಿಶ್ರಮ, ನಿಷ್ಠೆಗಳ ಪ್ರತೀಕವಾಗಿ 'ಸಂಕ್ರಮಣ'ದ ಚಂಕ್ರಮಣ ಆರಂಭಗೊಂಡಿತು. ಪತ್ರಿಕೆ ಕನ್ನಡ ನಾಡು ನುಡಿಯ ಪ್ರತಿಭೆಯ ಮುಖವಾಣಿಯಂತೆ ಬೆಳೆಯತೊಡಗಿತು. ಕರ್ನಾಟಕದ ಮೂಲೆಮೂಲೆಯಿಂದ ಪ್ರೀತಿ, ಪ್ರಶಂಸೆ, ಆತ್ಮೀಯತೆ, ಸಹಕಾರ, ಕುತೂಹಲ, ಅಲ್ಪ ಅಸೂಯೆಗಳ ಮಹಾಪೂರವೇ ಹರಿದು ಬಂದಿತು. ಮುಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಪತ್ರಿಕಾ ಪ್ರಪಂಚದ ಅವಿಭಾಜ್ಯ ಭಾಗವಾಗಿ 'ಸಂಕ್ರಮಣ' ಸೇರಿದ್ದು ಪ್ರವಹಮಾನ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ವ್ಯಕ್ತಿಯ ಬದುಕಿನಲ್ಲಿ ಸಂಭವಿಸುವಂತೆ ಒಂದು ಸಂಸ್ಥೆಯ ಕಾಲಮಾನದಲ್ಲಿಯೂ ಹಲವಾರು ಪ್ರಸಂಗಗಳು, ಘಟನೆಗಳು ನಡೆಯುವುದು ಸ್ವಾಭಾವಿಕ. ಸಂಕ್ರಮಣದ ನಡಿಗೆಯಲ್ಲಿಯೂ ಕೆಲವು ಬದಲಾವಣೆ, ತಿರುವುಗಳು ಬಂದುವು. ಆದರೆ ಅವು ನಮ್ಮ ಸ್ನೇಹ, ಸಹಕಾರಕ್ಕೆ ಮಾತ್ರ ಎಂದೂ ವ್ಯತ್ಯಯ ತರಲಿಲ್ಲ. ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ಬಂಡಾಯ ಸಾಹಿತ್ಯ, ಕನ್ನಡ ಚಳುವಳಿ, ರೈತ ಹೋರಾಟ ಮುಂತಾದ ಆಯಾ ಕಾಲದ ಚಿಂತನೆಗಳಿಗೆ ಪ್ರತಿನಿಧಿಯಾಗಿ ಅಪರೂಪದ ಪತ್ರಿಕೆಯಾಗಿ ಸಂಕ್ರಮಣ ಬರುತ್ತಿದೆ.

ಕನ್ನಡದ ಸಾಹಿತ್ಯಿಕ, ವೈಚಾರಿಕ, ಸಾಮಾಜಿಕ ವ್ಯಕ್ತಿತ್ವದ ಬೆಳವಣಿಗೆಗೆ ಸಂವಾದಿಯಾಗಿ, ಹಿನ್ನೆಲೆಯಾಗಿ ಬೆಳೆಯುವಂತೆ ಸಂಕ್ರಮಣವನ್ನು ಪೋಷಿಸಿಕೊಂಡು ಬಂದ ಸಮಸ್ತ ವಾತಾವರಣವನ್ನು ಸಂಕ್ರಮಣವು ಕೃತಜ್ಞತೆಯಿಂದ ನೆನೆಯುತ್ತದೆ. ಇಂಥದಕ್ಕೆ ಕಾರಣವಾದದ್ದು ಪ್ರತಿ ಎರಡು ತಿಂಗಳಿಗೊಮ್ಮೆ ನಿಯಮಿತವಾಗಿ ಪ್ರಕಟವಾಗುತ್ತಿದ್ದ ಅಂದಿನ ಸಂಚಿಕೆಗಳಲ್ಲದೆ, ಸಂಕ್ರಮಣವು ಕಾಲಕಾಲಕ್ಕೆ ಪ್ರಕಟಿಸಿದ ವಿಶೇಷಾಂಕಗಳು ಕೂಡ ಪ್ರಥಮ ವರ್ಷದ ಕೊನೆಯ ಸಂಚಿಕೆಯಾಗಿ ಬಂದ 'ಸಂಕ್ರಮಣ ಕಾವ್ಯ'ದಿಂದ ಆರಂಭಿಸಿ, ನಂತರ ಬಂದ ಎಲ್ಲ ವಿಶೇಷ ಸಂಪುಟಗಳು ಈಗಲೂ ಅಧ್ಯಯನ ಯೋಗ್ಯವಾದ ಸಾಮಗ್ರಿಯನ್ನು ನೀಡುವ ಸಂದರ್ಭ ಗ್ರಂಥಗಳಂತಿವೆ. ಕನ್ನಡದ ಅನೇಕ ಪ್ರತಿಭಾವಂತರು, ವೈಚಾರಿಕರು, ವಿಮರ್ಶಕರು, ಹಳೆಯ ಮತ್ತು ಹೊಸ ಸೃಜನಶೀಲ ಲೇಖಕರು ಸಂಕ್ರಮಣವನ್ನು ಪ್ರೀತಿಯಿಂದ ನೆನೆಯುತ್ತಾರೆ.

ಸಂಕ್ರಮಣವು ಮೊದಲ ಮೂವತ್ತು ವರ್ಷ ಧಾರವಾಡದಿಂದ, ನಂತರದ ೨೦–೨೨ ವರ್ಷಗಳಿಂದ ಈಗ ಬೆಂಗಳೂರಿನಿಂದ ಪ್ರಕಟವಾಗುತ್ತ ಬಂದಿದೆ; ಸಂಕ್ರಮಣದ ಮೂಲಗಳು ಮತ್ತು ಇದನ್ನು ಆತ್ಮೀಯತೆಯಿಂದ ಅಪ್ಪಿಕೊಂಡಿರುವ ಬೇರುಗಳು ಹೆಸರಿಗೆ ಧಾರವಾಡದಲ್ಲಿದ್ದರೂ, ಇದರ ಟೊಂಗೆ, ಟಿಸಿಲು, ಹೂವು, ಚಿಗುರು, ಫಲಸಂಪತ್ತುಗಳು ಮಾತ್ರ ಸಂಪೂರ್ಣ ಕನ್ನಡ ನಾಡು ಮತ್ತು

ನುಡಿಯ ತುಂಬ ತನ್ನ ಗಂಧ, ಪರಿಮಳ, ರುಚಿ ಶುಚಿ ಸ್ವಾದಗಳನ್ನು ಪಸರಿಸುತ್ತಿವೆ. ಆರಂಭದ ೧೧ ವರ್ಷ ನಾನು, ಗಿರಡ್ಡಿ ಮತ್ತು ಚಂಪಾ ಕೂಡಿಯೇ ಇದ್ದೆವು. ಎಂಥ ಪ್ರಸಂಗ, ಸನ್ನಿವೇಶದಲ್ಲಿಯೂ ಒಂದಾಗಿಯೇ ಇದ್ದೆವು. ಸ್ವಾಭಾವಿಕ ನೇತೃತ್ವ, ಚತುರ ವಕ್ತೃತ್ವ, ಮತ್ತು ಹಠದ, ಛಲವಂತ ಕರ್ತೃತ್ವದ ಗುಣ ಹೊಂದಿದ ಚಂಪಾ ನಂತರದ ವರ್ಷಗಳಲ್ಲಿ ಒಮ್ಮೊಮ್ಮೆ ನಮ್ಮನ್ನು ಬದಿಗಿರಿಸಿದ್ದಾನೆ, ಪಕ್ಕಕ್ಕೆ ಸರಿಸಿದ್ದಾನೆ, ಜೊತೆಗಿರಿಸಿಕೊಂಡಿದ್ದಾನೆ, ಮತ್ತೆ ಕೈ ಹಿಡಿದುಕೊಂಡು ನಡೆದಿದ್ದಾನೆ; ಅಂತೂ ಅವನು ಕರ್ನಾಟಕದ ಸಾಹಿತ್ಯ ವಲಯವನ್ನು ಮೀರಿ, ಎಲ್ಲ ಕ್ಷೇತ್ರಗಳಲ್ಲಿ ಎತ್ತರಕ್ಕೆ ಬೆಳೆದಿದ್ದುದರಲ್ಲಿ ನಮ್ಮ ಪ್ರೀತಿಯ ಸಂಕ್ರಮಣ ಮತ್ತು ಅದರ ಜೊತೆಗೇ ಇದ್ದು ಉಸಿರಾಡುತ್ತಿರುವ ನಾವೂ ಇದ್ದೇವೆ ಎಂಬುದು ನಮಗೆ ಹೆಮ್ಮೆಯೇ. ವಿಶಿಷ್ಟ ಸ್ವಭಾವದ ಚಂಪಾನದು ಸ್ವಲ್ಪ ನಿಷ್ಠುರ ನೇರ ಮಾತು; ಆದರೆ ಹೃದಯ ಸ್ವಚ್ಛ, ನಿಷ್ಕಲ್ಮಷ. ಕೆಲವು ಸಂದರ್ಭಗಳಲ್ಲಿ ಅವನನ್ನು ಕಾಡಿದ್ದರೂ, ಬಹುಪಾಲು ಅವನನ್ನು ರೂಪಿಸಿದ್ದು ಕಾಪಾಡಿ ಬೆಳೆಸಿದ್ದು ಸಹ ಈ ಗುಣವೇ. ಚಂಪಾ ಬೆಂಗಳೂರಲ್ಲಿ ಧಾರವಾಡದ ಗುಡಿ ಕಟ್ಟಿದ ಗಡಿ ಎಂದು ನಮ್ಮ ಭಾಗದವರು ಹೇಳುವುದು ಅರ್ಥಪೂರ್ಣವಾಗಿದೆ. ಗುಡಿ ಎಂದರೆ ನಿಶಾನೆ, ಧ್ವಜ, ಪ್ರತಿಷ್ಠೆ, ಸಂಕೇತ, ಪ್ರತೀಕ ಮುಂತಾದ ಅರ್ಥಗಳೂ ಇವೆಯಲ್ಲವೆ! ಅವನು ಇವೆಲ್ಲವುಗಳ ಗಡಿ ಮೀರಿದವನೂ ಹೌದು.

೧೯೬೪ರಿಂದ ಹೆಜ್ಜೆ ಹಾಕುತ್ತ ಇಂದಿನ ೨೦೧೬ರ ವರೆಗೆ ಕ್ರಮಿಸಿದ ಸಂಕ್ರಮಣದ ದಾರಿ ಸರಳವೂ ಸುಲಭವೂ ಆಗಿರಲಿಲ್ಲ; ಆದರೆ ಇಂದಿನದು ಅತ್ಯಂತ ಅಭಿಮಾನದ, ಆನಂದದ, ಅಪೂರ್ವ ಗಳಿಗೆ ಎಂಬುದಕ್ಕೆ ಸಂಕ್ರಮಣ ಬಳಗದ ಬಂಗಾರ ಹಬ್ಬವನ್ನು ಆಚರಿಸಲು ರಾಜಧಾನಿಯಲ್ಲಿ ಇಂದು ನೆರೆದಿರುವ, ಕರ್ನಾಟಕದ ಮೂಲೆ ಮೂಲೆಯಿಂದ ಮಾತ್ರವಲ್ಲ, ಹೊರನಾಡಿನಿಂದಲೂ ಬಂದಿರುವ ಸಮಸ್ತ ಬಂಧು-ಬಳಗಕ್ಕೆ, ನಿಮ್ಮದೇ ಸಂಕ್ರಮಣದ ನಾವು, ಹೃತ್ಪೂರ್ವಕ ಸ್ವಾಗತ ಕೋರುತ್ತೇವೆ. ಚಂಪಾನ ಅಪಾರ ಶಿಷ್ಯವಾತ್ಸಲ್ಯ ಪಡೆದ ಅಭಿಮಾನಿಗಳು ಇಂದು ಒಬ್ಬೊಬ್ಬರೂ ಒಂದೊಂದು ಮೇರುವಿನಂತೆ ಬೆಳೆದಿದ್ದರೂ, ಇಲ್ಲಿ ಸೇರಿರುವ ನೀವೆಲ್ಲರೂ ಸಂಕ್ರಮಣವನ್ನು ನಿಮ್ಮ ಹೃದಯದಲ್ಲಿ ಮೆಚ್ಚುತ್ತಿರುವ ಪರಿಗೆ; ಮತ್ತು ಹೆಸರು ಹೇಳಿಕೊಳ್ಳದೆಯೇ ಮೌನವಾಗಿ ಸದಾಕಾಲ ಚಂಪಾನಿಗೆ ಬೆನ್ನೆಲುವಾಗಿ ನಿಂತಿರುವ ತಂಗಿ ನೀಲವ್ವನಿಗೆ; ಹಾಗೂ ಎಂಟು ವೈವಿಧ್ಯಪೂರ್ಣ ವಿಚಾರಗೋಷ್ಠಿ ಹಾಗೂ ಮೂರು ವಿಶಿಷ್ಟ ಕವಿಗೋಷ್ಠಿಗಳಲ್ಲಿ ಭಾಗವಹಿಸಲು ಆಗಮಿಸಿರುವ ಎಲ್ಲರಿಗೂ; ಮತ್ತು ಇಂದಿನ ಮಹತ್ವದ ಬಂಗಾರ ಹಬ್ಬವನ್ನು ಉದ್ಘಾಟಿಸಲು ಆಗಮಿಸಿರುವ ಮಾನ್ಯ ನ್ಯಾಯಮೂರ್ತಿ ಶಿವರಾಜ ಪಾಟೀಲರಿಗೆ ಮತ್ತು ಅಭಿಮಾನದಿಂದ ಆಗಮಿಸಿರುವ ಎಲ್ಲ ಅಭಿಮಾನಿಗಳಿಗೆ ಮತ್ತೊಮ್ಮೆ ಹೃತ್ಪೂರ್ವಕ ಸ್ವಾಗತ ಕೋರುತ್ತೇನೆ.

■

ಸಂಕ್ರಮಣ ಹಬ್ಬ :
ಖಾರ – ಕರದಂಟು – ಪೆಪ್ಪರಮೆಂಟು

• ಚಂದ್ರಶೇಖರ ಪಾಟೀಲ

ಪ್ರಿಯ ಸಂಗಾತಿಗಳೇ,

ಇದು ಸಂಕ್ರಮಣ ಬಳಗದ ಬಂಗಾರ ಹಬ್ಬ. ಸಂಕ್ರಮಣ – ನಮ್ಮ ರೈತರಿಗೆ ಸಂಭ್ರಮದ ಹಬ್ಬ. ನಾವೂ 'ಸಂಕ್ರಮಣ'ದ ಒಕ್ಕಲು. ಇಲ್ಲಿ ವೇದಿಕೆಯ ಮೇಲಿಂದ ಸಭಾಂಗಣದಲ್ಲಿ ಕುಂತ ನಿಮ್ಮೆಲ್ಲರ ಮುಖ ನೋಡುವಾಗ, 'ಹೌದಲ್ಲ, ಇದು ನಮ್ಮ ಸಂಕ್ರಮಣ ಪರಿವಾರವೇ' ಅನ್ನಿಸುತ್ತಿದೆ. – ಸಂಘ ಪರಿವಾರ, ಜನತಾ ಪರಿವಾರ ಎಂಬ ರೀತಿಯಲ್ಲಿ.

ಒಂದಲ್ಲ, ಎರಡಲ್ಲ – ಐವತ್ತು ವರ್ಷ. ೧೯೬೪ರ ಆಗಸ್ಟ್ ಹದಿನೈದರ ನಮ್ಮ ಪ್ರಥಮ ಸಂಚಿಕೆಯ ಲೇಖಕರು ಒಟ್ಟು ಇಪ್ಪತ್ತು ಮಂದಿ.* ಅಂದಿನ ಅನೇಕ ಹಿರಿಯರು ಈಗ ನಮ್ಮೊಂದಿಗಿಲ್ಲ. ಅದೊಂದು ಬದುಕಿನ ಸಹಜ ಪ್ರಕ್ರಿಯೆ. ಆದರೆ ಸಂಕ್ರಮಣದೊಂದಿಗೆ ತಳಕು ಹಾಕಿಕೊಂಡ ಅನೇಕ ಕಿರಿಯರೂ – (ಇತ್ತೀಚೆಗೆ ರವಿ ಉಪಾಧ್ಯ, ಶಂಕರ ಕಟಗಿ, ಜಗದೀಶ ಮಂಗಳೂರಮಠ, ಎಚ್. ಎಸ್. ಭೀಮನಗೌಡ್ರ, ಪ್ರಹ್ಲಾದ ಬೆಟಗೇರಿ, ನನ್ನ ತಮ್ಮ ವಿಜಯ ಪಾಟೀಲ..) – ಮರೆಯಾದದ್ದು ನೋವಿನ ಸಂಗತಿ. ಅವರೆಲ್ಲರನ್ನೂ ಈ ಗಳಿಗೆಯಲ್ಲಿ ನೆನೆಯೋಣ.

ಸದ್ಯ ನಮ್ಮೊಂದಿಗಿರುವ ಹಿರಿಯರಲ್ಲಿ ಅತ್ಯಂತ ಪುರಾತನರೆಂದರೆ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ. ಅವರು ಇಂದು ವೇದಿಕೆಯ ಮೇಲಿದ್ದಾರೆ. ಪ್ರಥಮ ಸಂಚಿಕೆ ಬಿಡುಗಡೆ ಮಾಡಿದ ಸುಮತೀಂದ್ರ ನಾಡಿಗ ಬರುತ್ತೇನೆ ಅಂದವರು ಬಂದಿಲ್ಲ. ನಮ್ಮ 'ಸಂಕ್ರಮಣ'ಕ್ಕೆ ಪ್ರೇರಣೆಯಾಗಿದ್ದ ಮೈಸೂರಿನ 'ಲಹರಿ' ಪತ್ರಿಕೆಯ ಸಂಪಾದಕ ಬಿ. ಎನ್. ಶ್ರೀರಾಮ – (ಇನ್ನೊಬ್ಬ ಸಂಪಾದಕರು ಪೂರ್ಣಚಂದ್ರತೇಜಸ್ವಿ) – ಬಂದಿರುವುದು ವಿಶೇಷ ಖುಶಿಯ ಪ್ರಸಂಗ.

---

* **ಸಂಕ್ರಮಣ : ೦೧ ಆಗಸ್ಟ್ ೧೫, ೧೯೬೪ :**

ಲೇಖಕರು : ಅಂಬಿಕಾತನಯದತ್ತ – ಬೇಂದ್ರೆ; ಗಂಗಾಧರ ಚಿತ್ತಾಲ; ಪಿ. ಲಂಕೇಶ; ಇಟಗಿ ರಾಘವೇಂದ್ರ; ಜಿ. ಎಸ್. ಶಿವರುದ್ರಪ್ಪ; ವಿನಾಯಕ; ಜಿ. ಎಸ್. ಸಿದ್ಧಲಿಂಗಯ್ಯ; ದೇವೇಂದ್ರ ಕುಮಾರ ಹಕಾರಿ; ಎಚ್. ಎಂ. ಚನ್ನಯ್ಯ; ಟಿ. ಜಿ. ರಾಘವ; ಸಿದ್ಧಲಿಂಗ ಪಟ್ಟಣಶೆಟ್ಟಿ; ಆನಂದ ವರ್ಟಿ; ಚಂದ್ರಶೇಖರ ಕಂಬಾರ; ಕ.ವೆಂ. ರಾಜಗೋಪಾಲ; ಗಿರಡ್ಡಿ ಗೋವಿಂದರಾಜ; ಸುಮತೀಂದ್ರ ನಾಡಿಗ; ಚಂದ್ರಕಾಂತ ಕುಸನೂರಕರ; ಅರವಿಂದ ನಾಡಕರ್ಣಿ; ಚೆನ್ನವೀರ ಕಣವಿ; ಚಂದ್ರಶೇಖರ ಪಾಟೀಲ..

ಇತ್ತೀಚೆಗೆ ನಡೆದ ಕಸಾಪ ಚುನಾವಣೆಯಲ್ಲಿ ಕೇಂದ್ರಾಧ್ಯಕ್ಷರಾಗಿ ಆಯ್ಕೆಗೊಂಡ ಡಾ. ಮನು ಬಳಿಗಾರ, ಬೆಂಗಳೂರು ನಗರ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಮಾಯಣ್ಣ ಜೊತೆಗಿದ್ದಾರೆ. ಅವರಿಗೆ ಎಲ್ಲರ ಪರವಾಗಿ ವಂದನೆ.

ನ್ಯಾಯಮೂರ್ತಿ ಡಾ. ಶಿವರಾಜ ಪಾಟೀಲ ಅವರು ಕನ್ನಡದ ದೊಡ್ಡ ಚೈತನ್ಯ ಶಕ್ತಿ. ಅವರಿಂದ ಈ ಸಮ್ಮೇಳನಕ್ಕೆ ಚಾಲನೆ. ಸಿದ್ಧಲಿಂಗ ಪಟ್ಟಣಶೆಟ್ಟಿ ಈ ಪತ್ರಿಕೆಗೆ 'ಸಂಕ್ರಮಣ' ಎಂಬ ಹೆಸರು ಸೂಚಿಸಿದ ಮೂಲ ಪುರುಷ. ಶೆಟ್ಟಿ ಮತ್ತು ನಾನು ಮೈಸೂರು ಪ್ರವಾಸದಲ್ಲಿ ಕಂಡ ಕನಸಿಗೆ, ಯೋಜನೆಗೆ ಸ್ವಲ್ಪ ತಡವಾಗಿ ಸೇರಿಕೊಂಡವ – ಗಿರಡ್ಡಿ ಗೋವಿಂದರಾಜ. (ಈ ಸಮ್ಮೇಳನಕ್ಕೂ ಸ್ವಲ್ಪ ತಡವಾಗಿ, ಅಂದರೆ 'ನಾಳೆ' ಬರಲಿದ್ದಾನೆ.) ಮಡದಿ ನೀಲಾ ಪಾಟೀಲ ಅವರಿಂದ ವಂದನಾರ್ಪಣೆ. (ಏನು ಮಾತಾಡಲಿ – ಅಂತ ಕೇಳಿದಾಗ, 'ನಿನಗ ಏನ್ ತಿಳೀತೈತೋ ಹಂಗ ಚಕ್ಕಡೀ ಹೊಡಿ' – ಅಂತ ಹೇಳಿರುವೆ. ೨೫ ವರ್ಷದ ಹಿಂದೆ, ಸಂಕ್ರಮಣದ ಬೆಳ್ಳಿಹಬ್ಬದಲ್ಲೂ ಆಕೆಯದು ಇದೇ ಪಾತ್ರ!... ಈಗ ನೀವೇ ನೋಡುತ್ತೀರಲ್ಲ. ಸಂಕ್ರಮಣ ಗಂಟು ಬಿದ್ದದ್ದು ೧೯೬೪ರಲ್ಲಿ; ನಮ್ಮ ಲಗ್ನವಾಗಿದ್ದು ೧೯೬೫ರಲ್ಲಿ)

ಅಲ್ಲ, ನಾಡಿನ ತುಂಬೆಲ್ಲಾ ಇಂಥ ಬಳಗದ ಬೆಳ್ಳಿ ಹಬ್ಬಿರುವಾಗ, ಯಾಕೆ ವರ್ಷಕ್ಕೆ ಒಂದು ದಿನವಾದರೂ ನಾವೆಲ್ಲ ಸೇರಿ ಮಾತಾಡಿ, ಜಗಳಾಡಿ, ಅದು ಇದು ಹಂಚಿಕೊಳ್ಳಬಾರದು? – ಅಂತ ಧ್ಯಾನಿಸಿ ಈ ಸಮ್ಮೇಳನದ ಕನಸು ಕಂಡೆ. ಪತ್ರದ ಮೂಲಕ, ಫೋನಿನ ಮೂಲಕ ಕನಸು ಹಂಚಿಕೊಂಡೆ. ಐದು ದಶಕಗಳಲ್ಲಿ ಪತ್ರಿಕೆಯ ಪುಟದಲ್ಲಿ ಹರಿದಾಡಿದವರು ಮೂರು–ನಾಲ್ಕು ಪೀಳಿಗೆಗಳ ಸಾವಿರಾರು ಸಾಹಿತಿಗಳು. ನನ್ನ ಪತ್ರದ ಒಂದು ವಿಶೇಷ : ಸಂಕ್ರಮಣದಲ್ಲಿ ನಿಮ್ಮ ಬರಹ ಮೊಟ್ಟಮೊದಲು ಕಾಣಿಸಿಕೊಂಡದ್ದು ಇಂಥಾ ವರ್ಷದ ಇಂಥಾ ಸಂಚಿಕೆಯಲ್ಲಿ ಎಂಬ ವಿವರ. ಪ್ರಜಾವಾಣಿಯ ಪದ್ಮರಾಜ ದಂಡಾವತಿ ಹೇಳಿದ್ದು: ಸಾರ್, ನಾನೂ ಒಬ್ಬ ಸಾಹಿತಿ, ಅನ್ನೋದನ್ನೇ ಮರೆತಿದ್ದೆ!

ಸಮ್ಮೇಳನದಲ್ಲಿ ಎಂಟು ವಿಚಾರ ಗೋಷ್ಠಿಗಳು ಮತ್ತು ಮೂರು ಕವಿಗೋಷ್ಠಿಗಳು : ಸಂಕ್ರಮಣದ 'ಹಿರಿಯ' ಕವಿಗಳಾಗಿ, 'ಪರಸ್ಥಳ'ದಿಂದ ಬಂದ ಕವಿಗಳಿಗಾಗಿ ಮತ್ತು 'ರಾಜಧಾನಿ'ಯ ಕವಿಗಳಿಗಾಗಿ. ಜಯಂತ ಕಾಯ್ಕಿಣಿ ಹೇಳಿದ್ದು : 'ಸರ್, ಹಳಬರೆಲ್ಲ ಬರ್ತಾರೆ; ಅವರನ್ನು ಮ್ಯೂಜಿಯಂ ಕವಿಗಳು ಅನ್ನೋಣವೆ?' ಆಗಲಿ ಅಂದೆ. (ಜಯಂತನೂ ಈಗ ಮ್ಯೂಜಿಯಮ್ಮೇ..).. ಕವಿಗೋಷ್ಠಿಗಳೆಂದರೆ ಗೌರೀಶಂಕರ ಯಾತ್ರಾ ಕಂಪನಿಯ ರೈಲುಗಾಡಿ. ಎಷ್ಟು ಮಂದಿಯಾದರೂ ಸರಿ. ಅದಕ್ಕೇ ಹೇಳುತ್ತೇನೆ. ನಮ್ಮ ಸಮ್ಮೇಳನಕ್ಕೆ ಬಂದವರು **ಯಾರೂ ಊಟ ಮಾಡದೆ ಹೋಗಬಾರದು; ಯಾರೂ ಕವನ ಓದದೇ ಹೋಗಬಾರದು.**

ಪೂರ್ವ ತಯಾರಿ ಅಂತ ಸಂಕ್ರಮಣದ ಮೂಲಕವೇ – ಈ ಸಮ್ಮೇಳನಕ್ಕೆ ಸರ್ವಾಧ್ಯಕ್ಷರು ಬೇಕೇ? ಗೋಷ್ಠಿಯ ವಿಷಯ ಏನಿರಬೇಕು? – ಇತ್ಯಾದಿ ಪ್ರಶ್ನೆ ಕೇಳಿದೆ. ಫಲಶೃತಿ ನಿಮ್ಮ ಮುಂದಿದೆ. ಸಮ್ಮೇಳನಕ್ಕೆ ಹೋಗಲಿ, ಗೋಷ್ಠಿಗಳಿಗೂ ಅಧ್ಯಕ್ಷರಿಲ್ಲ. ಮೆರವಣಿಗೆ – ಉರವಣಿಗೆ ಯಾವುದೂ ಇಲ್ಲ. ಬರುವವರಿಗೆ ಟಿ.ಎ., ಡಿ.ಎ. ಇಲ್ಲ; ವಸತಿ ಇಲ್ಲ; ಗೌರವ ಧನವಿಲ್ಲ... ಇದು ನಮ್ಮ ಮನೆಯ ಹಬ್ಬ.. ನಿಮಗೆಲ್ಲ ಪ್ರೀತಿಯ ಸ್ವಾಗತ. ಈ 'ಪ್ರಯೋಗ' ಯಶಸ್ವಿಯಾದರೆ ಪ್ರತಿವರ್ಷವೂ ಮಾಡೋಣ ಅಲ್ಲೀಕೇರಿ..

ನಿಮಗೆಲ್ಲ ಧಾರವಾಡದ ಪೇಡೆ ಕೊಡುವ ವಿಚಾರವಿತ್ತು. ಅದು ಆಗಲಿಲ್ಲ. ಯಾಕೋ ಆ ಪೇಡೆ ತನ್ನ ಸಿಹಿ ಕಳಕೊಂಡಂತಿದೆ. ಸಾಂಸ್ಕೃತಿಕ ನಗರಿ ಧಾರವಾಡ – ಅಂತ ಹೇಳುತ್ತೇವೆ. ಅದೇ ನಗರದಲ್ಲಿ ಇತ್ತೀಚೆಗೆ ನಮ್ಮ ಕಲಬುರ್ಗಿಯ ದಾರುಣ ಕೊಲೆಯಾಯಿತು. ಸಂಕ್ರಮಣದ ಹಿತೈಷಿ ಅವನು. ನನ್ನ ಸಹಪಾಠಿ – ಸಹೋದ್ಯೋಗಿ – ಸಂಗಾತಿ. Classmate - Colleague & Comrade. ಇಂಥವನ ಕೊಲೆ ಕಂಡ, ಇಂಥವನ ಕೊಲೆ ಮಾಡಿದ ನಗರವನ್ನು ಯಾವ ಬಾಯಿಂದ 'ಸಾಂಸ್ಕೃತಿಕ' ಅಂತ ಕರೆಯಲಿ?..

ನನ್ನ ಗುರು ಗೋಕಾಕರ ಊರು – ಸವಣೂರು. (ಸದ್ಯ ಹಾವೇರಿ ಜಿಲ್ಲೆ) ಅಲ್ಲಿಂದ ೩-೪ ಕಿಲೋಮೀಟರಿನಲ್ಲಿ ನಮ್ಮೂರು – ಹತ್ತೀಮತ್ತೂರು. ಈ ಊರಿನ ಎಳೆಯ ಗೆಳೆಯರು, (ಮರಳೀಹಳ್ಳಿ ಮತ್ತು ಚಂದ್ರಶೇಖರ ಕುಳೇನೂರು) ನಿಮಗಾಗಿ ಜಗತ್ಪ್ರಸಿದ್ಧ 'ಸವಣೂರು ಖಾರಾ' ಕಳಸಿದ್ದಾರೆ. ಅದನ್ನು ನಿಮಗೆ ಹಂಚಲಿದ್ದಾನೆ ಲಕ್ಷ್ಮೇಶ್ವರದ ರಾಘವೇಂದ್ರ ಬಳ್ಳಾರಿ. ನಮ್ಮ ಬಳಗದ ಗಟ್ಟಿ ಕುಡಿ. (ಈ ರಾಘು ೧೯೮೨-೮೩ರ ಗೋಕಾಕ ಚಳುವಳಿಯಲ್ಲಿ ಪಾಲುಗೊಂಡಿದ್ದ ಅತ್ಯಂತ ಕಿರಿಯ ಸತ್ಯಾಗ್ರಹಿ : ಅವನಿಗಾಗ ಎರಡೂವರೆ ವರ್ಷ!)

ಸಂಕ್ರಮಣ ಅಂದರೆ ಎಳ್ಳು-ಬೆಲ್ಲ-ಖಾರ ಎಲ್ಲಾ, ನಿಮಗಾಗಿ ಬಾಗಲಕೋಟ ಜಿಲ್ಲೆಯ ಬೀಳಗಿ ಗೆಳೆಯ ಕಿರಣ ಬಾಳಗೋಳ ತಂದಿರುವ ಅಮೀನಗಡದ ಕರದಂಟು ಕಾದಿದೆ. ಸವಣೂರು ಖಾರ – ಅಮೀನಗಡದ ಕರದಂಟು. ಜೊತೆಗೆ ರಾಘು ಸ್ವಂತ ಖರ್ಚಿನಲ್ಲಿ ಕೊಡುವ ಸುಂಟಿ – ಪೆಪ್ಪರಮೆಂಟು.. ಇದು ನಮ್ಮ ನಿಮ್ಮ ಬಂಗಾರ ಹಬ್ಬ. ಹೀಗೇ ಇರಲಿ ನಮ್ಮ ನಂಟು.

■

ಉದ್ಘಾಟನಾ ಭಾಷಣ

● ನ್ಯಾ.ಮೂ. ಶಿವರಾಜ ಪಾಟೀಲ

ಎಲ್ಲರಿಗೂ ನಮಸ್ಕಾರ. ಸಂಕ್ರಮಣದ ಬಳಗದ ಬಂಗಾರ ಹಬ್ಬದಲ್ಲಿ ನಾವೆಲ್ಲ ಪಾಲುಗೊಳ್ಳುತ್ತಿದ್ದೇವೆ. ವೇದಿಕೆಯ ಮೇಲೆ ಮತ್ತು ಎದುರಿಗೆ ಕುಂತಿರುವ ಮಹನೀಯರೆ, ಮಹಿಳೆಯರೆ, ಪ್ರತಿಯೊಬ್ಬರೂ ನೀವು ನಿಮ್ಮ ಜೀವನದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಮೇರು ವ್ಯಕ್ತಿಗಳಾಗಿ, ಸಾಧನೆಗಳನ್ನು ಮಾಡಿದ್ದೀರಿ. ನಿಮ್ಮ ಸಾಧನೆಗಳಿಗೆ ಅತ್ಯಂತ ವಿನಯದಿಂದ ನಮಸ್ಕಾರ ಮಾಡುತ್ತಿದ್ದೇನೆ.

ಈ ಸಂಕ್ರಮಣ ಪತ್ರಿಕೆ ಈ ೫೦ ವರ್ಷದಲ್ಲಿ ನಡೆದು ಬಂದ ದಾರಿ, ಸಾಧಿಸಿದ ಪ್ರಗತಿ, ಕಷ್ಟಕರವಾದಂತಹ ವಿಚಾರಗಳು ಕುರಿತು ಎಂಬುದನ್ನು ಪ್ರಕಾಶರವರು, ಸಿದ್ಧಲಿಂಗ ಪಟ್ಟಣಶೆಟ್ಟಿಯವರು, ಚಂಪಾರವರು ಹೇಳಿದ್ದಾರೆ.

ಒಂದು ಮಾತು : ಬೆಳ್ಳಿಹಬ್ಬ, ಸುವರ್ಣ ಮಹೋತ್ಸವ, ಅಮೃತ ಮಹೋತ್ಸವ ಶತಮಾನೋತ್ಸವಗಳನ್ನು ನಾವು ಆಚರಿಸುತ್ತೇವೆ. ಬಹಳ ಸಂತೋಷ. ಇತಿಹಾಸದಲ್ಲಿ ೨೫ ವರ್ಷ ೫೦ ವರ್ಷ ೧೦೦ ವರ್ಷ ಬಹಳ ಮಹತ್ತ್ವದ ಮೈಲಿಗಲ್ಲುಗಳು. ಈ ಸಂಕ್ರಮಣದ ಬಳಗದ ಇತಿಹಾಸ ಬಹಳ ಚೆನ್ನಾಗಿ ಹೇಳಿದವರು ಚಂಪಾರವರು. ನಾನೂ ಯಾವಾಗಲೂ ಒಂದು ಶಬ್ದವನ್ನು ಬಳಕೆ ಮಾಡಬೇಕಾದರೆ, Your Unadultrated Speech. ನೇರವಾಗಿ ಇದ್ದದ್ದನ್ನು ಇದ್ದಂತೆ ಮಾತನಾಡುತ್ತಿದ್ದೀರಿ. ಅದನ್ನು ಮನಸ್ಸು ಬಿಚ್ಚಿ ಹೇಳಿದ್ದೀರಿ. ಪಟ್ಟಣಶೆಟ್ಟಿಯವರ, ಚಂಪಾರವರ ಮಾತನ್ನು ಕೇಳಿದಾಗ : ಅವರು ಯಾರನ್ನಾದರೂ ಮೆಚ್ಚಿಸಲು ಮಾತನ್ನಾಡಬೇಕೆಂದಿಲ್ಲ; ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಮಾತನಾಡಬೇಕೆಂದಿಲ್ಲ. ನೇರವಾಗಿ ಹೃದಯಾಳದಿಂದ ಬಂದ ಮಾತುಗಳನ್ನು ಹೇಳಿದ್ದಾರೆ. ಸತ್ಯ ಮಾತುಗಳನ್ನು ಹೇಳಿದ್ದಾರೆ. ಸತ್ಯ ಮಾತನಾಡಬೇಕಾದರೆ ಪ್ರಯಾಸಪಡುವಂತಿಲ್ಲ. ಸುಳ್ಳು ಹೇಳಬೇಕಾದರೆ ಬಹಳ ಪ್ರಯಾಸಪಡಬೇಕು. ಹೇಳಿದ ಮೇಲೆ ಅದನ್ನು ಉಳಿಸಿಕೊಳ್ಳಲು ಇನ್ನೂ ಹೆಚ್ಚು ಪ್ರಯಾಸಪಡಬೇಕಾಗುತ್ತದೆ. ಆದ್ದರಿಂದ ನೀವು ಬಹಳ ಸತ್ಯವಾದ ಮಾತನ್ನು ಬಹಳ ನಿರಾಳವಾಗಿ ಹೇಳಿದ್ದೀರಿ. ಅದು ಸಂಕ್ರಮಣದ ಒಂದು Characteristic ಅನ್ನಬಹುದು.

ಇಂತಹ ಒಂದು ವಿಶೇಷ ಆಚರಣೆಯ ದಿನ ಮೂರು ಮಾತುಗಳನ್ನು ಯೋಚನೆ ಮಾಡಬೇಕು.

೧. ಈ ೫೦ ವರ್ಷಗಳಲ್ಲಿ ನಾವು ಏನು ಸಾಧನೆ ಮಾಡಿದ್ದೇವೆ. ಅದರ ಬಗ್ಗೆ ಸಂತೋಷಪಡಬೇಕು. ನೀವು ಎಷ್ಟೊಂದು ಕಷ್ಟಪಟ್ಟು ಈ ಸಾಧನೆ ಮಾಡಿದ್ದೀರಿ – ಅದು ಸೆಲಬ್ರೇಟ್ ಮಾಡಬೇಕಾದ ವಿಷಯ.

೨. ಆದರೆ ಈ ೫೦ ವರ್ಷಗಳಲ್ಲಿ ನೀವು ಏನೆಲ್ಲಾ ಮಾಡಬೇಕು ಅಂದುಕೊಂಡಿದ್ದಿರಿ, ಯಾವುದನ್ನು ಮಾಡುವುದಕ್ಕೆ ಆಗಲಿಲ್ಲ, ಆಗಿಲ್ಲದಿದ್ದರೆ ಯಾಕೆ ಸಾಧ್ಯವಾಗಿಲ್ಲ.. What we have missed during the last 50 years ಎಂಬುದರ ಬಗ್ಗೆ ಚಿಂತನೆ ಮಾಡಬೇಕು.

೩. ಈವತ್ತಿನಿಂದ, ೫೧ ನೇ ವರ್ಷದಿಂದ ಮುಂದೆ ಬರುವ ಇನ್ನೊಂದು ಮೈಲಿಗಲ್ಲಿನವರೆಗೆ ಏನು ನಾವು ಮಾಡಬೇಕು ಎಂಬ ಯೋಜನೆಯನ್ನು ಹಾಕಿಕೊಳ್ಳುವುದು.

ರಾಷ್ಟ್ರಕವಿ ಶಿವರುದ್ರಪ್ಪ, ಜಿ.ಎಸ್.ಎಸ್. – (ಜಿ.ಎಸ್.ಎಸ್. ಚಂಪಾ ಹೀಗೆ Short form ಹೇಳಿ ಒರಿಜಿನಲ್ ನೇಮೇ ಗೊತ್ತಿಲ್ಲದ ಹಾಗೆ ಆಗಿದೆ) – ಅವರೆಂದಂತೆ ಸಂಕ್ರಮಣ ಎಂದರೆ ಅರ್ಥ ಗೆರೆ ದಾಟಬೇಕು. ಮುಂದುವರೆಯಬೇಕು. ಚಲನಶೀಲರಾಗಬೇಕು. ಅವರ ಆಶಯ ನುಡಿಯಂತೆ ಸಂಕ್ರಮಣ ಪತ್ರಿಕೆ ಚಲನಶೀಲವಾಗಿದೆ, ಮುಂದುವರೆಯುತ್ತಿದೆ ಮತ್ತು ಗೆರೆ ದಾಟುತ್ತಿದೆ. ಇನ್ನೂ ಹೆಚ್ಚಿನ ಪ್ರಯೋಗಗಳನ್ನು ಯಾವ ರೀತಿಯಾಗಿ ಏನು ಮಾಡಬೇಕೆಂದು ಯೋಚನೆ ಮಾಡುವುದು ಬಹಳ ಒಳ್ಳೆಯದು.

ಶ್ರೀಮಾನ್ ಶೆಟ್ಟಿಯವರು ಮೂವರೂ ಸೇರಿಕೊಂಡು ಸಂಸ್ಥೆ ಪ್ರಾರಂಭಿಸಿದ ವಿಚಾರವನ್ನು ಹೇಳಿದರು. 'ಇತ್ತೀಚಿನ ದಿನಗಳಲ್ಲಿ ನಮ್ಮ ರೀತಿಗಳು ಸಾಹಿತ್ಯಿಕ ಸ್ವರೂಪಗಳು ಬೇರೆಬೇರೆಯಾಗಿವೆ. ಆದರೆ ಸ್ನೇಹದ ಸ್ವರೂಪಗಳು ಮಾತ್ರ ಬೇರೆಯಾಗಿಲ್ಲ.' Fair Weather Friends are many but all weather friends are few. ಅನುಕೂಲತೆಗಳಿಗೆ ಇಲ್ಲದ ಬಹಳ ಜನ ಗೆಳೆಯರಿದ್ದಾರೆ. ಆದರೆ ಎಲ್ಲಾ ರೀತಿಯ ಗೆಳೆಯರಾಗಿ ಉಳಿಯುವುದು ಬಹಳ ಕಷ್ಟ. ಚಂಪಾ, ಪಟ್ಟಣಶೆಟ್ಟಿ ಹಾಗೂ ಗಿರಡ್ಡಿಯವರ ೫೦ ವರ್ಷಗಳ ಸ್ನೇಹ ಇನ್ನೊಬ್ಬರಿಗೆ ಮಾದರಿಯಾಗಿದೆ.

ನಾನು ನಿನ್ನೆ ಬೆಳಿಗ್ಗೆ ವಿಶ್ವವಾಣಿ ಪತ್ರಿಕೆ ನೋಡಿದೆ. ಅಲ್ಲಿ ಪುಟ ತಿರುವಿ ಹಾಕುವಾಗ ಒಂದು ಸಂಪೂರ್ಣ ಪುಟದಲ್ಲಿ ಸಂಕ್ರಮಣ ಬಂಗಾರದ ಹಬ್ಬದ ಪ್ರಥಮ ಸಾಹಿತ್ಯ ಸಮ್ಮೇಳನದ ಬಗ್ಗೆ ಬರೆದಿದ್ದಾರೆ. ಎಲ್ಲಾ ವಿಷಯಗಳ ಬಗ್ಗೆ ಹೇಳಿದ್ದಾರೆ. ಈ ರೀತಿ ಮಾಧ್ಯಮಗಳು – ಪ್ರಿಂಟ್ ಮೀಡಿಯವಾಗಲಿ ಅಥವಾ ಎಲೆಕ್ಟ್ರಾನಿಕ್ ಮೀಡಿಯಾಗಳಾಗಲಿ – ಮೌಲಿಕವಾದಂತಹ ವಿಚಾರಗಳನ್ನು ಸಮಾಜಮುಖಿಯಾಗಿ ಸಮಾಜಕ್ಕೆ ಒಳಿತಾಗುವಂತಹ ವಿಚಾರಕ್ಕೆ ಬರುವಂತಹ ಪ್ರತಿಯೊಂದು ಕಾರ್ಯಕ್ರಮವನ್ನು ಚನ್ನಾಗಿ ಪತ್ರಿಕೆಯಲ್ಲಿ ಮೂಡಿಸಬೇಕು. ವಿಶ್ವವಾಣಿ ಪತ್ರಿಕೆ ಈ ಸಂಕ್ರಮಣದ ಬಗ್ಗೆ ಒಂದು ಪುಟದಲ್ಲಿ ಪೂರಾ ಬರೆದಿದ್ದಾರೆ. ನನಗೆ ತುಂಬಾ ಸಂತೋಷವಾಗಿದೆ. ವಿಶ್ವವಾಣಿ ಪತ್ರಿಕೆಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಪತ್ರಿಕೆ, ಪ್ರಕಟಣೆ, ಹೋರಾಟ, ಸಾಮಾಜಿಕ ಜೀವನ, ಚಿಂತನ, ಕನ್ನಡ ಭಾಷೆಯ ಕಳಕಳಿ, ನಾಡು-ನುಡಿಯ ಹೋರಾಟ ಇವೆಲ್ಲಾ ಮಾತನಾಡಿದ ಮೇಲೆ, ಚಂಪಾರವರ ಬಗ್ಗೆ ಒಂದೆರಡು ಮಾತನಾಡುವುದು ಅವಶ್ಯ ಹಾಗೂ ಪ್ರಸ್ತುತ. ನನಗಿಂತ ಚೆನ್ನಾಗಿ ಅವರ ಬಗ್ಗೆ ನಿಮಗೆ ಗೊತ್ತಿದೆ. ಏಕೆಂದರೆ ಸಂಕ್ರಮಣ ಬಳಗದ ಸದಸ್ಯರಾಗಿದ್ದೀರಿ. ನಾನು ಕೂಡ ಸಂಕ್ರಮಣ ಬಳಗದ ಸದಸ್ಯ. ಸಂಕ್ರಮಣದ ಚಂದಾದಾರನಾಗಿ ಚಂದಾ ಕೊಟ್ಟು ಸಂಕ್ರಮಣ ಪತ್ರಿಕೆಯನ್ನು ಓದಿದ್ದೇನೆ.

ಇಲ್ಲಿ ನಾಲ್ಕು ಬಗೆಯ ಓದುಗರಿದ್ದಾರೆ.

೧. ಒಬ್ಬರು ಪುಸ್ತಕಗಳನ್ನು ಓದುತ್ತಾರೆ, ಕೊಂಡುಕೊಳ್ಳುವುದಿಲ್ಲ.

೨. ಕೊಂಡುಕೊಳ್ಳುತ್ತಾರೆ, ಓದುವುದಿಲ್ಲ.

೩. ಕೊಂಡುಕೊಳ್ಳುತ್ತಾರೆ ಮತ್ತು ಓದುತ್ತಾರೆ.

೪. ಕೊಂಡುಕೊಳ್ಳುತ್ತಾರೆ, ಓದುತ್ತಾರೆ, ಅರ್ಥ ಮಾಡಿಕೊಳ್ಳುತ್ತಾರೆ. ತಮ್ಮ ಮನೆಯವರ ಜೊತೆಗೆ ಹಿತೈಷಿಗಳೊಂದಿಗೆ ಸ್ನೇಹಿತರ ಜೊತೆಗೆ ದಾಸೋಹ ಮಾಡುತ್ತಾರೆ. ಆ ವಿಚಾರಗಳನ್ನು ಹಂಚಿಕೊಳ್ಳುತ್ತಾರೆ.

ಸಂಕ್ರಮಣ ಪತ್ರಿಕೆಗೆ ಮೂರು ಸಾವಿರ ಜನ ಚಂದಾದಾರರು ಇದ್ದರೆ ಕೇವಲ ಮೂರು ಸಾವಿರಕ್ಕೆ ಸೀಮಿತವಾಗಿಲ್ಲ. ಈ ಮೂರು ಸಾವಿರ ಜನ ಸಂಕ್ರಮಣ ಪತ್ರಿಕೆಯನ್ನು ವಿಶ್ವಾಸಕ್ಕಾಗಿ ಓದುವಂತಹವರು. ಹಲವಾರು ಜನರೊಂದಿಗೆ ಈ ವಿಚಾರಗಳನ್ನು ಹಂಚಿಕೊಳ್ಳುತ್ತಾರೆ. ದಾಸೋಹ ಮಾಡಿಕೊಳ್ಳುತ್ತಾರೆ. ಆ ದೃಷ್ಟಿಯಿಂದ ನೀವು ಬರೀ ನಂಬರಿನ ಮೇಲೆ ಹೋಗಬೇಡಿ; ಅದರ ವ್ಯಾಪ್ತಿಯ ಮೇಲೆ ಹೋಗಿ. ಎಷ್ಟೊಂದು ವ್ಯಾಪ್ತಿ ಇದೆ ಎಂಬುದರ ಬಗ್ಗೆ ನಾವು ನೋಡಿದಾಗ ಇದಕ್ಕೊಂದು ವೈಶಿಷ್ಟ್ಯತೆ ಇದೆ.

ಒಂದು ಸಂದರ್ಭದಲ್ಲಿ ಒಬ್ಬರನ್ನು ಜೀವನದ ಅರ್ಥವೇನು ಎಂದು ಕೇಳಿದಾಗ? What is the meaning of life? It is difficult to give a precise definition of meaning. ಆದರೆ ಜೀವನ ಪ್ರತಿಯೊಬ್ಬರಿಗೂ ಸಿಕ್ಕಂತಹ ಅತ್ಯಂತ ದೊಡ್ಡ ಅಮೂಲ್ಯ ಅವಕಾಶ. ಜೀವನವನ್ನು ಅರ್ಥಪೂರ್ಣ ಮಾಡಲು ಸಿಕ್ಕಂತಹ ದೊಡ್ಡ ಅವಕಾಶ.

It is a great opportunity to make life meaningful or give meaning to life. ಜೀವನಕ್ಕೆ ಅರ್ಥವನ್ನು ಕೊಡಬೇಕಾದರೆ ಒಂದು ದೊಡ್ಡ ಅವಕಾಶ ಸಿಕ್ಕಿದೆ.

ಚಂದ್ರಶೇಖರ ಪಾಟೀಲರೇ, ನೀವು ನಿಮ್ಮ ಜೀವನಕ್ಕೆ ಅರ್ಥವನ್ನು ಕೊಟ್ಟಿದೀರಾ. ನಿಮ್ಮ ಜೀವನವನ್ನು meaningful ಮಾಡಿದ್ದೀರಿ ನಿಮ್ಮದೇ ಆದ ಕ್ಷೇತ್ರದಲ್ಲಿ. ಜೀವನ ಎಂದರೆ ಸ್ವಲ್ಪ ಹೆಚ್ಚು ಕಡಿಮೆ ಒಂದು ನೋಟು ಬುಕ್ ಎಂದು ಅಂದುಕೊಂಡಿದ್ದೇನೆ. ನಿಮ್ಮ ಜೀವನದಲ್ಲಿ ಒಂದು ನೋಟ್ ಬುಕ್ ಇದೆ. ಅದರ ಮೊದಲ ಪುಟ ಹಾಗೂ ಕೊನೆ ಪುಟ ಎರಡೂ ಬರೆದಾಗಿದೆ. ಜನನ ಮತ್ತು ಮರಣ ಬರೆದಾಗಿದೆ. ಮಧ್ಯದಲ್ಲಿರುವ ಪುಟಗಳು ಖಾಲಿಯಾಗಿವೆ. ನೀವು ಇಲ್ಲಿಯವರೆಗೆ ಮಧ್ಯದ ಪುಟಗಳನ್ನು ಬರೆಯುತ್ತಾ ಬಂದಿದ್ದೀರಿ. ಬಹಳಾ ಚೆನ್ನಾಗಿ ಬರೆದಿದ್ದೀರಿ. ಉಳಿದ ಪುಟಗಳನ್ನೂ ಚೆನ್ನಾಗಿ ಬರೆದಿದ್ದೀರಿ. ಆದ್ದರಿಂದ ಆ ನೋಟ್ ಬುಕ್ ಎಂಬ ಜೀವನವಿದೆಯಲ್ಲಾ ಅದು ಹೇಳುತ್ತಿದೆ. ಅನೇಕ ಸಲ ಭೇಟಿಯಾದಾಗ ನೋಡಿದ್ದೇನೆ. ನೇರವಾಗಿ ಗಟ್ಟಿಯಾಗಿ ಮಾತನಾಡುತ್ತಾರೆ. ಈ ಕಾಲದಲ್ಲಿ ನೇರವಾಗಿ ಗಟ್ಟಿಯಾಗಿ ತನಗೆ ಅನ್ನಿಸಿದ್ದನ್ನು ಆತ್ಮಸಾಕ್ಷಿಯಾಗಿ ಸರಿ ಎಂಬುದು ಹೇಳುವವರು ಬಹಳ ಕಡಿಮೆ. ನಮಗೆ ಯಾಕೆ ಬೇಕು? ಅಥವಾ ಅವರ ಮನಸ್ಸು ಯಾಕೆ ನೋಯಿಸಬೇಕು? ಅವರಿಗೆ ಖುಷಿಮಾಡಬೇಕು? ಅವರಿಗೆ ಸಂತೋಷ ಮಾಡಬೇಕು? ಇಲ್ಲಂದರೆ ಸುಮ್ಮನೆ ಇದ್ದರೆ ಆಯಿತು ಎಂದು ಬೇಡ ಎಂದು ಸುಮ್ಮನಿರುವವರೇ ಹೆಚ್ಚು. ಇದು ಸತ್ಯ, ಇದು ನನ್ನ ಮನಸ್ಸಿಗೆ ಅನಿಸುತ್ತಾ ಇದೆ, ಇದು ಹೇಳಲೇಬೇಕು ಎಂದರೆ ಹೇಳಬೇಕು. ಅದಕ್ಕೆ ಈ ಕಾಲದಲ್ಲಿ We must learn to say ***no*** we must learn to say ***no.*** ಸರಿಯಿಲ್ಲದಿದ್ದರೆ ಸರಿ ಇಲ್ಲ ಅಂತ ಹೇಳು, ಸರಿಯಿದ್ದರೆ ಇದೆ ಅಂತ ಹೇಳುವುದು, ಆ ನಿಟ್ಟಿನಲ್ಲಿ ಚಂಪಾ ದೊಡ್ಡ ಉದಾಹರಣೆ. ಗಟ್ಟಿಯಾಗಿ ಮಾತಾಡುತ್ತಾರೆ, ಜೋರಾಗಿ ಮಾತಾಡುತ್ತಾರೆ. ಇವರು ಮಾತಾಡಿದರೆ ಯಾರೂ ತಪ್ಪು ತಿಳಿಯುವುದು ಇಲ್ಲ. ಎಲ್ಲಾರು ಇವರ ರೀತಿ ಮಾತಾಡಿದರೆ ತಪ್ಪು ತಿಳಿಯುವ ಅವಶ್ಯಕತೆ ಬರುವುದೇ ಇಲ್ಲ.

ಎರಡನೆಯದಾಗಿ ಎಂತಹ ಸಾಹಿತ್ಯ ಬೇಕು. ಎಂತಹ ಸಾಹಿತಿಗಳು ಬೇಕು ಎಂಬುದರ ಬಗ್ಗೆ ಚಿಂತನೆ ಅವಶ್ಯಕ. ಸಮಕಾಲೀನ Contemporary world ನಲ್ಲಿ ಈಗ ಈ ಬುಕ್ಸ್, ಈ ಲೈಬ್ರರಿ, ಈ ರೀಡಿಂಗ್ ಇವೆಲ್ಲಾ ಬಂದಿದೆ.

Albert Einstein ಹೇಳಿದ ಮಾತು Whatever be your technical endeavours please do not forget man. Man should be the centre of all inventions ನಾನು ಹೇಳುವುದು ಇಷ್ಟೇ. ನಮಗೆ ಈಗ ಎಂತಹ ಸಾಹಿತ್ಯ ಬೇಕು? ಸಮಕಾಲೀನ ಸ್ಥಿತಿಯಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಮೌಲ್ಯಗಳು ಕಡಿಮೆಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಎಲ್ಲರೂ ಮಾತನಾಡುತ್ತಾರೆ. There is a degeneration in values etc., etc., human values. ಆದರೆ ಅದನ್ನು

ಸರಿಪಡಿಸಬೇಕು ಎಂಬುದು ಬಹಳ ಮುಖ್ಯ. ನಾನು ಪ್ರಾಥಮಿಕ ಶಾಲೆಯಲ್ಲಿ ಓದುವಾಗ ನಮಗೊಂದು ನೈತಿಕ Moral lesson ಇತ್ತು. ಆದರೆ ಈಗ ಯಾವ ಪಠ್ಯಪುಸ್ತಕಗಳಲ್ಲೂ ಇಲ್ಲ. ಆದರೆ ಇಂದು ಹೆಚ್ಚಿನ ಅವಶ್ಯಕತೆಯಿದೆ. ಅಂತಹ ಉತ್ತಮವಾದ ಸಾಹಿತ್ಯ ಮೌಲ್ಯಗಳಿಗೆ ಗೌರವ ಕೊಡುವ ಅಳವಡಿಕೆ ಮಾಡುವ, ಸಮಾಜದ ಬಗ್ಗೆ ಕಳಕಳಿಯಿಂದ ಬರೆಯುವ ಸಾಹಿತ್ಯದ ಅವಶ್ಯಕತೆ ಇದೆ ಎಂದು ಅಂದುಕೊಳ್ಳಬೇಕು. ನೀವು ಒಳ್ಳೆಯ ಶಿಕ್ಷಕರಾಗಿ ಒಳ್ಳೆ ಪ್ರಭಾವವಾಗಬೇಕಾದರೆ ಶಿಕ್ಷಕರ ಚರಿತ್ರೆ ಅಷ್ಟೇ ಮುಖ್ಯ. ಸಾಹಿತ್ಯ ಹಾಗೂ ಸಾಹಿತಿಗಳು ಇಬ್ಬರೂ ಹೇಗಿರಬೇಕು? ನಾನು ಒಂದು ಮಾತನಾಡಿದರೆ ನಾನು ಮಾತನಾಡುವ ಪರಿಣಾಮ ಕೇಳುವವರ ಮೇಲೆ ಆಗಬೇಕಾದರೆ, ನಾನು ಮೂರು ಪರೀಕ್ಷೆಗಳನ್ನು ಪಾಸು ಮಾಡಬೇಕು.

೧. I must have conviction in what I speak. ನಾನು ಹೇಳುವ ಮಾತಿನಲ್ಲಿ ನನಗೆ ಶ್ರದ್ಧೆ ಇರಬೇಕು.

೨. ನಾನು ಯಾವ ರೀತಿಯಾಗಿ ಮಾತನಾಡುತ್ತೇನೆ ಅದೇ ರೀತಿ ಜೀವನದಲ್ಲಿ ನಡೆದುಕೊಂಡಿರಬೇಕು.

೩. ಆಡುವಂತಹ ಮಾತಿನಲ್ಲಿ ಸತ್ಯ ಹಾಗೂ ಸತ್ವ ಇರಬೇಕು.

ಇವು ಇದ್ದಾಗ ನಾನು ಆಡುವ ಮಾತಿಗೆ ಬೆಲೆಯಿದೆ. ಇಲ್ಲದಿದ್ದರೆ ಆ ಮಾತಿಗೆ ಬೆಲೆಯಿಲ್ಲ. ಆದ್ದರಿಂದ ಅಂತಹ ಮಾತುಗಳನ್ನು ಆಡಬಾರದು. ಇಲ್ಲಿ ನಾವು ನಮ್ಮ ಹಿರಿಯರನ್ನು ನೆನೆಯಬೇಕಾಗುತ್ತದೆ. ಕುವೆಂಪು, ಸಿದ್ಧಯ್ಯ ಪುರಾಣಿಕರನ್ನು. There is a long distance between human being & being human. ಹುಟ್ಟಿದವರೇ ನಾವು ಮನುಷ್ಯರಾಗಿದ್ದೇವೆ, ಆದರೆ ಹುಟ್ಟುತ್ತಾ ಮಾನವ ಹಾಗೂ ಮನುಷ್ಯನಾಗುವ ಮಧ್ಯೆ ಒಂದು distance ಇದೆ. We should take at least, one step a day to cover from ***human being to being human.*** ಅದಕ್ಕೆ ಸಿದ್ಧಯ್ಯ ಪುರಾಣಿಕ ಅವರು ಏನಾದರೂ ಆಗು ಮೊದಲು ಮಾನವನಾಗು ಎಂದು ಹೇಳಿದ್ದಾರೆ. ಅದಕ್ಕೆ ಸಂದರ್ಭಕ್ಕನುಗುಣವಾಗಿ ಮೊದಲು ಮಾನವನಾಗುವಂತಹ ಅವಶ್ಯಕತೆ ಇದೆ. ಈ ಪ್ರಥಮ ಸಂಕ್ರಮಣ ಸಾಹಿತ್ಯ ಸಮ್ಮೇಳನದ ಎಂಟು ಗೋಷ್ಠಿಗಳ ಬಗ್ಗೆ ಹೇಳಬೇಕು. ನೀವು ಆರಿಸಿಕೊಂಡ ಗೋಷ್ಠಿಗಳು ವಿಚಾರಗಳು ಅತ್ಯಂತ ಪ್ರಸಿದ್ಧವಾಗಿವೆ. ಒಂದೇ ಮಾತು ಹೇಳಬೇಕಾದರೆ, ಸಂವಿಧಾನ, ಮಹಿಳೆಯರ ಬಗ್ಗೆ, ಚಿತ್ರರಂಗದ ಬಗ್ಗೆ, ರೈತರ ಬಗ್ಗೆ, ಸೆಕ್ಯುಲರಿಸಂ ಗ್ಲೋಬಲ್, Constitution ಎಲ್ಲಾ ವಿಷಯಗಳ ಎಲ್ಲಾ ಪಂಡಿತರು ಸಾಹಿತಿಗಳು ವಿದ್ವಾಂಸರುಗಳ ವಿಚಾರಗಳು ಬಹಳ ಮಹತ್ವವಾದ ಮಂಡನೆಯಾಗಲಿವೆ.

ಉತ್ತಮವಾದ ಸಾಹಿತ್ಯ ಬೇಕು ಸಮಾಜಕ್ಕೆ, ಸರಿಯಾದ ಸಾಹಿತ್ಯಬೇಕು ಎಂದು ಹೇಳುತ್ತೇವೆ ಆದರೆ ನಮ್ಮ ದೃಷ್ಟಿಯಲ್ಲಿ ನಾವು ಒಳ್ಳೆಯವರ ಸಂಖ್ಯೆಯನ್ನು ಬೆಳೆಸಬೇಕು. ಒಳ್ಳೆಯವರ ಸಂಖ್ಯೆಯನ್ನು ಬೆಳೆಸಿದರೆ ಒಳ್ಳೆಯದಾಗುತ್ತದೆ. ಎಲ್ಲಾ ಕ್ಷೇತ್ರಗಳಲ್ಲಿ ಒಳ್ಳೆಯವರ ಸಂಖ್ಯೆಯನ್ನು ಬೆಳೆಸಿದರೆ ಅದರಿಂದ ಸಮಾಜಕ್ಕೆ ದೇಶಕ್ಕೆ ಒಳ್ಳೆಯದಾಗುತ್ತದೆ ಹಾಗೂ ಒಳ್ಳೆಯವರ ಸಂಖ್ಯೆಯನ್ನು ಬೆಳಸಬೇಕಾದರೆ ನಾವು ಅಂತಹವರ ಮನಸ್ಸನ್ನು ಪರಿವರ್ತನೆ ಮಾಡಬೇಕಾಗುತ್ತದೆ. ಯಾಕೆಂದರೆ ಸಾಹಿತ್ಯ ದಿಕ್ಸೂಚಿಯಾಗಬೇಕು, ಮಾರ್ಗದರ್ಶಿಯಾಗಬೇಕು, ಪ್ರೇರಣೆಯಾಗಬೇಕು. ಪ್ರೋತ್ಸಾಹ ಕೊಡಬೇಕು. ಇಂತಹ ಒಳ್ಳೆಯವರು ಸುಮ್ಮನೆ ಕುಂತರ ಕೆಟ್ಟದು ತಾನಾಗಿಯೇ ಬೆಳೆದುಕೊಳ್ಳುತ್ತದೆ. ನಾವು ಏನೂ ಮಾಡಬೇಕಾಗಿಲ್ಲ; ಕೆಟ್ಟದ್ದು ಬೆಳೆಯಲು ಅವಕಾಶ ಕೊಡಬಾರದು.

ಇತ್ತೀಚೆಗೆ ದೇಶದಲ್ಲಿ ಅಸಹಿಷ್ಣುತೆಯ ಬಗ್ಗೆ ಬಹಳ ಚರ್ಚೆಯಾಯಿತು. ನಾನು ಯಾವ ರಾಜಕೀಯ ಪಕ್ಷವಾಗಲಿ ಅಥವಾ ಯಾವ ವಿಚಾರವಾಗಲಿ ಮಾತನಾಡುತ್ತಿಲ್ಲ. ಅನೇಕ ಜನ ಪ್ರಶಸ್ತಿಗಳನ್ನು ವಾಪಸ್ಸು ಕೊಟ್ಟರು. ನನ್ನ ದೃಷ್ಟಿಯಲ್ಲಿ ಯಾವುದರ ವಿರುದ್ಧ ಅಸಹಿಷ್ಣುತೆ ಬೇಕು ಎಂದರೆ ಜಾತಿ, ಭ್ರಷ್ಟಾಚಾರ, ಅಪರಾಧ, ಸ್ವಜನ ಪಕ್ಷಪಾತ, ಇವುಗಳ ವಿರುದ್ಧ ಬೇಕಾಗುತ್ತದೆ. Zero tolerance, we must not tolerate, caste, nepotism, crime & corruption. ಇವುಗಳ ವಿರುದ್ಧ ಅಸಹಿಷ್ಣುತೆ ಬೇಕು. ಆದರೆ ಮನುಷ್ಯ ಮನುಷ್ಯರ ನಡುವೆ ಅಸಹಿಷ್ಣುತೆ ಇರಬಾರದು. ಧರ್ಮದ ಹೆಸರಲ್ಲಿ, ದೇಶದ ಹೆಸರಲ್ಲಿ, ಭಾಷೆಯ ಹೆಸರಲ್ಲಿ ಅಂತಹ ಅಸಹಿಷ್ಣುತೆ ಬೇಡ. ನಮ್ಮ ದೇಶದ ಸಂವಿಧಾನವಿದೆ. ಪ್ರಜ್ಞಾವಂತರಿಗೆ ಎಲ್ಲರಿಗೂ ಸಂವಿಧಾನ ಒಂದೇ ಎಂದು ಗೊತ್ತಾಗುತ್ತದೆ.

Constitution of India is one of the best in the world. However excellent the constitution may be ultimately its working depends upon the character of the people. ಎಷ್ಟು ದೊಡ್ಡದು. Golden words are they, every things is there.

Constitution by itself does not make difference, people who work under constituion make tremendous difference. ಅವರು ಬದಲಾವಣೆಗಳನ್ನು ತರಬಹುದು. ಮಾಡಬಹುದು. ಏಕೆಂದರೆ ಕುರ್ಚಿ ಅದೇ ಆದರೂ ಅದರ ಮೇಲೆ ಕುಳಿತುಕೊಳ್ಳುವ ವ್ಯಕ್ತಿ ಮಹತ್ತರವಾದ ಬದಲಾವಣೆಗಳನ್ನು ತರುತ್ತಾನೆ.

Chair being the same the occupant can make tremendous difference ಆಮೇಲೆ ಕುರ್ಚಿಯ ಮೇಲೆ ಕೂರುವುದೆಂದರೆ, True power is not on what

chair you sit on but how you sit. ನೀವು ಯಾವ ಕುರ್ಚಿಯ ಮೇಲೆ ಕುಳಿತುಕೊಂಡರೂ ಆ ಕುರ್ಚಿಯ ಮೇಲೆ ನೀವು ಯಾವ ರೀತಿಯಾಗಿ ಕುಳಿತು ಕೊಂಡಿದ್ದೀರಾ ಎಂಬುದರಲ್ಲಿ ನಿಜವಾದ power ಇದೆ.

ನಮ್ಮ ದೇಶದಲ್ಲಿ ಎಲ್ಲಾ ಸಂಪತ್ತು ಇದೆ. ಆದರೆ ಇವತ್ತು ನಮಗೆ ಬೇಕಾಗಿರುವುದೇ ಯುವಕರು. ಎಂಥ ಯುವಕರು ಬೇಕು? ಇವತ್ತು ಜಾತಿ, ಭ್ರಷ್ಟಾಚಾರ ಮತ್ತು ಅಪರಾಧಗಳು ಇವೆಲ್ಲ ಕೂಡಿಕೊಂಡು ನಮ್ಮ ದೇಶದ ಅಭಿವೃದ್ಧಿ ಕುಂಠಿತವಾಗಿದೆ. ಇದರ ಬದಲಾಗಿ ನಮಗೇನು ಬೇಕಾಗಿದೆ? ನಮ್ಮ ದೇಶದ ಯುವಕರು ನಮ್ಮ ದೇಶದ ದೊಡ್ಡ ಶಕ್ತಿ. ವೃದ್ಧರು ಹಿರಿಯರು ನಮ್ಮ ದೇಶದ ಬಹು ದೊಡ್ಡ ಅನುಭವ. It is youngistan which can make better Hindustan. ನಮ್ಮ ಯುವ ಶಕ್ತಿ ಒಳ್ಳೆಯ ರೀತಿಯಲ್ಲಿ ನಡೆದುಕೊಂಡಾಗ ನಮ್ಮ ದೇಶದ ಚಿತ್ರವೇ ಬೇರೆಯಾಗುತ್ತದೆ. caste, crime & curruption ಇವುಗಳ ವಿರುದ್ಧ ಸಿಡಿಯಬಲ್ಲ ಯುವಕರು ನಮ್ಮ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಂದರೆ ನಮ್ಮ ದೇಶದ ಚಿತ್ರವೇ ಬದಲಾಗುತ್ತದೆ.

ಈಗ ನಮ್ಮ ದೇಶದಲ್ಲಿ ಎಲ್ಲಾ ಕಡೆಯಲ್ಲೂ ಕ್ಯೂ ಇದೆ. ನೋಡಿ ಬಸ್‌ಸ್ಟ್ಯಾಂಡ್, ರೈಲ್ವೇ ಸ್ಟೇಷನ್, ಸಿನೇಮಾ ಥಿಯೇಟರ್ಸ್‌ಗಳಲ್ಲಿ, Road of honesty is less travelled. ಪ್ರಾಮಾಣಿಕತೆ ಇರುವ ಕಡೆ ಕ್ಯೂನೇ ಇಲ್ಲ. ನಾಲ್ಕೇ ಜನ ಸಿಗಬಹುದು. Road of honesty is less travelled & junction of honesty, humility & humanity is less crowded. ಸಂಕ್ರಮಣ ಬಳಗ ಬಹಳ ಒಳ್ಳೆಯ ಕೆಲಸ ಮಾಡುತ್ತಾ ಇದೆ. ಇದು ಮೌಲಿಕ ವೈಚಾರಿಕ, ತಾತ್ವಿಕ, ವಾಸ್ತವಿಕ ಎಲ್ಲಾ ವಿಷಯಗಳಿಂದ ಕೂಡಿದ ವಿಮರ್ಶೆ : ಮನೋರಂಜನೆಯಲ್ಲ ಮನೋವಿಕಾಸದ ಪತ್ರಿಕೆ.

ಸಂಕ್ರಮಣ ಬಳಗದ ಈ ಬಂಗಾರ ಹಬ್ಬದಲ್ಲಿ ಪಾಲುಗೊಂಡು ಈ ಪ್ರಥಮ ಸಂಕ್ರಮಣ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡುವ ಅವಕಾಶ ನೀಡಿದ ಸಂಕ್ರಮಣ ಬಳಗಕ್ಕೆ ನನ್ನ ಕೃತಜ್ಞತೆಗಳು. ಇಷ್ಟೆಲ್ಲಾ ಸಾಹಿತಿಗಳ ಮಧ್ಯೆ ಸಾಹಿತಿಯಲ್ಲದ ನಾನು ಬರುವುದಕ್ಕೆ ನನಗೆ 'ಸಮಯ ದಾನ' ಮಾಡಿದ್ದೀರಿ. ನಿಮಗೆ ಮತ್ತೊಮ್ಮೆ ಕೃತಜ್ಞ ನಾನು.

■

ನಾನೂ ಇದೇ ಬಳಗದವ

● ಮನು ಬಳಿಗಾರ

ಎಲ್ಲಾ ಸದಸ್ಯರುಗಳೇ, ಈಗಾಗಲೇ ಸಂಕ್ರಮಣ ೫೦ ವರ್ಷಗಳ ಕಾಲ ನಡೆದು ಬಂದ ದಾರಿ ನಮಗೆ ಗೊತ್ತು. ನಾನು ಸಂಕ್ರಮಣದ ಓದುಗನಾಗಿದ್ದೆ, ಸಣ್ಣ ಹುಡುಗನಾಗಿದ್ದಾಗ. ಪ್ರಾಥಮಿಕ ಶಾಲೆಯಲ್ಲಿದ್ದಾಗ ಇದು ಪ್ರಾರಂಭವಾಯಿತು. ಹೈಸ್ಕೂಲಿಗೆ ಬಂದಾಗ ಇದನ್ನು ಓದುತ್ತಾ ಇದ್ದೆ ನಾನು ಲೈಬ್ರರಿಯಲ್ಲಿ. ತದನಂತರ ಧಾರವಾಡ ಕಾಲೇಜಿನ ದಿನಗಳಲ್ಲಿ ಪ್ರೊ. ಚಂಪಾರವರನ್ನು ನೋಡಬೇಕು, ಅವರ ಭಾಷಣ ಕೇಳಬೇಕು ಎಂಬ ಬಹಳ ದೊಡ್ಡ ಹಂಬಲವಿತ್ತು. ೭೦ ರ ದಶಕದ ಜೆಪಿ ಚಳುವಳಿಯಲ್ಲಿ ಅವರು ಒಂದು ಸೈಕಲ್ ತೆಗೆದುಕೊಂಡು ರಾತ್ರಿ ನಮ್ಮ ಉದಯ ಹಾಸ್ಟೆಲ್‌ಗೆ ಬಂದು ಜೆಪಿಯವರ ಬಗ್ಗೆ ಹೇಳುತ್ತಿದ್ದರು. ತದನಂತರ ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಪಾತ್ರ ವಹಿಸಿದ್ದರು. ಅಷ್ಟರಲ್ಲಿ ನಾನು ಕೆ.ಎ.ಎಸ್.ಗೆ ಆಯ್ಕೆಯಾಗಿದ್ದೆ.

೧೨ ವರ್ಷದ ನಂತರ ನಾನು ಸಂಕ್ರಮಣದಲ್ಲಿ ಲೇಖಕನಾಗಿ ಗುರ್ತಿಸಿಕೊಂಡೆ, ನನ್ನ ಲೇಖನಗಳು, ಕವನಗಳು ಸಂಕ್ರಮಣ ಪತ್ರಿಕೆಯಲ್ಲಿ ಬರಲು ಶುರುವಾದವು. ಆವಾಗ ನನಗೆ ಸಾಹಿತಿಗಳ ಬಳಗದ ವಿಶೇಷವಾಗಿ ಧಾರವಾಡ ಮತ್ತು ಬೆಳಗಾವಿ, ಈ ಬೆಂಗಳೂರು, ಮೈಸೂರು, ಶಿವಮೊಗ್ಗ, ಇಲ್ಲಿಯ ಬರಹಗಾರರ ಪರಿಚಯ ನನಗಾಯಿತು. ತದನಂತರ ರಾಜ್ಯದಾದ್ಯಂತ ಮತ್ತು ರಾಜ್ಯದ ಹೊರಗಡೆ ಹೋಆಗ ಅನೇಕ ಬರಹಗಾರರು ಇದ್ದರು. ಸಂಕ್ರಮಣದ ಬಳಗದವ ಎಂದು ನನ್ನನ್ನು ಗುರ್ತಿಸುತ್ತಿದ್ದರು; ನನಗೆ ಬಹಳ ಹೆಮ್ಮೆಯ ವಿಷಯ. ಇದಕ್ಕೆ ನಾನು ಪ್ರಾರಂಭದಿಂದಲೂ ಅಂದರೆ ಓದುಗನಾಗಿ ಲೇಖಕನಾಗಿ ಸ್ವಲ್ಪಮಟ್ಟಿನ ಪೋಷಕನಾಗಿ ಅದರ ಜೊತೆಗೆ ಹೆಜ್ಜೆ ಇಟ್ಟಿರುವುದು ನನಗೆ ಬಹಳ ಅಭಿಮಾನದ ಸಂಗತಿ. ನಿರಂತರವಾಗಿ ಪತ್ರಿಕೆಯನ್ನು ನಡೆಸಿಕೊಂಡು ಬಂದು ಕನ್ನಡ ಜನರನ್ನು ಸದಾ ಎಚ್ಚರದಲ್ಲಿರುವಂತೆ ಮಾಡಿದ ಈ ಪತ್ರಿಕೆಯ ಸಂಪಾದಕ ಬಳಗಕ್ಕೆ ಮತ್ತು ವಿಶೇಷವಾಗಿ ಪ್ರೊ. ಚಂಪಾ ದಂಪತಿಗಳಿಗೆ ಮತ್ತು ಎಲ್ಲಾ ಲೇಖಕರಿಗೆ ನನ್ನ ಅಭಿನಂದನೆ. ಯಾವುದೇ ಬಂಡವಾಳ ಹಾಕುವಂತಹ ಶ್ರೀಮಂತರಿಲ್ಲದಂತಹ ಒಂದು ಸನ್ನಿವೇಶ ಇದು. ಬಹಳಷ್ಟು ಶ್ರೀಮಂತರು ಕೂಡಿಕೊಂಡು ಒಂದು ಪತ್ರಿಕೆಯನ್ನು ನಡೆಸುವುದು ಎಲ್ಲಾ ಕಡೆಯೂ ಆಗುವಂತಹ ಒಂದು ವಿಷಯ.

ಇಲ್ಲಿ ಮೂರು ಜನ ಪ್ರಾಧ್ಯಾಪಕರು, ಪ್ರೊ. ಚಂಪಾ, ಪ್ರೊ. ಸಿದ್ಧಲಿಂಗ ಪಟ್ಟಣ ಶೆಟ್ಟಿ, ಪ್ರೊ. ಗಿರಡ್ಡಿಯವರು. ನಾನು ಅವರ ಕೈಯಲ್ಲಿ ನೇರವಾಗಿ ಕಲಿತಿಲ್ಲ. ಇವರು ನನ್ನ ಗುರುವಿನ ಗುರುಗಳು. ತಮ್ಮ ಲೇಖನಗಳ ಮೂಲಕ,

ಅಂಕಣಗಳ ಮೂಲಕ, ವಿಮರ್ಶೆಗಳ ಮೂಲಕ, ಎಲ್ಲರ ನಡತೆಯನ್ನೂ ತಿದ್ದುವುದು, ಮನೋಧರ್ಮವನ್ನು ಬದಲಾಯಿಸುವಂತಹ ಕೆಲಸವನ್ನು ಸಂಕ್ರಮಣ ಬಳಗ ಸಮರ್ಥವಾಗಿ ಮಾಡಿದೆ. ಸಂಕ್ರಮಣ ಓದಿದ ಮೇಲೆ ನಾನು ನನ್ನ ಆಲೋಚನಾ ಕ್ರಮವನ್ನು ತಿದ್ದಿಕೊಂಡೆ ಎಂದು ಹೇಳುವ ಅನೇಕ ಲೇಖಕ ಮಿತ್ರರು ನನಗೆ ಭೇಟಿಯಾಗಿದ್ದಾರೆ. ಹೀಗೆ ನಾಡಿನ ವೈಚಾರಿಕ ಕ್ರಾಂತಿಯಲ್ಲಿ, ಬದಲಾವಣೆಯಲ್ಲಿ ಅಥವಾ ಪ್ರಗತಿಯಲ್ಲಿ ಪಾತ್ರವಾಡಿದ ಲೇಖಕರಲ್ಲಿ ನಾನೂ ಒಬ್ಬ ಅನ್ನೋದೆ ಹೆಮ್ಮೆ.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಅಯ್ಕೆಯಾದ ಮೇಲೆ ಭಾಗವಹಿಸುತ್ತಿರುವಂತಹ ದೊಡ್ಡ ಸಮಾರಂಭದಲ್ಲಿ ಇದೇ ಮೊದಲನೇಯದು. ಆದರೆ ನನ್ನ ಮನಸ್ಸಿನಲ್ಲಿ ಸಂಕ್ರಮಣದಲ್ಲಿಯ ಲೇಖನಗಳು, ಕವನಗಳು ನನಗೆ ಯಾವವು ಬಂದಿವೆಯೋ ನೆನಪಿದೆ. ಏಳು ನನ್ನ ಲೇಖನಗಳು ಹಾಗೂ ಕವನಗಳು ಸಂಕ್ರಮಣದಲ್ಲಿ ಬಂದಿವೆ. ಸಂಕ್ರಮಣದಲ್ಲಿ ಲೇಖನಗಳು ಪ್ರಕಟವಾದಾಗ ಯಾವ ರೀತಿಯ ಹುರುಪು, ಹುಮ್ಮಸ್ಸು ಇತ್ತೋ ಹಾಗೇ ಈ ಸಮಾರಂಭವೂ ಕೂಡ.

ತಮ್ಮೆಲ್ಲರ ಪ್ರೀತಿಯ ಮತ್ತು ಅಭಿಮಾನದ ದ್ಯೋತಕವಾಗಿ ಕನ್ನಡ ಸಾಹಿತ್ಯ ಪರಿಷತ್ತು ಇದೆ. ಅಲ್ಲಿ ನಾನು ನಿಮ್ಮೆಲ್ಲರ ಆಶೀರ್ವಾದದಿಂದ ಕುಳಿತುಕೊಂಡಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತು ಹೇಗಿರಬೇಕು, ಬೆಂಗಳೂರಿನಲ್ಲಿ ಕನ್ನಡ ಉಳಿಸಲು ಏನು ಮಾಡಬೇಕು? ಈ ಕುರಿತು ನನಗೆ ನೀವು ನಿರ್ದೇಶನ ಕೊಡಬೇಕು. ನಾನು ಖಂಡಿತವಾಗಿಯೂ ಅದನ್ನು ಮುಂದುವರೆಸಲು ಅಥವಾ ಅನುಷ್ಠಾನಗೊಳಿಸಲು ತಯಾರಿದ್ದೇನೆ. ನೀವು ಹೇಳುವ ಕೆಲಸ ಕಾರ್ಯಗಳನ್ನು ಕೂಡ ಬಹಳ ಮುತುವರ್ಜಿಯಿಂದ ಶ್ರದ್ಧೆಯಿಂದ ನನ್ನ ಅಂತಃಕರಣ ಅದಕ್ಕೆ ಧಾರೆಯೆರೆದು ನಾನು ಮಾಡುತ್ತೇನೆ. ತಮ್ಮೆಲ್ಲರ ಭರವಸೆಯ ಆಶೀರ್ವಾದ ತೆಗೆದುಕೊಂಡು ತಾವು ಮೆಚ್ಚುವ ಹಾಗೆ ಅಹುದು ಅಹುದೆನ್ನುವ ಹಾಗೆ ಕೆಲಸ ಮಾಡುತ್ತೇನೆ.

■

ವಂದನಾರ್ಪಣೆ : ಪಾಲಿಗೆ ಬಂದ ಪಂಚಾಮೃತ

• ನೀಲಾ ಪಾಟೀಲ

ಎಲ್ಲರಿಗೂ ನಮಸ್ಕಾರ,

ವಂದನಾರ್ಪಣೆ.. ನನ್ನ ಪಾಲಿಗೆ ಬಂದ ಪಂಚಾಮೃತ ಇದು.

ಈ ಮನುಷ್ಯ ನನಗೆ ಗಂಟುಬಿದ್ದು ಐವತ್ತು ವರ್ಷದ ಮ್ಯಾಲೆ ಆತು. ಹೀಗ ನಾ ಮಾತಾಡಿದರೆ ನಿಮಗೆ ಆಶ್ಚರ್ಯ ಆಗ್ತತಿ. ನಾ ವಂದನಾರ್ಪಣೆ ಮಾಡೋ ಮುಂದ ಅವರಿಗೆ ಸ್ವಲ್ಪ ಹೆದರಿಕೆ. ಆದ್ರ ನಾನೇನೂ ನಿಮ್ಮ ಮುಂದ ಅವರ ಮಾನಾ ಮರ್ಯಾದಿ ತೆಗಿಯೋದಿಲ್ಲ.

ಯಾಕಂದ್ರ ಪಾಟೀಲರನ್ನ ಯಾರಾದರೂ ತಡವಿದರ ಅವರ ಜನ್ಮ ಜಾಲಾಡಿ ಬಿಡ್ತಾರ. ಅವರು ಟೀಕಾ ಮಾಡಿದರ ವೈಜ್ಞಾನಿಕವಾಗಿ, ಸೈದ್ಧಾಂತಿಕವಾಗಿ ಪ್ರಾಬ್ಲೆಮ್ಸ್ ಇದ್ದ ಇರ್ತಾವ. ಆದರ ತಡವಿಸಿಕೊಂಡವರೂ ಮರೆಂಗಿಲ್ಲ, ತಡವಿದವರೂ ಮರೆಂಗಿಲ್ಲ. ಹೀಗೆಲ್ಲಾ ಮಾಡ್ತಾರ.

ಇಂತಾ ಮನಶ್ಯಾನ ಕೂಡ ಇಷ್ಟು ವರ್ಷ ನಾ ಹ್ಯಾಂಗ ಬಾಳೇ ಮಾಡಿರಬೇಕು? ನನಗs ಆಶ್ಚರ್ಯ. ಯಾಕಂದ್ರ ಇವರು ಯಾವುದೇ ಚಳುವಳಿಗೆ ಹೋಗಲಿ, ಯಾವುದೇ ಸಂಘಟನೆ ಇರಲಿ.. ಮನಿ-ಮಠ ಮರ್ತು ಅದರಲ್ಲೇ ಇನ್‌ವಾಲ್ವ್ ಆಗೋದು ಇವರ ಚಾಳಿ.

ತುರ್ತು ಪರಿಸ್ಥಿತಿ ಬಂತು. ಏನಾತು? ಭಾಳ ತ್ರಾಸ ಆತು. ಇವರ್ನ ಜೇಲಿಗೆ ಹಾಕಿದರು. ಆವಾಗ ನಾ ಏನು ಮಾಡಬೇಕು? ಎರಡು ಸಣ್ಣ ಸಣ್ಣ ಮಕ್ಕಳು. ಕಟ್ಟಿಕೊಂಡು ಏನು ಮಾಡಬೇಕು? ಆವಾಗ ಸುರುವಾತು ನೋಡ್ರಿ ಬಿಪಿ. ಅವತ್ತು ಸುರುವಾಗಿದ್ದು ಇವತ್ತಿಗೂ ಗಂಟು ಬಿದ್ದೈತಿ. ಹಂಗs ಇವರೂ ನನಗ ಗಂಟು ಬಿದ್ದಾರ. ಇಂತಾ ಮನಸ್ಯಾನ ಕೂಡ ಬದಕಾಕಹತ್ತೇವಿ ಒಟ್ಟs.

ಆದ್ರ ಇವರೇನೂ ಕೆಟ್ಟವರಲ್ಲ, ಒಳ್ಳೆಯವರೇ, ಯಾರಿಗೂ ಏನು ಕೇಡು ಮಾಡಂಗಿಲ್ಲ. ಇವರ್ನ ಯಾರೂ ಹೆಚ್ಚು ಬೈಯೋ ಹಂಗಿಲ್ಲ. ಬೈದರೂ ಮರ್ತು ಬಿಡ್ತಾರ. ಅವರ ಕೂಡ ಫ್ರೆಂಡ್‌ಸಿಪ್ ಇದ್ದs ಇರ್ತತಿ. ಇವರ್ನ ಅವರು ಅವರ್ನ ಇವರು ಬಿಡೋಹಂಗಿಲ್ಲ. ಇವರು ಅವರ್ನ ಮರೆಂಗಿಲ್ಲ. ಅವರು ಇವರ್ನ ಮರೆಂಗಿಲ್ಲ. ಒಟ್ಟಾರೆ ವಿಚಿತ್ರ ವ್ಯಕ್ತಿ.

ಈಗ ಐವತ್ತು ವರ್ಷ ಆಯ್ತು ಸಂಕ್ರಮಣ ನಡೆಸಿಕೊಂಡು ಬಂದು. ಬಹಳ ತ್ರಾಸ ಆತ್ರಿ, ಸಿದ್ಲಿಂಗಣ್ಣ, ಗೋವಿಂದಣ್ಣ ಇದ್ದರೂ ಬಿಟ್ಟು ಹೋಗಿಬಿಟ್ಟರು. ಅವಾಗ ನಮಗೆ ಬಂತು ಫಜೀತಿ. ಎಲ್ಲಾ ಕೆಲಸ ನಾವs ಮಾಡಬೇಕು. ಮನಿಯೊಳಗ ಸ್ಲಿಪ್, ಸ್ಟಾಂಪ್ ಹಚ್ಚೋದು. ಆಮ್ಯಾಲೆ ರೊಕ್ಕದ ತ್ರಾಸು ಬಂದ್ರೂ ನೋಡಬೇಕು. ನಾ ಅಂತಿದ್ದೆ : ಇವರು ಯಾಕ ನಮ್ಮ ತಲಿಗೆ ಕಟ್ಟಿಹೋದ್ರೂ ಅಂತ. ಇವರಿಬ್ರೂ ಇದ್ದಿದ್ರ ನಮಗೆ ಇಷ್ಟು ತ್ರಾಸ ಆಗ್ತಿರಲಿಲ್ಲ.

ಆಮ್ಯಾಲೆ ಆಮ್ಯಾಲೆ ರೂಢಿ ಆತು.. ಸಂಕ್ರಮಣ ಅಂದ್ರ ನಮ್ಮ ಮನೀ ಮಾತು ಆಯ್ತು. ಬೆಳಿಗ್ಗೆ ಆದ್ರ ಸಂಕ್ರಮಣ ರಾತ್ರಿ ಆದ್ರ ಸಂಕ್ರಮಣ. ಇದರಾಗ ಮನಿ-ಮಂದಿ ಪಾಲು ಎಷ್ಟು ಐತೋ ಗೊತ್ತಿಲ್ಲ. ಆದರೆ ಇವರಂತೂ ಭಾಳ ಕಷ್ಟಪಡತಾರ. ಇದು ನಿಮಗ ಗೊತ್ತೈತಿ. ಇನ್ನೂ ೨೦-೨೫ ವರ್ಷ ಮುಂದುವರಿಯಲಿ ಅಂತ ನನ್ನ ಹಾರೈಕೆ. ನನಗ ಹೆಚ್ಚು ಮಾತಾಡಲಿಕ್ಕೆ ಬರಂಗಿಲ್ಲ..

ಈಗ ವಂದನಾರ್ಪಣೆ ಸುರು ಮಾಡ್ತಿನಿ.

ಅಲ್ಲರೀ, ಇದು 'ಪ್ರಥಮ' ಸಮ್ಮೇಳನ ಅಂತಾರ, ಇದನ್ನ ವರ್ಷಾ ಮಾಡ್ತಾರಂತ. ವರ್ಷಾ ಮಾಡಿದರ ಇವರ ಗತಿ ಏನು? ಈ ವಯಸ್ಸಾ ಇವರು ಮಾಡೋದು? ಒಂದು ತಿಂಗಳಾತು, ಆ ಗಂಗಾಧರ ಪಂಡಿತರನ್ನು, ಬಿ. ಆರ್. ನಾಗೇಶರನ್ನು ಕಟ್ಟಿಕೊಂಡು ತಿರುಗಾಡೋದು ನೋಡಿಬಿಟ್ಟರ... ನಮ್ಮ ಮಗಳು ಮೀನಾ ಅಂತಾಳ : 'ಅಪ್ಪಾ ಹಿಂಗ್ಯಾಕ ಮಾಡಾಕಹತ್ಯಾನ? ಎಷ್ಟು ದಣಕೊಂತಾನ.. ಇವನ ಗತಿ ಏನಾಗಬೇಕು? ನಮ್ಮ ಗತಿ ಏನಾಗಬೇಕು?' 'ಏನರ ಮಾಡಲಿ ಬಿಡು ದೇವರು ಮಾಡಿಧಂಗ ಆಗ್ತತಿ' ಅಂತ ನಾ ಹೇಳ್ತನಿ. ಇವರಂತೂ ದೇವರ್ನ ನಂಬಂಗಿಲ್ಲ, ನಾ ನಂಬತsನಿ. ಇಂತಾ ಕೆಲಸ ಮಾಡಿಕೊಂತ ನೂರು ವರ್ಷ ಬದುಕಲಿ ಅಂತ ಹಾರೈಸ್ತನಿ.

ಆದ್ರ ನೀವು ಪಟ್ಟ ಶಿಷ್ಯಂದಿರು ಅದೀರೆಲ್ಲ - ಸತೀಶ ಕುಲಕರ್ಣಿ, ಅಲ್ಲಮಪ್ರಭು, ಕುಂ. ವೀರಭದ್ರಪ್ಪ - ಇನ್ನೂ ಬಾಳ ಜನ ಅದೀರಿ. ಎಲ್ಲಾ ಕೂಡಿ ಇವರಿಗೆ ಬುದ್ಧಿ ಹೇಳಬೇಕು. ಎರಡು ದಿನದ ಸಮ್ಮೇಳನ ಹಮ್ಮಿಕೊಂಡಾರಲ್ಲ; ಒಂದು ತಿಂಗಳು ಎರಡು ತಿಂಗಳು ಆತು.. ಊಟಾನs ಸರಿಯಾಗಿ ಮಾಡಿಲ್ಲ. ಸಾವಿರ ಮಂದಿಗೆ ಲೆಟರ್ ಬರಿಯೋದು..., ಸಾವಿರ ಮಂದಿಗೆ ಫೋನ್ ಮಾಡೋದು. ನೋಡಿ ನೋಡಿ ತಲಿ ಕೆಟ್ಟುಹೋಗೇತಿ. ಏನು ಮಾಡೋದು. ಒಟ್ಟಿಗೆ ಇಷ್ಟಕ್ಕೆ

ಮುಗಸ್ತಾರೋ ವರ್ಷಾ ವರ್ಷಾ ಮಾಡ್ತಾರೋ. ಸ್ವಲ್ಪ ಬುದ್ಧಿ ಹೇಳ್ರಿ, ಒಂದು ದಿನ ಮಾಡ್ಲಿ. ಶಿವರಾಜ ಪಾಟೀಲರ್‍ನ್ನ ಕರೆಸಿದರಲ್ಲ. ಹಂಗs ಒಂದು ಫಂಕ್ಶನ್ ಮಾಡ್ಲಿ. ನಿಮ್ಮನ್ನೆಲ್ಲಾ ನೋಡೋ ಆಶಾ ಇದ್ರ ಒಂದು ದಿನದೊಳಗ ನೋಡಿ ಕಳಿಸಿಬಿಡಲಿ. ನಾನು ಒಟ್ಟಾರೆ ಎಷ್ಟು ಬಡಿದಾಡಬೇಕು? ಆರೋಗ್ಯದ ಸಮಸ್ಯಾ ಐತಿ. ದಣಕಾ ಬ್ಯಾಡ್ರಿ ಅಂತ ಹೇಳ್ರಿ. ವಯಸ್ಸಾಗಿದ್ದಂತೂ ಸುಳ್ಳಲ್ಲ, ಎಲ್ಲರಿಗೂ ಆಗತೈತಿ ವಯಸ್ಸು. ಹಂಗ ಇವರಿಗೂ ಆಗೇತಿ. ಸ್ವಲ್ಪ ಜ್ವಾಕೀಲೆ ಇರ್ರಿ ಅಂತ ಹೇಳ್ರಿ.

ನಾನಂತೂ ಇಷ್ಟು ಹೇಳ್ತನಿ. ನಮ್ಮ ಮಾತಂತೂ ಕೇಳೋದಿಲ್ಲ. ನೀವಾದರೂ ಹೇಳ್ರಿ. ಈಗ ವಂದನಾರ್ಪಣೆ ಸುರು ಮಾಡ್ತನಿ.

ಸಮ್ಮೇಳನ ಉದ್ಘಾಟಿಸಿದ ಮಾನ್ಯ ಶಿವರಾಜ ಪಾಟೀಲರಿಗೆ, ಶ್ರೇಷ್ಠ ಕವಿ ಜಿ. ಎಸ್. ಸಿದ್ಧಲಿಂಗಯ್ಯನವರಿಗೆ ಮೈಸೂರಿಂದ ಬಂದಿರುವ ಬಿ. ಎನ್. ಶ್ರೀರಾಮ ಮತ್ತು ಪದ್ಮಾ ಅವರಿಗೆ, ಪರಿಷತ್ತಿಗೆ ನೂತನವಾಗಿ ಆರಿಸಿಬಂದ ಮನು ಬಳಿಗಾರ ಅವರಿಗೆ, ನಮ್ಮ ಸಿದ್ಲಿಂಗಣ್ಣನಿಗೆ.. (ಇದು ಅವನದೇ ಪತ್ರಿಕೆ. ಅವನಿಗ್ಯಾಕೆ ವಂದನೆ ಹೇಳೋದು? ನೀವು ಮೂರು ಮಂದಿ ಅಣ್ಣ ತಮ್ಮಂದಿರು. ಜಗಳಾಡ್ತೀರಿ, ಕೂಡತೀರಿ) ಪತ್ರಿಕೆ ಅಭಿಮಾನಿಗಳು, ಮಾಧ್ಯಮದವರು ಬಂದೀರಿ.

ಉದ್ರಿ ಚಂದಾದಾರರು – ಬಂದೀರಲ್ಲ? ಈ ಉದ್ರಿ ಮಂದಿಗೆ ಕಾರ್ಡ ಬರೆದು ಬರೆದು ನಮಗೆ ಅವರ ಹೆಸರು – ವಿಳಾಸ ಬಾಯಿ ಪಾಠ ಆಗಿದೆ... ನಿಮಗೂ ಧನ್ಯವಾದಗಳು.

ಏನು ಹಿಂಗ ಮಾತಾಡ್ತಾರಲ್ಲ – ಅಂತ ಏನೂ ತಿಳಕೋಬ್ಯಾಡ್ರಿ. ನಮ್ಮ ಭಾಷೆಯೇ ಹೀಗೆ.. ನಮ್ಮ ಮಾತೇ ಹೀಗೆ.

ಈಗ ವಂದನಾರ್ಪಣೆ ಮುಗೀತು.

■

ಸಂಕ್ರಮಣದ ಇತಿಹಾಸ ಒಂದು ರೀತಿಯಲ್ಲಿ ಕುತೂಲಕಾರಿಯಾದದ್ದು. ಒಂದು ದೃಷ್ಟಿಯಿಂದ ಸಂಕ್ರಮಣದ ಇತಿಹಾಸ ನಮ್ಮ ಎಲ್ಲ ಸಾಹಿತ್ಯ ಪತ್ರಿಕೆಗಳ ಇತಿಹಾಸವೇ ಆಗುತ್ತದೆ.

– ಹಂಜಿನಮನಿ ವೀರಭದ್ರಪ್ಪ

ಪತ್ರಿಕೆಯಲ್ಲಿ ವಿವಾದಾಸ್ಪದ ಲೇಖನಗಳನ್ನು ಪ್ರಕಟಿಸುವುದರ ಜೊತೆಗೆ ವಿಚಾರ ಪೂರಿತವಾದ, ವೈಜ್ಞಾನಿಕವಾದ ಲೇಖನಗಳನ್ನು ಪ್ರಕಟಿಸುತ್ತಿದ್ದೀರಿ. ಈ ಮೂಲಕ ಜನರನ್ನು ಕಿಂಚಿತ್ತಾದರೂ ಜಾಗೃತಿಗೊಳಿಸುವ ಕೆಲಸ ನಿಮ್ಮಿಂದ ನಡೆಯುತ್ತಿದೆ.

– ಕುವೆಂಪು

* * *

'ಸಂಕ್ರಮಣ' ಎಂದರೆ ಗೆರೆ ದಾಟುವುದು, ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಪ್ರವೇಶಿಸುವುದು, ಮುಂದುವರೆಯುವುದು ಇತ್ಯಾದಿ ಅರ್ಥಗಳಿವೆ..

ನಿಂತ ನೆಲೆಗಳನ್ನು ಮೀರುತ್ತಾ, ಹೊಸ ವಲಯಗಳನ್ನು ಒಳಗೊಳ್ಳುತ್ತಾ ಬಂದ ಈ ಪತ್ರಿಕೆ ನಮ್ಮ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಆಂದೋಲನಗಳಲ್ಲಿ ಮೌಲಿಕ ಪಾತ್ರವನ್ನು ವಹಿಸಿದೆ.

ಸದಾ ಚಲನಶೀಲವಾಗುತ್ತಾ, ಪ್ರತಿಷ್ಠಿತ ಪತ್ರಿಕೆಗಳ ಧೋರಣೆಗೆ ಸವಾಲಾಗಿ ನಿಲ್ಲುತ್ತಾ, ಜನಪರ ನಿಲುವಿನಲ್ಲಿ ಬೇರೂರಿ ಅರಳುತ್ತಾ ಬಂದ ಸಂಕ್ರಮಣ ನೂರಾರು ಹೊಸ ಬರಹಗಾರರಿಗೆ ವೇದಿಕೆಯಾಗಿದೆ; ವಿಚಾರ ಸಂಘರ್ಷಗಳಿಗೆ ಹಿಡಿದ ಕನ್ನಡಿಯಾಗಿದೆ; ಪ್ರಗತಿಪರವಾದ ಹೊಸ ಧೋರಣೆಗಳಿಗೆ ಮುನ್ನುಡಿಯಾಗಿದೆ.

– ಜಿ. ಎಸ್. ಶಿವರುದ್ರಪ್ಪ

* * *

ಉತ್ತರ ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಕರ್ನಾಟಕದಲ್ಲಿಯೇ ವಿಚಾರ ಪ್ರಚೋದಕ ಮಾಸ ಪತ್ರಿಕೆಗಳು ವಿರಳ.. ಇಪ್ಪತ್ತು ವರುಷ ಒಂದು ಪತ್ರಿಕೆಯನ್ನು ಉತ್ಸಾಹ ಪೂರ್ವಕವಾಗಿ ಉಳಿಸಿಕೊಂಡು ಹೊರಟಿರುವ ಎದೆಗಾರಿಕೆ ಪ್ರಶಂಸನೀಯ.

– ಶಂಬಾ ಜೋಶಿ

(ಸಂಕ್ರಮಣಕ್ಕೆ ಇಪ್ಪತ್ತು ವರುಷ ತುಂಬಿದ ಸಂದರ್ಭ)

ಜಾಗತಿಕ ಮೂಲಭೂತವಾದ ಮತ್ತು ನಮ್ಮ ನಡುವಿನ ಭಾರತ

• ಮುಜಾಫ್ಫರ್ ಅಸ್ಸಾದಿ

೧೯೯೩ರ ಸುಮಾರಿಗೆ ಅಮೇರಿಕಾದ ಪ್ರಖ್ಯಾತ ಜರ್ನಲ್ "ಫಾರಿನ್ ಅಫೇರ್ಸ್"ನಲ್ಲಿ ಒಂದು ಲೇಖನ ಪ್ರಕಟವಾಗಿತ್ತು. 'ಅದು ಮುಂದೆ "ಕ್ಲಾಶ್ ಆಫ್ ಸಿವಿಲೈಸೇಶನ್" – ನಾಗರೀಕತೆಗಳ ಸಂಘರ್ಷ – ಎಂಬ ಶೀರ್ಷಿಕೆಯಲ್ಲಿ ಪುಸ್ತಕದ ರೂಪದಲ್ಲಿ ಪ್ರಕಟವಾಯಿತು. ಅದು ಪ್ರಕಟವಾದಾಗ ಅಮೇರಿಕಾದ ಶತಶತ್ರುವಾದ ಸೋವಿಯತ್ ಯೂನಿಯನ್ ಪತನವಾಗಿತ್ತು. ಅಮೇರಿಕಾಕ್ಕೆ ಹೊಸ ಶತ್ರುಗಳನ್ನು ಹುಡುಕುವುದು ಆ ಸಂದರ್ಭದಲ್ಲಿ ಅತೀ ಅವಶ್ಯಕವಾಗಿತ್ತು. ಶತ್ರುಗಳಿಲ್ಲದಿದ್ದರೆ ಮಿಲಿಟರಿ–ಕೈಗಾರಿಕೆ ಸಂಕೀರ್ಣಗಳೊಂದಿಗೆ ಬೆಸೆದುಕೊಂಡಿದ್ದ ಅಮೇರಿಕಾದ ಆರ್ಥಿಕತೆ ತಲ್ಲಣಗೊಳ್ಳುವ ಸಾಧ್ಯತೆಗಳು ನಿಚ್ಚಳವಾಗಿದ್ದವು. ಅವನ ಪ್ರಾಕಲ್ಪನೆ ಪ್ರಕಾರ ಹೊಸ ಜಗತ್ತಿನ ಸಂಘರ್ಷಗಳ ಮೂಲಾಧಾರಗಳು ತಾತ್ವಿಕ ಅಥವಾ ಆರ್ಥಿಕವಲ್ಲ ಹೊರತು ಸಾಂಸ್ಕೃತಿಕ. ಈ ಮಧ್ಯೆ ರಾಷ್ಟ್ರಗಳು ಸಂಘರ್ಷಗಳ ಶಕ್ತಿಶಾಲಿ ಮಧ್ಯವರ್ತಿಗಳಾದರೂ, ಜಾಗತೀಕ ಸಂಘರ್ಷ ಮಾತ್ರ ವಿವಿಧ ನಾಗರೀಕತೆಗಳ ರಾಷ್ಟ್ರ ಮತ್ತು ಗುಂಪುಗಳ ನಡುವೆ ನಡೆಯುತ್ತದೆ. ನಾಗರೀಕತೆಗಳ ಸಂಘರ್ಷವೇ ರೇಖಾ ಗಡಿಯಾಗುತ್ತದೆ." ಅವನು ಎಂಟು ನಾಗರೀಕತೆಗಳ ನಡುವೆ ಸಂಘರ್ಷಗಳನ್ನು ಕಲ್ಪಿಸುತ್ತಾನೆ : ಪಾಶ್ಚಾತ್ಯ, ಕನ್ಫೂಶಿಯನ್, ಜಪನೀಸ್, ಇಸ್ಲಾಮಿಕ್, ಹಿಂದೂ, ಸ್ಲಾವಿಕ್–ಅರ್ಥೋಡಕ್ಸ್, ಲ್ಯಾಟಿನ್ ಅಮೇರಿಕನ್ ಮತ್ತು ಆಫ್ರಿಕನ್. ಈ ರೀತಿಯ ಸಂಘರ್ಷಗಳಿಗೆ ಕಾರಣಗಳನ್ನು ಹಂಟಿಂಗ್ಟನ್ ನೀಡುತ್ತಾನೆ. ಮೊದಲನೇದಾಗಿ ನಾಗರೀಕತೆಗಳ ನಡುವಿನ ವ್ಯತ್ಯಾಸಗಳು ನೈಜ ಹಾಗೂ ವಾಸ್ತವ – ಅವನ ಪ್ರಕಾರ ಪ್ರತೀ ನಾಗರೀಕತೆ ಇತಿಹಾಸ, ಭಾಷೆ, ಸಂಸ್ಕೃತಿ, ಸಂಪ್ರದಾಯ ಹಾಗೂ ಧರ್ಮಗಳಿಂದ ವಿಭಿನ್ನವಾಗುತ್ತಾ ಹೋಗುತ್ತವೆ. ಎರಡನೇದಾಗಿ, ಕುಬ್ಜವಾಗಿ ಹೋಗುತ್ತಿರುವ ಜಗತ್ತು ನಾಗರೀಕತೆಯ ಪ್ರಜ್ಞೆಯನ್ನು ನಿರ್ಮಿಸಲೇ ಬೇಕಾದ ಅನಿವಾರ್ಯತೆ ಇದೆ. ಇಲ್ಲಿ ಅವನು ನೀಡುವ ಮೂರನೇ ಕಾರಣ ಅತೀ ಮುಖ್ಯ ಅನಿಸುತ್ತದೆ. ಅವನ ಪ್ರಕಾರ ಇಂದಿನ ಆರ್ಥಿಕತೆಯ ಆಧುನಿಕತೆ ಮತ್ತು ಸಾಮಾಜಿಕ ಬದಲಾವಣೆ ಜನರನ್ನು ತಮ್ಮ ಸ್ಥಾನೀಯ ಐಡೆಂಟಿಟಿಗಳಿಂದ ಪಲ್ಲಟನಗೊಳಿಸುತ್ತದೆ. ಅದು ರಾಷ್ಟ್ರಗಳನ್ನು ಬಡಕಲು ಮಾಡುವ ಕಾರಣ ರಾಷ್ಟ್ರ ಒಂದು ಅಸ್ಮಿತೆ ಸಂಕೇತವಾಗಿ ಉಳಿಯುವುದು ಕೂಡ

[1] Samuel P. Huntington - The Clash of Civilization, Foreign Affairs, summer 1993

ಕಷ್ಟವಾಗುತ್ತದೆ. ಮೂಲಭೂತವಾದಿ ಎಂದೆನಿಸುವ ಧರ್ಮಗಳು ಈ ಸಂದರ್ಭದಲ್ಲಿ ಚಳುವಳಿಗಳ ರೂಪದಲ್ಲಿ ರಾಷ್ಟ್ರ ಕೇಂದ್ರಿತ ಶೂನ್ಯತೆಯನ್ನು ತುಂಬಲು ನೋಡುತ್ತವೆ. ಈ ರೀತಿಯ ಹೋರಾಟಗಳು, ಈ ರೀತಿಯ ಸ್ಥಿತಿಯನ್ನು ಪಾಶ್ಚಾತ್ಯ ಕ್ರಿಶ್ಚಿಯಾನಿಟಿ, ಜೂಡಾಯಿಸಂ, ಬುದ್ಧಿಸಂ, ಹಿಂದುಯಿಸಂ ಹಾಗೂ ಇಸ್ಲಾಂನಲ್ಲಿ ನೋಡಬಹುದು. ಈ ಸಂದರ್ಭದಲ್ಲಿ ಅವನು ಹೇಳುವ ಇನ್ನೊಂದು ಮಾತು ಕೂಡ ಬಹಳ ಮುಖ್ಯ : ಅವನ ಪ್ರಕಾರ ಪಾಶ್ಚಿಮಾತ್ಯ ದೇಶಗಳ ಸಂಘರ್ಷ ಬಹಳ ಮುಖ್ಯವಾಗಿ ಇಸ್ಲಾಂನೊಂದಿಗಿರುತ್ತದೆ. ಆದ ಕಾರಣ ಇಸ್ಲಾಂ ಪಾಶ್ಚಿಮಾತ್ಯ ದೇಶಗಳ ಪ್ರಾಥಮಿಕ ವಿರೋಧಿಯಾಗುತ್ತದೆ ಮತ್ತು ವೈರಿಯಾಗುತ್ತದೆ. ಇಲ್ಲಿರುವ ಸಮಸ್ಯೆಯೆಂದರೆ ಯಾವ ಇಸ್ಲಾಂ ಇಲ್ಲಿ ಪ್ರಾಥಮಿಕ ವಿರೋಧಿ : ಪೋಲಿಟಿಕಲ್ ಇಸ್ಲಾಂ ಅಥವಾ ಸಾಂಪ್ರದಾಯಿಕ ಇಲ್ಲವೇ ಮೂಲಭೂತವಾದಿ ಇಸ್ಲಾಂ? ವಿಚಿತ್ರವೆಂದರೆ ಅವನ ಪ್ರಾಕಲ್ಪನೆ ಅಮೇರಿಕಾದ ವಿದೇಶಾಂಗ ನೀತಿಯ ಭಾಗವಾಗುತ್ತಾ ಹೋಯಿತು. ಅಧ್ಯಕ್ಷ ಬುಶ್‌ನ ಕಾಲದಲ್ಲಿ ಇದು ತೀವ್ರವಾಗಿ ಬೆಳೆಯಿತು.

ದುರಂತವೆಂದರೆ ಹಂಟಿಂಗ್ಟನ್‌ನ ವಾದ ಬೆಳೆದದ್ದು ಆರ್ಥಿಕ ಮೂಲಭೂತವಾದ ಕಾಲದಲ್ಲಿ. ಇವತ್ತಿನ ಸಂದರ್ಭದಲ್ಲಿ ಎರಡು ರೂಪದ ಮೂಲಭೂತವಾದ ನಮಗೆ ಬಹಳ ಮುಖ್ಯವೆನಿಸುತ್ತದೆ. ಒಂದು ಧಾರ್ಮಿಕ ಮೂಲಭೂತವಾದ ಹಾಗೂ ಎರಡನೇಯದು : ಆರ್ಥಿಕ ಮೂಲಭೂತವಾದ. ವಿಚಿತ್ರವೆಂದರೆ ಇವೆರಡು ಜತೆ ಜತೆಯಾಗಿ ಬೆಳೆದವು ಮಾತ್ರವಲ್ಲದೇ ಅವುಗಳನ್ನು ವೈರುಧ್ಯವೆಂದು ಚಿತ್ರಿಸಿದರೂ, ಅಂತಿಮವಾಗಿ ಅವುಗಳು ಒಂದಕ್ಕೊಂದು ಬಿಟ್ಟಿರಲಾಗದ ನಂಟುಗಳು ಎನ್ನಬಹುದು.

•

ಆರ್ಥಿಕ ಮೂಲಭೂತವಾದ

೧೯೯೦ರ ದಶಕ ಆರ್ಥಿಕ ಮೂಲಭೂತವಾದದ ಕಾಲ. ಇದನ್ನು ಮಾರ್ಕೆಟ್ ಫಂಡಮೆಂಟಲಿಸಂ ಎನ್ನುತ್ತೇವೆ. ಇದು ವಿಶ್ವಬ್ಯಾಂಕ್‌ನ. ಜಾಗತೀಕ ಹಣಕಾಸು ಸಂಸ್ಥೆ, ವಾಷಿಂಗಟನ್ ಸಮ್ಮತಿ ಅಥವಾ ಕನ್ಸೆನ್ಸನ್‌ನ ಕೊಡುಗೆ ಮಾತ್ರವಲ್ಲದೇ ಅನೇಕ ಸಾಂಪ್ರದಾಯಿಕ ಚಿಂತಕರ ಕೊಡುಗೆ. ಇಂಗ್ಲೆಂಡಿನ ಮಾಜಿ ಪ್ರಧಾನಿ ಥ್ಯಾಚರ್‌ಗೆ ಇದು "ಪರ್ಯಾಯವಿಲ್ಲದ ಎಲ್ಲರೂ ಒಪ್ಪಲೇ ಬೇಕಾದ" ಚಿಂತನೆ.

ಮಾರುಕಟ್ಟೆಗೆ ಅತೀ ಹೆಚ್ಚಿನ ಪ್ರಾಶಸ್ತ್ಯ ನೀಡುವ ಆರ್ಥಿಕ ಮೂಲಭೂತವಾದ ಕನಿಷ್ಠ ಸರಕಾರವನ್ನು ಬಯಸುತ್ತದೆ. ಅದರ ಪ್ರಕಾರ ಲಗಾಮು ಇಲ್ಲದ ಮಾರುಕಟ್ಟೆ ಅದರೊಟ್ಟಿಗೆ ಬರುವ ಬಂಡವಾಳಶಾಹಿ ಅತ್ಯುತ್ತಮ ಫಲಿತಾಂಶ ನೀಡಬಲ್ಲದು. ಅದು ಎಲ್ಲಾ ಸಮಸ್ಯೆಗಳಿಗೆ ಉತ್ತರ ನೀಡಬಲ್ಲದು – ಬಡತನ,

ಅನಭಿವೃದ್ಧಿ, ಹಿಂದುಳಿದಿರುವಿಕೆ. ಉತ್ತಮ ಜೀವನ, ದೇಶದ ಅಭಿವೃದ್ಧಿ ಇತ್ಯಾದಿ. ವಾಸ್ತವವಾಗಿ ಇದು ಬಂಡವಾಳಶಾಹಿಪ್ರೇರಿತ ಬೆಳವಣಿಗೆ ಹೊರತು ಬಡತನವನ್ನು ನೀಗಿಸುವ ಬೆಳವಣಿಗೆಯಲ್ಲ. ಬಂಡವಾಳಶಾಹಿ ಈ ಸಂದರ್ಭದಲ್ಲಿ ಬಂದದ್ದು ಸಾಂಸ್ಕೃತಿಕ ರೂಪದಲ್ಲಿ–ಕೋಕಾ ಕೋಲ, ಕೆಂಟಕಿ ಚಿಕನ್, ಫಾಸ್ಟ್ ಫುಡ್ ಇತ್ಯಾದಿ ಸಾಂಸ್ಕೃತಿಕ ರೂಪಕಗಳಾಗುತ್ತವೆ – ಆಧುನಿಕತೆಯ ರೂಪದಲ್ಲಿ, ಹೊಸ ಆರ್ಥಿಕತೆಯ, ಹೊಸ ತಂತ್ರ ಜ್ಞಾನದ ರೂಪದಲ್ಲಿ (ಕಂಪ್ಯೂಟರ್ ನಾನೋ ಟೆಕ್ನಾಲಜಿ, ಬಯೋಟೆಕ್ನಾಲಾಜಿ, ಇಂಟರ್ನೆಟ್, ಫೇಸ್ ಬುಕ್ ಇದರ ಹೊಸ ಅವಿಷ್ಕಾರಗಳು). ಇದನ್ನು ಒಪ್ಪಿದ ದೇಶಗಳು ಮಾದರಿಗಳಾದವು. ಅದನ್ನೇ ಜಗತ್ತಿನ ಎಲ್ಲಾ ದೇಶಗಳ ಮೇಲೆ ಸ್ಟ್ರಕ್ಚರಲ್ ಎಜೆಸ್ಟ್‌ಮೆಂಟ್ ಹೆಸರಿನಲ್ಲಿ ಹೇರಲಾಯಿತು.

ಇದರ ಪರಿಣಾಮ ಒಂದೆಡೆ ದೇಶಗಳ ಕೆಲವೇ ಜನರು ಆಗರ್ಭ ಶ್ರೀಮಂತರಾದರು. ೨೦ ಶೇಕಡಾದ ಪಾಶ್ಚಾತ್ಯರು ಜಗತ್ತಿನ ೮೫ ಶೇಕಡಾ ಶ್ರೀಮಂತಿಕೆಯ ಒಡೆಯರಾದದ್ದು ಇದರ ದುರಂತ.[2] ಜಗತ್ತನ್ನು ಬಂಡವಾಳಶಾಹೀಕರಣಗೊಳಿಸುತ್ತಾ ಇನ್ನೊಂದೆಡೆ ಜನರನ್ನು ಇನ್ನಷ್ಟು ಬಡವರನ್ನಾಗಿಸಿದ್ದು ಕೂಡ ಅಷ್ಟೇ ಸತ್ಯ. ಜಗತ್ತನ್ನು ಕಾರ್ಪೊರೇಟರ್ ಮಯ ಮಾಡಿದ್ದನ್ನು ಮರೆಯಬಾರದು. ೨೦೦ ಕಾರ್ಪರೇಟರ್‌ಗಳು ಜಗತ್ತಿನ ಬಂಡವಳಾದ ಅಧಿಪತಿಗಳಾಗುತ್ತಾ ಹೋದದ್ದು ವಾಸ್ತವ. ಇದನ್ನು "ಕೋಕಕೋಲೋನೈಜೇಶನ್" ಎನ್ನುತ್ತೇವೆ. ಕೋಕಕೋಲ ಹೊಸ ರೂಪದ ವಸಹಾತುಶಾಹಿಕರಣಕ್ಕೆ ಇನ್ನೊಂದು ಹೆಸರು.

ಮತ್ತೊಂದೆಡೆ ಇದು ಅನಿವಾರ್ಯದ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿತ್ತು. ಅದನ್ನು "ಮ್ಯಾಕ್ಡೋನಾಲ್ಡ್ ವರ್ಸಸ್ ಜಿಹಾದ್" ಎಂದು ಕರೆಯುತ್ತಾರೆ. ಮೆಕ್ಡೋನಾಲ್ಡ್ "ಅಮೇರಿಕರಣಕ್ಕೆ" ಸಾಕ್ಷಿ ಅಥವಾ ರೂಪಕವಾಗುತ್ತದೆ. ಜಗತ್ತಿನ ತುಂಬೆಲ್ಲಾ ಏಕರೂಪದ ಸಾಂಸ್ಕೃತಿಕ ಬದುಕು ಬಂದಾಗಲೆಲ್ಲಾ ಸಂಸ್ಕೃತಿ, ಅಸ್ಮಿತೆ ಉಳಿಸುವ ಹೆಸರಿನಲ್ಲಿ ಪ್ರತಿರೋಧಗಳು ಹುಟ್ಟಿದವು. ಅದು ಪರ್ಯಾಯ ಚಿಂತನೆ ಹಾಗೂ ದೇಸಿ ಉತ್ಪನ್ನಗಳ ಬೆಳವಣಿಗೆ ಕಾರಣವಾದವು, ಅಮೇರಿಕರಣದ ರೂಪಕವಾದ ಕೋಕಕೋಲಕ್ಕೆ ಪರ್ಯಾಯವಾದ "ಝುಮ್ ಝುಮ್ ಕೋಲಾ ಹುಟ್ಟಿತು", ಅದರೊಂದಿಗೆ ನೂರಾರು ಸಾಮಾಜಿಕ ಚಳುವಳಿಗಳು ಹುಟ್ಟಿದವು. ಪ್ರತಿರೋಧ ಹುಟ್ಟಿದವು.

ಮಾರುಕಟ್ಟೆ ಮೂಲಭೂತವಾದದಿಂದ ನರಳಿದವರ ಸಂಖ್ಯೆ ಅಪಾರ. ಅದು ಸಾವಿರಾರು ಜನರನ್ನು ಒಕ್ಕಲೆಬ್ಬಿಸಿದ್ದು, ಸ್ಥಳಾಂತರ ಮಾಡಿದ್ದು, ಸಾಂಸ್ಕೃತಿಕವಾಗಿ

---

2 Philip Antony O'Hara, ed Global Political Economy and the Wealth of Nations: Performance, Institutions, Problems and Policies, Routledge, London, 2004, p.5

ನಾಶಮಾಡಿದ್ದು, ಪರಿಸರ ನಿರ್ಮೂಲನೆ ಮಾಡಿದ್ದು, ಜನರನ್ನು ನಿರ್ಗತಿಕರನ್ನಾಗಿಸಿದ್ದು ಸತ್ಯ. ಭಾರತದ ಲಕ್ಷಗಟ್ಟಲೆ ರೈತರು ಆತ್ಮಹತ್ಯೆ ಮಾಡಿಕೊಂಡದ್ದು ಇದೇ ಕಾರಣದಿಂದ. ಇದರಿಂದ ಹಸಿವಿನಿಂದ ಸತ್ತವರ ಸಂಖ್ಯೆ ಎಷ್ಟೋ, ಇದಕ್ಕೆ ಪ್ರತಿಯಾಗಿ ಅಮೇರಿಕಾದ ಲಾಸ್ ಎಂಜಲ್ಸ್‌ನಿಂದ ಆಸ್ಟ್ರೇಲಿಯಾದ ತುದಿ ತನಕ ಪ್ರತಿರೋಧಗಳು ಹುಟ್ಟಿದವು / ಪ್ರತಿರೋಧಗಳು ಒಂದು ವರ್ಗದಿಂದ ಬರಲಿಲ್ಲ, ಒಂದೇ ನಿರ್ದಿಷ್ಟ ಚಳುವಳಿಯಿಂದ ಬರಲಿಲ್ಲ – ಅದರಲ್ಲಿ ಬಡವರು, ಹಿಂದುಳಿದ ವರ್ಗದವರು, ಆದಿವಾಸಿಗಳು, ಅಮೇರಿಕಾದ ಮೂಲ ನಿವಾಸಿಗಳು, ಪರಿಸರ ವಾಸಿಗಳು ಇದ್ದರು. ಈ ಹೋರಾಟಗಳ ನಡುವೆ "ಇನ್ನೊಂದು ಜಗತ್ತನ್ನು ಕಟ್ಟುವ ಸಾಧ್ಯತೆ"ಯ ಘೋಷಣೆಯನ್ನು ಕೂಡ ಕೂಗಿದವು.

ವಿಚಿತ್ರವೆಂದರೆ ಆರ್ಥಿಕ ಮೂಲಭೂತವಾದಕ್ಕೂ ಧಾರ್ಮಿಕ ಮೂಲಭೂತವಾದಕ್ಕೂ ನಂಟು ಇರುವುದನ್ನು ಮರೆಯಬಾರದು.

•

ಧಾರ್ಮಿಕ ಮೂಲಭೂತವಾದ

ಧಾರ್ಮಿಕ ಮೂಲಭೂತವಾದ ವ್ಯಾಪಕವಾಗಿ ಬೆಳೆದದ್ದು ಆರ್ಥಿಕ ಮೂಲಭೂತವಾದದ ಸಂದರ್ಭದಲ್ಲಿ. ವಾಸ್ತವವಾಗಿ ಮೂಲಭೂತವಾದ ಎಂಬ ವಾದವು ಬೆಳೆದದ್ದು ೧೯೨೦ರ ಸುಮಾರಿಗೆ ಅಮೇರಿಕಾದಲ್ಲಿ, ಅದು ಕೂಡ ಕ್ರಿಶ್ಚಿಯನ್ ಧಾರ್ಮಿಕ ಅಂಧ ಶ್ರದ್ಧೆಯ ವಿರುದ್ಧವಾಗಿ. ಇವತ್ತಿನ ಸಂಧರ್ಭದಲ್ಲಿ ಮೂಲಭೂತವಾದವನ್ನು ಆಧುನಿಕ ರೂಪದಲ್ಲಿ ನೋಡುವುದು ಅವಶ್ಯಕ. ಯಾಕೆಂದರೆ ಅದು ಇಂದಿನ ಪ್ರಸ್ತುತ ವಿದ್ಯಮಾನಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿದ್ದು ತಾರ್ಕಿಕ ಸತ್ಯ. ಅಮೇರಿಕಾದ ಯಜಮಾನಿಕ ಪ್ರತಿರೋಧವಾಗಿ, ಅಂದಿನ ಸೋವಿಯಟ್ ಯೂನಿಯನ್ ಅನ್ನು ಬಗ್ಗು ಬಡಿಯುವ ಉನ್ಮಾದದಲ್ಲಿ ತಾಲಿಬಾನ್‌ಗಳ ರೂಪದಲ್ಲಿ ಹುಟ್ಟಿದ್ದು ಕೂಡ ಹೌದು. ಜಾಗತೀಕರಣದಲ್ಲಿ ಬೈನರಿ ರೂಪಕವಾಗಿ ಅದರಲ್ಲೂ "ಜೆಹಾದ್ ವರ್ಸಸ್ ಮೆಕ್ಡೋನಾಲ್ಡ್" ಎಂಬ ಸ್ಲೋಗನ್‌ನಲ್ಲಿ ಉದ್ಭವಿಸಿದ್ದು ಕೂಡ ಅಷ್ಟೇ ಸತ್ಯ. ಯುರೋಪನಲ್ಲಿ ನೆಲೆಯೂರಲು ಬಂದ ನಿರಾಶ್ರಿತರ ಪ್ರತಿರೋಧವಾಗಿ ಹೊರಹೊಮ್ಮಿದ್ದು ಕೂಡ ಅಷ್ಟೇ ನಿಚ್ಚಳ. ನಿಸ್ಸಹಾಯಕ ಸಮುದಾಯವನ್ನು ದೇಶದಿಂದ ಹೊರದಬ್ಬುವ ಪ್ರಕ್ರಿಯೆಯಾಗಿ ಪರಿವರ್ತಿತವಾದದ್ದನ್ನು ಈ ಸಂದರ್ಭದಲ್ಲಿ ಮರೆಯಬಾರದು. (ತಟ್ಟೆಂದು ನೆನಪಾಗುವುದು ಮಯನ್ಮಾರ್). ಇವೆಲ್ಲರಲ್ಲಿ ಒಂದು ದಟ್ಟವಾದ ಆಳವಾದ ಬಿಕ್ಕಟ್ಟು ಇದೆ, ಅದರಲ್ಲಿ ಐಡೆಂಟಿಟಿಯ ಬಿಕ್ಕಟ್ಟು, ಸಮುದಾಯದ ಬಿಕ್ಕಟ್ಟು, ಸಂಸ್ಕೃತಿಯ ಬಿಕ್ಕಟ್ಟು, ರಾಷ್ಟ್ರೀಯತೆಯ ಬಿಕ್ಕಟ್ಟು ಬೆಸೆದುಕೊಂಡಿದೆ.

ಆದರೆ ಇವತ್ತು ಧಾರ್ಮಿಕ ಮೂಲಭೂತವಾದವನ್ನು ಇಸ್ಲಾಂನೊಂದಿಗೆ ಮಾತ್ರ ಸಮೀಕರಿಸುತ್ತೇವೆ. ಉಳಿದ ಮೂಲಭೂತವಾದವನ್ನು ನಾವು ಮರೆತು ಬಿಡುತ್ತೇವೆ. ಇಸ್ಲಾಮಿಕ್ ಮೂಲಭೂತವಾದ ಇವತ್ತು ನಮ್ಮ ಎದುರು ದೈತ್ಯವಾಗಿ, ಹೆಮ್ಮರವಾಗಿ, ಭೀಕರವಾಗಿ, ಬೆನ್ನುಬಿಡದ ಬೇತಾಳನ ತರಹ ಕಂಡುಬರುತ್ತದೆ. ಅದನ್ನು ಜಗತ್ತಿನ ಎಲ್ಲಾ ಮೂಲಭೂತವಾದಕ್ಕೆ ಸಾಕ್ಷಿಯಾಗಿಸಿ ಜಗತ್ತಿನ ಎಲ್ಲಾ ಭಯೋತ್ಪಾದನೆಗೆ, ಯುದ್ಧಗಳಿಗೆ, ಅಶಾಂತಿಗೆ ಅದೇ ಕಾರಣವೆಂದು ತೀರ್ಪು ನೀಡುತ್ತೇವೆ. ಇದೇ ಸಂದರ್ಭದಲ್ಲಿ ಒಂದು ವಿಸ್ಮೃತಿ ನಿಚ್ಚಳವಾಗಿ ಕಂಡು ಬರುತ್ತದೆ. ಅದೇನೆಂದರೆ ಇಸ್ಲಾಂವನ್ನು ಭಯೋತ್ಪಾದಕವಾಗಿ ಚಿತ್ರಿಸುವ ಸಂದರ್ಭದಲ್ಲಿ ಅದು ಸಮನ್ವಯ ಸಂಸ್ಕೃತಿಗೆ ನೀಡಿದ ಕೊಡುಗೆಯನ್ನು ಪರಿಗಣಿಸುವುದೇ ಇಲ್ಲ, ಉದಾಹರಣೆಗೆ ಇಸ್ಲಾಂ ನೀಡಿದ ಸೂಫಿ ಪರಂಪರೆಯನ್ನಾಗಲೀ ಪ್ರತಿರೋಧ (ಇತ್ತೀಚಿನ ಅರಬ್ ಸ್ಪ್ರಿಂಗ್) ಪರಂಪರೆಯನ್ನಾಗಲೀ ನೋಡುವುದೇ ಇಲ್ಲ. ಇಸ್ಲಾಂನ ಕೆಲವೇ ಜನ ನಿರ್ಧರಿಸುವ ಮೂಲಭೂತವಾದವನ್ನು ಸಾರ್ವತ್ರಿಕಗೊಳಿಸಿ ಪ್ರತಿಯೊಬ್ಬನನ್ನೂ ಮೂಲಭೂತವಾದಿ ಎಂದು ಚಿತ್ರಿಸುತ್ತೇವೆ. ಖ್ಯಾತ ಶಾಸ್ತ್ರಜ್ಞ ಮಹಮೂದು ಮಮ್ದಾನಿ ಹೇಳುವಂತೆ ಇಸ್ಲಾಂನ ಕುರಿತಾದ ಪ್ರಾಕಲ್ಪನೆಗಳು ಇಸ್ಲಾಂನ ಕುರಿತಾದ ಧಾರ್ಮಿಕ ಮೂಲಭೂತವಾದದ ಪಡಿಯಚ್ಚುಗಳನ್ನು ನಿರ್ಮಿಸಲು ಕಾರಣಗಳಾಗಿವೆ. ಇಸ್ಲಾಂ ಫೋಬಿಯಾ ಹುಟ್ಟಲು ಇದೊಂದು ಕಾರಣ. ಅವರ ಪ್ರಕಾರ ಇವತ್ತಿನ ಸಂದರ್ಭದಲ್ಲಿ ಏಕ ರೂಪಿ ಇಸ್ಲಾಂ ಇಲ್ಲ, ಪೊಲಿಟಿಕಲ್ ಇಸ್ಲಾಂ ರಾಜಕೀಯ ಇಸ್ಲಾಂ ಧಾರ್ಮಿಕ ಇಸ್ಲಾಂ ಇತ್ಯಾದಿ ಇದೆ.

ಎರಡನೇದಾಗಿ ಇದೇ ಸಂಧರ್ಭದಲ್ಲಿ ಮೂಲಭೂತವಾದ ಕಥನದಲ್ಲಿ ಕೆಲವು ಮಿಥ್ಯೆಗಳನ್ನು ನಿರ್ಮಿಸಿರುವುದು ಸ್ಪಷ್ಟ. ಮೂಲಭೂತವಾದವನ್ನು ಬರೇ ಇಸ್ಲಾಂಗೆ ಸೀಮಿತಗೊಳಿಸುವ ಯತ್ನ ಒಂದು ಮಿಥ್ಯೆಯಾದರೆ, ಇಸ್ಲಾಂ ಅನ್ನು ಏಕ ರೂಪಿಯಾಗಿ ನೋಡುವ ಎರಡನೇ ಮಿಥ್ಯೆ; ಹಾಗೂ ಕೊನೆಯದಾಗಿ, ಮಾರುಕಟ್ಟೆ ಮೂಲಭೂತವಾದವನ್ನು ಪಾಶ್ಚಿಮಾತ್ಯೇತರ ದೇಶ ಹಾಗೂ ಸಮುದಾಯದ ಕೊಡುಗೆಯಾಗಿ ನೋಡುವ ಮಿಥ್ಯೆ.

ಇಸ್ಲಾಂ ಕುರಿತು ಪಾಶ್ಚಾತ್ಯ ದೇಶಗಳಿಗೇಕೆ ಅತೀ ಹೆಚ್ಚು ವ್ಯಾಮೋಹ ಎಂಬುದರ ಕುರಿತು ಎಡ್ವರ್ಡ್ ಸಹೀದ್ ೧೯೮೦ರ ಸುಮಾರಿಗೇನೆ ವಾದಿಸಿದ್ದರು. ಅವರ ಪ್ರಕಾರ ಇಸ್ಲಾಂ ಕುರಿತಾದ ಪ್ರೀತಿಗೆ ಕಾರಣ ಮಧ್ಯಪ್ರಾಚ್ಯದಲ್ಲಿ ದೊರೆಯುತ್ತಿರುವ ಹೇರಳ ಪೆಟ್ರೋಲಿಯಂ ಉತ್ಪನ್ನಗಳು ಮೊದಲನೇದಾದರೆ, ಪುನರುಜ್ಜೀವನಗೊಂಡ ಇಸ್ಲಾಂ ಈ ಆಯಾಕಟ್ಟಿನ ಪ್ರದೇಶಗಳ ಮೇಲೆ ಹತೋಟಿ ಸಾಧಿಸ ಬಹುದೆಂಬ ಭಯ ಎರಡನೇಯದು. ಆದಕಾರಣ ಇಸ್ಲಾಂ ಮೂಲಭೂತವಾದ ಮತ್ತೆ ಮತ್ತೆ ಪಾಶ್ಚಾತ್ಯ ಕಥನಗಳ ಭಾಗವಾಗುತ್ತಾ ಹೋಗುತ್ತದೆ. ಈ ಕಥನಗಳನ್ನು ಕೆಲವು

ಉದಾಹರಣೆಗಳ ಮೂಲಕ ತಾಳೆ ಹಾಕಲಾಗುತ್ತದೆ. ಇದು ಆರಂಭಗೊಳ್ಳುವುದು ೧೯೭೯ರ ಇರಾನ್ ಕ್ರಾಂತಿಯ ಕಾಲದಲ್ಲಿ. ಯಾವಾಗ ಅಯಾತುಲ್ಲಗಳು ಇರಾನ್‌ನಲ್ಲಿ ಕ್ರಾಂತಿ ಮಾಡಿದರೋ ಅಲ್ಲಿಂದ ಶುರುವಾಗುತ್ತದೆ ಈ ಕಥನಗಳು. ಅದನ್ನು ಮೂಲಭೂತವಾದಿಗಳ ಕ್ರಾಂತಿ ಎಂದು ಪಾಶ್ಚಾತ್ಯ ಜರೆಯುತ್ತದೆ. ಆದರೆ ಶಾ ರೇಜಾ ಪಲ್ಲವಿಯ ಪಾಶ್ಚಾತ್ಯೀಕರಣಕ್ಕೆ ಬೆಳೆದ ಪ್ರತಿರೋಧವನ್ನ ಮರೆತು ಬಿಡುತ್ತದೆ. ಇದಕ್ಕೆ ಸರಿಯಾಗಿ ಈಜಿಪ್ಟ್‌ನ ಮಾಜಿ ಅಧ್ಯಕ್ಷನ ಕಗ್ಗೊಲೆ, ಲೆಬೆನಾನ್‌ನಲ್ಲಿ ಶಿಯಾ ಮಿಲಿಶಿಯಾದ ಬೆಳವಣಿಗೆ, ಪಾಲಿಸ್ತೀನ್‌ನ ಹೋರಾಟ / ಇಂತಿಫಾದ ಇವೆಲ್ಲ "ಮೂಲಭೂತ"ವಾದದ ಕಥನಗಳಿಗೆ ಸಾಕ್ಷಿಯಾಗುತ್ತಾ ಹೋಗುತ್ತದೆ. ಇದು ಯಾವುದು ಕೂಡ ಪಾಶ್ಚಾತ್ಯದ ಪ್ರತಿರೋಧದ ಭಗವಾಗುವುದಿಲ್ಲ. ಆದ ಕಾರಣ ಇವುಗಳು ಪಾಶ್ಚಾತ್ಯ ಗ್ರಹಿಕೆಗಳಿಗೆ ದೊಡ್ಡ "ಸಮಸ್ಯೆ"ಯಾಗುತ್ತದೆ.

ಮೂಲಭೂತವಾದದ ಗ್ರಹಿಕೆ ಹೆಮ್ಮರವಾಗಿ ಬೆಳೆಯಲು ಸೋವಿಯತ್ ಯೂನಿಯನ್‌ನ ಅಫಘಾನಿಸ್ತಾನದ ಲಗ್ಗೆ ಕೂಡ ಅಷ್ಟೇ ಕಾರಣ. ಕಮ್ಯುನಿಸಂನ್ನು ಸೋಲಿಸಲು ಅಫಘಾನಿಸ್ತಾನದ ಮುಜಾಹಿದನರನ್ನು ಅಮೇರಿಕಾ ಬೆಂಬಲಿಸಿತ್ತು. ಇದರಿಂದ ಹುಟ್ಟಿಕೊಂಡದ್ದು ಅಲ್ ಖೈದಾ, ಅದು ಹೆಮ್ಮರವಾಗಿ ಬೆಳೆಯುತ್ತಾ ಹೋಯಿತು. ಅದರ ಇನ್ನೊಂದು ಮುಖವೇ ಇಸ್ಲಾಮಿಕ್ ಸ್ಟೇಟ್. ದುರಂತವೆಂದರೆ ಅಮೇರಿಕಾ ಒಂದೆಡೆ ಇಸ್ಲಾಮಿಕ್ ಸ್ಟೇಟನ್ನು ವಿರೋಧಿಸುತ್ತಲೇ ತನ್ನದೇ ದೇಶದೊಳಗಿರುವ ಬೆಳೆದಿರುವ ಕುಕ್ಲುಕ್ಷಲಾನ್‌ನಂತಹ ಭಯಾನಕ ಗುಂಪುಗಳನ್ನಾಗಲೀ ವಿರೋಧಿಸುವುದಿಲ್ಲ. ಅವುಗಳನ್ನು ಅಂತರರಾಷ್ಟ್ರೀಯ ಭಯೋತ್ಪಾದಕರೆಂದು ಜರೆಯುವುದಿಲ್ಲ. ಇದು ವೈರುಧ್ಯವಲ್ಲದೆ ಮತ್ತೇನು?

ಎರಡನೇ ವೈರುಧ್ಯ ಅಮೇರಿಕಾ ಸೌದಿ ಅರೇಬಿಯಾಕ್ಕೆ ನೀಡುವ ಬೆಂಬಲದಲ್ಲಿ ನೋಡಬಹುದು. ಸೌದಿ ಇವತ್ತು ನಿಂತಿರುವುದೇ ವಹಾಬೀ ಮೂಲಭೂತವಾದದಲ್ಲಿ. ಸೌದಿ ಅ ಮೂಲಭೂತವಾದವನ್ನು ಸಾಕುತ್ತದೆಯಲ್ಲದೆ ಅದನ್ನು ಜಗತ್ತಿನ ವಿವಿಧೆಡೆ ರಫ್ತು ಮಾಡುತ್ತದೆ. ಅಮೇರಿಕಾ ಈ ಮೂಲಭೂತವಾದದ ಕುರಿತು ಪ್ರತಿಕ್ರಿಯಿಸುವುದೇ ಇಲ್ಲ. ಯಾಕೆಂದರೆ ಅಮೇರಿಕಾ ಮಧ್ಯಪೂರ್ವದಲ್ಲಿ ತನ್ನ ಯಜಮಾನಿಕೆಯನ್ನು ಖಾಯಂಗೊಳಿಸಬೇಕಾದರೆ ಈ ಆಡಳಿತವನ್ನು ಬೆಂಬಲಿಸಬೇಕು. ಅಲ್ಲದೇ, ತನ್ನ ದೇಶದಲ್ಲಿ ಅಭಿವೃದ್ಧಿಯಾಗಬೇಕಾದರೆ ಶಸ್ತ್ರಾಸ್ತ್ರಗಳ ಮಾರಾಟ ಸದಾ ಆಗಲೇಬೇಕು. ಕೊನೆಯದಾಗಿ ತೈಲದಂತಹ ಸಂಪನ್ಮೂಲಗಳ ಮೇಲೆ ಹತೋಟಿ ಸಾಧಿಸಲೇ ಬೇಕು.

•

ಜಾಗತಿಕವಾಗಿ ಒಂದೇ ಒಂದು ಧಾರ್ಮಿಕ ಮೂಲಭೂತವಾದ ಇದೆ ಎಂದರೆ ಅದು ಶುದ್ಧ ಸುಳ್ಳು. ಕ್ರಿಶ್ಚಿಯನ್, ಜಿಯೋನ್ (ಯಹೂದಿ). ಬುದ್ಧಿಸ್ಟ್ ಮೂಲಭೂತವಾದ ಅಷ್ಟೇ ತೀಕ್ಷ್ಣವಾಗಿದೆ. ಕ್ರಿಶ್ಚಿಯನ್ ಮೂಲಭೂತವಾದ

ಆಫ್ರಿಕಾದಲ್ಲಿ ಜನಾಂಗೀಯ ಯುದ್ಧದಲ್ಲಿ, ಭಾರತದಲ್ಲಿ ಪ್ರತ್ಯೇಕತಾ ಹೋರಾಟದಲ್ಲಿ, ಅಮೇರಿಕಾದಲ್ಲಿ ತೀವ್ರತರ ಧಾರ್ಮಿಕ ಚಳುವಳಿ ರೂಪದಲ್ಲಿ ಮತ್ತು ರಾಜಕೀಯ ಶಕ್ತಿಯಾಗುವ ಯತ್ನಗಳನ್ನು ಅದರಲ್ಲೂ, ರಿಪಬ್ಲಿಕನ್ ಅಭ್ಯರ್ಥಿ ಟ್ರಾಮ್ಪ್‌ನ ಮುಸ್ಲಿಂ ವಿರೋಧಿ ರಾಜಕೀಯ ನಿಲುವುಗಳಲ್ಲಿ ನೋಡಬಹುದು. ಅದಕ್ಕೆ ರಾಜಕೀಯ ವ್ಯವಸ್ಥೆ, ಚರ್ಚ್ ಹಾಗೂ ಸಮಾಜ ಉದಾರತೆಗೆ ಕಡೆಗೆ ಸಾಗುವುದು ಬೇಕಾಗಿಲ್ಲ. ಇದರ ಕುರಿತು ಅಸಂತೃಪ್ತಿ ಇದೆ. ಬುದ್ಧಿಸ್ಟ್ ಮೂಲಭೂತವಾದ ಶ್ರೀಲಂಕಾದಲ್ಲಿ ತಮಿಳರ ಮೇಲೆ ಎಸೆಗಿದ ಜನಾಂಗೀಯ ದೌರ್ಜನ್ಯದಲ್ಲಿ, ಮಯನ್ಮಾರ್‌ನಲ್ಲಿ ಮುಸ್ಲಿಂ ವಿರೋಧಿ ಜನಾಂಗೀಯ ಘರ್ಷಣೆಯಲ್ಲಿ ಕಂಡುಬರುತ್ತದೆ.

ವಾಸ್ತವವಾಗಿ ಮೂಲಭೂತವಾದ ತನ್ನದೇ ಆದ ಕಥನಗಳನ್ನು ನಿರ್ಮಿಸುತ್ತದೆ. ಅದರಲ್ಲಿ ಕಳೆದುಕೊಂಡ ಅಧಿಕಾರದ, ರಾಜಕೀಯ ವ್ಯವಸ್ಥೆಯ ನೆನಪುಗಳಿವೆ. ಇಸ್ಲಾಂ ಮೂಲಭೂತವಾದದಲ್ಲಿ ಮಧ್ಯಕಾಲದಲ್ಲಿ ಸ್ಪೇನ್‌ನಲ್ಲಿ ಕಳೆದುಕೊಂಡ ಕೊನೆಯ ಇಸ್ಲಾಮಿಕ್ ರಾಜ್ಯದ ನೆನಪುಗಳಿವೆ, ಟರ್ಕಿಯಲ್ಲಿ ಪಾಶ್ಚಾತ್ಯದ ದೇಶಗಳ ದ್ರೋಹದಿಂದ ಕಳೆದುಕೊಂಡ ಖಲೀಫನ ಸ್ಥಾನದ ನೆನಪುಗಳಿವೆ, ನಿರ್ಗತಿಕರಾದ ಪಾಲೇಸ್ತೀನಿಯರ ಗಾಯದ ಕತೆಗಳಿವೆ, ಮಹಾಯುದ್ಧದ ಫಲಶ್ರುತಿಯಾಗಿ ಇಸ್ರೇಲ್ ದೇಶದ ಸ್ಥಾಪನೆಯ ನೆನಪು ಹಚ್ಚು ಹಸುರಾಗಿದೆ. ಕ್ರಿಶ್ಚಿಯನ್ ಮೂಲಭೂತವಾದದಲ್ಲಿ ೧೩೦೦ ವರುಷದ ಇಸ್ಲಾಂ – ಕ್ರಿಶ್ಚಿಯಾನಿಟಿ ನಡುವಿನ ದೀರ್ಘ ಸಂಘರ್ಷದ ಕಥನವಿದೆ. ಇಸ್ಲಾಂನಲ್ಲಿ ಧಾರ್ಮಿಕ ಹೋರಾಟ ಜಿಹಾದ್ ರೂಪಕ್ಕೆ ಪರಿವರ್ತಿತವಾದರೆ, ಕ್ರಿಶ್ಚಿಯಾನಿಟಿಯಲ್ಲಿ ಅದು "ಕ್ರುಸೇಡ್" ರೂಪವಾಗುತ್ತದೆ, ಅದೇನೆ ಇದ್ದರೂ ಮೂಲಭೂತವಾದ ಆಧುನಿಕ ಜಗತ್ತಿಗೆ ಒಂದು ಸಮಸ್ಯೆ.

ಯಾಕೆಂದರೆ ಅದು ಬಹು ಸಂಸ್ಕೃತಿಯ ಬದಲು ಏಕ ರೂಪಿ ಸಂಸ್ಕೃತಿಯನ್ನು ಮಾತ್ರ ಒಪ್ಪುತ್ತದೆ. ಅದು ಶುದ್ಧ ಧರ್ಮವನ್ನು ಮಾತ್ರ ಒಪ್ಪುತ್ತದೆ. ಶುದ್ಧೀಕರಣದ ಫಲವಾಗಿ ಧರ್ಮದೊಳಗೆ ಯಾವುದೇ ವೈಚಾರಿಕತೆಗೆ ಅವಕಾಶ ನೀಡುವುದಿಲ್ಲ. ಧಾರ್ಮಿಕ ಸಮನ್ವಯತೆಯನ್ನು ಅದು ಒಪ್ಪಿಕೊಳ್ಳುವುದಿಲ್ಲ. ಇಲ್ಲಿ ಸ್ವಾತಂತ್ರ್ಯವೆಂಬುದು ಮರೀಚಿಕೆಯಾಗುತ್ತದೆ. ಅದು ಅನ್ಯ ಧರ್ಮೀಯರನ್ನು ಪ್ರತಿ ಬಾರಿ ತನ್ನ ವೈರಿಗಳೆಂದು ಮತ್ತು ವಿರೋಧಿಗಳೆಂದು ಚಿತ್ರಿಸುತ್ತದೆ. ಧರ್ಮಕ್ಕಾಗಿ ಹೋರಾಡಿದರೆ ಸ್ವರ್ಗ – ಜನ್ನತ್, ಹೇವನ್ – ಗ್ಯಾರಂಟಿ ಎಂಬ ಭ್ರಮೆಯನ್ನು ಸೃಷ್ಟಿಸುತ್ತದೆ. ಧರ್ಮ ಇಲ್ಲಿ, ಮಾರ್ಕ್ಸ್ ಹೇಳಿದಂತೆ, ಅಫೀಮ್ ಆಗಿಬಿಡುತ್ತದೆ. ಅದರ ಅಂತಿಮ ಉದ್ದೇಶವೇ ದೇವರುಗಳ ರಾಜ್ಯವನ್ನು ಪರಿಶುದ್ಧ ಧರ್ಮಾಧಾರಿತವಾಗಿ ಸ್ಥಾಪಿಸುವುದು. ಅದು ಐಸ್‌ಐಸ್‌ನ ಇರಾಕ್‌ನ ಆಂತರಿಕ ಯುದ್ಧದಲ್ಲಿ, ಬೋಕೋ ಹರಾಮ್‌ನ "ಪಾಶ್ಚಾತ್ಯ ವಿದ್ಯೆಯೆಂದರೆ ಒಂದು ಶಾಪ", ತಾಲಿಬಾನ್‌ನ

ಅಫಘಾನಿಸ್ತಾನ್ ಆಳ್ವಿಕೆಯಲ್ಲಿ, ಯುಗಾಂಡದಲ್ಲಿರುವ ಲಾರ್ಡ್ಸ್ ರೆಸಿಸ್ಟೆಂಟ್ ಆರ್ಮಿಯ ಬೈಬಲ್ ಆಧಾರಿತ ರಾಜ್ಯ ಸ್ಥಾಪನೆಯ ಕನಸಿನಲ್ಲಿ, ಜಿಯೋನಿಸ್ಟ್‌ರ ಗುಶ್ ಎನೋನಿಮ್ಸ್ ಮೂಲಭೂತವಾದಕ್ಕೆ ದೇವರುಗಳ ಕಾನೂನಿನ ಪಾಲನೆಯ ಅನುಷ್ಠಾನದಲ್ಲಿ ನೋಡಬಹುದು.

ಈ ಮೂಲಭೂತವಾದದಿಂದ ಆದ ಹಾನಿಯನ್ನು ಲೆಕ್ಕ ಹಾಕಲು ಸಾಧ್ಯವಿಲ್ಲ ಐಸ್‌ಐಸ್‌ನ ಖಲೀಫ ರಾಜ್ಯದ ಕಲ್ಪನೆಯಿಂದ ಒಂದೆಡೆ ಇಡೀ ದೇಶವೇ ನಾಶವಾದರೆ ಮತ್ತೊಂದೆಡೆ ಹೆಚ್ಚು ಕಡಿಮೆ ೩೫ ಲಕ್ಷಕ್ಕೂ ಹೆಚ್ಚು ಜನ ಆಂತರಿಕವಾಗಿ ನಿರ್ಗತಿಕರಾಗಿರುವುದು ಸತ್ಯ. ಬುದ್ಧಿಸ್ಟ್ ಮೂಲಭೂತವಾದದಿಂದ ಕಡಿಮೆ ಎಂದರೂ ೧,೮೦,೦೦೦ ರೋಹಿಂಗ್ಯಾ ಮುಸ್ಲಿಮರು ಆಂತರಿಕ ನಿರಾಶ್ರಿತರಾದದ್ದು ಒಪ್ಪಲೇಬೇಕು. ಜಿಯೋನಿಸ್ಟ್ ಮೂಲಭೂತವಾದ ಯಾವತ್ತೂ ಪಾಲಿಸ್ತಿನೀಯನ್ ರಾಜ್ಯದ ಕನಸನ್ನು ಸಾಕಾರಗೊಳಿಸುವುದಿಲ್ಲ. ಇಲ್ಲಿ ಯುದ್ಧ, ಸಂಘರ್ಷ, ಸಂಸ್ಕೃತಿಯ ನಾಶ, ಇತ್ಯಾದಿ ಸಾಮಾನ್ಯವಾಗುತ್ತಿದೆ.

ಈ ಮೂಲಭೂತವಾದ ಒಂದು ಫಾಸಿಸ್ಟ್ ರಾಜ್ಯವನ್ನು ನಿರ್ಮಿಸಬಹುದೇ? ಎಂಬ ಗುಮಾನಿ ಇದೆ. ವಾಸ್ತವವಾಗಿ ಐರೋಪ್ಯದ ಸಂದರ್ಭದಲ್ಲಿ ಫಾಸಿಸಂ ಬೆಳೆಯಲು ಬಂಡವಾಳಶಾಹಿ ಕಾರಣವಾದದ್ದು ಇಲ್ಲಿ ಮುಖ್ಯ. ಅಲ್ಲದೇ ಫಾಸಿಸಂ – ಬಂಡವಾಳಶಾಯಿ ಒಂದೇ ನಾಣ್ಯದ ಎರಡು ಮುಖಗಳು.

ಇವತ್ತಿನ ಮೂಲಭೂತವಾದಕ್ಕೆ ಹೊಸ ರೂಪ ಬಂದದ್ದು ಆರ್ಥಿಕತೆಯ ಮೂಲಭೂತವಾದದಿಂದ. ಇಲ್ಲಿ ಎರಡು ರೀತಿಯ ಸಂಬಂಧಗಳಿವೆ. ಒಂದೆಡೆ ಧಾರ್ಮಿಕ ಮೂಲಭೂತವಾದ ಇದೇ ಆರ್ಥಿಕ ಮೂಲಭೂತವಾದದೊಂದಿಗೆ ಮುಖಾಮುಖಿಯಾಗುತ್ತದೆ. ಅದರ ಪ್ರಕಾರ ಆರ್ಥಿಕ ಮೂಲಭೂತವಾದದಿಂದ ಹುಟ್ಟಿದ ಮಾರುಕಟ್ಟೆ, ಬಂಡವಾಳ ಶಾಹಿ ಮತ್ತು ಆಧುನಿಕತೆ ಒಂದು "ಶಾಪ"ವೇ ಹೊರತು ವಿಮೋಚನೆಯಲ್ಲ. ಅದೇ ಸಂಧರ್ಭದಲ್ಲಿ ಅದು ಬಂಡವಾಳ ಶಾಹಿಯ ಹೊಸ ಅವಿಷ್ಕಾರಗಳನ್ನು ತನ್ನ ಬೆಳವಣಿಗೆಗೆ ಉಪಯೋಗಿಸುತ್ತದೆ. ಉದಾಹರಣೆಗೆ ಹೊಸ ತಂತ್ರಜ್ಞಾನದ ಅವಿಷ್ಕಾರಗಳಾದ ಫೇಸ್‌ಬುಕ್, ಇಮೇಲ್, ಗೂಗಲ್, ಫೇಟ್ ಟೈಮ್, ವಾಟ್ಸಾಪ್, ಇತ್ಯಾದಿಗಳನ್ನು ಉಪಯೋಗಿಸುತ್ತದೆ. ಈ ಮೂಲಕ ಸಾವಿರಾರು ವ್ಯಕ್ತಿಗಳನ್ನು ಆಕರ್ಷಿಸಿ ಮೂಲಭೂತವಾದಿ ಗಳನ್ನಾಗಿಸುತ್ತದೆ. ಅದು ಎಲ್ಲಿಯೂ ಹೊಸ ಅವಿಷ್ಕಾರಗಳನ್ನು ಬಹಿಷ್ಕರಿಸಲು ಕರೆ ಕೊಡುವುದಿಲ್ಲ. ಇವತ್ತು ಆಧುನಿಕ ಬಂಡವಾಳ ಹಾಗೂ ಧಾರ್ಮಿಕ ಮೂಲಭೂತವಾದ ವೈರುಧ್ಯಗಳೆಂದು ಚಿತ್ರಿಸಿದರೂ ಅವರ ನಡುವೆ ಅನ್ಯೋನ್ಯ ಸಂಬಂಧವಿರುವುದು ದಿಟ. ಆದರೆ ಅದು ಎಷ್ಟರ ಮಟ್ಟಿಗೆ ಫಾಸಿಸಂ ಬೆಳೆಸಲು ಹಾಗೂ ರಾಜಕೀಯ ಶಕ್ತಿಯಾಗಿ ಪರಿವರ್ತಿಸಲು ಅನುವು ಮಾಡಿಕೊಡುತ್ತದೆ ಎಂಬುದು ಒಂದು ದೊಡ್ಡ ಪ್ರಶ್ನೆ. ಉದಾಹರಣೆಗೆ ಅಫಘಾನಿಸ್ತಾನದಲ್ಲಿ ದೇಶಿಯ

ಬಂಡವಾಳಶಾಹಿ ಬೆಳೆಯದ ಸಂದರ್ಭದಲ್ಲಿ ಅಲ್ಲಿ ಧಾರ್ಮಿಕ ರಾಜ್ಯ ಬೆಳೆಯಬಹುದೇ ಹೊರತು ಅದೊಂದು ಫಾಸಿಸ್ಟ್ ರಾಜ್ಯವಾಗಲು ಸಾಧ್ಯವಿಲ್ಲ. ನೈಜೀರಿಯಾದಲ್ಲಿ ಅಂತರರಾಷ್ಟ್ರೀಯ ಬಂಡವಾಳದ ಬಗ್ಗೆ ಈಗಲೂ ಅಸಹನೆ ಇದೆ. ಇರಾಕ್‌ನಲ್ಲೂ ಇದೇ ರೀತಿಯ ಅಸಹನೆ ಮತ್ತು ವಿರೋಧ ಇದೆ. ಇದೇ ಸ್ಥಿತಿ ಅಮೇರಿಕಾದಲ್ಲಿ ಇಲ್ಲ. ಆದಕಾರಣ ಟ್ರಾಮ್ಪ ನಂತಹ ರಿಯಲ್ ಎಸ್ಟೇಟ್ ಮಾಲೀಕ ಅಧ್ಯಕ್ಷೀಯ ಚುನಾವಣೆಯಲ್ಲಿ ಗಮನ ಸೆಳೆಯುತ್ತಾನೆ. ಈ ಸಂದರ್ಭದಲ್ಲಿ ಅಮೇರಿಕಾ ಒಂದು ಫಾಸಿಸ್ಟ್ ದೇಶವಾಗಿ ಉದ್ಭವಿಸಿದರೆ ಆಶ್ಚರ್ಯವಿಲ್ಲ. ಯಾಕೆಂದರೆ ಅಲ್ಲಿ ಬಂಡವಾಳ ಶಾಹಿ ಮತ್ತು ರಾಜ್ಯದ ನಡುವೆ ಬೆಳೆದಿರುವ ಅನ್ಯೋನ್ಯ ಸಂಬಂಧಗಳು ಮಾತ್ರವಲ್ಲದೆ ಈ ಅಂಶಗಳನ್ನು ಗಮನಿಸಿದರೆ ಫಾಸಿಸಂ ಆರಂಭದ ಘಟ್ಟಗಳು ಕಂಡುಬರುತ್ತದೆ : ಸರ್ಕಾರಿ ಸ್ವಾಮ್ಯದ ಖಾಸಗೀಕರಣ, ಕಾರ್ಮಿಕ ಸಂಘಟನೆಗಳ ವ್ಯವಸ್ಥಿತವಾಗಿ ಹತ್ತಿಕ್ಕುವಿಕೆ, ಸ್ವಾಮ್ಯದ ದೇಶ ಮಿಲಿಟರಿ ದೇಶವಾಗಿ ಪರಿವರ್ತನೆ, ಮಾನವ ಹಕ್ಕುಗಳಿಗೆ ಕನಿಷ್ಟ ಮಾನ್ಯತೆ, ಕ್ರೋನಿ ಬಂಡವಾಳದ ಬೆಳವಣಿಗೆ ಇತ್ಯಾದಿ. ಅಫಘಾನಿಸ್ತಾನ್, ಸಿರಿಯಾ, ಇರಾಕ್ ದೇಶಗಳು ದೇವರುಗಳ ರಾಜ್ಯಗಳಾಗಿ ಮೂಲಭೂತವಾದಿ ದೇಶಗಳಾದರೆ, ಅಮೇರಿಕಾ ಖ್ಯಾತ ಇತಿಹಾಸ ತಜ್ಞ ನಾರ್ಮನ್ ಪೊಲ್ಲಾಕ್ ಪ್ರಕಾರ ಉದಾರವಾದಿ ಫಾಸಿಸ್ಟ್ ದೇಶವಾಗಬಹುದು. ಇದು ಒಂದು ಚಿತ್ರಣವಷ್ಟೇ. ಇನ್ನೊಂದು ಚಿತ್ರಣದಲ್ಲಿ ನನ್ನ ಭಾರತವಿದೆ.

ಈ ಸಂದರ್ಭದಲ್ಲಿ ನನ್ನ ಭಾರತ ಏನಾಗಬಹುದು?

•

ನನ್ನ ಭಾರತದ ಕಥನ

ನನ್ನ ಭಾರತಕ್ಕೂ ಅಮೇರಿಕಾಕ್ಕೂ ಸಂಬಂಧ ಕುದುರಿದ್ದು ಇತ್ತೀಚಿನ ದಿನಗಳಲ್ಲಿ. ಭಾರತ ಒಂದು ಆರ್ಥಿಕವಾಗಿ, ೨೦೨೦ರ ಸುಮಾರಿಗೆ ಒಂದು ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮುವ ಕಲ್ಪನೆಗಳು ಗಟ್ಟಿಯಾದಾಗ ಈ ಸಂಬಂಧಗಳು ಕುದುರಿದವು. ಅಮೇರಿಕಾದ ಬಂಡವಾಳ ಶಾಯಿಗಳು ಆರ್ಥಿಕ ಮೂಲಭೂತವಾದದ ಕಾಲದಲ್ಲಿ ನನ್ನ ಭಾರತಕ್ಕೆ ಲಗ್ಗೆ ಇಟ್ಟವು. ಮಾತ್ರವಲ್ಲದೇ ಭಾರತದ ಬಂಡವಾಳ ಶಾಹಿಗಳೊಂದಿಗೆ ಸಂಬಂಧಗಳನ್ನು ಕುದುರಿಸಿದವು. ಆದರೆ ಅವುಗಳು ಭಾರತದ ಧಾರ್ಮಿಕ ಮೂಲಭೂತವಾದಕ್ಕೆ ಸಹಾಯ ಮಾಡುತ್ತಿವೆಯೇ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ.

ಭಾರತದ ಧಾರ್ಮಿಕ ಮೂಲಭೂತವಾದಕ್ಕೆ ಭಾರತದ ಬಂಡವಾಳಶಾಹಿ ನೀಡಿದ ಕೊಡುಗೆ ಅಪಾರ. ಇದು ಸ್ಪಷ್ಟವಾಗಿ ಕಂಡು ಬರುವುದು ಹಿಂದೂ ಮೂಲಭೂತವಾದದ ಬೆಳವಣಿಗೆಯ ಸಂದರ್ಭದಲ್ಲಿ. ಮುಸ್ಲಿಂ ಮೂಲಭೂತವಾದಕ್ಕೆ

“ಪಾಶ್ಚಾತ್ಯದ ಪ್ರತಿರೋಧ” ಹಾಗೂ ಸಲಾಫಿ ಮತ್ತು ವಹಾಬನಿಸಂನ ಸ್ಫೂರ್ತಿಯಾದರೆ, ಹಿಂದೂ ಮೂಲಭಾತವಾದಕ್ಕೆ ಭಾರತದ ಬಂಡವಾಳಶಾಹಿಗಳ / ಕೈಗಾರಿಕೋದ್ಯಮಿಗಳ ಬೆಂಬಲ ಖಂಡಿತಾ ಇದೆ. ೧೯೬೪ರಲ್ಲಿ ಸ್ಥಾಪನೆಯಾದ ಹಿಂದೂ ಮೂಲಭೂತವಾದದ ಅಂಗಸಂಸ್ಥೆಯಾದ ವಿಶ್ವ ಹಿಂದೂ ಪರಿಷತ್‌ನ ಸ್ಥಾಪನೆಯಲ್ಲಿ ಬಂಡವಾಳಶಾಹಿಗಳ ಕೊಡುಗೆ ಆರಂಭವಾಗುತ್ತದೆ : ಅವರಲ್ಲಿ ಮುಖ್ಯವಾಗುವುದು ವಾಲ್ ಚಂದ್ ಗುಂಪಿನ ಲಾಲ್ ಚಂದ್ ಹಿರಾಚಂದ್, ಮಾಣಿಕ್ ಚಂದ್ ಶಾ, ಜಮ್ನಾದಾಸ್ ಮೂಂಜಿ ಇತ್ಯಾದಿ. ಮೂಲಭೂತವಾದಕ್ಕೆ ಉಳಿದ ಬಂಡವಾಳಶಾಹಿಗಳ ಕೊಡುಗೆಯನ್ನು ಮರೆಯಬಾರದು ಅದರಲ್ಲೂ ಸಿಂಘಾನಿಯಾ, ಬಿರ್ಲಾರ ಕೊಡುಗೆ ಅನನ್ಯ. ಇವರ ಕೊಡುಗೆಗಳು ವಿವಿಧ ರೂಪದಲ್ಲಿರುತ್ತದೆ : ನೂರಾರು ದೇವಸ್ಥಾನಗಳ ಸ್ಥಾಪನೆಗೆ ಸಹಾಯ, ಶಾಲಾ-ಕಾಲೇಜ್‌ಗಳ ಸ್ಥಾಪನೆ, ಗುರುಕುಲಗಳ ಸ್ಥಾಪನೆಗೆ ಸಹಾಯ, ಉತ್ಸವಗಳ ಆಚರಣೆಗೆ ಸಹಾಯ, ನೂರಾರು ಪೌರ ಸಮಾಜದ ಗುಂಪುಗಳಿಗೆ ಸಹಾಯಧನ, ಹಿಂದೂ ಉತ್ಸವಗಳಿಗೆ ಆರ್ಥಿಕ ಸಹಾಯ. ಅಲ್ಲದೇ ದೇಶಿಯ ಬಂಡವಾಳ ಹಿಂದೂ ಮೂಲಭೂತವಾದದ ರಾಜಕೀಯ ರೂಪಕವಾದ ಬಿಜೆಪಿಗೆ ಚುನಾವಣಾ ಸಂದರ್ಭದಲ್ಲಿ ಧನ ಸಹಾಯ ಮಾಡುತ್ತದೆಯಲ್ಲದೇ, ತನ್ನ ಹಿಡಿತದಲ್ಲಿರುವ ಎಲ್ಲಾ ಸಾಮಾಜಿಕ ತಾಣಗಳಲ್ಲಿ, ಮಾಧ್ಯಮಗಳಲ್ಲಿ ಅದರ ಪರವಾಗಿ ಬಿತ್ತರಿಸಿದ ವಿಷಯಗಳೆಷ್ಟೋ? ಇಲ್ಲಿ ಥತ್ತೆಂದು ನೆನಪಾಗುವುದು ಅದಾನಿ ಮತ್ತು ಅಂಬಾನಿ. ಬಹುಷಃ ಅವರ ಬೆಂಬಲವಿಲ್ಲದಿದ್ದರೆ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರುತ್ತಿರಲಿಲ್ಲವೋ ಏನೋ? ಆದ ಕಾರಣ ಇವತ್ತು ಹಿಂದೂ ಮೂಲಭೂತವಾದ ಗಟ್ಟಿಯಾಗಿ ಬೆಳೆಯುತ್ತಿದ್ದರೆ, ಬಂಡವಾಳಶಾಹಿ ಕೂಡ ಅಷ್ಟೇ ಗಟ್ಟಿಯಾಗಿ ಬೆಳೆಯುತ್ತಿದೆ, ಯಾವುದೇ ಅಡೆ ತಡೆ ಇಲ್ಲದೇ ಬೆಳೆಯುತ್ತಿದೆ. ಆರ್ಥಿಕ ಮೂಲಭೂತವಾದ ಮತ್ತು ಹಿಂದೂ ಮೂಲಭೂತವಾದಗಳು ಮೇಲ್ನೋಟಕ್ಕೆ ವೈರುಧ್ಯಗಳೆಂದು ಬಿಂಬಿಸಿದರೂ, ಅವುಗಳು ಅಂತಿಮವಾಗಿ ಸಂಘರ್ಷರಹಿತ ವೈರುಧ್ಯಗಳಾಗುತ್ತವೆ. ಆದಕಾರಣ ದೇಶಿಯ ಬಂಡವಾಳಶಾಹಿ ಮತ್ತು ವಿದೇಶಿ ಬಂಡವಾಳಶಾಹಿ ಸ್ವದೇಶಿ ತತ್ವದ ಅಥವಾ ಕಥನದ ನಡುವೆಯೂ ಬೆಳೆಯುತ್ತಿದೆ. ಅದಕ್ಕೆ ರಾಜಕೀಯ ವ್ಯವಸ್ಥೆಯ ಬೆಂಬಲವಿರುವುದು ಅಷ್ಟೇ ಸ್ಪಷ್ಟ.

•

ಹಿಂದೂ ಮೂಲಭೂತವಾದ ಸಾಂಸ್ಕೃತಿಕವಾಗಿ ಬೆಳೆಯುತ್ತಿದೆ. ಹಿಂದೂ ಮೂಲಭೂತವಾದದಲ್ಲಿ “ಹಿಂದುತ್ವ” ಕೇಂದ್ರಬಿಂದು, ವೀರ್ ಸಾವರ್ಕರ್‌ಗೆ ಹಿಂದುತ್ವ ಅಂದರೆ "all the departments of thought and activity of

---

[3] V.D. Savarkar, Essentials of Hindutva http://www.savarkar.org/content/pdfs/en/essentialf of hindutva.v001.pdf acceced on 24/02/2016

the whole Being of our Hindu race[3]". ಅದರ ಅಂತಿಮ ಗುರಿ "ಹಿಂದೂ ರಾಷ್ಟ್ರ". ಗೋಲ್ವಾಲ್ಕರ್‌ಗೆ ಹಿಂದೂ ರಾಷ್ಟ್ರ ನಿಂತಿರುವುದೇ ಹಿಂದು ಸಂಸ್ಕೃತಿಯ ಮೇಲೆ. ತಮ್ಮ ಪುಸ್ತಕ, ಬಂಚ್ ಆಫ್ ಥಾಟ್‌ನಲ್ಲಿ ಹೇಳುವಂತೆ, "Our concept of Hindu nation is not mere bundle of political and economic rights. It is essentially cultural. Our ancient and sublime cultural values of life form its life - breath. And it is on Intense rejuvenation of the spirit of our culture that can give us the true vision of our nation life..[4]". ಹಿಂದೂ ಸಂಸ್ಕೃತಿಯ ಕಥನಗಳಲ್ಲಿ ಮಾತೃಭೂಮಿ ಹಾಗೂ ಪುಣ್ಯ ಭೂಮಿಯ ವೈಭವ, ರಾಷ್ಟ್ರದ ಆರಾಧನೆ, ಗತವೈಭವದ ಮರುಜೀವನ ಇತ್ಯಾದಿಗಳಿವೆ. ಮಾತ್ರವಲ್ಲದೇ ಹಿಂದೂ ಅಂದರೆ ರಾಷ್ಟ್ರವೆನ್ನುವ, ರಾಷ್ಟ್ರವೆಂದರೆ ಹಿಂದೂ ಎನ್ನುವ ಸಮೀಕರಣ ಇದೆ. ಅಲ್ಲದೇ ರಾಷ್ಟ್ರಕ್ಕೆ ಭರತವರ್ಷ, ಆರ್ಯಾವರ್ತ, ಹಿಂದೂಸ್ಥಾನ ಹೆಸರಿನ ಹುಡುಕಾಟವೂ ಇದೆ.

ಸಂಸ್ಕೃತಿಯ ಕಥನಗಳು ಇಲ್ಲಿಗೆ ನಿಲ್ಲುವುದಿಲ್ಲ. ಹಿಂದೂ ಮೂಲಭೂತವಾದ ತನ್ನ ನಿರ್ಮಿತಿಗೆ ತೆಗೆದುಕೊಂಡ ಶತ್ರುಗಳು ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಕಮ್ಯುನಿಸ್ಟರು. ಅದರ ಪ್ರಕಾರ ಇವರೆಲ್ಲರೂ ಆಂತರಿಕ ಶತ್ರುಗಳು. "ಅರಾಷ್ಟ್ರೀಯರು". ಅವರ ನಿಷ್ಠೆ ಹಿಂದೂ ರಾಷ್ಟ್ರವಲ್ಲ. ಇವತ್ತಿನ ಹಿಂದೂಗಳ ದುಸ್ಥಿತಿಗೆ ಕಾರಣ ಮುಸ್ಲಿಮರ ದಾಳಿ ಮತ್ತು ಆಡಳಿತ. ದಲಿತ ವರ್ಗದ ಸೃಷ್ಟಿ ಇದೇ ದಾಳಿಯ ಉತ್ಪತ್ತಿ. ಅದಕ್ಕೆ ಪೂರಕವಾಗಿರುವುದು ಕ್ರಿಶ್ಚಿಯನ್ನರ ಮತಾಂತರ. ಕಮ್ಯುನಿಷ್ಟರು ಕೂಡ ಇದರಿಂದ ಹೊರತಾಗಿಲ್ಲ.

ಹಿಂದೂ ಮೂಲಭೂತವಾದ ಇನ್ನೆರಡು ತಂತ್ರಗಾರಿಕೆಗಳನ್ನು ಹೂಡುತ್ತದೆ. ಮೊದಲನೇದಾಗಿ ಅದು ತನ್ನ ವ್ಯಾಪ್ತಿಯನ್ನು ವಿಸ್ತರಿಸಲು ನೋಡುತ್ತದೆ. ಐತಿಹಾಸಿಕವಾಗಿ ತನ್ನ ಕಕ್ಷೆಯೊಳಗಿರುವ ಸಮುದಾಯಗಳನ್ನು ಹಿಂದುತ್ವ ಚೌಕಟ್ಟಿನೊಳಗೆ ತರಲು ಯತ್ನಿಸುತ್ತದೆ. ಆದಿವಾಸಿಗಳು, ದಲಿತರು, ಹಿಂದುಳಿದವರನನ್ನು ಸಾಂಸ್ಕೃತಿಕವಾಗಿ ಹಿಂದುಗಳನ್ನಾಗಿಸಿ ತನ್ನ ಮೂಲಭೂತ ವಾದದ ಚೌಕಟ್ಟನ್ನು ವಿಸ್ತರಿಸುತ್ತದೆ. ಸಾವಿರಾರು ವನವಾಸಿ ಕಲ್ಯಾಣ ಕೇಂದ್ರಗಳನ್ನು ನಿರ್ಮಿಸಿ ಆದಿವಾಸಿಗಳನ್ನು ತನ್ನ ಕಕ್ಷೆಯಲ್ಲಿ ತರುತ್ತದೆ.

ಹಿಂದೂ ಮೂಲಭೂತವಾದದಲ್ಲಿ ಸಮುದಾಯಗಳ ರೂಪಕಗಳು ಪುನಃ ಪುನಃ ರಾಜಕೀಯ ಅಸ್ತ್ರವಾಗಿ ಬಿಡುತ್ತವೆ. ಅಂಬೇಡ್ಕರ್, ಫುಲೆ, ನಾರಾಯಣಗುರು ಪೆರಿಯಾರ್, ಇವರ ಹೊರತಾಗಿ ಗಾಂಧಿ ಕೂಡ ಹಿಂದೂ ಮೂಲಭೂತವಾದದ ಕಥನದ ಭಾಗವಾಗುತ್ತಾರೆ.

---

4 M. S. Golwalkar, Bunch of thoughts, Sahithya Sindhu Prakashana, Bangalore, 1996, 0.34

ಹಿಂದೂ ಮೂಲಭೂತವಾದ ಕೆಲವು ಇತಿಹಾಸವನ್ನು ಸುಳ್ಳೆಂದು ತೀರ್ಮಾನಿಸುತ್ತದೆ. ಅದರಲ್ಲಿ ಭಾರತಕ್ಕೆ ಆರ್ಯನ್ನರ ಇತಿಹಾಸವು ಸೇರಿದೆ. ಅದರ ಪ್ರಕಾರ ಆರ್ಯನ್ನರು ಪರದೇಶಿಗಳಲ್ಲ, ಹೊರತು ದೇಶಿಗಳು. ದಲಿತರು ಕೆಳಜಾತಿಗಳಾಗಿರಲು ಮನುಧರ್ಮಶಾಸ್ತ್ರ ಅಥವಾ ಮೇಲ್ಜಾತಿಗಳು ಕಾರಣ ಎಂಬುದನ್ನು ಒಪ್ಪುವುದಿಲ್ಲ. ಹೊರತು ಮುಸ್ಲಿಮರು ಎಂದು ವಾದಿಸುತ್ತದೆ. ಅಕ್ಬರ್ "ದಿ ಗ್ರೇಟ್" ಎಂಬುವುದನ್ನು ಕೂಡ ಒಪ್ಪುವುದಿಲ್ಲ, ಇದೇ ಸಂದರ್ಭದಲ್ಲಿ ಮಿಥ್ಯೆಗಳ ಇತಿಹಾಸವನ್ನು ನಿರ್ಮಿಸುತ್ತದೆ. ಅಯೋಧ್ಯಾ ಸಂದರ್ಭದಲ್ಲಿ ನೂರಾರು ಬಾರಿ ಯುದ್ಧಗಳು ನಡೆದವು, ಲಕ್ಷಗಟ್ಟಲೆ ಜನ ಸತ್ತರು. ತಾಜ್ ಮಹಲ್ ಎಂಬುದು ವಾಸ್ತವವಾಗಿ ತೇಜೋ ಮಹಲ್ ಎಂಬ ವಿಚಿತ್ರ ಇತಿಹಾಸವನ್ನು ನಿರ್ಮಿಸುತ್ತದೆ. ಅಲ್ಲದೇ ವೇದಿಕ್ ನಾಗರೀಕತೆಯ ಕತೆಯನ್ನು ನಿರ್ಮಿಸುತ್ತದೆ.

ಇದಲ್ಲದೆ ಹಿಂದೂ ಮೂಲಭೂತವಾದ ಇನ್ನೆರಡು ಮಟ್ಟದಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಲು ನೋಡುತ್ತದೆ. ಸಂಸ್ಕೃತಿ, ನಾಗರೀಕ ಸಮಾಜ ಹೊರತಾಗಿ, ಶಿಕ್ಷಣ ಮತ್ತು ಸಮೂಹ ಮಾಧ್ಯಮ ಇದರ ಹೊಸ ಯೋಜನೆಯ ಭಾಗಗಳು.

ಹಿಂದೂ ಮೂಲಭೂತವಾದ ಗಟ್ಟಿಯಾಗಿ ಬೆಳೆದದ್ದು ೧೯೮೦ರ ಸಂದರ್ಭದಲ್ಲಿ. ಶಾಬಾನು ಪ್ರಕರಣ, ಸಲ್ಮಾನ್ ರಶ್ದಿ ಪ್ರಕರಣ, ಅಯೋಧ್ಯಾ ಪ್ರಕರಣ ಅದಕ್ಕೆ ಬೇರೂರಲು ಅವಕಾಶ ಮಾಡಿಕೊಟ್ಟರೆ, ಗೋಧ್ರಾ, ಗುಜರಾತ್ ಪ್ರಕರಣಗಳು ಅದನ್ನು ರಾಜಕೀಯದ ಹೊಸ್ತಿಲಲ್ಲಿ ತಂದು ನಿಲ್ಲಿಸಿದವು. ಆರ್ಥಿಕ ಮೂಲಭೂತವಾದವು ಅದಕ್ಕೆ ಇನ್ನಷ್ಟು ಶಕ್ತಿಯನ್ನು ತುಂಬಿದವು.

ಇವತ್ತು ಹಿಂದೂ ಮೂಲಭೂತವಾದ ಬೃಹತ್ ಮಟ್ಟದಲ್ಲಿ ಬೆಳೆದಿದೆ. ಅದು ರಾಜ್ಯ ವ್ಯವಸ್ಥೆಯ ಭಾಗವಾಗಿದೆ. ಹಿಂದೂ ಮೂಲಭೂತವಾದದ ಕನಸುಗಾರರಾದ ಗೋಲ್ವಲ್ಕರ್, ಸಾವರ್ಕರ್‌ರ ಹಲವು ಕನಸುಗಳು ಮೆಲ್ಲಮೆಲ್ಲನೆ ಸಾಕಾರಗೊಳ್ಳುತ್ತಿವೆ:

ಅ) ಹಿಂದಿ ರಾಷ್ಟ್ರ ಭಾಷೆ ಮಾತ್ರವಲ್ಲದೇ ಅದಕ್ಕೇ ಅತೀ ಹೆಚ್ಚಿನ ಪ್ರಾಶಸ್ತ್ಯ ದೊರೆಯುತ್ತಿದೆ.

ಬ) ರಾಷ್ಟ್ರ ಪ್ರೇಮಕ್ಕಾಗಿ ರಾಷ್ಟ್ರ ಧ್ವಜ ಎಲ್ಲಾ ಕೇಂದ್ರೀಯ ವಿ.ವಿ.ಗಳಲ್ಲಿ ಹಾರಾಡುತ್ತಿದೆ.

ಸಿ) ಮುಸ್ಲಿಂ-ಕ್ರಿಶ್ಚಿಯನ್-ಕಮ್ಯುನಿಷ್ಟರು ದೇಶದ ಶತ್ರುಗಳೆಂದು ಪ್ರತಿಬಿಂಬಿತ ರಾಗುತ್ತಿದ್ದಾರೆ.

ಡಿ) ಯೋಗ, ನೈತಿಕತೆ, ಶಿಕ್ಷಣದ ಭಾಗವಾಗುತ್ತಿದೆ.

ಇ) ಪಠ್ಯ ಪುಸ್ತಕಗಳು ಹಿಂದುತ್ವ ದೃಷ್ಟಿಕೋನದಿಂದ ರಚನೆಯಾಗುತ್ತಿವೆ.

ಈ) ವಿವೇಕಾನಂದ, ವಲ್ಲಭಾಯಿ ಪಟೇಲ್ ಹೊಸ ಐಕಾನ್‌ಗಳಾಗುತ್ತಿದ್ದಾರೆ.

ಎಫ್)ಆಹಾರ ಸಂಸ್ಕೃತಿಯಲ್ಲಿ ಗೋಮಾಂಸದ ವಿರುದ್ಧ ಅಸಹನೀಯತೆ ಹೆಚ್ಚುತ್ತಿದೆ.

ಈ ಹಿನ್ನೆಲೆಯಲ್ಲಿ ನನ್ನ ಮುಂದಿನ ಭಾರತ ಹೇಗಿರಬಹುದು? ಅದು ಕೂಡ ಧರ್ಮಾಧಾರಿತ ರಾಜ್ಯ ಅಥವಾ ಫ್ಯಾಸಿಸಂ ಕಡೆಗೆ ಸಾಗಬಹುದೇ? ಎಂಬ ಪ್ರಶ್ನೆ ನಮ್ಮ ಮುಂದಿದೆ.

ವಾಸ್ತವವಾಗಿ ನನ್ನ ಭಾರತದಲ್ಲಿ "ಸ್ಪರ್ಧಾತ್ಮಕ ಮೂಲಭೂತವಾದ" ವಿರುವುದನ್ನು ಗಮನಿಸಬೇಕು. ಹಿಂದೂ ಮೂಲಭೂತವಾದ ಮತ್ತು ಮುಸ್ಲಿಂ ಮೂಲಭೂತವಾದ ಅದರೊಂದಿಗೆ ಸಿಖ್ ಮೂಲಭುತವಾದ ಮತ್ತು ಕ್ರಿಶ್ಚಿಯನ್ ಮೂಲಭೂತವಾದಗಳ ನಡುವೆ "ಕಲ್ಪಿತ" ಸ್ಪರ್ಧೆ ಇದೆ. ವಿಚಿತ್ರವೆಂದರೆ ಬುದ್ಧಿಸ್ಟ್ ಮೂಲಭೂತವಾದ ಭಾರತದ ಸಂದರ್ಭದಲ್ಲಿ ಶಕ್ತಿಶಾಲಿಯಾಗಿ ಬೆಳೆದಿಲ್ಲ.

ಭಾರತದಲ್ಲಿ ಈಗಲೂ ಸಿಖ್ ಮೂಲಭೂತವಾದದ ಇರುವಿಕೆಯನ್ನು ಮರೆಯಬಾರದು. ಅದು ೧೯೮೦ರ ಸುಮಾರಿಗೆ ಬಹಳ ಗಟ್ಟಿಯಾಗಿ ಬೆಳೆದರೂ ಅದರಾಚೆಗೆ ಈ ಮೂಲಭೂತವಾದದ ಇತಿಹಾಸ ಇದೆ. ಇದು ೧೭ನೆ ಶತಮಾನದ ಸಿಖ್ ಪರಂಪರೆಯ ಖಾಲ್ಸದ ಒಂದು ಉತ್ಪನ್ನ. ೧೯೮೦ರ ದಶಕದಲ್ಲಿ ಭಿಂದ್ರನ್‌ವಾಲೇ ಕೈಯಲ್ಲಿ ಅದು ಮತ್ತೊಮ್ಮೆ ಖಾಲಿಸ್ತಾನದ ಕೂಗನ್ನು ಕೂಡ ಹಾಕಿತ್ತು. ಇಂದಿರಾಗಾಂಧಿಯ ಆಪರೇಶನ್ ಬ್ಲೂಸ್ಟಾರ್ ಮಿಲಿಟರಿ ಮೂಲಕ ಈ ಮೂಲಭೂತವಾದವನ್ನು ಹತ್ತಿಕ್ಕಿದ್ದರೂ, ಅದು ಸಂಪೂರ್ಣವಾಗಿ ನಿರ್ನಾಮವಾಗಿದೆ ಎನ್ನಲಾಗುವುದಿಲ್ಲ. ಈ ಮೂಲಭೂತವಾದಕ್ಕೆ ಈಗಲೂ ಬೆಂಬಲಿಗರಿದ್ದಾರೆ. ಕೆನಡಾದಲ್ಲಿ ನೆಲೆಸಿರುವ ಸಿಖ್ ಅನಿವಾಸಿಗಳು ಇದರ ಹೆಚ್ಚು ಕಡಿಮೆ ಬೆಂಬಲಿಗರು. ಮಾರುಕಟ್ಟೆ ಮೂಲಭೂತವಾದ ಅವರಿಗೆ ಬೆಂಬಲ ನೀಡಲು ಸಹಾಯ ಮಾಡಿದ್ದು ಸಹಜ. ಇವತ್ತು ಕೂಡ ಸಿಖ್ ಮೂಲಭೂತವಾದಕ್ಕೆ ತಮ್ಮ ಧರ್ಮಕ್ಕೆ ನೀಡಿರುವ "ಹಿಂದು" ಲೇಬಲ್ ಕುರಿತಂತೆ ಅಸಹನೆ ಇದೆ, ಹಿಂದು ಧರ್ಮದ ಭಾಗವಾಗಿ ನೋಡುವುದರ ಕುರಿತು ಅದಕ್ಕೆ ಅಸಮಾಧಾನವಿದೆ.

ಕ್ರಿಶ್ಚಿಯನ್ ಮೂಲಭೂತವಾದ ಈಶಾನ್ಯ ರಾಜ್ಯದಲ್ಲಿ ಕಂಡು ಬರುತ್ತದೆ. ವಿವಿಧ ಶಸ್ತ್ರಾಸ್ತ್ರ ಹೋರಾಟಗಳ ಸಂದರ್ಭದಲ್ಲಿ ಇದು ವ್ಯಕ್ತವಾಗುತ್ತಿದೆ. ಅವರ ಮುಖ್ಯ ಧ್ಯೇಯ ದೇವರುಗಳ ರಾಜ್ಯವನ್ನು ವಿಸ್ತರಿಸುವುದು.

ಇವುಗಳಲ್ಲಿ ಸ್ಪರ್ಧೆ ಇರುವುದು ಮೂಲತಃ ಹಿಂದೂ-ಮುಸ್ಲಿಂ ಮೂಲಭೂತ ವಾದಗಳ ನಡುವೆ. ಮುಸ್ಲಿಂ ಮೂಲಭೂತವಾದ ಸಮುದಾಯದ ಶುದ್ಧೀಕರಣದೊಂದಿಗೆ ಸಮುದಾಯದ ನಡುವೆ ಇರುವ ಸ್ಪೇಸ್ - ಅವಕಾಶ/ಸ್ಥಳವನ್ನು ಭರಿಸಲು ನೋಡುತ್ತದೆ. ಇವತ್ತು ಮುಸ್ಲಿಂ ಮೂಲಭುತವಾದಕ್ಕೆ ಗತವೈಭವದ ನೆನಪುಗಳಿವೆ - ಅರಬ್ ದಾಳಿಯಿಂದ ಹಿಡಿದು ಬಹದ್ದೂರ್

ಶಾ ಜಫ್ಫರ್‌ನ ಆಳ್ವಿಕೆಯ ಕೊನೆಯ ದಿನಗಳ ಗತ ವೈಭವದ ನೆನಪುಗಳು ಪುನಃ ಪುನಃ ಮೂಡುತ್ತದೆ. ಅದಕ್ಕೆ ಮೊಘಲರ ಆಳ್ವಿಕೆ ಸುವರ್ಣ ಯುಗದ ಕಾಲ. ಮಧ್ಯಕಾಲೀನ ಆಳ್ವಿಕೆ ಈ ಕಥನದ ಭಾಗ. ಅಕ್ಬರ್‌ನ ಆಳ್ವಿಕೆಗಿಂತಲೂ ಔರಂಗಜೇಬನ ಕಾಲವನ್ನು ಮೂಲಭೂತವಾದ ಹೆಚ್ಚು ಮೆಚ್ಚುತ್ತದೆ. ಕೆಲವು ಮೂಲಭೂತವಾದಿಗಳಿಗೆ ಜಾಗತಿಕವಾಗಿ ಹಗೂ ಭಾರತದಲ್ಲಿ ಇಸ್ಲಾಮಿಕ್ ಆಳ್ವಿಕೆಯ ಪುನರ್ ಸ್ಥಾಪನೆಯೇ ಮುಖ್ಯ ಧ್ಯೇಯವಾಗುತ್ತದೆ.

ಮೂಲ ಭೂತವಾದಿಗಳಲ್ಲಿ ಏಕ ರೂಪತೆ ಇದೆ ಎಂದರೆ ಅದು ಅತಿಶಯೋಕ್ತಿ. ಅದರಲ್ಲಿ ಬೇರೆ ಬೇರೆ ಚಿಂತನಾಶಾಲೆಗಳಿವೆ. ಕೆಲವು ಮೂಲಭೂತವಾದಿಗಳು ಶತಮಾನದ ಹಿಂದಿನ ಧಾರ್ಮಿಕ ಚಿಂತನೆಗಳನ್ನು ಮತ್ತೆ ಮತ್ತೆ ಮೆಲಕು ಹಾಕುತ್ತವೆ. ೧೭೦೩-೧೭೬೨ ನಡುವೆ ದೆಹಲಿಯಲ್ಲಿ ಬದುಕಿದ ಶಾ ಮಲೀಯುಲ್ಲ ಮತ್ತು ಸೌದಿ ಅರೇಬಿಯಾದಲ್ಲಿ ವಹಾಬಿ ಚಳುವಳಿಗೆ ಕಾರಣೀಭೂತನಾದ ಅಬ್ದುಲ್ ವಹಬ್ (೧೭೯೩-೧೭೮೭) ಈ ಪಂಕ್ತಿಯಲ್ಲಿ ಪ್ರಮುಖರು. ವಿಚಿತ್ರವೆಂದರೆ ಭಾರತದಲ್ಲಿ ವಹಾಭಿನಿಸಂ ಮೂಲಭೂತ ವಾದದೊಂದಿಗೆ ಪ್ರತಿರೋಧದ ಶಕ್ತಿಯಾಗಿ ಹೊರಹೊಮ್ಮಿದ್ದು ವಿಚಿತ್ರ ಸಂಗತಿ. ೧೮೩೦ ಮತ್ತು ೧೮೭೦ ನಡುವೆ ವಸಹಾತು ಶಾಹಿ ವಿರೋಧಿ ಹೋರಾಟದಲ್ಲಿ ವಹಾಬಿನಿಸಂನ ಕೊಡುಗೆಯನ್ನು ಮರೆಯಬಾರದು. ಆದರೆ ಅದು ಇವತ್ತು ಗುರುತಿಸಲ್ಪಡುವುದು ಮೂಲಭೂತವಾದದೊಂದಿಗೆ.

ಹಿಂದೂ-ಮುಸ್ಲಿಂ ಮೂಲಭೂತವಾದಗಳು ಇವತ್ತು ಪೈಪೋಟಿಯನ್ನು ಬೇರೆ ಬೇರೆ ರೂಪದಲ್ಲಿ ಮಾಡುತ್ತಿವೆ. ಹಿಂದೂ ಮೂಲಭೂತವಾದಕ್ಕೆ "ಕೇಸರೀ ಬಣ್ಣ" ಒಂದು ಐಡೆಂಟಿಟಿಯ ವಿಷಯ. ಯಾವುದೇ ವಿಷಯವಿರಲಿ – ದೇವಸ್ಥಾನದ ಉತ್ಸವವೇ ಇರಲಿ, ಮರಗಳಿರಲಿ, ಭಾವಚಿತ್ರಗಳಿರಲಿ, ರಸ್ತೆಗಳಿರಲಿ "ಕೇಸರಿ" ಧ್ವಜವಿರಲೇ ಬೇಕು.

ಮುಸ್ಲಿಂ-ಹಿಂದೂ ಮೂಲಭೂತವಾದ ಇವತ್ತು ಸೂಫಿ/ನಾಥ ಪರಂಪರೆಯನ್ನು ಸಮನ್ವಯ ಸಂಸ್ಕೃತಿಯನ್ನು ನಿರಾಕರಣೆ ಮಾಡುತ್ತದೆ. ಮುಸ್ಲಿಂ ಮೂಲಭೂತವಾದ ಇದನ್ನು ಶುದ್ಧೀಕರಣದ ಹೆಸರಿನಲ್ಲಿ, ಐಡೆಂಟಿಟಿ ಹೆಸರಿನಲ್ಲಿ, ಹಾಗೂ ಇಸ್ಲಾಂಗೆ ಎದುರಾಗಿರುವ "ಕಲ್ಪಿತ ಬೆದರಿಕೆ" ಮೂಲಕ ಮಾಡುತ್ತದೆ ಅಲ್ಲದೇ ಅದರ ಹೆಸರಿನಲ್ಲಿ ಬೆಳೆಯುತ್ತದೆ.

ಈ ಫಲಶ್ರುತಿ ಎಂಬಂತೆ ಹಿಂದೂ-ಮುಸ್ಲಿಂ ಎಂಬ ಸಮುದಾಯಗಳ ನಡುವೆ ಇದ್ದ ಐತಿಹಾಸಿಕ ಸಂಬಂದ ಇವತ್ತು ಇಲ್ಲ. ಸಮನ್ವಯ ಸಂಸ್ಕೃತಿಯ ರೂಪಕವಾಗಿದ್ದ ಫಜ್ಜಿ ಅಥವಾ ಅಸ್ಪಷ್ಟವಾಗಿದ್ದ – ಮುಸ್ಲಿಂನಲ್ಲದ ಹಿಂದೂನಲ್ಲದ – ಸಮುದಾಯ ಇವತ್ತು ಸಿಗುವುದಿಲ್ಲ. ಪಬ್ಬಗಳು ಕೂಡ ಅಷ್ಟೇ: ಮುಸ್ಲಿಂ

ಹಬ್ಬಗಳು ಮುಸ್ಲಿಮರಿಗೆ, ಹಿಂದೂ ಹಬ್ಬ ಹಿಂದುಗಳಿಗೆ ಸೀಮಿತವಾಗಿದೆ. ವ್ಯಕ್ತಿಗಳ ಐಡೆಂಟಿಟಿ ಒಂದೋ "ಹಿಂದೂ" ಆಗಿದೆ. ಇಲ್ಲವೇ "ಮುಸ್ಲಿಂ" ಆಗಿದೆ. ಕೆಲವು ಕಡೆ ಹಿಂದು-ಮುಸ್ಲಿಂ ನಡುವೆ ಸಂಭಾಷಣೆಗಳೇ ಇಲ್ಲ. ಹಿಂದು ಹುಡುಗ-ಮುಸ್ಲಿಂ ಹುಡುಗಿ ಮಾತನಾಡುವಷ್ಟು ಅವಕಾಶಗಳಿಲ್ಲ. ಜೀವನ ಕೇರಿಗಳ ಸುತ್ತಾ ಗೆಟ್ಟೋಗಳ ಸುತ್ತಾ ತಿರುಗುಡುತ್ತಾ ಇರುತ್ತದೆ.

ಕಥನಗಳು ಕೂಡ ಬದಲಾಗಿದೆ. ಲವ್ ಜಿಹಾದ್, "ಘರ್ ವಾಪಸಿ", ಹಿಂದೂ ಇವತ್ತು ಅವಸಾನದಲ್ಲಿದ್ದಾನೆ, ಮುಸ್ಲಿಂ ತುಷ್ಟೀಕರಣ ಭಾರತದ ಸಮಸ್ಯೆಗೆ ಕಾರಣ, ಮುಸ್ಲಿಂರೆಲ್ಲರೂ ಭಯೋತ್ಪಾದಕರು ಅಥವಾ ಎಲ್ಲಾ ಮುಸ್ಲಿಮರು ಭಯೋತ್ಪಾದಕರು, ಮುಸ್ಲಿಮರು ಒಂದು ದಿನ ಭಾರತದಲ್ಲಿ ಬಹು ಸಂಖ್ಯಾತರಾಗುತ್ತಾರೆ ಎಂಬ ಕಥನಗಳು ದಿನನಿತ್ಯದ ಕಥನಗಳಾಗಿವೆ.

ವಿಚಿತ್ರವೆಂದರೆ ಇವೆಲ್ಲಾ ನಡೆಯುವುದು ಭಾರತದ ರಾಜಕೀಯ ಪ್ರಜಾಪ್ರಭುತ್ವ ಹಾಗೂ ಜಾತ್ಯತೀತ ಆವರಣದೊಳಗೆ. ಇವತ್ತು ಇವೆರಡೂ ಮೂಲಭೂತ ವಾದದೊಂದಿಗೆ ಮುಖಾಮುಖಿಯಾಗಿವೆ. ಸಂಘರ್ಷವಿರುವುದು ಕೂಡ ಇಲ್ಲೇ. ಇವುಗಳಲ್ಲಿ ಹಿಂದೂ ಮೂಲಭೂತವಾದ ಅತೀ ಪ್ರಬಲವಾಗಿರುವುದರಿಂದ ಸಂಘರ್ಷ ಹಿಂದೂ ಮೂಲಭೂತವಾದ ಮತ್ತು ಭಾರತದ ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ ನಡುವೆ ನಡೆಯುತ್ತಿರುವುದು ಸ್ಪಷ್ಟ. ಅದು ಬಹಳ ಸಲ ವ್ಯಕ್ತವಾಗಿತ್ತು. ಸರಕಾರ ನೀಡಿದ ಜಾಹೀರಾತೊಂದರಲ್ಲಿ ಜಾತ್ಯತೀತತೆ ಮತ್ತು ಸಮಾಜದ ಶಬ್ದಗಳು ಒಮ್ಮೆ ಕಾಣೆಯಾಗಿದ್ದವು. ಹೈದ್ರಾಬಾದ್ ಮತ್ತು ಜೆ.ಎನ್.ಯು.ನಲ್ಲಿ ನಡೆಯುತ್ತಿರುವ ಸಂಘರ್ಷ ಈ ಸಂಘರ್ಷದ ಭಾಗವಷ್ಟೇ. ರಾಜಸ್ಥಾನದಲ್ಲಿ ಉರ್ದು ಲೇಖಕರ ಕಾವ್ಯಗಳನ್ನು ಶಾಲಾ ಪಠ್ಯ ಪುಸ್ತಕಗಳಿಂದ ಕಿತ್ತು ಹಾಕಿದ್ದು ಕೂಡ ಈ ನೀತಿಯ ಭಾಗವಷ್ಟೇ.

ಈ ಸಂಘರ್ಷಗಳ ಅಂತಿಮವೇನು? ಯಾವ ಮೂಲಭೂತವಾದ ಭಾರತಕ್ಕೆ ಹೆಚ್ಚು ಅಪಾಯ? ಇವತ್ತು ಜಾಗತಿಕವಾಗಿ ಇಸ್ಲಾಮಿಕ್/ಮುಸ್ಲಿಂ ಮೂಲಭೂತವಾದ ದೊಡ್ಡ ಸಮಸ್ಯೆಯಾದರೆ, ಅಮೇರಿಕಾದಲ್ಲಿ ಬೆಳೆಯುತ್ತಿರುವ ಮುಸ್ಲಿಂ ವಿರೋಧಿ ಮೂಲಭೂತವಾದವು ಅಷ್ಟೇ ಅಪಾಯ. ಅಮೇರಿಕಾದ ಬಂಡವಾಳಶಾಹಿ ಮತ್ತು ಮೂಲಭೂತವಾದ ಜೊತೆ-ಜೊತೆಯಾದರೆ ಅದು ಅರೆಬರೆ ಧಾರ್ಮಿಕ - ಬಂಡವಾಳಶಾಹಿ ಫ್ಯಾಸಿಸಂಗೆ ಅವಕಾಶ ಮಾಡಿಕೊಡಬಹುದು. ಆದರೆ ಇದೇ ರೀತಿಯ ಪ್ರಕ್ರಿಯೆ ಭಾರತದಲ್ಲಿ ಸಾಧ್ಯವೇ?

•

೧೯೯೦ರ ಅಯೋಧ್ಯಾ ಸಂದರ್ಭದಲ್ಲಿ ಒಂದು ಚರ್ಚೆ ನಡೆದಿತ್ತು. ಅವರ ಪ್ರಕಾರ ಅಯೋಧ್ಯಾ ಘಟನೆ ಭಾರತಕ್ಕೆ "ಸಿಂಡಿಕೇಟೆಡ್ ಫ್ಯಾಸಿಸಂ" - ಸೀಮಿತ

ವ್ಯಕ್ತಿಗಳಿಗೆ ಅವಕಾಶ ಮಾಡಿಕೊಡಬಹುದು. ಅದೇ ಸಂದರ್ಭದಲ್ಲಿ ಮತ್ತೊಂದು ಚರ್ಚೆ ಕೂಡ ಬಂದಿತ್ತು. ಭಾರತದಲ್ಲಿ ಫ್ಯಾಸಿಸಂ ಬರಲಾರದು – ಯಾಕೆಂದರೆ ಭಾರತದಲ್ಲಿರುವ ಸಾವಿರಾರು ಜಾತಿ, ಸಮುದಾಯಗಳ ನಡುವೆ ಫ್ಯಾಸಿಸಂ ಬರಲು ಸಾಧ್ಯವಿಲ್ಲ.

ಉತ್ತರ ಇವೆರಡರ ನಡುವೆ ಇದೆ. ಭಾರತ ಫ್ಯಾಸಿಸ್ಟ್ ದೇಶವಾಗುವುದು ಅಷ್ಟು ಸುಲಭವಲ್ಲ. ಭಾರತದ ಬಂಡವಾಳಶಾಹಿ ಇವತ್ತು ಮೂಲಭೂತವಾದದ ಬೆಳವಣಿಗೆ ಸಹಕಾರ ನೀಡಿರಬಹುದು. ಆದರೆ ಅದಕ್ಕೂ ಕೂಡ ಧರ್ಮಾಧಾರಿತ ರಾಜ್ಯದ ಕುರಿತು, ಫ್ಯಾಸಿಸಂನ ಕುರಿತು ಭೀತಿ ಮತ್ತು ಅಸಹನೆ ಇದೆ. ಅದಕ್ಕೆ ಫ್ಯಾಸಿಸಂ ಮಾಡಿದ ಐತಿಹಾಸಿಕ ಹಾನಿ ಕೂಡ ಗೊತ್ತಿದೆ. ಬಂಡವಾಳವನ್ನು ಹತ್ತಿಕ್ಕುವ ಹೆದರಿಕೆ ಕೂಡ ಇದೆ. ವಿಚಿತ್ರವೆಂದರೆ ಬಂಡವಾಳ ಶಾಹಿ ನಿರ್ಮಿಸುವ ಮಾರುಕಟ್ಟೆಗೆ ಜಾತಿ, ಧರ್ಮ, ಸಮುದಾಯಗಳು ಬೇಕಾಗಿಲ್ಲ. ಅದು ಇಂತಹ ಚಿಂತನೆಗಳಿಂದ ಹೊರತಾಗಿರುತ್ತದೆ.

ವಾಸ್ತವವೆಂದರೆ ಭಾರತದ ಪ್ರಜಾಪ್ರಭುತ್ವದ ಬುನಾದಿ ಬಹಳ ಗಟ್ಟಿಯಾಗಿದೆ ಮತ್ತು ಆಳವಾಗಿದೆ. ಅದನ್ನು ತದ್ವಿರುದ್ಧ ಮಾಡಬೇಕಾದರೆ ಚಾರಿತ್ರಿಕ ಘಟನೆಗಳನ್ನೂ ಅಂಶಗಳನ್ನೂ ಅದು ಪುನರವಲೋಕನ ಮಾಡಬೇಕು ಮತ್ತು ಕಿತ್ತು ಎಸೆಯಬೇಕಾಗುತ್ತದೆ – ಭೂಮಸೂದೆ, ಹಸಿರು ಕ್ರಾಂತಿ, ಮೀಸಲಾತಿ, ಅಧಿಕಾರದ ವಿಕೇಂದ್ರೀಕರಣ, ಮೂಲಭೂತ ಹಕ್ಕುಗಳು, ಸಂವಿಧಾನದ ಪ್ರಸ್ತಾವನೆ ಇತ್ಯಾದಿಗಳನ್ನು. ಇವುಗಳನ್ನು ಪುನರ್ ಪರಿಶೀಲಿಸುವುದು ಅಷ್ಟು ಸುಲಭವಲ್ಲ. ಅದಕ್ಕೆ ಸಾವಿರಾರು ಪ್ರತಿರೋಧಗಳು ಬರುವುದು ಗ್ಯಾರಂಟಿ. ಜಾತ್ಯತೀತತೆ ಕೂಡ ಅಷ್ಟೇ ಗಟ್ಟಿಯಾಗಿದೆ. ಆದರೆ ಇವೆರಡಕ್ಕೆ ಬೆದರಿಕೆ ಬಂದಿರುವುದು ಕೂಡ ಅಷ್ಟೆ ದಿಟ. ನನ್ನ ಭಾರತ ಉದಾರವಾದಿ ಪ್ರಜಾಪ್ರಭುತ್ವದ ಚೌಕಟ್ಟಿನ ನಡುವೆ ಅರೆ-ಬರೆ ಹಿಂದುತ್ವದ ರೂಪಕಗಳನ್ನು ರೂಢಿಸಿದ ದೇಶವಾಗಬಹುದೇ ಹೊರತು ಧರ್ಮಾಧಾರಿತ ದೇಶವಾಗುವುದಿಲ್ಲ, ಫ್ಯಾಸಿಸ್ಟ್ ದೇಶವೂ ಆಗುವುದಿಲ್ಲ..

■

ಇವತ್ತು ಕನ್ನಡ ಸಾಹಿತ್ಯದಲ್ಲಿ ಪ್ರಖ್ಯಾತರಾದ ಅನೇಕ ಲೇಖಕರ ಮೊದಲ ಕೃತಿಗಳನ್ನು ನಾನು ಓದಿದ್ದು 'ಸಂಕ್ರಮಣ'ದಲ್ಲಿ. ಅದರಲ್ಲಿ ಕೆಲವರು 'ಸಂಕ್ರಮಣ'ದ ಹಂಗು ಉಳಿಯದಷ್ಟು ಬೆಳೆದಿದ್ದಾರೆ. ಅದರ ಕೀರ್ತಿಯೂ 'ಸಂಕ್ರಮಣ'ಕ್ಕೆ ಸಲ್ಲಬೇಕು.

– ಜಿ. ಎಸ್. ಅಮೂರ

ಭಾರತದ ಸಂವಿಧಾನ : ಆಶಯಗಳು – ಸವಾಲುಗಳು

● ಬಿ. ಎಲ್. ಶಂಕರ

ಸಂವಿಧಾನ ಯಾಕೆ ಬೇಕು? ಯಾವುದಾದರೊಂದು ದೇಶಕ್ಕೆ ಅಥವಾ ಯಾವುದಾದರೊಂದು ವ್ಯವಸ್ಥೆಗೆ ಸಂವಿಧಾನ ಏಕೆ ಬೇಕು ಎಂಬುದು ಮೂಲಭೂತವಾದ ಪ್ರಶ್ನೆ. ಈ ಮನುಕುಲ ಹುಟ್ಟಿದಾಗಿನಿಂದ ಇಲ್ಲಿಯವರೆಗೆ ಅದು ತನಗೆ ಸ್ವಾತಂತ್ರ್ಯ ಬೇಕು ಸ್ಥಿರತೆ ಬೇಕು ಅಂಥ ಅನ್ವೇಷಣೆಯಲ್ಲಿ ತೊಡಗಿಕೊಂಡಾಗ ಆಳುವವರು ಮತ್ತು ಪ್ರಜೆಗಳ ನಡುವೆ ನಡೆದಂತಹ ಒಂದು ಸಂಧಾನವೇ ಅದು ಸಂವಿಧಾನ. ಪ್ರಜೆಗಳಿಗೆ ಯಾವ ರೀತಿಯ ಒಂದು ವ್ಯವಸ್ಥೆ ಇರಬೇಕು? ಯಾವ ರೀತಿಯ ಒಂದು ಸ್ಥಿರತೆ ಇರಬೇಕು? ಯಾವ ರೀತಿಯ ಸ್ವಾತಂತ್ರ್ಯ ಇರಬೇಕು? ಮತ್ತು ಆಳುವವರಿಗೆ ಯಾವ ರೀತಿಯ ಕಟ್ಟುಪಾಡುಗಳಿರಬೇಕು? ಯಾವ ಚೌಕಟ್ಟಿನೊಳಗೆ ಅವರು ಆಡಳಿತ ನಿರ್ವಹಿಸಬೇಕು? ಎನ್ನುವ ವಿಚಾರದಲ್ಲಿ ಒಂದು ಸಂಧಾನ ಅದೇ ಒಂದು ಸಂವಿಧಾನ. ಲಿಖಿತವಾಗಿರುವುವು ಇವೆ. ಅಲಿಖಿತವಾಗಿರುವಂತಹವು ಅನೇಕ ಸಂವಿಧಾನಗಳೂ ಇವೆ. ಪ್ರಪಂಚದ ಅತ್ಯಂತ ಸುದೀರ್ಘವಾದ ಸಂವಿಧಾನಗಳಲ್ಲಿ ನಮ್ಮದು ಕೂಡ ಒಂದು. ಬಹಳ ಹೆಮ್ಮೆಯಿಂದ ಇದಕ್ಕೆ ಸರಿಸಾಟಿಯಾದಂತಹ ಇನ್ನೊಂದು Perfect ಸಂವಿಧಾನವೇ ಇಲ್ಲ ಎಂದು ಹೇಳುವವರೂ ಇದ್ದಾರೆ. ಅನೇಕ ಲೋಪಗಳಿವೆ, ಕಾಲಾನುಕಾಲಕ್ಕೆ ಇದಕ್ಕೆ ಬದಲಾವಣೆಯಾಗಬೇಕು ಅಂತ ವಾದ ಮಾಡುವವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸಂವಿಧಾನದ ವಿಚಾರದಲ್ಲಿ ರಾಜ್ಯಶಾಸ್ತ್ರದ ಪಿತಾಮಹ ಎಂತಲೇ ಹೇಳುವಂತಹ ಅರಿಸ್ಟಾಟಲ್‌ರವರು ಒಂದು ಮಾತನ್ನು ಹೇಳುತ್ತಾರೆ :– No constitution in the world is either absolutely good or bad but is only comparatively good or bad. ಹಾಗೇ ಇದು ಸಂಪೂರ್ಣವಾಗಿ ಪರಿಪಕ್ವವಾಗಿರುವಂತಹ ಸಂವಿಧಾನ ನಮ್ಮ ದೇಶದ್ದು ಎಂದು ಹೇಳುವುದಕ್ಕೆ ಆಗುವುದಿಲ್ಲ ಅಥವಾ ಪೂರ ಕೆಟ್ಟದ್ದು ಎಂದು ಹೇಳುವುದಕ್ಕೆ ಆಗುವುದಿಲ್ಲ. ಅನೇಕ ದೇಶಗಳಿಗೆ ಹೋಲಿಕೆ ಮಾಡಿ ನೋಡಿದಾಗ ಅನೇಕ ಒಳ್ಳೆಯ ಅಂಶಗಳೂ ಕೂಡಾ ಇವೆ. ನ್ಯೂನ್ಯತೆಗಳೂ ಕೂಡ ಸಾಕಷ್ಟು ಈ ಸಂವಿಧಾನದಲ್ಲಿ ಇವೆ. ಅಷ್ಟೇ ಸತ್ಯವಾಗಿರುವಂತಹ ಮಾತು.

ಅನೇಕ ಒಳ್ಳೆಯ ಅಂಶಗಳೆಂದರೆ ನಾವು ಸಾಮಾನ್ಯವಾಗಿ ಬ್ರಿಟನ್ನಿನ ವೆಸ್ಟಮಿನಿಸ್ಟರ್ ಪದ್ಧತಿಯನ್ನು ಒಪ್ಪಿಕೊಂಡವರು. ಬ್ರಿಟನ್ನಿನಲ್ಲಿ ಕೂಡ ಸಂವಿಧಾನ ರಚನೆಯಾಗಿ ಸುಮಾರು ೧೧೦ ವರ್ಷಗಳ ಕಾಲ ಮಹಿಳೆಯರಿಗೆ ಮತದಾನದ ಹಕ್ಕನ್ನು

ಕೊಟ್ಟಿರಲಿಲ್ಲ. ೧೧೦ ವರ್ಷಗಳ ನಂತರ ಅಲ್ಲಿಯ ಮಹಿಳೆಯರಿಗೆ ಹಕ್ಕು ಬಂದಿತು. ಅದೇ ರೀತಿ ಇಡೀ ಪ್ರಪಂಚದಲ್ಲಿ ಅತ್ಯಂತ ಪರೀಕ್ಷೆಗೊಳಪಟ್ಟಂತಹ ಅಮೇರಿಕಾ ಸಂವಿಧಾನವೂ ಕೂಡಾ ತಾನು ರಚನೆಗೊಂಡ, ತಾನು ಸ್ವೀಕಾರಗೊಂಡ ೧೩೧ ವರ್ಷಗಳ ಕಾಲ ಮಹಿಳೆಯರಿಗೆ ಮತದಾನದ ಹಕ್ಕನ್ನು ಕೊಟ್ಟಿರಲಿಲ್ಲ. ಅವಕ್ಕೆ ಹೋಲಿಕೆ ಮಾಡಿನೋಡಿದಾಗ ಕೇವಲ ೫–೬ ದಶಕಗಳನ್ನು ಕಂಡಿರುವಂತಹ ಭಾರತದ ಸಂವಿಧಾನ ಅದು ಅಂಗೀಕಾರಗೊಂಡಂತಹ ಮೊದಲನೇ ದಿನದಿಂದಲೇ ಮಹಾರಾಜನಿಗೂ ಒಂದೇ ಓಟು, ಸಾಮಾನ್ಯ ಕೂಲಿಕಾರನಿಗೂ ಒಂದೇ ಓಟು, ಸಾಮಾನ್ಯ ಪುರುಷರಾಗಿರಲಿ ಅಥವಾ ಒಬ್ಬ ಮಹಿಳೆಯರಾಗಿರಲಿ ಅವರಿಗೆ ಸಮಾನವಾದ ಮತದಾನದ ಹಕ್ಕನ್ನು ಕೊಟ್ಟಂತಹ ಅಪರೂಪದ ನಿರ್ಧಾರ ಆಗಲಿಕ್ಕೆ ಬಹುತೇಕ ಕಾರಣ ಡಾ|| ಬಾಬಾಸಾಹೇಬ್ ಅಂಬೇಡ್ಕರ್‌ರವರಂತಹವರು ಆ ಸಂವಿಧಾನ ಸಭೆಯ ಅಧ್ಯಕ್ಷರಾಗಿರುವಂತಹದ್ದು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಸಹಾತು ಆಳ್ವಿಕೆಯ ಅನಾಹುತಗಳನ್ನು ಅನುಭವಿಸಿದಂತಹವರು ಸಂವಿಧಾನ ರಚನೆಯ ಸಭೆಯಲ್ಲಿ ಇದ್ದದ್ದು.

ಅವರು ಎಲ್ಲಾ ಭಿನ್ನಾಭಿಪ್ರಾಯಗಳ ನಡುವೆ ಕೂಡಾ ಸಾಕಷ್ಟು ಸಹಮತವನ್ನು ಮೂಡಿಸುವಂತಹ ಪ್ರಯತ್ನವನ್ನು ಮಾಡಿದರು. ಈ ಸಂವಿಧಾನವನ್ನು ರಚನೆ ಮಾಡಿದ ನಂತರ ೧೦೦ಕ್ಕಿಂತ ಹೆಚ್ಚು ತಿದ್ದುಪಡಿಗಳನ್ನು ಮಾಡಿದ್ದೇವೆ. ಅನೇಕ ತಿದ್ದುಪಡಿಗಳು ಅನುಭವದ ಆಧಾರದ ಮೇಲೆ ಬಂದವುಗಳು; ಅನೇಕ ತಿದ್ದುಪಡಿಗಳು ಆ ಸಂದರ್ಭದ ಅನುಕೂಲಕ್ಕೆ ತಕ್ಕಂತೆ ಆಗಿರುವಂತಹ ತಿದ್ದುಪಡಿಗಳು. ಆ ಸಂದರ್ಭದಲ್ಲಿ ಬಂದಂತಹ ಕ್ಲಿಷ್ಟಕರವಾದಂತಹ ಸನ್ನಿವೇಶಗಳಲ್ಲಿ ಪಾರಾಗಲಿಕ್ಕೆ ಅವತ್ತಿನ ಆಡಳಿತ ಪಕ್ಷಗಳು ತಂದಂತಹ ತಿದ್ದುಪಡಿಗಳೂ ಕೂಡಾ ಇವೆ. ಬಹುಮತದ ಆಧಾರದ ಮೇಲೆ ತಂದಂತಹ ತಿದ್ದುಪಡಿಗಳೂ ಕೂಡಾ ಇವೆ. ಷಾಬಾನೂ ಕೇಸು ಇಂತಹ ಅನೇಕ ತಿದ್ದುಪಡಿಗಳು ಅದರೊಳಗೆ ಸೇರುವಂತಹ ಸಂದರ್ಭಗಳು ಇವೆ.

We the people of India having solemly Resolved to constitute India into a souveregn Socialist Secular Democratic Republic.

(ಅದರಲ್ಲಿ ಬರುವಂತಹ ಮುಖ್ಯವಾದಂತಹ ಪದ. Socialist ಮತ್ತು Secular ಎಂಬ ಎರಡು ಪದಗಳು ಸೇರಿದ್ದು ೧೯೭೬ರಲ್ಲಿ.)

And to secure to all its citizens justice - Social Economical & Political, Liberty of thought expression Belief faith & worship, equality of status & opportunity & to promote among them all Fraternity assuring the Dignity of the Individual & unity & integrity of the Nation. ಇದಿಷ್ಟು ನಮ್ಮ ಸಂವಿಧಾನದ ಪ್ರಿಯಾಂಬಲ್‌ನಲ್ಲಿಯ ಮೂಲವಾದಂತಹ ಆಶಯಗಳು.

ಇದರಲ್ಲಿ ಸಾರ್ವಭೌಮ ರಾಷ್ಟ್ರ ಸಾವರಿನ್ ರಾಷ್ಟ್ರ ಎಂದು ಹೇಳಲಿಕ್ಕೆ ಮುಖ್ಯವಾದ ಕಾರಣ : ವಸಹಾತುಗಳಿಂದ ಅಥವಾ ಯಾವುದೇ ಬಾಹ್ಯ ನಿಯಂತ್ರಣಕ್ಕೆ ಒಳಪಡದಂತಹ ಒಂದು ದೇಶ ಭಾರತವಾಗಿರಬೇಕು. ತನ್ನದೇ ಆದಂತಹ ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳುವಂತಹ ಶಕ್ತಿ ಮತ್ತು ಸಾಮರ್ಥ್ಯ ಅದಕ್ಕೆ ಇರಬೇಕು ಮತ್ತು ಸಮಸ್ತ ಭಾರತದ ಜನರೇ ಅದರ ಸಾರ್ವಭೌಮರಾಗಿರಬೇಕು ಮತ್ತು ಅದರ ವಾರಸುದಾರರಾಗಿರಬೇಕು ಎಂಬುದು ಮೂಲಭೂತವಾದಂತಹ ಆಶಯ.

ಸಮಾಜವಾದಿ ಎನ್ನುವ ಪದವನ್ನು ೧೯೭೬ರಲ್ಲಿ ಸೇರಿಸುವಂತಹ ಸಂದರ್ಭದಲ್ಲಿ ಕೂಡಾ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮಾನತೆಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲರಿಗೂ ಕೂಡಾ ಈ ಕ್ಷೇತ್ರಗಳಲ್ಲಿ ನ್ಯಾಯ ಒದಗಿಸಿಕೊಡುವಂತಹ ಸಮಾಜವಾದ ಇರಬೇಕು ಎನ್ನುವದು. ಸೆಕ್ಯುಲರಿಸಂ ವಿಷಯ ಬಹಳಷ್ಟು ಚರ್ಚೆಗೆ ಒಳಪಡುವಂತಹ ವಿಷಯ. ಸೆಕ್ಯುಲರಿಸಂ ಎಂದರೆ ಏನು? ಹೇಗೆ? ಎಂಬ ವಿಚಾರದಲ್ಲಿ ಅದಕ್ಕೆ ಸರಿಯಾದ ಕನ್ನಡದ ಪದ ನನಗೆ ಗೊತ್ತಿಲ್ಲ. ಅನೇಕ ಜನ ಅದನ್ನು ಧರ್ಮನಿರಪೇಕ್ಷ, ಜಾತ್ಯತೀತ, ಲೌಕಿಕವಾದ ಅಂತಾ ಹೇಳುವವರೂ ಇದ್ದಾರೆ. ಸೆಕ್ಯುಲರಿಸಂ ಎಂಬ ಪದ ಯಾವುದೇ ಭಾಷೆಯ ಪದವಾಗುವಷ್ಟು ಬಳಕೆಯಲ್ಲಿದೆ. ಅದರ ಅರ್ಥ ಎಂದರೆ, Liberty of thought expression belief faith & worship. ಯಾರಾದರೂ ಕೂಡಾ ಯಾವುದೇ ರೀತಿಯ ಜೀವನಪದ್ಧತಿಯನ್ನು ಆರಿಸಿಕೊಳ್ಳಬಹುದು, ಯಾವುದೇ ರೀತಿಯ ನಂಬಿಕೆಗಳನ್ನು ಬೇಕಾದರೂ ಇಟ್ಟುಕೊಳ್ಳಬಹುದು, ಒಂದು ವ್ಯಕ್ತಿಗತ ಬದುಕಿನಲ್ಲಿರಬಹುದು ಅಥವಾ ಅವರ ಆಧ್ಯಾತ್ಮಿಕ, ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೇ ಇರಬಹುದು. ಇವುಗಳನ್ನು ರಕ್ಷಿಸುವಂತಹ ಕೆಲಸಗಳನ್ನು ಸಂವಿಧಾನ ಮಾಡುತ್ತದೆ. ಅವರಿಗೆ ವೈಯಕ್ತಿಕವಾದಂತಹ ನಂಬಿಕೆಗಳಿಗೆ ಯಾರೂ ಅಡ್ಡಬಾರದೇ ಇರುವಂತಹ ರಕ್ಷಣೆ ಕೊಡುವಂತಹ ಕೆಲಸ ಮಾಡುತ್ತದೆ ಎಂಬುದೇ ಸೆಕ್ಯುಲರಿಸಂ.

ಇನ್ನು ಡೆಮಾಕ್ರಸಿ ವಿಚಾರದಲ್ಲಿ ಇಲ್ಲಿ ಅಧ್ಯಕ್ಷೀಯ ಆಡಳಿತ ಪದ್ಧತಿಯಿರಬೇಕೋ, ಸಂಸದೀಯ ಪ್ರಜಾಪ್ರಭುತ್ವ ಇರಬೇಕೋ ಎನ್ನುವ ಬಹಳ ದೊಡ್ಡ ವಾದ ನಡೆದಿದೆ. ಅಂತಿಮವಾಗಿ ಸಂಸದೀಯ ಪ್ರಜಾಪ್ರಭುತ್ವವನ್ನು ನಾವು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಆ ತೀರ್ಮಾನಕ್ಕೆ ಕಾರಣವಾದಂತಹ ಅಂಶವೆಂದರೆ: ಅಧ್ಯಕ್ಷೀಯ ಪದ್ಧತಿಯಲ್ಲಿ ಸ್ಥಿರತೆ ಇರಬಹುದು ಆದರೆ ಸ್ಥಿರತೆ ಜೊತೆಗೆ ಸರ್ವಾಧಿಕಾರವೂ ಕೂಡಾ ಬರುವ ಸಂದರ್ಭಗಳಿರುತ್ತವೆ. ಆದರೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಅಸ್ಥಿರತೆ ಕಾಡಿದರೂ ಕೂಡಾ ಇಲ್ಲಿರುವಂತಹ ವೈವಿಧ್ಯತೆಯನ್ನು ಪ್ರತಿನಿಧಿಸಲಿಕ್ಕೆ ಅದಕ್ಕಿಂತ ಸೂಕ್ತವಾದ ಮತ್ತೊಂದು ಪದ್ಧತಿಯಿಲ್ಲ. ನಮ್ಮ ಆರು ದಶಕಗಳ ಅನುಭವದಲ್ಲಿ ಹೇಳುವುದಾದರೆ ಅದಕ್ಕೆ ಸೂಕ್ತವಾದಂತಹ ಪರ್ಯಾಯ ಇಲ್ಲದೇ ಇರುವಂತಹ ಕಾಲದಲ್ಲಿ ಇದ್ದಿದ್ದರಲ್ಲಿ ಪರವಾಗಿಲ್ಲ ಅಂತ ಅದನ್ನೇ

ಒಪ್ಪಿಕೊಳ್ಳಬೇಕಾದಂತಹ ಸ್ಥಿತಿಯಲ್ಲಿ ನಾವು ಇದ್ದೇವೆ. ಅದು ಸಹಜ. ಈ ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡುತ್ತಿರುವಾಗ ಬಹುತೇಕ ಕೊನೆಯ ಹಂತದಲ್ಲಿ ಜವಹರಲಾಲ್ ನೆಹರುರವರು ಒಂದು ಮಾತನ್ನಾಡುತ್ತಾರೆ : "ಈ ಸಂವಿಧಾನವು ನಮ್ಮ ಕಾಲಕ್ಕೆ ಚಿಂತನೆಗೆ ಸರಿ ಎನಿಸಬಹುದು. ಆದರೆ ಎಲ್ಲಾ ಕಾಲಕ್ಕೂ ಇದೇ ಸರಿ ಎಂದು ಹೇಳುವಂತಿಲ್ಲ. ಸಮಯಕ್ಕೆ ಸರಿಯಾಗಿ ಬಾಗುವಂತಿರಬೇಕು. ಸಂವಿಧಾನ ಎಂದರೆ Flexible ಆಗಿರಬೇಕು." ೫೦ರ ದಶಕದ ಪೂರ್ವದಲ್ಲಿ ಆ ಸಂದರ್ಭಕ್ಕೆ ಅದು ಸರಿಯಾಗಿತ್ತು. ಆದಾದ ನಂತರ ತುರ್ತು ಪರಿಸ್ಥಿತಿ ಬಂತು. ತುರ್ತು ಪರಿಸ್ಥಿತಿ ಬಂದ ನಂತರ ಕೇಶವಾನಂದ ಭಾರತೀಯವರ ಕೇಸಾಯಿತು. ಸುಪ್ರೀಂ ಕೋರ್ಟಿನವರು ಪ್ರಪ್ರಥಮ ಬಾರಿಗೆ ಸಂವಿಧಾನದ ಮೂಲಭೂತ ಅಂಶಗಳಾವುವು Basic Features ಯಾವುದು ಎಂಬುದನ್ನು ವ್ಯಾಖ್ಯಾನ ಮಾಡಿ ಇದನ್ನು ಯಾವುದೇ ಕಾರಣಕ್ಕೂ ಸಂಸತ್ತು ತನ್ನ ಬಹುಮತ ಬಲದಿಂದ ಬದಲಾಯಿಸುವಂತಿಲ್ಲ ಎನ್ನುವ ಮಾತನ್ನು ಹೇಳಿರುವಂತಹದ್ದು ಇತಿಹಾಸವು. ಇದರ ಜೊತೆಗೆ ಇದೊಂದು ಗಣರಾಜ್ಯವೂ ಕೂಡ ಆಗಿರಬೇಕು. ಇಲ್ಲಿ ಪ್ರಭುತ್ವದ ಮುಖ್ಯಸ್ಥ ಜನರಿಂದ ಚುನಾಯಿಸ ಲ್ಪಟ್ಟಿರುವವನಾಗಿರಬೇಕು. ಈ ಫೆಡರಲ್ ಸಿಸ್ಟಮ್ ಇಲ್ಲಿರಬೇಕು. ಏಕೆಂದರೆ ಇಲ್ಲಿರುವಂತಹ ರಾಜ್ಯಗಳಲ್ಲಿ ಈಗ ಭಾಷೆಗಳು ಮತ್ತೊಂದು ಹಲವಾರು ಸಮಸ್ಯೆಗಳು ಇವೆ. ಇಷ್ಟೆಲ್ಲಾ ಮಾಡಲು ತೆಗೆದುಕೊಂಡ ಸಂದರ್ಭ ೨ ವರ್ಷ ೧೧ ತಿಂಗಳು ೧೮ ದಿವಸಗಳು. ೧೬೬ ಸಭೆಗಳನ್ನು ಅದು ಮಾಡಿ ಕೊನೆಗೆ ನವೆಂಬರ್ ೨೬-೧೯೪೯ರಲ್ಲಿ ಈಗಿರುವಂತಹ ಸಂವಿಧಾನವನ್ನು ಕೊಟ್ಟಿದೆ. ಈ ಪಾರ್ಲಿಮೆಂಟರಿ ಸಿಸ್ಟಮ್ ಆಫ್ ಡೆಮಾಕ್ರಸಿ ನಾವು ಆಯ್ಕೆ ಮಾಡಿಕೊಂಡ ನಂತರ ಕೂಡಾ ಡಾ. ಬಿ. ಆರ್. ಅಂಬೇಡ್ಕರ್‌ರವರು ತಮ್ಮ ಕೊನೆಯ ಭಾಷಣದಲ್ಲಿ ಒಂದು ಮಾತನ್ನು ಹೇಳುತ್ತಾರೆ. (ಸಂವಿಧಾನ ಸ್ವೀಕಾರ ಆಗುವುದಕ್ಕೆ ಮುಂಚೆ) ಇದು ಸವಾಲುಗಳಿಗೆ ಸಂಬಂಧಪಟ್ಟ ಒಂದು ನನ್ನ ಪೀಠಿಕೆ.

Political Democracy cannot last unless there lies at the base of it social democracy. What does social democracy mean? It means a way of life which recognises Liberty equality & fraternity as principles of life. ಸೋಶಿಯಲ್ ಡೆಮಾಕ್ರಸಿ ಇಲ್ಲದೇ Liberty equality & faternity as principles ಜೀವನದ ಮೂಲಭೂತ ತತ್ವಗಳಾಗಿ ನಿಲ್ಲದೇ ಹೋದರೆ ಈ ಪೊಲಿಟಿಕಲ್ ಡೆಮಾಕ್ರಸಿಗೆ ಯಾವುದೇ ಅರ್ಥವಿರುವುದಿಲ್ಲ.

ಡಾ॥ ಅಂಬೇಡ್ಕರ್‌ರವರು ಮುನ್ನೆಚ್ಚರಿಕೆಯ ರೂಪದಲ್ಲಿ ಹೇಳುತ್ತಾರೆ : "ಈ ಸಂವಿಧಾನ ಎಷ್ಟೇ ಒಳ್ಳೆಯದಿರಬಹುದು; ಅಲ್ಲಿ ಬಳಸಿರುವ ಪದಗಳೂ ಕೂಡ. ಆದರೆ ನಾಳೆ ಈ ಸಂವಿಧಾನವು ರಚನೆಯಾದಂತಹ ಮೂಲ ಉದ್ದೇಶಗಳಿಗೆ

ಅನುಗುಣವಾಗಿ ಕೆಲಸ ಮಾಡದೇ ಹೋದರೆ ಸಂವಿಧಾನವನ್ನು ದೂರ ಬೇಡಿರಿ. ಸಂವಿಧಾನವನ್ನು ನಿರ್ವಹಿಸುವುದಕ್ಕೆ ನೀವು ಆಯ್ಕೆ ಮಾಡಿಕೊಂಡಿರುವಂತಹ ಜನ ವಹಿಸುವಂತಹ ಪಾತ್ರವೂ ಅದಕ್ಕೆ ಮುಖ್ಯ ಕಾರಣವಾಗಿರುತ್ತದೆ."

•

ಇವತ್ತು ನಮ್ಮ ಸಂವಿಧಾನವು ಎದುರಿಸುತ್ತಿರುವಂತಹ ಸವಾಲುಗಳನ್ನು ಗಮನಿಸುವ ಸಂದರ್ಭದಲ್ಲಿ ಏಕೆ ಹೀಗಾಯಿತು? ಅನ್ನುವ ಪ್ರಶ್ನೆ ನಮ್ಮ ಮುಂದೆ ಸಹಜವಾಗಿ ಎದ್ದು ನಿಲ್ಲುತ್ತದೆ. ಸಂವಿಧಾನದ ಆಶಯಗಳ ಅನುಗುಣವಾಗಿ Direct Principles of State Policy ನಾವು ಜಾರಿ ಮಾಡಲು ಆಗದೇ ಹೋದರೆ, ಇವತ್ತು ಇಲ್ಲಿ ಬದುಕುವಂತಹ ಅಥವಾ ಅಭಿವ್ಯಕ್ತಿ ಮಾಡುವಂತಹ ವಾತಾವರಣ ಇಲ್ಲದೇ ಹೋದರೆ, ಅದಕ್ಕೆ ಕಾರಣವಾದ ಅಂಶಗಳು ಯಾವುವು? ಎಂಬ ಪ್ರಶ್ನೆ ಇದೆ.

ಮುಖ್ಯವಾಗಿ **ನ್ಯಾಯಾಂಗದ ಕ್ರಿಯಾಶೀಲತೆ, ಮತ್ತು ಶಾಸಕಾಂಗದ ಅಧಿಕಾರ.** ಇವತ್ತು ಸಂವಿಧಾನ ಎದುರಿಸುತ್ತಿರುವಂತಹ ಒಂದು ಸವಾಲು. ಅನೇಕ ಶಾಸನಸಭೆಗಳು, ಸಂಸತ್ತು ಅಂಗೀಕರಿಸಿರುವಂತಹ ಕಾನೂನುಗಳನ್ನು, ಬಹಳ ಚರ್ಚೆ ಮಾಡಿ, ಅಥವಾ ಚರ್ಚೆ ಮಾಡದೇನೇ ಯಾವುದೋ ಒಂದು ರೀತಿಯಲ್ಲಿ ಕಾನೂನು ಬದ್ಧವಾಗಿ ಅಂಗೀಕರಿಸಿದ ಕಾನೂನುಗಳನ್ನು ನ್ಯಾಯಾಂಗ ವಿಮರ್ಶೆಪಡಿಸಿಕೊಟ್ಟಂತಹ ಸಂದರ್ಭ. ನ್ಯಾಶನಲ್ ಜ್ಯೂಡಿಶಿಯಲ್ ಕಮೀಷನ್ ವಿಚಾರದಲ್ಲಿ ಸಂಸತ್ತು ಒಂದು ನಿರ್ಧಾರ ಮಾಡಿತು. ಅದು ಬಹುತೇಕ ಯಾವುದೇ ಭಿನ್ನಾಭಿಪ್ರಾಯವಿಲ್ಲದಂತಹ ರೀತಿಯಲ್ಲಿ ರಚನೆಯಾದಂತಹ ಒಂದು ಕಾನೂನು. ನ್ಯಾಶನಲ್ ಜ್ಯೂಡಿಶಿಯಲ್ ಅಕೌಂಟಬಲಿಟಿ ಕೌನ್ಸಿಲ್ – ಅಂತ ಮಾಡಿತು. ಜಡ್ಜಗಳನ್ನು ಯಾವ ರೀತಿ ಅಪಾಯಿಂಟ್ ಮಾಡಬೇಕು? ಯಾವ ರೀತಿ ಟ್ರಾನ್ಸ್‌ಫರ್ ಮಾಡಬೇಕು? ಯಾವ ರೀತಿ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು? ಎನ್ನುವ ವಿಚಾರದಲ್ಲಿ ಕಾರ್ಯಾಂಗ ಮತ್ತು ನ್ಯಾಯಾಂಗ ಎರಡೂ ಪಾತ್ರ ವಹಿಸುವಂತಹ ರೀತಿಯಲ್ಲಿ ಒಂದು ಕಾನೂನಾಯಿತು. ಅದರ ಸಂವಿಧಾನ ಬದ್ಧತೆ ಪ್ರಶ್ನೆ ಮಾಡಲ್ಪಟ್ಟಿತು. ಅದು ಅಸಿಂಧು ಎಂದು ಈಗಾಗಲೇ ಸುಪ್ರೀಂಕೋರ್ಟ್ ಹೇಳಿರುವುದನ್ನು ತಾವು ಗಮನಿಸಿದ್ದೀರಿ. ಅದರ ಪ್ರಕಾರ ಮತ್ತೆ ಕೋಲೋಜಿಯಮ್ ಸಿಸ್ಟಮ್ ಬರಬೇಕು. ನ್ಯಾಯಾಧೀಶರನ್ನು ಅಪಾಯಿಂಟ್ ಮಾಡಲು ಮತ್ತು ನ್ಯಾಯಾಧೀಶರನ್ನು ಟ್ರಾನ್ಸ್‌ಫರ್ ಮಾಡಲಿಕ್ಕೆ. ಇದು ಶಾಸಕಾಂಗಕ್ಕೂ ಮತ್ತು ನ್ಯಾಯಂಗಕ್ಕೂ ನಡೆದಂತಹ ಇತ್ತೀಚಿನ ಒಂದು ಸಂಘರ್ಷದ ಸ್ವರೂಪ ಪಡೆದಂತಹ ವಿಷಯ. ಇದರಲ್ಲಿ ಪಕ್ಷ ರಾಜಕಾರಣವೇನೂ ಇರಲಿಲ್ಲ. ಆದರೆ ಕಾರ್ಯಾಂಗದ ಜವಾಬ್ದಾರಿಯೇನು? ಮತ್ತು ಶಾಸಕಾಂಗ ಮತ್ತು ನ್ಯಾಯಾಂಗದ ಜವಾಬ್ದಾರಿಯೇನು? ನ್ಯಾಯಾಂಗದ ಪರಿಮಿತಿಗಳೇನು? ಎಂಬ

ಪ್ರಶ್ನೆ ಬಂದಿತು. ಇದನ್ನು ಮಾಡುವಂತಹ ಸಂದರ್ಭದಲ್ಲಿ ಬಹುತೇಕ ನ್ಯಾಯಾಧೀಶರಲ್ಲಿ ಇದ್ದಂತಹ ಒಂದು ಅಭಿಪ್ರಾಯ : ಹಿಂದೆ ಇದೇ ರೀತಿ ಇದ್ದಂತಹ ಪರಿಸ್ಥಿತಿಯ ಸಂದರ್ಭದಲ್ಲಿ ಸೀನಿಯಾರಿಟಿಗಳನ್ನೆಲ್ಲಾ ಸುಪರ್ ಸೀಡ್ ಮಾಡಿ ಅಥವಾ ತಮ್ಮ ವಿರುದ್ಧ ತೀರ್ಪುಗಳನ್ನು ಕೊಟ್ಟಂತಹ ನ್ಯಾಯಾಧೀಶರನ್ನು ಬೇರೆ ನ್ಯಾಯಾಲಯಗಳಿಗೆ ವರ್ಗಾವಣೆ ಮಾಡಿದರು. ತಮಗೆ ಬೇಕಾದ ನ್ಯಾಯಾಧೀಶರನ್ನು ಮುಖ್ಯ ನ್ಯಾಯಾಧೀಶರನ್ನಾಗಿ ಮಾಡಿದರು. ಆದರೆ ಅದೇ ರೀತಿ ಇದೇ ಕೊಲಜಿಯಂ ಸಿಸ್ಟಮ್‌ನಲ್ಲಿ ಕೂಡಾ ಆಗಿರುವಂತಹ ಅನಾಹುತಗಳೇನೂ ಕಡಿಮೆ ಎಂದೇನೂ ಭಾವಿಸಲು ಸಾಧ್ಯವಿಲ್ಲ. ಶಾಸಕಾಂಗದ ಅಧಿಕಾರ ಮತ್ತು ನ್ಯಾಯಾಂಗದ ಕ್ರಿಯಾಶೀಲತೆಯ ವಿಚಾರ ಒಂದು ಪ್ರಮುಖವಾಗಿ ಚರ್ಚಿಸಲ್ಪಡುವಂತಹ ವಿಚಾರ. ಇದಕ್ಕೆ ಹೀಗೆ ಉತ್ತರ ಇಂದು ಹೇಳಲು ಅಂತಿಮವಾಗಿ ಸಾಧ್ಯವಿಲ್ಲ. ಅದಕ್ಕೆ ನನ್ನ ಅನುಭವ ಸಾಲದು. ಚುನಾಯಿತ ಪ್ರತಿನಿಧಿಗಳು ರೂಪಿಸುವ ಶಾಸನಗಳು ಎಷ್ಟರಮಟ್ಟಿಗೆ ಜನರ ಆಶೋತ್ತರಗಳನ್ನು ಪ್ರತಿನಿಧಿಸುತ್ತವೆ ಎನ್ನುವುದೂ ಕೂಡಾ ಇವತ್ತು ಬಹಳ ಪ್ರಸ್ತುತವಾದಂತಹ ವಿಚಾರ. ಅಥವಾ ಇಷ್ಟೊಂದು ಕಾನೂನುಗಳು ಈ ದೇಶದ ಒಂದು ವ್ಯವಸ್ಥೆಯನ್ನು ನಿರ್ವಹಣೆ ಮಾಡಲಿಕ್ಕೆ ಆವಶ್ಯಕವೆ? ಇಷ್ಟೊಂದು ದೊಡ್ಡದಾದಂತಹ ಬ್ಯೂರೋಕ್ರೆಸಿ (ಅಧಿಕಾರಶಾಹಿ) ಇಷ್ಟೊಂದು ಕಾನೂನುಗಳು ಒಂದು ಸರಳವಾಗಿರುವಂತಹ ಮಾನವ ಬದುಕನ್ನು ಸರಿದಾರಿಯಲ್ಲಿಡಲಿಕ್ಕೆ ನ್ಯಾಯಯುತವಾಗಿ ನಡೆಯಲು ಬೇಕಾ? ನಮ್ಮ ವ್ಯವಸ್ಥೆಯ ಶೇಕಡಾ ೭೦ ರಷ್ಟು ಭಾಗವನ್ನು ಇಂಥ ವ್ಯವಸ್ಥೆಯ ನಿರ್ವಹಣೆಗೆ ಖರ್ಚುಮಾಡಿ, ೩೦ ಭಾಗವನ್ನು ಅಭಿವೃದ್ಧಿಗೆ ಖರ್ಚುಮಾಡುವಂತಹ ಈ ಸ್ಥಿತಿ ಅವಶ್ಯಕತೆ ಇತ್ತಾ?

ಜವಹರಲಾಲ್ ನೆಹರೂರವರು ಒಂದು ಸಂದರ್ಭದಲ್ಲಿ ಹೇಳಿದ್ದಾರೆ :

'ಯಾವ ಒಂದು ಸರ್ಕಾರ, ಜನರ ಚಿಂತನೆಗೆ ಜನರ ಯೋಚನೆಯ ಲಹರಿಯಲ್ಲಿ ಒಂದು ಹಂತದಲ್ಲಿ ಕೆಲಸ ಮಾಡುವುದಿಲ್ಲವೋ, ಅದು ಬಹಳ ಜನಪ್ರಿಯ ಸರ್ಕಾರವಾಗಲು ಸಾಧ್ಯವಿಲ್ಲ. ಜನರ ಚಿಂತನೆಗೂ ಸರ್ಕಾರದ ಕಾರ್ಯನಿರ್ವಹಣೆಗೂ ಒಂದು ತಾಳಮೇಳವಿಲ್ಲದೇ ಹೋದರೆ ಜನ ಪರವಾಗಿರುವ ಸರ್ಕಾರವಾಗಲು ಸಾಧ್ಯವೇ ಇಲ್ಲ'

ಹಾಗಾಗಿ ನಾವು ರಚನೆ ಮಾಡುವಂತಹ ಬಹುತೇಕ ಕಾನೂನುಗಳು ಯಾವುದೇ ಒಂದು ಕೋರ್ಟಿನಲ್ಲಿ ತೀರ್ಪು ಬಂದಂತಹ ಸಂದರ್ಭದಲ್ಲೋ ಮತ್ತೊಂದು ಸಂದರ್ಭದಲ್ಲೋ ಅದನ್ನು ಬದಲಾಯಿಸಿಕೊಳ್ಳಲು ಮಾಡಿಕೊಳ್ಳುವಂತಹ ಕಾರಣಗಳಿಂದಾಗಿ ಈ ಜ್ಯುಡಿಷಿಯಲ್ ಆಕ್ಟಿವಿಟಿ (ನ್ಯಾಯಾಂಗದ ಕ್ರಿಯಾಶೀಲತೆ) ಅನ್ನೋದು ಈವತ್ತು ನಾವೇ ಒಂದು ಅವರಿಗೆ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟಿದ್ದೇವೆ ಅಂತಾ ಅನ್ನಿಸುವ ಸ್ಥಿತಿಯಲ್ಲಿ ನಾವು ಇದ್ದೇವೆ. ಕಾರಣ

ಅದಕ್ಕೆ ನಾವು ಈ ಶಾಸನ ರಚನೆಗೆ ವಹಿಸಬೇಕಾದಷ್ಟು ಸಮಯವನ್ನು ವಹಿಸುತ್ತಾ ಇಲ್ಲ. ಅದಕ್ಕೆ ಕೊಡಬೇಕಾದಷ್ಟು ಆದ್ಯತೆಯನ್ನು ಕೊಡುತ್ತಿಲ್ಲ. ಎಲ್ಲ ಮಗ್ಗಲುಗಳಿಂದ ಅದನ್ನು ಚರ್ಚೆಯನ್ನು ಮಾಡುವಂತಹ ಒಂದು ಹಂತವನ್ನು ಇವತ್ತಿನ ನಮ್ಮ ಜನ ಪ್ರತಿನಿಧಿಗಳಲ್ಲಿ ಕಾಣಲಿಕ್ಕೆ ಸ್ವಲ್ಪ ಕಷ್ಟವಾಗಿರುವಂತಹ ವಿಚಾರ. ಕಾರಣ ಇವತ್ತಿನ ಎಲ್ಲಾ ಚುನಾವಣಾ ಪ್ರಕ್ರಿಯೆಗಳಲ್ಲಿ ಗೆಲುವೇ ಮಾನದಂಡವಾಗಿ ಆ ಗೆಲುವಿಗೆ ಬೇಕಾದಂತಹ ಅಂಶಗಳನ್ನೇ ಸ್ಪರ್ಧಿಗಳಲ್ಲಿ ಹುಡುಕುವಂತಹ ಸಂದರ್ಭದಲ್ಲಿ ನಾವು ಇರುವುದರಿಂದ ಅವನು ಶಾಸನ ಸಭೆಯಲ್ಲಿ ಮಾತನಾಡಲೇ ಬೇಕೆಂತಲೇನೂ ಇಲ್ಲ. ಅಥವಾ ಶಾಸನ ರಚನೆಯಲ್ಲಿ ಪಾಲ್ಗೊಳ್ಳಲೇ ಬೇಕೆಂತಲೇನೂ ಇಲ್ಲ. ಶಾಸನದ ಸಾಧಕಬಾಧಕಗಳನ್ನು ವಿಮರ್ಶೆ ಮಾಡಬೇಕೆಂಬ ಶಕ್ತಿ ಅವನಲ್ಲಿರಬೇಕು ಎಂಬುದೇನಿಲ್ಲ; ಆದರೆ ಚುನಾವಣೆಯಲ್ಲಿ ಗೆಲ್ಲುವಂತಹ ಶಕ್ತಿ ಅವನಲ್ಲಿದ್ದರೆ ಸಾಕು. ಇದು ಪಾರ್ಲಿಮೆಂಟರಿ ಸಿಸ್ಟಮ್ ಆಫ್ ಡೆಮಾಕ್ರಸಿಯ ಒಂದು ಶಕ್ತಿಯೂ ಇರಬಹುದು. ದೋಷವೂ ಇರಬಹುದು. ೫೧ ಬಂದರೆ ಪಾಸು ೪೯ ಬಂದರೆ ಫೇಲು. ಹಾಗಾಗಿ ೫೧ನ್ನು ತಲುಪಲು ನಡೆಯುತ್ತಿರುವ ಪೈಪೋಟಿಯಲ್ಲಿ ಇವತ್ತು ಎಲ್ಲಾ ರಾಜಕೀಯ ಪಕ್ಷಗಳು ಕೂಡಾ ೫೧ನ್ನು ತಲುಪಲು ಮಾಡುತ್ತಿರುವ ಪ್ರಯತ್ನದ ಫಲವಾಗಿ ನ್ಯಾಯಾಂಗ ಕ್ರಿಯಾಶೀಲವಾಗಬೇಕೆಂಬ ಸಂದರ್ಭ ಇದೆ. ಆದರೆ ಅವರ ತೀರ್ಪುಗಳಲ್ಲಿಯೂ ಅನೇಕ ಲೋಪಗಳು ಆಗಿರುವುದನ್ನು ನಾವು ನೋಡಿದ್ದೇವೆ. ಅದರಲ್ಲಿ ಈ ಮೊನ್ನೆ ಜ್ಯುಡಿಷಿಯಲ್ ಅಕೌಂಟಬಲಿಟಿಯ ಬಗ್ಗೆ ಬಂದಂತಹ ತೀರ್ಪು ಕೂಡಾ ಸಂಪೂರ್ಣವಾಗಿ ಒಪ್ಪಲಿಕ್ಕೇ ಆಗದೇ ಇರುವಂತಹ ತೀರ್ಪು. ಸಂಪೂರ್ಣವಾಗಿ ನ್ಯಾಯಾಧೀಶರು ಸರ್ವಸ್ವತಂತ್ರರು ತಪ್ಪೇ ಮಾಡುವುದಿಲ್ಲ ಅನ್ನುವುದಕ್ಕೆ ಏನೂ ಆಧಾರಗಳಿಲ್ಲ. ನನ್ನ ದೃಷ್ಟಿಯಲ್ಲಿ ಯಾವುದೇ ನಿಜವಾದ ಪ್ರಜಾಪ್ರಭುತ್ವದಲ್ಲಿ ಯಾರೂ ಕೂಡಾ ಪ್ರಶ್ನಾತೀತರಾಗಿರಬಾರದು. ನ್ಯಾಯಾಧೀಶರೂ ಕೂಡ ಸೇರಿದಂತೆ ಇದು ಒಂದು ಸವಾಲು.

•

ಇನ್ನೊಂದು ಇವತ್ತು ಎದುರಿಸುತ್ತಿರುವ ಸವಾಲು ಅಂದರೆ **ಸಂಸತ್ತು ಮತ್ತು ಶಾಸಕಾಂಗದ ಪರಮಾಧಿಕಾರ ಮತ್ತು ಜನಾಂದೋಲನ**. ಇದು ಬಹಳ ಪ್ರಖರವಾಗಿ ಚರ್ಚೆಗೆ ಬಂದದ್ದು ಅಣ್ಣಾ ಹಜಾರೆಯವರ ನೇತೃತ್ವದ ಚಳುವಳಿಯ ಸಂದರ್ಭದಲ್ಲಿ. ಲೋಕಪಾಲ್ ಕಾನೂನನ್ನು ಜಾರಿ ಮಾಡಬೇಕು ಎಂದು ಬಹಳ ವರ್ಷಗಳಿಂದ ಮನಸ್ಸಿಲ್ಲದ ಮನಸ್ಸಿನಿಂದ ರಾಜಕೀಯ ಪಕ್ಷಗಳು ಪ್ರಯತ್ನ ಮಾಡುತ್ತಿದ್ದಂತಹ ಸಂದರ್ಭದಲ್ಲಿ, ಅದನ್ನು ರಚನೆ ಮಾಡಲೇಬೇಕೆಂಬ ಅನಿವಾರ್ಯತೆ ನಿರ್ಮಾಣವಾದ ಸಂದರ್ಭದಲ್ಲಿ ಅದನ್ನು ಯಾರು ಮಾಡಬೇಕು? ಯಾಕೆ ಮಾಡಬೇಕು? ಯಾರು ಡ್ರಾಫ್ಟ್ ಮಾಡಬೇಕು? ಎಂಬ ಪ್ರಶ್ನೆ ಬಂತು. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಸಿವಿಲ್ ಸೊಸೈಟಿಯವರು,

ಮತ್ತು ಸರ್ಕಾರದವರು, ಪ್ರತಿಪಕ್ಷದವರು ಒಟ್ಟಿಗೆ ಕೂತುಕೊಂಡು ಒಂದು ಕಾನೂನನ್ನು ಡ್ರಾಪ್ಟ ಮಾಡುವಂತಹ ಪ್ರಯತ್ನಕ್ಕೆ ಮುಂದಾದದ್ದು ನನ್ನ ದೃಷ್ಟಿಯಲ್ಲಿ ಒಂದು ಆರೋಗ್ಯಕರವಾದಂತಹ ಬೆಳವಣಿಗೆ. ಆದರೆ ಅದಕ್ಕೆ ಪ್ರಶ್ನೆಗಳು ಇದ್ದೇ ಇವೆ. ಪ್ರತಿನಿಧಿಗಳ ಜವಾಬ್ದಾರಿಗಳೇನು? ಆ ಪ್ರತಿನಿಧಿಯ ಹೊಣೆಗಾರಿಕೆಗಳು ಏನು? ಅಣ್ಣಾ ಹಜಾರೆ ಅ–ಪ್ರತಿನಿಧಿ. ಆತ ಬಹಳ ದೊಡ್ಡ ಜನ ಸಮುದಾಯದ ನಾಯಕರಾಗಿ ಮೂಡಿಬಂದಿರಬಹುದು. ದೊಡ್ಡ ಜನಾಂದೋಲನದ ನೇತೃತ್ವ ವಹಿಸಿರಬಹುದು. ಸಂಸತ್ತಿನೊಳಗೆ ಶಾಸಕಾಂಗದ ಒಳಗೆ ಅವರಿಗೆ ಪ್ರಾತಿನಿಧ್ಯ ಇಲ್ಲ ಎಂಬ ಪ್ರಶ್ನೆ ಬಂದಿತು. ಒಳಗೆ ಇರುವವರೇ ಮಾಡಬೇಕಾ ಇದನ್ನು? ಹಾಗೇನಿಲ್ಲ. ಅನೇಕ ಸಂದರ್ಭಗಳಲ್ಲಿ ಈ ದೇಶದಲ್ಲಿ ಸಂವಿಧಾನ ರಚನೆಯಾಗಿರುವುದೂ ಕೂಡಾ ಜನಾಂದೋಲನದ ಪರಿಣಾಮವಾಗಿರುವುದು. ಈ ದೇಶದಲ್ಲಿ ಪಾರ್ಲಿಮೆಂಟರಿ ಸಿಸ್ಟಮ್ ಆಫ್ ಡೆಮಾಕ್ರಸಿ ಇರಬೇಕು ಎಂಬುದು ಜನಾಂದೋಲನದ ಫಲಶೃತಿ. ತುರ್ತು ಪರಿಸ್ಥಿತಿ ಈ ದೇಶದಲ್ಲಿ ಇನ್ನೂ ಯಾವತ್ತೂ ಕೂಡ ಬರಬಾರದು ಅನ್ನುವ ರೀತಿಯಲ್ಲಿ ೧೯೭೭ರ ನಂತರ ಸಂವಿಧಾನ ತಿದ್ದುಪಡಿಯಾಗಿದ್ದೂ ಕೂಡಾ ಜೆ.ಪಿ.ಯವರ ಸಂಪೂರ್ಣ ಕ್ರಾಂತಿಯ ಜನಾಂದೋಲನದ ಫಲವಾಗಿ. ಅದರ ಶ್ರೇಯಸ್ಸು ಚಂಪಾರವರು ಸೇರಿದ ಹಾಗೆ ಆವತ್ತು ಭಾಗವಹಿಸಿದಂತಹ ನಮ್ಮಂಥ ಸಣ್ಣವರಿಂದ ಬಹಳ ದೊಡ್ಡವರವರೆಗೂ ಎಲ್ಲರಿಗೂ ಕೂಡಾ ಹೋಗಬೇಕು. ಜನಾಂದೋಲನ ಇರದಿದ್ದರೆ ಲೋಕಪಾಲ ಬಹುತೇಕ ನಮ್ಮ ಜೀವಿತದ ಅವಧಿಯಲ್ಲಿ ಅದೊಂದು ಕಾನೂನು ಸ್ವರೂಪ ಪಡೆಯುತ್ತಿರಲಿಲ್ಲ. ಅದಕ್ಕೊಂದು ಅಂತಿಮ ರೂಪ ಇವತ್ತು ಬರದೇ ಹೋಗಿರಬಹುದು. ಪ್ರಜೆಯನ್ನೇ ಪ್ರಭುವೆನ್ನುವುದು ನಿಜವಾದ ಪ್ರಜಾಪ್ರಭುತ್ವದ ಅರ್ಥ ಆಗಿದ್ದರೆ ನಮ್ಮ ಪ್ರಭು ಏನು ಆದೇಶ ಕೊಡುತ್ತಾನೆ. (ಆಂದೋಲನದ ಮೂಲಕ ಕೊಡಬಹುದು ಅಥವಾ ಬುದ್ಧಿವಾದದ ಮೂಲಕ ಅಥವಾ ಯಾವುದಾದರೂ ಮತ್ತೊಂದು ಸ್ವರೂಪದಲ್ಲಿ ಕೊಡಬಹುದು.) ಅದನ್ನು ಸ್ವೀಕರಿಸಬೇಕಾದದ್ದು ಪ್ರಜಾಪ್ರಭುತ್ವದ ಪ್ರಾತಿನಿಧ್ಯವನ್ನು ಮಾಡುತ್ತಿರುವಂತಹ ಚುನಾಯಿತ ಪ್ರತಿನಿಧಿಗಳ ಮೂಲಭೂತವಾದಂತಹ ಕರ್ತವ್ಯಗಳು. ಇದು ನಮ್ಮ ಸಂವಿಧಾನ ಆರು ದಶಕಗಳ ನಂತರ ಎದುರಿಸಿದ ಮತ್ತೊಂದು ಸವಾಲು.

•

ಮತ್ತೊಂದು ಬಹಳ ಈಗ ಚರ್ಚೆಯಲ್ಲಿರುವಂತಹ ವಿಷಯ : **ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಅದಕ್ಕೆ ರಾಷ್ಟ್ರೀಯತೆಯ ಒಟ್ಟಿಗೆ ಹೋಲಿಸುವಂತಹ ಒಂದು ಪ್ರಯತ್ನ.** ಇದಕ್ಕೆ ಹೈದ್ರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ನಡೆದಂತಹ ವೇಮುಲರ ಘಟನೆ. ಆದಾದ ನಂತರ ಜವಹಾರ್‌ಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ನಡೆದಂತಹ ಕನ್ನಯ್ಯ ಲಾಲ್‌ರವರ ಒಂದು ಪ್ರಕರಣದ

ಸಂದರ್ಭ. ಇವೆಲ್ಲವೂ ಈ ಎರಡು ನತದೃಷ್ಟ ಘಟನೆಗಳಿಂದಾಗಿ ಒಂದು ಆರೋಗ್ಯಕರ ಭೂಮಿಕೆ ಸಿದ್ಧಗೊಂಡಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ ಏನು? ಅಥವಾ ರಾಷ್ಟ್ರಪ್ರೇಮ ಎಂದರೇನು? ಅವೆಲ್ಲವೂ ಕೂಡಾ ಸಾಂಕೇತಿಕವಾಗಿರುವಂತಹದ್ದು. ಸಾಂಕೇತಿಕವಾಗಿರುವಂತಹ ಒಂದಕ್ಕೆ ನಾವು ಗೌರವ ತೋರಿಸಿದ ತಕ್ಷಣ ನಾನು ರಾಷ್ಟ್ರಪ್ರೇಮಿ, ಅದನ್ನು ಪ್ರಶ್ನೆ ಮಾಡಿದ ತಕ್ಷಣ ರಾಷ್ಟ್ರದ್ರೋಹಿ ಎಂಬ ವ್ಯಾಖ್ಯಾನ ಚರ್ಚೆಯಾಗ ಬೇಕಾಗಿರುವ ವಿಚಾರ ಮತ್ತು ಯಾವುದಾದರೊಂದು ವಿಚಾರದ ಬಗ್ಗೆ ಡಿಸೆಂಟ್ ಭಿನ್ನಮತ ಅನ್ನು ವ್ಯಕ್ತಪಡಿಸಿದರೆ ಅಥವಾ ನನ್ನ ಒಪ್ಪಿಗೆಯನ್ನು ನಿರಾಕರಿಸಿದರೆ ಅದೂ ಕೂಡಾ ಒಂದು (ಆ ಹಕ್ಕು ಅಥವಾ) ತಪ್ಪೇ ಎಂಬುದು ಬರುತ್ತದೆ. ಸಂವಿಧಾನ ರಚನಾ ಸಭೆಯಲ್ಲಿ ಕೂಡಾ ಬಹಳಷ್ಟು ಡಿಸೆಂಟ್‌ಗಳು ಬಂದಿವೆ. ಆಸ್ತಿಯ ಮೂಲಭೂತ ಹಕ್ಕುಗಳ ವಿಚಾರದಲ್ಲೂ ಕೂಡಾ ಸಾಕಷ್ಟು ಬಂದಿವೆ. ಅಂತಿಮವಾಗಿ ಆ ಡಿಸೆಂಟೇ ಯಶಸ್ವಿಯಾಯಿತು, ಕಾರಣ ಅನೇಕ ವರ್ಷಗಳ ನಂತರ ಆಸ್ತಿಯನ್ನು ಹೊಂದುವದನ್ನು ಮೂಲಭೂತಹಕ್ಕಿನಿಂದ ತೆಗೆದು ಅದನ್ನು ಒಂದು ಕಾನೂನಿನ ಹಕ್ಕನ್ನಾಗಿ ಮಾಡಿಕೊಂಡಿದೆ. ಈ ಆಸ್ತಿಯನ್ನು ಮೂಲಭೂತ ಹಕ್ಕನ್ನಾಗಿ ಕೊಟ್ಟರೆ ನಾಳೇ ಯಾವುದೇ ರೀತಿಯ ಒಂದು ನಮ್ಮ ಸಾರ್ವಜನಿಕ ಕಾರ್ಯಕ್ರಮಗಳಿಗೆ ಅಡ್ಡಿಯಾಗುವಂತಹ ಸಾಧ್ಯತೆಗಳಿವೆ ಎಂದು ಅದನ್ನು ಫಂಡಮೆಂಟಲ್ ರೈಟ್‌ನಿಂದ ಒಂದು ಜಸ್ಟೀ ಸೈಬಲ್ ರೈಟಾಗಿ ಬಗೆಹರಿಸುವಂತಹದ್ದು. ಆವತ್ತು ಸಂವಿಧಾನ ರಚನಾ ಪೀಠದ ಅಧ್ಯಕ್ಷತೆಯಲ್ಲಿ ಇದ್ದಂತಹ ಡಾ. ಅಂಬೇಡ್ಕರ್‌ರವರು ಈ ಡಿಸೆಂಟನ್ನು ಈ ದೇಶದ ಚಿಂತನೆಗೆ ವಿರುದ್ಧವಾಗಿರುವುದು ಎಂದು ಪರಿಗಣಿಸಲೇ ಇಲ್ಲ.

ರಿಲಿಜಸ್ ಫ್ರೀಡಂ ಕೊಡುವಂತಹ ವಿಚಾರದಲ್ಲಿ ಅಥವಾ ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್‌ಗಳಿಗೆ ಪ್ರತ್ಯೇಕ ಮತದಾನ ಮತ್ತು ಪ್ರತ್ಯೇಕ ಪಾರ್ಲಿಮೆಂಟ್ ಸೀಟುಗಳು ಇರಬೇಕೆಂದು ದೊಡ್ಡ ಚರ್ಚೆಯಾಯಿತು. ಮಹಾತ್ಮಾ ಗಾಂಧೀಜಿಯವರು ಉಪವಾಸ ಮತ್ತೊಂದು ಎಲ್ಲಾ ಮಾಡಿದರು. ಆ ವಿಚಾರದಲ್ಲಿ ಬಹಳ ದೊಡ್ಡ ಒಂದು ಭಿನ್ನಾಭಿಪ್ರಾಯ ಅಂಬೇಡ್ಕರರವರು ಮತ್ತು ಗಾಂಧೀಜಿಯವರ ಮಧ್ಯೆ ಉಂಟಾಗುವಷ್ಟು ಮಟ್ಟಿಗೆ ಬೆಳೆಯಿತು. ಈ ಡಿಸೆಂಟ್ ಎಂಬುವುದು ಮೂಲಭೂತವಾಗಿ ಪ್ರಜಾಪ್ರಭುತ್ವದ ಹಕ್ಕು. ಯಾವುದನ್ನು ನಾನು ಒಪ್ಪುವುದಿಲ್ಲ, ಅದನ್ನು ನಿರ್ಭಯವಾಗಿ ಹೇಳುವಂತಹ ಅಧಿಕಾರ. ಅದು ನನಗೆ ಇಲ್ಲದೇ ಹೋದರೆ ಅದಕ್ಕೆ ಒಂದು ಪ್ರಜಾಪ್ರಭುತ್ವ ಅಂತ ಹೇಳುವುದಕ್ಕೆ ಸಾಧ್ಯವಿಲ್ಲ. ಒಪ್ಪುವುದು ಬಿಡುವುದು ಬೇರೆ ಪ್ರಶ್ನೆ. ಸರ್ವಾನುಮತ ಬಹುಮತವಾಗಬಹುದು ಅಥವಾ ಇನ್ನೊಂದು ಏನಾದರೂ ಆಗಬಹುದು. ಆದರೆ ಅದೇ ಇಲ್ಲಾಂತ ಹೇಳುವುದು ಇವತ್ತು ಬಹಳ ದೊಡ್ಡ ಚರ್ಚೆಯಲ್ಲಿರುವಂತಹ ವಿಚಾರ.

ಡಿಸೆಂಟ್ ಎಂದರೆ ಅರ್ಥವೇನು? ಅದರ ವ್ಯಾಪ್ತಿ ಏನು? ಅದರ ವ್ಯಾಖ್ಯಾನ ಮಾಡುವವರ್‍ಯಾರು? ತೀರ್ಮಾನ ಮಾಡುವವರು ಯಾರು? ಬಹಳ ಮುಖ್ಯವಾಗಿ ಎದುರಿಸಬೇಕಾದ ಒಂದು ಪ್ರಶ್ನೆ : ರಾಷ್ಟ್ರೀಯತೆ ಅನ್ನೋದು ಏನು? ಎಷ್ಟರಮಟ್ಟಿಗೆ ಅದು ಭಾರತ ಒಂದೇ ಇರಬೇಕು ಎಂದು ವಾದ ಮಾಡಿದವರು ಇದ್ದಾರೆ. ಭಾರತ ಒಂದಾಗಿ ಇರಲಿಕ್ಕೇ ಸಾಧ್ಯವಿಲ್ಲ. ಆ ರೀತಿಯ ಒಂದು ವಾತಾವರಣ ಇಲ್ಲಿಲ್ಲ ಎಂದು ೪೨ರ ಹಿಂದೆಯೇ ವಾದ ಮಾಡಿದಂತಹವರು ಇದ್ದಾರೆ. ಅಂತಿಮವಾಗಿ ೨ ರಾಷ್ಟ್ರಗಳಾಗಿವೆ. ೩ ರಾಷ್ಟ್ರಗಳಾಗಿವೆ. ಇಂತಹ (ಬಾಂಗ್ಲಾದೇಶ ಆದನಂತರ) ಅನೇಕ ಘಟನಾವಳಿಗಳು ದೇಶದ ಇತಿಹಾಸದಲ್ಲಿ ನಡೆದುಕೊಂಡು ಬರುತ್ತಲೇ ಇದ್ದಾವೆ.

ಅಂತಹ ಎಲ್ಲಾ ಸಂದರ್ಭಗಳಲ್ಲಿ ಆಂಟಿನ್ಯಾಷನಲ್ ಅಂತ ಹೇಳಿ ನಾವು ಘೋಷಣೆ ಮಾಡುವುದಾದರೆ ಕಾಶ್ಮೀರಕ್ಕೆ ಒಂದು ವಿಶೇಷವಾದಂತಹ ಸ್ಥಾನಮಾನ ಕೊಡುವಂತಹ ಸಂದರ್ಭ ಯಾಕೆ ಬಂತು?

ಇಂತಹ ಸಂದರ್ಭಗಳಲ್ಲಿ ಉಂಟಾಗುವಂತಹ ಅಭಿಪ್ರಾಯ ಭೇದಗಳನ್ನೇ ಅದು ರಾಷ್ಟ್ರೀಯತೆಗೆ ವಿರುದ್ಧವಾಗಿರುವಂತಹ ನಿಲುವು ಎಂದು ಭಾವಿಸುವಂತಹದ್ದು ಅಥವಾ ಡಿಸೆಂಟ್ ಮತ್ತು ನ್ಯಾಷನಲ್‌ಯಿಸಂ ವಿಚಾರದಲ್ಲಿ ನಡೆಯುತ್ತಿರುವ ವ್ಯಾಖ್ಯಾನಗಳು ಇವತ್ತಿನ ನಮ್ಮ ಸಂವಿಧಾನ ಎದುರಿಸುತ್ತಿರುವ ಮತ್ತೊಂದು ದೊಡ್ಡದಾದ ಸವಾಲು.

ಇವು ಬಹಳ ಮುಖ್ಯವಾಗಿ ಈ ವೈವಿಧ್ಯವಿರುವ ದೇಶದಲ್ಲಿ ನಾವು ಎದುರಿಸುತ್ತಿರುವಂತಹ ಸವಾಲುಗಳು. ಇನ್ನೂ ಇದರ ಪರಿಣಾಮವಾಗಿ ನಾವು ಜಾರಿಗೆ ತಂದುಕೊಂಡಿರುವ ಸಂಸದೀಯ ಪ್ರಜಾಪ್ರಭುತ್ವ ಅನೇಕ ಸವಾಲುಗಳನ್ನು ಎದುರಿಸುತ್ತ ಇದೆ.

■

'ಸಂಕ್ರಮಣ' ಹೆಚ್ಚುಹೆಚ್ಚಾಗಿ ತೀರ ಹೊಸಬರ ಮತ್ತು ಅಪರಿಚಿತ ವಿಷಯಗಳ ಮೇಲೆ ಬರಹಗಳನ್ನು ಪ್ರಕಟಿಸುವುದರಿಂದ ಕನ್ನಡ ನಾಡಿನ ಒಳಗೆ ಹಾಗೂ ಹೊರಗೆ ಇರುವ ಎಲ್ಲ ಸಾಹಿತ್ಯಾಸಕ್ತರಿಗೆ ಸೇರುವಂತಾಗಿದೆ. ಅದು ಯಾವುದೇ ಪಥಕ್ಕೂ ಪಂಥಕ್ಕೂ ಸೀಮಿತವಾಗದೆ ಪ್ರಕೃತಿಯಂತೆ ಸ್ವಚ್ಛಂದವಾಗಿರುವುದು ಅದರ ಕುರುಹು.

– *ಕೆ. ಎಸ್.ಭಗವಾನ್*

ಭಾರತದಲ್ಲಿ ಸೆಕ್ಯೂಲರ್ ವಾದ

• ರಾಜೇಂದ್ರ ಚೆನ್ನಿ

ಇತ್ತೀಚೆಗೆ ನೋಡಿದ ಚರ್ಚೆಯೊಂದರಲ್ಲಿ ಪ್ರಖ್ಯಾತ ಆ್ಯಂಕರ್ ಆಗಿರುವ ಬರ್ಖಾ ದತ್ ಹೇಳಿದರು. ನನಗೆ ದೇಶ, ರಾಷ್ಟ್ರ- ಇವು ಪ್ರಿಯವಾದ ಪದಗಳಾಗಿದ್ದವು. ಅವನ್ನು ಯಾರೋ ತಿರುಚಿ ಬಿಟ್ಟಿದ್ದರಿಂದ ಅವುಗಳನ್ನು ಬಳಸಲಾರೆ. ಹಾಗೆಯೆ ಸೆಕ್ಯೂಲರ್‌ವಾದವು ನನಗೆ ಇಷ್ಟವಾದ ಪದ. ಈಗ ಅದನ್ನೂ ಅಪಮೌಲ್ಯಗೊಳಿಸಿಬಿಟ್ಟಿದ್ದಾರೆ". ಈಗಿನ ಸಂದರ್ಭದಲ್ಲಿ ಸಾರ್ವಜನಿಕ ವಲಯದಲ್ಲಿ ರಾಜಕೀಯ ಚರ್ಚೆಗಳ ವೈಖರಿ ಹೇಗಿದೆಯೆಂದರೆ ಕೆಲವು ಪದಗಳ ಮೇಲೆ ನಿರಂತರವಾದ ದಾಳಿ ನಡೆದು ಅವುಗಳ ಅಪಮೌಲ್ಯೀಕರಣವಾಗಿಬಿಡುತ್ತದೆ. ಸ್ವತಃ ಬರ್ಖಾ ದತ್ ಆ್ಯಂಕರ್ ಆಗಿರುವ ಅನೇಕ ಕಾರ್ಯಕ್ರಮಗಳಲ್ಲಿ ಹೀಗೆಯೇ ಆಗುತ್ತದೆ.

ಸೆಕ್ಯೂಲರ್‌ವಾದದ ಪರಿಕಲ್ಪನೆಯ ತುಚ್ಛೀಕರಣವು ವಿಶೇಷವಾಗಿ ಬಲಪಂಥೀಯ ಹಾಗೂ ಮೂಲಭೂತವಾದಿ ನೆಲೆಗಳಲ್ಲಿ ಆಗುತ್ತ ಬಂದಿದೆ. ಆಧುನಿಕ ಕಾಲದಲ್ಲಿ ಇದು ವಸಾಹತುಶಾಹಿಯ ಆಗಮನದಿಂದ ಆರಂಭಗೊಂಡ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣವಾದಿ ಚಳುವಳಿಗಳು, ಸಿದ್ಧಾಂತಗಳು ಹಾಗೂ ಕಾರ್ಯಕ್ರಮಗಳಿಗೆ ಪ್ರತಿಕ್ರಿಯೆಯಾಗಿ ಕಂಡು ಬಂದಿದೆ. ಇಂಗ್ಲಿಷ್ ಶಿಕ್ಷಣವನ್ನು ಪಡೆದ ಭಾರತೀಯ ಧೀಮಂತವರ್ಗವು (elite class) ತಾನು ಒಪ್ಪಿಕೊಂಡಿದ್ದ ಆಧುನಿಕತೆಯ ನೆಲೆಯಿಂದ ಧಾರ್ಮಿಕ ಹಾಗೂ ಸಾಮಾಜಿಕ ಸಂಪ್ರದಾಯಗಳನ್ನು ಪ್ರಶ್ನಿಸತೊಡಗಿತು. ಇದು ವಿಶೇಷವಾಗಿ ಬಂಗಾಳದಲ್ಲಿ ಅಲ್ಲಿಯ 'ಭದ್ರಲೋಕ'ನ ಹೊಸ ತಲೆಮಾರಿನಿಂದ ಆಯಿತು. ಈ ತಲೆಮಾರನ್ನು The Young Bengal ಎಂದು ಕರೆಯಲಾಯಿತು. ಒಂದು ಕಡೆ ಪಶ್ಚಿಮದ ಅನುಕರಣದಿಂದ ಇದು ಪ್ರೇರಿತವಾಗಿದ್ದರೆ ಇನ್ನೊಂದು ಕಡೆ ಪ್ರಾಮಾಣಿಕವಾಗಿಯೆ ಸಂಪ್ರದಾಯದ ಅನಿಷ್ಟಗಳನ್ನು ಟೀಕಿಸುವ ಹಾಗೂ ಬದಲಾಯಿಸುವ ಸಂಕಲ್ಪದಿಂದ ಇದು ನಡೆಯಿತು. ಇದೇ ಕಾಲದಲ್ಲಿ ಕ್ರಿಶ್ಚಿಯನ್ ಮಿಶನರಿಗಳು ಹಿಂದೂ ಧರ್ಮದ ಬಗ್ಗೆ ಮಾಡಿದ ವಿಮರ್ಶೆಯಿಂದ ಪ್ರಚೋದಿತವಾಗಿ ಅನೇಕ ಧಾರ್ಮಿಕ ಸುಧಾರಣಾವಾದಿ ಚಳುವಳಿಗಳು ಆರಂಭವಾದವು. ಉದಾಹರಣೆಗೆ ಆರ್ಯ ಸಮಾಜ ಹಾಗೂ ಬ್ರಹ್ಮೋ ಸಮಾಜಗಳು. ಈ ಘಟನೆಗಳು ಸಾರ್ವಜನಿಕ ವಲಯದಲ್ಲಿ ಬಹು ದೊಡ್ಡ ಚರ್ಚೆಗೆ ಕಾರಣವಾದವು. ಅಲ್ಲದೆ ಪ್ರಬಲವಾದ ಸಂಪ್ರದಾಯವಾದಿ ಪ್ರತಿಕ್ರಿಯೆಗೆ ಕಾರಣವಾದವು. ವಸಾಹತುಶಾಹಿ ಸಂಕಥನಗಳು ಭಾರತೀಯ ಧರ್ಮ ಹಾಗೂ ಸಾಮಾಜಿಕ ಸಂಪ್ರದಾಯಗಳ ಬಗ್ಗೆ

ಅವಮಾನಕರವಾದ ನಿಲುವುಗಳನ್ನು ಹೊಂದಿದ್ದರಿಂದ ಇವುಗಳನ್ನು ಪ್ರತಿಭಟಿಸುವ ಕೆಲಸದಲ್ಲಿ ಸಂಪ್ರದಾಯವಾದಿಗಳು ಒಂದು ದ್ವಂದ್ವಾತ್ಮಕ ವಾದವನ್ನು ನಿರೂಪಿಸಿದರು. ವಸಾಹತುವಾದಿ ಸಂಕಥನಗಳು ಪಶ್ಚಿಮ ಹಾಗೂ ಪೂರ್ವ ಎನ್ನುವ ವಿರುದ್ಧಾತ್ಮಕವಾದ ಪರಿಕಲ್ಪನೆಗಳನ್ನು ಕಟ್ಟಿಕೊಟ್ಟಿದ್ದರೆ ಇದನ್ನು ಮೂಲತಃ ಒಪ್ಪಿಕೊಂಡು ಸಂಪ್ರದಾಯವಾದಿಗಳು ಪಶ್ಚಿಮವು ರಾಜಕೀಯವಾಗಿ ಹಾಗೂ ಭೌತಿಕವಾಗಿ ಪ್ರಬಲವೂ ವಿಜಯಶಾಲಿಯೂ ಆಗಿರಬಹುದು, ಆದರೆ ಧರ್ಮ ಹಾಗೂ ಆಧ್ಯಾತ್ಮಿಕತೆಯಲ್ಲಿ ಭಾರತವೇ ಶ್ರೇಷ್ಠ. ಭಾರತವೇ ಜಗತ್ತಿನ ನಾಗರೀಕತೆಗಳ ತಾಯಿ. ಅಲ್ಲದೆ ಭಾರತೀಯ ಸಂಪ್ರದಾಯಗಳು ಪ್ರಾಚೀನವಾದ ವಿವೇಕದಿಂದ ಹುಟ್ಟಿಕೊಂಡಿದೆಯಾದ್ದರಿಂದ ಅವುಗಳನ್ನು ಬ್ರಿಟಿಷ್ ಸರಕಾರವು ಭಾರತದ ಶಿಕ್ಷಿತ ಮಾಧ್ಯಮವರ್ಗದ ಚಿತಾವಣೆಯಿಂದ ಬದಲಾಯಿಸಲು ಪ್ರಯತ್ನಿಸಬಾರದು ಎಂದು ವಾದಿಸಲಾಯಿತು. ಸ್ವಾಮಿ ವಿವೇಕಾನಂದ, ಶ್ರೀ ಅರವಿಂದರು, ಮಹಾತ್ಮಾಗಾಂಧಿ, ರವೀಂದ್ರನಾಥ ಠಾಕೂರ್- ಈ ಎಲ್ಲಾ ಪ್ರಭಾವಿ ಚಿಂತಕರಿಗೆ ಸಾಮಾನ್ಯವಾಗಿರುವುದೆಂದರೆ ಭಾರತೀಯ ನಾಗರಿಕತೆ ಹಾಗೂ ಆಧ್ಯಾತ್ಮಿಕತೆಯೇ ಶ್ರೇಷ್ಠವೆನ್ನುವ ನಂಬಿಕೆ. ಒಂದು ಅರ್ಥದಲ್ಲಿ ಇವರಲ್ಲಿ ಯಾರೂ ಸಂಪ್ರದಾಯ ವಾದಿಗಳಲ್ಲ. ಸಂಪ್ರದಾಯಗಳನ್ನು ಬದಲಾಯಿಸಲೂ ಪ್ರಯತ್ನಪಟ್ಟವರು. ಆದರೆ ಆಳದಲ್ಲಿ ಪಶ್ಚಿಮವನ್ನು ನಿರಾಕರಿಸಿ ಭಾರತದ ಶ್ರೇಷ್ಠತೆಯನ್ನು ಒಪ್ಪಿದವರು. ಇನ್ನೊಂದು ವರ್ಗದ ಸಂಪ್ರದಾಯವಾದಿಗಳು ಸಾರಾಸಗಟಾಗಿ ಎಲ್ಲ ಭಾರತೀಯ ಸಂಪ್ರದಾಯಗಳನ್ನು ಅವು ಇದ್ದ ಹಾಗೆಯೇ ರಕ್ಷಿಸಬೇಕೆಂದು ಹೋರಾಡಿದರು. ಸತಿ ಪದ್ಧತಿಯ ನಿರ್ಮೂಲನ, ಮಹಿಳೆಯರಿಗೆ ಹಾಗೂ ದಲಿತರಿಗೆ ಶಿಕ್ಷಣ, ಬಾಲ್ಯವಿವಾಹದ ನಿಷೇಧ ಇವೇ ಮುಂತಾದ ಎಲ್ಲಾ ಬದಲಾವಣೆಗಳನ್ನು ವಿರೋಧಿಸಿದರು. ಇದಕ್ಕಾಗಿ ಅವರು ಬಳಸಿದ ವಾದವೆಂದರೆ ಧರ್ಮ ಹಾಗೂ ಸಾಮಾಜಿಕ ವಿಷಯಗಳಲ್ಲಿ ಬ್ರಿಟಿಷ್ ಆಳ್ವಿಕೆ ತಟಸ್ಥವಾಗಿರಬೇಕೆಂಬುದು. ಇದಕ್ಕೆ ತಕ್ಕ ಹಾಗೆ ಬ್ರಿಟಿಷ್ ವಸಾಹತುಶಾಹಿ ಸರಕಾರವು ಕೂಡ ಎಡಬಿಡಂಗಿ ನಿಲುವುಗಳನ್ನು ಹೊಂದಿತ್ತು. ಬಹುಪಾಲು ಭಾರತೀಯರು, ಅವರ ಮಾತಿನಲ್ಲಿ natives, ಸಂಪ್ರದಾಯಗಳ ತಂಟೆಗೆ ಹೋಗಬಾರದೆಂದು ಅದರ ನಿಲುವಾಗಿತ್ತು. ಆದರೆ ಅನೇಕ ಸಂದರ್ಭಗಳಲ್ಲಿ ಶಿಕ್ಷಿತ ಭಾರತೀಯ ವರ್ಗ, ಕ್ರಿಶ್ಚಿಯನ್ ಮಿಶನರಿಗಳು ಮತ್ತು ಬಹು ಮುಖ್ಯವಾಗಿ ಇಂಗ್ಲೆಂಡ್‌ನಲ್ಲಿಯ ಪ್ರಗತಿಪರ ಒತ್ತಡದಿಂದಾಗಿ ಸುಧಾರಣೆಗಳನ್ನು ಕಾನೂನಿನ ಮೂಲಕ ತರಲು ಪ್ರಯತ್ನಿಸುತ್ತಿತ್ತು. ಇದರ ಫಲವಾಗಿ ಶಿಕ್ಷಣವನ್ನು ಎಲ್ಲಾ ವರ್ಗ, ಜಾತಿಗಳಿಗೆ ಮುಕ್ತಗೊಳಿಸಲಾಯಿತು. ಸತಿಪದ್ಧತಿಯನ್ನು ನಿಲ್ಲಿಸಲಾಯಿತು, ಬಾಲ್ಯವಿವಾಹವನ್ನು ಕಾನೂನುಬಾಹಿರ ಗೊಳಿಸಲಾಯಿತು. ಅಲ್ಲದೆ ಮುಂದೆ ಅಂಬೇಡ್ಕರ್ ಚಳುವಳಿಯ ಕಾರ್ಯಕ್ರಮವಾದ ದೇವಾಲಯ ಪ್ರವೇಶ ಹಾಗೂ ಸಾರ್ವಜನಿಕ ಸ್ಥಳಗಳ, ಕೆರೆಗಳ ಅನಿರ್ಬಂಧಿತ ಉಪಯೋಗ ಇವುಗಳಿಗೆ ಅನುಕೂಲವಾಗುವ ಕಾಯಿದೆಗಳನ್ನು ರಚಿಸಿತು.

ಆದರೆ ವಾಸ್ತವವಾಗಿ ಇವೆಲ್ಲವು ವಾಸ್ತವವಾಗಿ ಕಾರ್ಯರೂಪಕ್ಕೆ ಬರುವಂತೆ ಮಾಡುವ ಸಂಕಲ್ಪವನ್ನು ತೋರಲಿಲ್ಲ. ಇಂಥ ಸನ್ನಿವೇಶದಲ್ಲಿ ಸಂಪ್ರದಾಯ ವಾದಿಗಳು ಹಾಗೂ ಆಧುನಿಕರು (ಸುಧಾರಣಾ ವಾದಿಗಳು) ಎನ್ನುವ ಪಂಗಡಗಳು ಹುಟ್ಟಿಕೊಂಡವು. ಸಂಪ್ರದಾಯವಾದಿಗಳು ಸುಧಾರಣಾವಾದಿಗಳನ್ನು ಧರ್ಮ ವಿರೋಧಿಗಳೆಂದು, ಪಶ್ಚಿಮದ ಹಿಂಬಾಲಕರೆಂದು, ನಾಸ್ತಿಕರೆಂದು ಹೀಯಾಳಿಸಲಾರಂಭಿಸಿದರು. ಸೆಕ್ಯೂಲರ್‌ವಾದವೆನ್ನುವ ಪದವನ್ನು ಬಳಸದಿದ್ದರೂ ಆ ಪದವು ಸೂಚಿಸುವ ನಿಲುವನ್ನು ತುಚ್ಛೀಕರಣಗೊಳಿಸಿದರು. ಸ್ವಾತಂತ್ರ್ಯದ ನಂತರ ಬಲಪಂಥೀಯರು ಹುಸಿ ಸೆಕ್ಯೂಲರ್‌ವಾದ (pseudo-secularism) ವೆಂಬ ಪದವನ್ನು ಸೃಷ್ಟಿಸಿ ಇದೇ ತುಚ್ಛೀಕರಣವನ್ನು ಮುಂದುವರೆಸಿದರು.

ಇದೆಲ್ಲವನ್ನು ಯಾಕೆ ಹೇಳಬೇಕಾಗಿದೆಯೆಂದರೆ ಇಂದು ಸೆಕ್ಯೂಲರ್‌ವಾದವನ್ನು ತೀವ್ರವಾಗಿ ವಿರೋಧಿಸುವ ಆಶಿಸ್ ನಂದಿ, ಟ.ಎನ್. ಮದನ್ ಮುಂತಾದ ವಿದ್ವಾಂಸರು ಈ ಸಂಗತಿಗಳನ್ನು ಚರ್ಚಿಸುವುದಿಲ್ಲ. ಅಂದರೆ ಮಹಿಳೆಯರಿಗೆ, ದಲಿತರಿಗೆ ಕಂಟಕವಾಗಿದ್ದ ಅನೇಕ ಸಂಪ್ರದಾಯಗಳನ್ನು ವಿರೋಧಿಸಿದ್ದು ಸೆಕ್ಯೂಲರ್‌ವಾದವೇ ಹೊರತು ನಂದಿಯವರು ಆರಾಧಿಸುವ ಆಧುನಿಕ ವಿರೋಧಿ 'ದೇಶೀಯ' ಪರಂಪರೆಗಳಲ್ಲ. ಟಿ.ಎನ್. ಮದನ್ ಅವರು ಸೆಕ್ಯೂಲರ್‌ವಾದಿಗಳನ್ನು "ತಮ್ಮ ಧೋರಣೆಗಳನ್ನು ಬಹುಸಂಖ್ಯಾತ ಜನರ ಮೇಲೆ ಒತ್ತಾಯದಿಂದ ಹೇರಲು ಪ್ರಯತ್ನಿಸುವ ಆಧುನಿಕ, ಶಿಕ್ಷಿತ ಅಲ್ಪಸಂಖ್ಯಾತ ವರ್ಗ" ವೆಂದು ವಿವರಿಸುತ್ತಾರೆ. ಹಾಗಿದ್ದರೆ ಇವರು ಹೇಳುವ ಬಹುಸಂಖ್ಯಾತರು ಮನುಷ್ಯ ವಿರೋಧಿ ಸಂಪ್ರದಾಯಗಳನ್ನು ಯಾಕೆ ವಿರೋಧಿಸಲಿಲ್ಲ? ಉದಾಹರಣೆಗೆ ಬಾಲ್ಯವಿವಾಹದಿಂದಾಗಿ ಮತ್ತು ಮದುವೆಯ ವಯುಸ್ಸಿನ ಬಗ್ಗೆ ನಿರ್ಬಂಧವಿಲ್ಲದ್ದರಿಂದಾಗಿ ಚಿಕ್ಕವಯಸ್ಸಿನ ಹೆಣ್ಣುಮಕ್ಕಳ ಮೇಲೆ ಅವರ ವಯಸ್ಕ ಗಂಡಂದಿರು ಮಾಡುತ್ತಿದ್ದ ಒತ್ತಾಯದ ಸಂಭೋಗದಿಂದಾಗಿ ಅವರು ಅನುಭವಿಸುತ್ತಿದ್ದ ಶಬ್ದಾತೀತವಾದ ಹಿಂಸೆಯ ಬಗ್ಗೆ ಇತ್ತೀಚೆಗೆ ಸಂಶೋಧನೆಯು ವಿವರಗಳನ್ನು ಒದಗಿಸಿದೆ. ಅದೇ ರೀತಿ ವಿಧವೆಯರ ಮೇಲೆ ನಡೆಯುತ್ತಿದ್ದ ಲೈಂಗಿಕ ಹಿಂಸೆಯ ಬಗ್ಗೆಯೂ ಕೂಡ ವಿವರಗಳು ಗೊತ್ತಿವೆ. ಹಾಗಿದ್ದರೆ ಬಾಲ್ಯವಿವಾಹ ವಿರೋಧಿ ಮತ್ತು ವಿಧವಾವಿವಾಹಕ್ಕೆ ಬೆಂಬಲ ನೀಡಿದ ಪ್ರಗತಿಪರರನ್ನು "ಅಲ್ಪಸಂಖ್ಯಾತ" ಸೆಕ್ಯೂಲರ್‌ವಾದಿಗಳೆಂದು ಹೀಗಳೆಯುವುದರ ಅರ್ಥವೇನು? ಆಶೀಸ್ ನಂದಿಯವರು ಆರಾಧಿಸುವ ಬಹುಸಂಖ್ಯಾತರು (ಅಂದರೆ ಇಂಗ್ಲಿಷ್ ಶಿಕ್ಷಣದಿಂದಾಗಿ ವಸಾಹತೀಕರಣಗೊಂಡ ಮಧ್ಯಮವರ್ಗವನ್ನು ಹೊರತುಪಡಿಸಿ ಉಳಿಸಿ ಬಹುಸಂಖ್ಯಾತರು) ಏನು ಮಾಡುತ್ತಿದ್ದರು? ವಾಸ್ತವವೆಂದರೆ ಸೆಕ್ಯೂಲರ್‌ವಾದ ಹಾಗೂ ಆಧುನಿಕತೆಗಳನ್ನು ತೀವ್ರವಾಗಿ ವಿರೋಧಿಸುವ ನಂದಿ, ಮದನ್ ಮುಂತಾದ ವಿದ್ವಾಂಸರು ಮಹಿಳೆಯರು ಹಾಗೂ ದಲಿತರ ಸ್ಥಿತಿಗಳಲ್ಲಿ ಸ್ವಲ್ಪವಾದರೂ ಸುಧಾರಣೆಯನ್ನು ತರುವಲ್ಲಿ ಇವೆರಡೂ

ಮುಖ್ಯವಾಗಿದ್ದವೆನ್ನುವುದನ್ನು ಮರೆಯುತ್ತಾರೆ. ಏಕೆಂದರೆ ಅವರು ಮುಖ್ಯವಾಗಿ ಟೀಕಿಸಬೇಕಾಗಿರುವುದು ನೆಹರು ಪ್ರೇರಿತ ಸೆಕ್ಯೂಲರ್‌ವಾದವನ್ನು. ಈ ವಿದ್ವಾಂಸರ ಪ್ರಕಾರ ನೆಹರು ಅವರು ಗಾಂಧಿಯವರ ಹಾಗೆ ಭಾರತೀಯ ಧಾರ್ಮಿಕ, ಆಧ್ಯಾತ್ಮಿಕ ಪರಂಪರೆಗಳನ್ನು ಬಲ್ಲವರಾಗಿರಲಿಲ್ಲ. ಹೀಗಾಗಿ ಪಶ್ಚಿಮದ ಸೆಕ್ಯೂಲರ್‌ವಾದವನ್ನು ನೆಚ್ಚಿಕೊಂಡು ಅದನ್ನು ಸ್ವತಂತ್ರ ಭಾರತದಲ್ಲಿ ತಮ್ಮ ಸರಕಾರದ ಮೂಲಕ ಹೇರಬಯಸಿದರು. ಈ ಉದ್ದೇಶದಿಂದಾಗಿ ಇಂಗ್ಲಿಷ್ ಶಿಕ್ಷಿತ ಬುದ್ಧಿಜೀವಿಗಳನ್ನು ಹಾಗೂ ಆಡಳಿತಗಾರರನ್ನು ಪ್ರಭಾವಿ ಸ್ಥಾನದಲ್ಲಿಟ್ಟರು. ಸ್ವಾತಂತ್ರ್ಯೋತ್ತರ ಭಾರತದ ಎಲ್ಲಾ ಬವಣೆಗಳಿಗೆ ನೆಹರೂ ಹಾಗೂ ಈ ಧೀಮಂತವರ್ಗದ ಸೆಕ್ಯೂಲರ್‌ವಾದವೇ ಕಾರಣವೆನ್ನುವುದು ಈ ವಿದ್ವಾಂಸರ ವಾದ. ಈ ಟೀಕೆಯ ಹಿಂದಿರುವ ಗ್ರಹಿಕೆಯೆಂದರೆ ಸೆಕ್ಯೂಲರ್‌ವಾದವು ಪಶ್ಚಿಮದ ಆಧುನಿಕತೆಯ ಭಾಗವಾಗಿದೆಯೆನ್ನುವುದು ಮತ್ತು ಪಶ್ಚಿಮದ ಸೆಕ್ಯೂಲರ್‌ವಾದವೆಂದರೆ ಧರ್ಮವನ್ನು ಸಾರ್ವಜನಿಕ ಜೀವನದಿಂದ ಸಂಪೂರ್ಣವಾಗಿ ಬೇರ್ಪಡಿಸುವುದು ಎಂದು. ಈ ಗ್ರಹಿಕೆಯಲ್ಲಿ ಎರಡು ಅಪಾಯಕಾರಿಯಾದ ದೋಷಗಳಿವೆ. ಮೊದಲನೇಯದಾಗಿ ಪಶ್ಚಿಮದಲ್ಲಿ ಸೆಕ್ಯೂಲರ್‌ವಾದವು ಏಕಾಕೃತಿಯದಾಗಿತ್ತು ಮತ್ತು ಧರ್ಮವನ್ನು ಸಂಪೂರ್ಣವಾಗಿ ರಾಜಕೀಯದಿಂದ ಬೇರ್ಪಡಿಸಿತು ಎನ್ನುವುದು ಅಚಾರಿತ್ರಿಕವಾದ ತಪ್ಪು ಗ್ರಹಿಕೆ. ಉದಾಹರಣೆಗೆ ಇಂಗ್ಲೆಂಡ್‌ನಲ್ಲಿ ಧರ್ಮ ಹಾಗೂ ರಾಜಸತ್ತೆಗಳ (The Church and the State) ಕುರಿತ ವಿವಾದವು ಹಲವಾರು ಶತಮಾನಗಳವರೆಗೆ ನಡೆಯಿತು. ಹೆನ್ರಿ ದ ಸೆಕೆಂಡ್ (Henry II) ದೊರೆಯ ಕಾಲದಲ್ಲಿ ಅಂದರೆ ಹನ್ನೊಂದನೇ ಶತಮಾನದಲ್ಲಿ ಈ ವಿವಾದವು ಮುಖ್ಯವಾಗಿ ಅಪರಾಧ ಮಾಡುವ ಪಾದ್ರಿಗಳನ್ನು ಯಾರು ಶಿಕ್ಷಿಸಬೇಕು ಎನ್ನುವ ಸಮಸ್ಯೆಗೆ ಸಂಬಂಧಿಸಿತ್ತು. ಈ ಅಧಿಕಾರವು ಪ್ರಭುತ್ವಕ್ಕೆ ಇರಬೇಕೆಂದು ಅವನ ವಾದವಾಗಿತ್ತು. ಆದರೆ ಸ್ವತಃ ಅವನೇ ಕ್ಯಾಂಟರ್‌ಬರಿಯ ಧರ್ಮಗುರುವಾಗಿ ನೇಮಕಗೊಳಿಸಲು ಸಹಾಯ ಮಾಡಿದ್ದ ಅವನ ಸ್ನೇಹಿತ ಥಾಮಸ್ ಬೆಕೆಟ್ ಈ ಅಧಿಕಾರವು ಚರ್ಚಿಗೆ ಇರಬೇಕೆಂದು ವಾದಿಸಿದ. ಇದು ಮುಂದೆ ಅವನ ಕೊಲೆಗೆ ಕಾರಣವಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆ ಕಾಲದಲ್ಲಿ ಅಂದರೆ ಮಧ್ಯಯುಗದಲ್ಲಿ Church ಎಂದರೆ ರೋಮ್‌ನಲ್ಲಿದ್ದು ಇಡೀ ಯೂರೋಪಿನ ಮೇಲೆ ಅಪಾರವಾದ ಅಧಿಕಾರ ಹಾಗೂ ಆಸ್ತಿಯನ್ನು ಹೊಂದಿದ್ದ ರೋಮನ್ ಚರ್ಚ್ ಆಗಿತ್ತು. ಇಂಗ್ಲೆಂಡ್‌ನಂಥ "ದೇಶ" ಗಳಲ್ಲಿ ಈ ಚರ್ಚು ನೇರವಾಗಿ ಅಪಾರವಾದ ಆಸ್ತಿಯನ್ನು ಹೊಂದಿತ್ತು. ಅಲ್ಲದೇ ಎಲ್ಲಾ ಉತ್ಪಾದನೆಯಲ್ಲಿ ೧/೧೦ ರಷ್ಟನ್ನು ಪ್ರತಿಯೊಬ್ಬರೂ ಚರ್ಚಿಗೆ ಕೊಡಬೇಕಾಗುತ್ತಿತ್ತು. ಅಪಾರವಾದ ಶ್ರೀಮಂತಿಕೆ ಹಾಗೂ ಅಧಿಕಾರದ ದುರ್ಬಳಕೆ ಮಾಡಿಕೊಂಡ ಪಾದ್ರಿಗಳು ಸಾಮಾನ್ಯ ಜನರ ರೋಷಕ್ಕೆ ಕಾರಣರಾಗಿದ್ದರು. ಚರ್ಚು ಕೂಡ ಲೌಕಿಕವಾದ

ರಾಜಕೀಯದಲ್ಲಿ ನೇರವಾಗಿ ಭಾಗವಹಿಸುತ್ತಿತ್ತು. ಇದು ಶತಮಾನಗಳವರೆಗೆ ನಡೆದು ಬಂದು ಮುಂದೆ ಮಾರ್ಟಿನ್ ಲೂಥರ್‌ನ ನೇತೃತ್ವದಲ್ಲಿ Reformation ಚಳುವಳಿಗೆ ಕಾರಣವಾಯಿತು. ಅದೇ ಹೊತ್ತಿಗೆ ಇಂಗ್ಲೆಂಡ್‌ನ ದೊರೆ Henry VIII ರೋಮ್‌ನ ಚರ್ಚಿನಿಂದ ಹೊರಬಂದು Church of England ನ ಸ್ಥಾಪನೆಗೆ ಕಾರಣವಾದ. ಇದು ಅಲ್ಲಿಗೆ ಮುಗಿಯಲಿಲ್ಲ. ೧೭ನೇ ಶತಮಾನದಲ್ಲಿ ನಡೆದ ಆಂತರಿಕ ಯುದ್ಧ, ದೊರೆ Charles ನ ಮರಣದಂಡನೆ ವ್ಯಾಪಕವಾದ ಹಿಂಸೆ ಇವೆಲ್ಲವುಗಳ ನಂತರ ೧೮ನೇ ಶತಮಾನದ ಹೊತ್ತಿಗೆ ಧರ್ಮವನ್ನು ವೈಯಕ್ತಿಕ ನಂಬಿಕೆ ಹಾಗೂ ಆಚರಣೆಯನ್ನಾಗಿ ನೋಡುವ ಪ್ರವೃತ್ತಿ ಬೆಳೆಯಿತು. ಇದಕ್ಕೆ ಅತ್ಯಂತ ಪ್ರಬಲವಾದ ಬೆಂಬಲ ದೊರೆತಿದ್ದು ೧೭ನೇ ಶತಮಾನದ ಕೊನೆಯ ಭಾಗದಲ್ಲಿ ಆರಂಭಗೊಂಡ ಜ್ಞಾನಪರ್ವದ ಚಳುವಳಿ ಹಾಗೂ ಅದರ ಭಾಗವಾಗಿದ್ದ ವಿಜ್ಞಾನದ ಪ್ರಗತಿಯಿಂದ.

ಈ ಎಲ್ಲಾ ವಿವರಗಳನ್ನು ನೋಡಿದರೆ ಪಶ್ಚಿಮದಲ್ಲಿ ಹಲವಾರು ಶತಮಾನಗಳ ಸಂಕೀರ್ಣವಾದ ಚರಿತ್ರೆಯ ಫಲವಾಗಿ ಒಂದು ಮಾದರಿಯ ಸೆಕ್ಯೂಲರ್‌ವಾದವು ಹುಟ್ಟಿಕೊಂಡಿತು. ಇದು ಧರ್ಮವಿರೋಧಿಯಾಗಿರಲಿಲ್ಲ. ಬದಲಾಗಿ ಧರ್ಮ ಹಾಗೂ ರಾಜಕೀಯಗಳು ವಿಭಿನ್ನ ವಲಯಗಳು ಎನ್ನುವ ಪರಿಕಲ್ಪನೆ ಇದಾಗಿತ್ತು. ಈ ನಂಬಿಕೆಯ ಪರಾಕಾಷ್ಠೆಯೆಂದರೆ ಅಮೇರಿಕದ ಸಂವಿಧಾನದ ಮೊದಲನೇಯ ತಿದ್ದುಪಡಿಯ ಪ್ರಕಾರ ಈ ಎರಡೂ ವಲಯಗಳ ನಡುವೆ a wall of separation ಇರಬೇಕೆನ್ನುವುದು. ಪಶ್ಚಿಮದ ಸೆಕ್ಯೂಲರ್‌ವಾದವು ಇಂಥ ಗೋಡೆಯನ್ನು ಯಶಸ್ವಿಯಾಗಿ ನಿರ್ಮಿಸಿತು ಎಂದು ಹೇಳುವುದು ಅಚಾರಿತ್ರಿಕವಾದ ಮಾತು. ಸಾಧ್ಯವಿದ್ದಷ್ಟು ಮಟ್ಟಿಗೆ ಧರ್ಮ ಹಾಗೂ ರಾಜಕಾರಣಗಳು ಬೇರೆಯಾಗಿರಬೇಕು ಎನ್ನುವ ಆಶಯವನ್ನೇ ಸೆಕ್ಯೂಲರ್‌ವಾದವನ್ನಾಗಿ ಪಶ್ಚಿಮದಲ್ಲಿ ನೋಡಲಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಭಾರತೀಯ ಬುದ್ಧಿಜೀವಿಗಳು ಪಶ್ಚಿಮದಿಂದ ಸೆಕ್ಯೂಲರ್‌ವಾದವನ್ನು ಆಮದು ಮಾಡಿಕೊಂಡು ಬಹುಸಂಖ್ಯಾತರ ಮೇಲೆ ಹೇರಲು ಪ್ರಯತ್ನಿಸುತ್ತಾರೆ ಎನ್ನುವ ಹೇಳಿಕೆಯ ಅರ್ಥವೇನು? ಯಾವ ಪಶ್ಚಿಮದಲ್ಲಿ ಅಂಥ ಸೆಕ್ಯೂಲರ್‌ವಾದವಿತ್ತು? ಇದಕ್ಕೆ ಉತ್ತರವೆಂದರೆ ಪಶ್ಚಿಮದ ಚರಿತ್ರೆಯ ಬಗ್ಗೆ ಅರೆತಿಳುವಳಿಕೆಯಿಂದ ಇಂಥ ಕಟ್ಟುವಿಕೆಗಳು ನಡೆದಿವೆ.

ಇನ್ನು ಭಾರತದ ಚರಿತ್ರೆಯಲ್ಲಿ ಎಲ್ಲಾ ಕಾಲದಲ್ಲಿಯೂ ಧರ್ಮವೇ ಪ್ರಧಾನವಾಗಿತ್ತು ಮತ್ತು ಇಲ್ಲಿಯ ಪ್ರಭುತ್ವಗಳು ಧರ್ಮವನ್ನೇ ಅವಲಂಬಿಸಿದ್ದವು ಎನ್ನುವುದೂ ಒಂದು ಕಟ್ಟುಕತೆಯಾಗಿದೆ. ಇಲ್ಲಿಯೂ ಕೂಡ 'ಧಾರ್ಮಿಕ' ಹಾಗೂ 'ಲೌಕಿಕ' ಎನ್ನುವ ವಿಭಿನ್ನ ವಲಯಗಳ ಬಗ್ಗೆ ಖಚಿತವಾದ ತಿಳುವಳಿಕೆ ಇತ್ತು. ಧರ್ಮವೇ ಅಂತಿಮವಾಗಿ ನಿರ್ಣಾಯಕವಾಗಿತ್ತು ಎನ್ನುವುದಾದರೆ ಹಲವಾರು ದೊರೆಗಳು ತಮ್ಮ ಆಳ್ವಿಕೆಯ ಕಾಲದಲ್ಲಿಯೇ ಮತಾಂತರಗೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಮತಾಂತರದಿಂದಾಗಿ ಅಧಿಕಾರವನ್ನು ಕಳೆದುಕೊಂಡ ಉದಾಹರಣೆಗಳು ತುಂಬಾ

ಕಡಿಮೆ. ನಿಜವೇನೆಂದರೆ ಇತಿಹಾಸದ ಒಂದು ಹಂತದಲ್ಲಿ ವರ್ಣಾಶ್ರಮದ ಸಿದ್ಧಾಂತವು ಪ್ರಭಾವಶಾಲಿಯಾಗಿ ಬೆಳೆಯಿತು. (ಅದು ಸಾಮಾಜಿಕ ವಾಸ್ತವವಾಗಿತ್ತೆಂದು ನಾನು ಹೇಳುತ್ತಿಲ್ಲ. ಅದು ಸಿದ್ಧಾಂತವಾಗಿತ್ತು). ಈ ಸಿದ್ಧಾಂತದ ಪ್ರಕಾರ ಕ್ಷತ್ರಿಯ ದೊರೆಗಳು. ಬ್ರಾಹ್ಮಣ ಧಾರ್ಮಿಕ ಅಧಿಕಾರವನ್ನು ಒಪ್ಪಬೇಕಾಗಿತ್ತು. ಇಂಥ ಹೊಂದಾಣಿಕೆಯು ಅಪಾರವಾದ ಸಂಘರ್ಷದ ನಂತರ ಮಾಡಿಕೊಳ್ಳಲಾದ ಒಂದು ಒಪ್ಪಂದವಾಗಿತ್ತು. ಹಾಗೆಂದ ಮಾತ್ರಕ್ಕೆ ಭಾರತೀಯ ಇತಿಹಾಸದಲ್ಲಿ ರಾಜಕಾರಣವು ಧರ್ಮದ ಅನುಪಾಲನೆಯನ್ನು ಮಾಡಿತು ಎನ್ನುವುದಕ್ಕೆ ಆಧಾರವಿಲ್ಲ. ಇಲ್ಲಿಯೂ ಲೌಕಿಕ ರಾಜಕಾರಣವು ಪ್ರಧಾನವಾಗಿತ್ತು ಹಾಗೂ ಅಧಿಕಾರದ ಮುಖ್ಯ ನೆಲೆಯಾಗಿತ್ತು. ಬಹು ಭಾಷಿಕ, ಬಹುಧರ್ಮೀಯವಾದ ಇಲ್ಲಿಯ ಸಂದರ್ಭದಿಂದಾಗಿ ಇಲ್ಲಿಯ ಪ್ರಭುತ್ವಗಳು ಎಲ್ಲಾ ಧರ್ಮಗಳ ಸಹಬಾಳ್ವೆಯನ್ನು ರಾಜಕೀಯವಾಗಿ ಒಪ್ಪಿಕೊಳ್ಳಬೇಕಾಯಿತು. ಇದು 'ಧರ್ಮನಿರಪೇಕ್ಷತೆ'ಯ ಒಂದು ಮಾದರಿಯಾಗಿತ್ತು. ಅಂದರೆ ಎಲ್ಲಾ ಧರ್ಮಗಳನ್ನು ದೂರವಿಡುವುದಲ್ಲ. ಬದಲಾಗಿ ಯಾವುದೇ ಒಂದು ಧರ್ಮವನ್ನು ಪ್ರಭುತ್ವವು ಬೆಂಬಲಿಸಬಾರದು ಎನ್ನುವ ನಿಲುವು. ಇದು ಒಂದು ಆದರ್ಶ ಹಾಗೂ ಸಿದ್ಧಾಂತವಾಗಿತ್ತು. ವಾಸ್ತವದಲ್ಲಿ ಬಲಶಾಲಿಯಾದ ದೊರೆಯ ಧರ್ಮಕ್ಕೆ ವಿಶೇಷವಾದ ಸವಲತ್ತುಗಳು ದೊರೆಯುತ್ತಿದ್ದವು. ಜನರು ಆ ಧರ್ಮಕ್ಕೆ ಮತಾಂತರ ಹೊಂದುತ್ತಿದ್ದರು. ಆದರೆ ರಾಜಕಾರಣವನ್ನು ಧರ್ಮಕ್ಕೆ ಅಡಿಯಾಳಾಗಿಸಿದ ಪ್ರಭುತ್ವದ ಉದಾಹರಣೆಗಳು ಭಾರತದ ಚರಿತ್ರೆಯಲ್ಲಿ ಕಡಿಮೆ. ಆಧುನಿಕ ಪರಿಕಲ್ಪನೆಯನ್ನು ಆಧುನಿಕ ಪೂರ್ವ ಪ್ರಭುತ್ವಗಳಿಗೆ ಬಳಸಬಾರದು. ಆದರೆ ಸ್ಥೂಲವಾಗಿ ಈ ಪ್ರಭುತ್ವಗಳು ತಮ್ಮ ವ್ಯವಹಾರದ ಮಟ್ಟದಲ್ಲಿ ಧರ್ಮನಿರಪೇಕ್ಷವಾಗಿದ್ದವು ಎನ್ನುವುದರಲ್ಲಿ ಉತ್ಪ್ರೇಕ್ಷೆ ಇಲ್ಲ.

ಚರಿತ್ರೆಯ ಈ ಪ್ರಸ್ತಾಪಗಳಿಂದ ಕಲಿಯಬೇಕಾದ ಅಂಶವೆಂದರೆ ಪಶ್ಚಿಮದ ಸೆಕ್ಯೂಲರ್‌ವಾದ, ಭಾರತದ ಆಧ್ಯಾತ್ಮಿಕವಾದ ಇಂಥ ಪರಿಕಲ್ಪನೆಗಳಿಂದ ಹೆಚ್ಚು ಪ್ರಯೋಜನವಾಗಲಾರದು. ಅವುಗಳನ್ನು ಬಳಸಿಕೊಂಡು ಸ್ವಾತಂತ್ರ್ಯೋತ್ತರ ಭಾರತದ ಸಂದರ್ಭವನ್ನು ವಿವರಿಸುವುದು ನಮ್ಮನ್ನು ದಾರಿ ತಪ್ಪಿಸುತ್ತದೆ. ಆಧುನಿಕ ಭಾರತದಲ್ಲಿ ಸ್ವರಾಜ್ಯ ಅಥವಾ ಸ್ವಾತಂತ್ರ್ಯಕ್ಕಾಗಿ ಹೋರಾಟಗಳು ಆರಂಭವಾದ ಕಾಲದಿಂದಲೇ ಸಂಪ್ರದಾಯವಾದಿಗಳು ಹಾಗೂ ಆಧುನಿಕ ಮಧ್ಯ ಘರ್ಷಣೆಗಳನ್ನು ಕಾಣುತ್ತೇವೆ. ಬಾಳಗಂಗಾಧರ ತಿಲಕ್‌ರ ಕಾಲದಿಂದಲೇ ಸ್ವಾತಂತ್ರ್ಯ ಹೋರಾಟದಲ್ಲಿ ಹಿಂದೂ ಧರ್ಮವನ್ನು ಮುನ್ನೆಲೆಗೆ ತರುವ ಪ್ರಯತ್ನಗಳು ನಡೆದವು. ತಿಲಕ್‌ರಿಗೆ "ಆರ್ಯ" ನಾಗರೀಕತೆಯ ಬಗ್ಗೆ, ವೈದಿಕ ಸಂಸ್ಕೃತಿಗಳ ಬಗ್ಗೆ ಆಳವಾದ ನಂಬಿಕೆ ಇತ್ತು. ಅಲ್ಲದೇ ಗಣೇಶೋತ್ಸವದಂಥ ಧಾರ್ಮಿಕ ಆಚರಣೆಗಳನ್ನು ಅವರು ಹಿಂದೂ ರಾಷ್ಟ್ರೀಯತೆಯನ್ನು ಕಟ್ಟುವುದಕ್ಕಾಗಿ ಬಳಸಿಕೊಂಡರು. ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ ಆ ಕಾಲದ

ನಿಜವಾದ ಸಂಘರ್ಷ ನಡೆದದ್ದು ತಿಲಕವಾರಿ ಸಂಪ್ರದಾಯವಾದಿಗಳು ಹಾಗೂ ದಲಿತ ಸಂಘಟನೆಗಳ ನಡುವೆ. ಜ್ಯೋತಿಬಾ ಫುಲೆ ಅವರ ಸತ್ಯಶೋಧಕ ಮಂಡಳಿಯ ಸದಸ್ಯರು 'ಆರ್ಯಭಟ್‌ಜಿ' ಸನಾತನಿಗಳ ಮೇಲೆ ಪ್ರಬಲವಾದ ಪ್ರಹಾರವನ್ನೇ ಮಾಡಿದರು. ಅಲ್ಲದೆ ಭಟ್‌ಜಿ–ಶೇಟ್‌ಜಿ ಅಂದರೆ ಬ್ರಾಹ್ಮಣ–ಬನಿಯಾಗಳ ಕೂಟದ ಮೇಲೆ ಪ್ರಖರವಾದ ಟೀಕೆಯನ್ನೂ ಮಾಡಿದರು. ಇದಕ್ಕಾಗಿ ಲಾವಣಿಗಳನ್ನು, ತಮಾಶಾ ಶೈಲಿಯ ನಾಟಕಗಳನ್ನು ಬಳಸಿಕೊಂಡರು. ವಿಶೇಷವಾಗಿ ಬ್ರಾಹ್ಮಣ ಜಾತಿಯಲ್ಲಿ ವಿಧವೆ ಯರನ್ನು ನಡೆಸಿಕೊಳ್ಳುವ ರೀತಿಯ ಬಗ್ಗೆ ಹರಿತವಾದ ವ್ಯಂಗ್ಯವನ್ನು ಬಳಸಿದರು. ಇದೇ ಹೊತ್ತಿಗೆ ಸಂಪ್ರದಾಯವಾದಿಗಳು ಫುಲೆಯವರು ದಲಿತರು ಹಾಗೂ ಸ್ತ್ರೀಯರಿಗಾಗಿ ಆರಂಭಿಸಿದ ಶಾಲೆಗಳನ್ನು ನಿಲ್ಲಿಸಲು ಪ್ರಯತ್ನಿಸಿದರು. ಶೂದ್ರರು–ದಲಿತರು ಹಕ್ಕುಗಳನ್ನು ಪಡೆಯದಂತೆ ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಫುಲೆಯವರು ಪ್ರತಿನಿಧಿಸಿದ ನಿಲುವನ್ನು ಸೆಕ್ಯೂಲರ್ ಎಂದು, ತಿಲಕ್‌ರ ಶಿಷ್ಯರು ಪ್ರತಿನಿಧಿಸಿದ ನಿಲುವನ್ನು ಸನಾತನವಾದಿ ಎಂದು ಗುರುತಿಸಲಾಯಿತು. ಭಾರತದಲ್ಲಿ ಸೆಕ್ಯೂಲರ್‌ವಾದದ ನೆಲೆಗಳನ್ನು ಇಂಥ ವಿಶಿಷ್ಟ ಸಂದರ್ಭದಲ್ಲಿ ಗುರುತಿಸಬೇಕಾಗಿದೆ. ಇಲ್ಲಿ ಪ್ರಭುತ್ವ ಮತ್ತು ಚರ್ಚುಗಳ ವೈರುಧ್ಯವಿರಲಿಲ್ಲ. ಅಥವಾ ಪ್ರಭುತ್ವವು ಧರ್ಮನಿರಪೇಕ್ಷವಾಗಿರಬಹುದೇ ಎನ್ನುವ ಸೈದ್ಧಾಂತಿಕ ಚರ್ಚೆಗಳಿರಲಿಲ್ಲ. ಅನಿಷ್ಟ ನಂಬಿಕೆಗಳನ್ನು ಹಾಗೂ ಸಂಪ್ರದಾಯಗಳನ್ನು ತ್ಯಜಿಸಬೇಕೆನ್ನುವ ಸುಧಾರಣಾ ವಾದಿಗಳನ್ನು ಹೀಯಾಳಿಸುವ ಕೆಲಸದಲ್ಲಿ ಅವರನ್ನು ಸಂಕುಚಿತವಾದ ಅರ್ಥದಲ್ಲಿ ಸೆಕ್ಯೂಲರ್‌ವಾದಿಗಳೆಂದು ಗುರುತಿಸಲಾಯಿತು. ಸ್ವಾತಂತ್ರ್ಯದ ನಂತರ ಇದೇ ಧಾಟಿಯಲ್ಲಿ ನೆಹರು ಹಾಗೂ ಅವರನ್ನು ಬೆಂಬಲಿಸುವ ಧೀಮಂತ ವರ್ಗವನ್ನು ಹುಸಿ ಸೆಕ್ಯೂಲರ್‌ವಾದಿಗಳೆಂದು ಬಿಂಬಿಸಲಾಯಿತು. ೧೯೨೦ರಿಂದಲೇ ಸಂಪ್ರದಾಯವಾದಿ ಹಿಂದೂ ಸಂಸ್ಥೆಗಳು ಸ್ಥಾಪನೆಗೊಂಡು ಈ ಸಂಘದ ಅನೇಕ ಸದಸ್ಯರು ಕಾಂಗ್ರೆಸ್‌ನಲ್ಲಿ ಕ್ರಿಯಾಶೀಲರಾಗಿದ್ದರು. ಹೀಗಾಗಿ ಸಮಾಜ ಸುಧಾರಣೆ ಬಯಸಿದ "ಉಗ್ರಪಂಥೀಯ" ಕಾಂಗ್ರೆಸ್ ಬಣದ ಮೇಲೆ ದೈಹಿಕ ಹಿಂಸೆ ಕೂಡಾ ಕಾಂಗ್ರೆಸ್ ಸಮ್ಮೇಳನಗಳಲ್ಲಿ ನಡೆದವು. ಗಾಂಧಿ ಮತ್ತು ಮುಂದೆ ನೆಹರು ಅವರ ಪ್ರವೇಶದಿಂದಾಗಿ ಈ ಬಲಪಂಥೀಯ ಶಕ್ತಿಗಳು ನೇರವಾಗಿ ತಮ್ಮ ರಾಜಕೀಯ ಕಾರ್ಯಕ್ರಮಗಳನ್ನು ನೆರವೇರಿಸುವುದು ಕಷ್ಟವಾಯಿತು. ಆರ್.ಎಸ್.ಎಸ್. ಸಂಘಟನೆಯ ಮೂಲಕ ಸೆಕ್ಯೂಲರ್‌ವಾದವನ್ನು ಹಿಮ್ಮೆಟ್ಟಿಸುವ ಪ್ರಯತ್ನಗಳು ಆರಂಭವಾದವು. ಇವೆಲ್ಲವುಗಳನ್ನು ಗಮನಿಸಿದರೆ ಭಾರತದಲ್ಲಿ ಸೆಕ್ಯೂಲರ್‌ವಾದದ ಸ್ವರೂಪವೇ ಬೇರೆ; ಅದು ಪಶ್ಚಿಮದ ಸೆಕ್ಯೂಲರ್‌ವಾದದ ಅನುಕರಣೆಯಾಗುವುದು ಅಸಾಧ್ಯವಾಗಿತ್ತು ಎನ್ನುವುದು ಅರ್ಥವಾಗುತ್ತದೆ. ಹೀಗಾಗಿ ಬಲಪಂಥೀಯ ಹಾಗೂ ಮೂಲಭೂತವಾದಿ ನೆಲೆಗಳಿಂದ ಬಂದ ಸೆಕ್ಯೂಲರ್‌ವಾದದ ವಿಮರ್ಶೆಯನ್ನು ಸೈದ್ಧಾಂತಿಕವಾಗಿ ಗಂಭೀರವಾಗಿ ಪರಿಗಣಿಸುವುದು ಅಸಾಧ್ಯ.

ಸೆಕ್ಯೂಲರ್‌ವಾದದ ವಿರೋಧವು ಸಂಪ್ರದಾಯದ ಎಲ್ಲಾ ಅಂಶಗಳನ್ನು ಇದ್ದ ಹಾಗೆ ಇದ್ದುಕೊಳ್ಳುವ ಉದ್ದೇಶವನ್ನು ಹೊಂದಿದೆ. ಅಲ್ಲದೆ ವರ್ಣ, ಜಾತಿ, ಲಿಂಗ ಇವುಗಳನ್ನು ಆಧರಿಸಿದ ಅಸಮಾನತೆಗಳನ್ನು ಮುಂದುವರೆಸುವ ಉದ್ದೇಶವನ್ನು ಹೊಂದಿದೆ.

ಸೆಕ್ಯೂಲರ್‌ವಾದದ ಇನ್ನೊಂದು ಮಾದರಿಯ ವಿಮರ್ಶೆ ಬಂದಿರುವುದು ಅದರ ಸೋಲುಗಳ ಆಧಾರದ ಮೇಲೆ. ಅಂದರೆ ಭಾರತದಲ್ಲಿ ನೆಹರು ಕಾಲದಿಂದ ಇಲ್ಲಿಯವರೆಗಿನ ಪ್ರಭುತ್ವವು ಸೆಕ್ಯೂಲರ್‌ವಾದವನ್ನು ಸಮರ್ಪಕವಾಗಿ, ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲೇ ಇಲ್ಲವೆನ್ನುವ ವಾದ ಇದಾಗಿದೆ. ಅಂದರೆ ಭಾರತದಲ್ಲಿ ಪ್ರಭುತ್ವದ ನೈಜ ಸ್ವರೂಪವೂ ಸೆಕ್ಯೂಲರ್ ಆಗಿಲ್ಲ. ಇದು ಬಹುಮಟ್ಟಿಗೆ ನಿಜ. ಏಕೆಂದರೆ ಸ್ವಾತಂತ್ರ್ಯದ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್‌ನಲ್ಲಿ ಸಂಪ್ರದಾಯವಾದಿ ಜಮೀನದಾರಿ ಶಕ್ತಿಗಳೇ ಪ್ರಬಲವಾಗಿದ್ದವು. ಇವು ಸಂವಿಧಾನದ ಆಶಯಗಳನ್ನು 'ಸ್ವಾತಂತ್ರ್ಯ' 'ಸಮಾನತೆ'ಯ ಮೌಲ್ಯಗಳನ್ನು ಒಪ್ಪಿಕೊಂಡಿರಲಿಲ್ಲ. ಹೀಗಾಗಿ ಹಣ, ದರ್ಪ ಹಾಗೂ ಜಾತೀಯತೆಯಿಂದ ಚುನಾವಣೆಯಲ್ಲಿ ಗೆಲ್ಲುವುದರಲ್ಲಿ ಅವು ಅಧಿಕಾರದ ನೆಲೆಯನ್ನು ಕಂಡುಕೊಂಡವು. ಸೆಕ್ಯೂಲರ್‌ವಾದದ ಪರೀಕ್ಷೆಯಾಗುವಂಥ ಸಂದರ್ಭಗಳು ಎದುರಾದಾಗ ಈ ಶಕ್ತಿಗಳು "ಧಾರ್ಮಿಕ ಭಾವನೆಗಳನ್ನು ನೋಯಿಸಬಾರದು" ಎನ್ನುವ ಅನುಕೂಲಸಿಂಧು ಹೊಂದಾಣಿಕೆಗಳನ್ನು ಮಾಡಿಕೊಂಡುಬಿಡುತ್ತಿದ್ದವು. ಇದರಿಂದಾಗಿ ಕ್ರಮೇಣವಾಗಿ ಭಾರತದ ಪ್ರಭುತ್ವವು ತನ್ನ ಸೆಕ್ಯೂಲರ್ ಸ್ವರೂಪವನ್ನು ಕಳೆದುಕೊಂಡು ತನ್ನ ನೈತಿಕ ಅಧಿಕಾರವನ್ನು ಕಳೆದುಕೊಂಡಿತು. ಹೀಗಾಗಿ ಸೆಕ್ಯೂಲರ್‌ವಾದವನ್ನು ವಿರೋಧಿಸುವ ಸಂಘಟನೆಗಳು ಸಂವಿಧಾನ, ಕಾನೂನುಗಳನ್ನು ಮೀರಿ ನಿಲ್ಲುವ ಧಾರ್ಷ್ಟ್ಯತೆಯನ್ನು ಪಡೆದುಕೊಂಡವು. ಇದು ಪ್ರಭುತ್ವದ ಸೋಲಾಗಿದೆ. ಆದರೆ ಅದನ್ನು ಸೆಕ್ಯೂಲರ್‌ವಾದದ ಸೋಲೆಂದು ಬಿಂಬಿಸಲಾಗುತ್ತದೆ. ಇದೊಂದು ವಿತಂಡವಾದದ ಉದಾಹರಣೆಯಾಗಿದೆ.

ಗಂಭೀರವಾಗಿ ಚರ್ಚಿಸಬಹುದಾದ ಅಂಶವೆಂದರೆ ಭಾರತದ ಬಹುಮುಖಿ ಸಂಪ್ರದಾಯಗಳಲ್ಲಿ ಪ್ರಬಲವಾಗಿದ್ದ ಸೆಕ್ಯೂಲರ್ ನೆಲೆಗಳು ಹಾಗೂ ಅವುಗಳ ಜೊತೆಗೆ ಜೀವಂತವಾದ ಸಂಬಂಧವನ್ನು ಹೊಂದುವ ಬಗೆ. ಸೆಕ್ಯೂಲರ್‌ವಾದವನ್ನು ಪಶ್ಚಿಮದ ಕನ್ನಡಿಯ ಮೂಲಕ ನೋಡದಿದ್ದರೆ ಭಾರತೀಯ ಪರಂಪರೆಗಳಲ್ಲಿ ಸೆಕ್ಯೂಲರ್ ಎನ್ನಬಹುದಾದ ಅನೇಕ ಸದೃಢವಾದ ಎಳೆಗಳನ್ನು ಕಾಣಬಹುದಾಗಿದೆ. ಈ ಎಳೆಗಳನ್ನು ಸರ್ವಧರ್ಮ ಸಮಭಾವ, ಸರ್ವಧರ್ಮಸಹಿಷ್ಣುತೆ ಎನ್ನುವ ಹೆಸರಿನಲ್ಲಿ ಕರೆಯಲಾಗಿದೆ. ಇವು ಧರ್ಮವನ್ನು ತಿರಸ್ಕರಿಸುವುದಿಲ್ಲ. ಬದಲಾಗಿ ಧರ್ಮದ, ಅದರಲ್ಲೂ ಸಾಂಸ್ಥಿಕವಾದ ಧರ್ಮದ ಒಳಗಣ ಕರ್ಮಠವಾದ, ಸಮಾನತೆ ವಿರೋಧಿಯಾದ ಅಂಶಗಳನ್ನು ತೀವ್ರವಾದ ವಿಮರ್ಶೆಗೆ ಒಡ್ಡಿ ತಿರಸ್ಕರಿಸುತ್ತವೆ. ಅಲ್ಲದೆ ಸಹನೆ, ಸಮಾನತೆ ಹಾಗೂ ಸ್ವಾತಂತ್ರ್ಯದ ನಿಲುವುಗಳನ್ನು ಪ್ರತಿಷ್ಠಾಪಿಸುತ್ತವೆ. ಬುದ್ಧನ ಧರ್ಮವು ಈ ಪ್ರಯತ್ನವನ್ನು

ಅಗಾಧವಾದ ರೀತಿಯಲ್ಲಿ ಮಾಡಿತು. ಅದು ಶ್ರೇಷ್ಠ ಮಟ್ಟದ ಮಾನವತಾವಾದವನ್ನು ಬೋಧಿಸಿತು. ಆದ್ದರಿಂದಲೇ ಅಂಬೇಡ್ಕರ್ ಅವರು ಬೌದ್ಧ ಧರ್ಮದ ಬಗ್ಗೆ religion ಪದವನ್ನು ಬಳಸಬಾರದೆಂದು ವಾದಿಸುತ್ತಾರೆ. ಆನಂತರ ಸರಿಸುಮಾರು ೮-೯ನೇ ಶತಮಾನದಿಂದ ಆರಂಭವಾಗಿ ೧೬-೧೭ನೇ ಶತಮಾನದ ವರೆಗೆ ಭಾರತದ ವಿವಿಧ ಭಾಷೆಗಳು ಹಾಗೂ ಸಮಾಜಗಳಲ್ಲಿ ಮುನ್ನಲೆಗೆ ಬಂದು ಅತ್ಯಂತ ಪ್ರಭಾವಿಯಾಗಿದ್ದ ಭಕ್ತಿ ಚಳುವಳಿಗಳು ಇದೇ ಪ್ರಯತ್ನವನ್ನು ಮುಂದುವರೆಸಿದವು. ದೈವಕ್ಕೆ ಸಂಪೂರ್ಣವಾಗಿ ಶರಣಾಗಬೇಕೆನ್ನುವ ನಿಲುವನ್ನು ಬೋಧಿಸಿದರು. ಇನ್ನೆಲ್ಲಾ ನಂಬಿಕೆಗಳಲ್ಲಿ ಈ ಭಕ್ತಿ ಸಂಪ್ರದಾಯಗಳು, ಸೆಕ್ಯೂಲರ್‌ವಾದಕ್ಕೆ ಹತ್ತಿರವಾಗಿದ್ದವು. ಮತ್ತೆ ಇಲ್ಲಿ ಆಧುನಿಕಪೂರ್ವ ಕಾಲದ ವಿದ್ಯಮಾನಗಳಿಗೆ ಆಧುನಿಕ ಪರಿಕಲ್ಪನೆಗಳನ್ನು ಅನ್ವಯಿಸುವ ದೋಷದ ಆರೋಪ ಬರುತ್ತದೆ. ಆದರೆ ನನಗೆ ಇದು ತಪ್ಪಾಗಿ ಕಾಣುವುದಿಲ್ಲ. ಇಲ್ಲಿಯ ಆಧುನಿಕಪೂರ್ವ ಅನೇಕ ತಾತ್ವಿಕ ಪರಂಪರೆಗಳು ಆಧುನಿಕ ಸೆಕ್ಯೂಲರ್‌ವಾದದ ಮೌಲ್ಯಗಳನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿಕೊಂಡಿದ್ದವು. ೧೨ನೇ ಶತಮಾನದ ವಚನಕಾರರನ್ನು ಲಿಂಗಾಯತ ಪರಂಪರೆಯೆನ್ನುವುದಕ್ಕಿಂತ ಇತರ ಭಕ್ತಿಪರಂಪರೆಗಳ ಹಾಗೆ ಸೆಕ್ಯೂಲರ್ ಪರಂಪರೆಯೆಂದು ನೋಡುವುದು ಸೂಕ್ತವಾಗಿದೆ. ಹಾಗೆಯೇ ಸೂಫಿ ಪರಂಪರೆಗಳು ಕೂಡ. ಈ ಎಲ್ಲಾ ಪರಂಪರೆಗಳ ಮುಖ್ಯ ಗುಣವೆಂದರೆ ಅವು ಪ್ರಭುತ್ವ, ಅಧಿಕಾರ ಇವುಗಳನ್ನು ತಿರಸ್ಕರಿಸಿ ಬಹುಸಂಖ್ಯಾತ ಜನಸಮುದಾಯಗಳ ಪರವಾಗಿ ಕೆಲಸ ಮಾಡಿದವು. ಸಂಪ್ರದಾಯದ ಅಸಮಾನತೆಗಳ ವಿರುದ್ಧ ಪ್ರಬಲವಾದ ಆಧ್ಯಾತ್ಮಿಕ ವಿರೋಧವನ್ನು ಕಟ್ಟಿಕೊಂಡವು. ಈ ಪರಂಪರೆಗಳು ಜನಸಮುದಾಯದ ನಂಬಿಕೆ ನಡುವಳಿಕೆಗಳನ್ನು ರೂಪಿಸಿದವು. ಹೀಗಾಗಿ ಹಿಂದೂ-ಮುಸ್ಲಿಮ್ ವಿವಿಧ ಅಂಶಗಳು ಜನಸಂಸ್ಕೃತಿಯಲ್ಲಿ ಬೆರೆತು ಹೋದವು. ಇವು ವಿವಿಧ ಧರ್ಮ ಹಾಗೂ ಆಚರಣೆಗಳ ಬಗ್ಗೆ ಸಹಬಾಳ್ವೆ, ಸಹನೆ ಮತ್ತು ಭ್ರಾತೃತ್ವದ ಧೋರಣೆಗಳನ್ನು ಸೆಕ್ಯೂಲರ್ ಪರಂಪರೆಯೆಂದು ಗುರುತಿಸಬೇಕು. ಬಲಪಂಥೀಯರ ಎಲ್ಲಾ ಪ್ರಯತ್ನಗಳ ನಂತರವೂ ಈ ಸೆಕ್ಯೂಲರ್ ಪರಂಪರೆಗಳ ನೆಲೆಗಳು ಇನ್ನೂ ಜೀವಂತವಾಗಿವೆ. ಮುಖ್ಯ ಪ್ರಶ್ನೆಯೆಂದರೆ ಅವುಗಳ ಜೊತೆಗೆ ಅನುಸಂಧಾನ ಮಾಡುವುದಾಗಿದೆ. ಇದು ಸುಲಭವಲ್ಲ, ಇಲ್ಲಿ ಗತಕಾಲದ ವೈಭವೀಕರಣ, ಅತಿ ಆದರ್ಶವಾದಗಳು ದುರ್ಬಲಗೊಳಿಸಿಬಿಡಬಹುದಾಗಿದೆ. ಆದರೆ ಕಠಿಣವಾದರೂ ಇದೊಂದೇ ಹಾದಿ. ಇಲ್ಲದಿದ್ದರೆ ಅಲ್ಪಸಂಖ್ಯಾತರಾದ ಸೆಕ್ಯೂಲರ್‌ವಾದಿಗಳು ಮತ್ತು ಬಲಪಂಥೀಯರು ಸೆಕ್ಯೂಲರ್‌ವಾದದ ಬಗ್ಗೆ ಶುಷ್ಕವಾದ ವಿವಾದದಲ್ಲಿ ತೊಡಗಿಕೊಂಡು ಕಳೆದೇ ಹೋಗಬಹುದು; ಅಥವಾ ಬಹುಸಂಖ್ಯಾತರಿಂದ ಅನ್ಯರಾಗಿ ಬಿಡಬಹುದಾಗಿದೆ. ಇಲ್ಲಿಯ ಚರಿತ್ರೆಯ ಅಗ್ನಿದಿವ್ಯದಲ್ಲಿ ರೂಪುಗೊಂಡ ಸೆಕ್ಯೂಲರ್‌ವಾದವನ್ನು ಈಗ ಪುನಶ್ಚೇತನಗೊಳಿಸುವುದು ಅತ್ಯಂತ ಅವಶ್ಯಕವಾಗಿದೆ.

ನನ್ನ ಅರಿವಿನ ಜಾತ್ಯತೀತತೆ

• ಅಗ್ನಿ ಶ್ರೀಧರ

ನನ್ನ ಬಗ್ಗೆ ನಿಮಗೆ ತಿಳಿದಿದೆ. ನಾನು ವಿದ್ವಾಂಸನಲ್ಲ... ಬಂಡಾಯ ಪ್ರವೃತ್ತಿಯ ಮನುಷ್ಯ... ಈಚಿನ ದಿನಗಳಲ್ಲಿ ಸಿನಿಮಾ ಕುರಿತು ಮಾತನಾಡುತ್ತಿದ್ದೇನೆ... ನಿಮಗೆ ತಿಳಿದಿರಬಹುದು... ಮೊನ್ನೆಯಷ್ಟೆ ನಮ್ಮ ಸಿನಿಮಾ 'ಕಿರಗೂರಿನ ಗಯ್ಯಾಳಿಗಳು' ಬಿಡುಗಡೆಯಾಗಿದೆ. ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಪಾಲುಗೊಂಡು ಇಲ್ಲಿಗೆ ಬಂದಿದ್ದೇನೆ... ಮಾತುಗಳು overlap ಆಗಬಹುದು... ನಾನು ನೋಟ್ಸ್ ಇಟ್ಟುಕೊಂಡು ಮಾತನಾಡುವುದಿಲ್ಲ.

ನೀವು ಒಂದು ಸಂಗತಿಯನ್ನು ಕುರಿತು ಗಂಭೀರವಾಗಿ ಯೋಚಿಸಬೇಕಾಗುತ್ತದೆ. ಈಚೀಚೆಗೆ 'ಜಾತ್ಯತೀತ' ಎನ್ನುವುದು ಲೇವಡಿಯ ಪದವಾಗತೊಡಗಿದೆ. ಜಾತ್ಯತೀತರೆಂದರೆ ಕಪಟಿಗಳೆನ್ನುವ ಅರ್ಥ ಬರುವಂತೆ ಟೀಕಿಸುತ್ತಿದ್ದಾರೆ. ಇದಕ್ಕೆ ಯಾರು ಹೊಣೆ? ಬಲಪಂಥೀಯರಿಗಿಂತಲೂ ಹೆಚ್ಚಾಗಿ ಪ್ರಗತಿಪರ ಗುಂಪುಗಳೆ ಪರಸ್ಪರರನ್ನು ಕೀಳಾಗಿ ಕಾಣುತ್ತಿವೆ. ತತ್ವ ಸಿದ್ಧಾಂತಗಳು ವ್ಯಕ್ತಿಕೇಂದ್ರಿತವಾಗುತ್ತಿವೆ. ನನಗೆ ಪ್ರಿಯವೆನಿಸುವವರು ಮಾತನಾಡಿದ್ದನ್ನೆ ಅಪ್ರಿಯವೆನಿಸುವವರು ಮಾತನಾಡಿದಾಗ ಅಸಹನೆ ಉಂಟಾಗುತ್ತದೆ. ಮಾತನಾಡುವವರ ಬಗ್ಗೆ ಮಾತ್ರವಲ್ಲ... ಮಾತನಾಡುತ್ತಿರುವ ಸಂಗತಿಯೂ ಸಹ ಅಪಥ್ಯವೆನಿಸುತ್ತದೆ. ಈ ವಿಷಯದಲ್ಲಿ ಬಲಪಂಥೀಯರಲ್ಲಿ ತಕರಾರಿಲ್ಲ... ಅವರು ಪರಸ್ಪರ ಕಿತ್ತಾಡುವುದಿಲ್ಲ... ಅವರಲ್ಲಿ ಯಾವುದೆ ಸಂಶಯಗಳಿಲ್ಲ. ಆದರೆ ಪ್ರಗತಿಪರರಲ್ಲಿ ಅದು ಹೇರಳ... ನಾವು ಒಂದು ಧ್ವನಿಯಾಗುವುದನ್ನು ರೂಢಿಸಿಕೊಳ್ಳಬೇಕಿದೆ.

ನಮ್ಮ ಇನ್ನೊಂದು ಸಮಸ್ಯೆಯೆಂದರೆ, ನಾವು ಹೊಸ ಹೃದಯಗಳನ್ನು ತಲುಪಲು ಹೋಗುವುದಿಲ್ಲ... ಯಾರೊಂದಿಗೆ ಮಾತನಾಡುತ್ತೇವೆಯೋ ಅವರೊಡನೆಯೆ ಪದೇ ಪದೇ ಮಾತನಾಡುತ್ತಿರುತ್ತೇವೆ... ನಮ್ಮಲ್ಲಿ ಯಾರನ್ನೆ ಆಗಲಿ ಮಧ್ಯರಾತ್ರಿ ಎಳಿಸಿ ಕೇಳಿ ನೋಡಿ... ಜಾತ್ಯತೀತತೆ ಕುರಿತು ಗಿಣಿಪಾಠದಂತೆ ಹೇಳಿದ್ದನ್ನೆ ಹೇಳುತ್ತಿರುತ್ತೇವೆ. ಟಿಪ್ಪು ಸುಲ್ತಾನ್ ಯಾರು...? ದೇಶಭಕ್ತ... ಆರ್‌ಎಸ್‌ಎಸ್‌ಗಳು ಯಾರು...? ಜನದ್ರೋಹಿಗಳು... ಗಿರೀಶ ಕಾರ್ನಾಡರನ್ನು ಯಾವುದೇ ಸನ್ನಿವೇಶದಲ್ಲಿ ಕೇಳಿ ನೋಡಿ... ಟಿಪ್ಪು ಸುಲ್ತಾನ್ ಈ ನಾಡಿನಲ್ಲಿ ಜನಿಸಿದ ಅತೀ ಶ್ರೇಷ್ಠ ಕನ್ನಡಿಗನೆನ್ನುತ್ತಾರೆ... ಆ ರೀತಿ ಕುರುಡಾಗಿ ಬಡಬಡಿಸುವುದು ಬೇಕೆ...? ಟಿಪ್ಪು ಸುಲ್ತಾನ್ ಬ್ರಿಟಿಷರಿಗೆ ಶರಣಾಗಲಿಲ್ಲ... ದೇಶಾಭಿಮಾನ, ಆತ್ಮಾಭಿಮಾನದಿಂದಾಗಿ ಪ್ರಾಣತ್ಯಾಗ ಮಾಡಿದನೆಂದು ನಾನೂ ಸಹ ಸಾಕಷ್ಟು ಬಾರಿ ಭಾಷಣ ಮಾಡಿದ್ದೇನೆ. ಆದರೆ ಚಾರಿತ್ರಿಕ ವಾಸ್ತವ ಏನನ್ನು ಹೇಳುತ್ತದೆ...?

ಮೂರನೇ ಮೈಸೂರು ಮಹಾಯುದ್ಧದಲ್ಲೆ ಆತ ಸೋತು ಬ್ರಿಟಿಷರಿಗೆ ಶರಣಾಗಿದ್ದ. ಒತ್ತೆ ಹಣಕ್ಕಾಗಿ ಮಕ್ಕಳನ್ನು ಅಡವಿಟ್ಟಿದ್ದ... ನಾಲ್ಕನೇ ಯುದ್ಧದಲ್ಲಿ ಸೋತ... ಬಹುಶಃ ಸಾಮಾನ್ಯ ಸೈನಿಕನೊಬ್ಬ ಅವನು ರಾಜನೆನ್ನುವುದನ್ನು ತಿಳಿಯದೆ ಕತ್ತಿಯಿಂದ ಚುಚ್ಚಿದ್ದರಿಂದಾಗಿ ಸತ್ತ... ಇಲ್ಲವಾದರೆ ಖಂಡಿತವಾಗಿಯೂ ಬಂಧನಕ್ಕೊಳಗಾಗುತ್ತಿದ್ದ... ಆತನನ್ನು ವೈಭವೀಕರಿಸಿ ನಾವು ಮಾತನಾಡುವುದರಿಂದಾಗಿ ಆತನ ವಿರುದ್ಧದ ಆರೋಪಗಳಿಗೆ ಸಮರ್ಪಕವಾಗಿ ಉತ್ತರಿಸಲು ಆಗುವುದಿಲ್ಲ. ಚಿದಾನಂದಮೂರ್ತಿ ಮುಂತಾದವರು ಟಿಪ್ಪು ಸುಲ್ತಾನ್ ಮತಾಂಧ... ಸಾಕಷ್ಟು ಸಾವಿರ, ಲಕ್ಷ ಸಂಖ್ಯೆಗಳಲ್ಲಿ ಹಿಂದೂಗಳನ್ನು ಇಸ್ಲಾಂ ಮತಕ್ಕೆ ಪರಿವರ್ತಿಸಿದನೆಂದು ರೋಷ ವ್ಯಕ್ತಪಡಿಸುತ್ತಾರೆ. ಸನಾತನ ಧರ್ಮದಲ್ಲಿ ಶ್ರೇಣೀಕೃತ ಜಾತಿ ವ್ಯವಸ್ಥೆಯಿದ್ದುದರಿಂದಾಗಿ ಅವರು ಮತಾಂತರವಾದರೆಂದು ನಾವು ವಾದಿಸುತ್ತೇವೆ. ಹಾಗೆ ವಾದಿಸುವ ಮೂಲಕ ಅವರುಗಳು ಹೇಳುವ ಹಾಗೆ ದೌರ್ಜನ್ಯ, ಬಲಾತ್ಕಾರಗಳು ನಡೆದಿರಬಹುದೆಂದು ಪರೋಕ್ಷವಾಗಿ ಒಪ್ಪುತ್ತೇವೆ. ನಾವು ಕೇಳಬೇಕಾದ್ದು ಹಾಗಲ್ಲ... ಟಿಪ್ಪು ಸುಲ್ತಾನ್ ಆಳಿದ್ದು ಕೇವಲ ಎಂಟು ವರ್ಷ... ಅವುಗಳಲ್ಲಿ ನಾಲ್ಕು ವರ್ಷ ಬ್ರಿಟಿಷರೊಡನೆ ಒಪ್ಪಂದದಲ್ಲಿದ್ದ... ಅವನು ಬಲಾತ್ಕಾರದಿಂದ ಮತಾಂತರ ಮಾಡಿಸಿದ್ದರೆ, ಆ ಮತಾಂತರಗೊಂಡವರು ಟಿಪ್ಪು ಸತ್ತ ನಂತರ ಬಹಿರಂಗವಾಗಿ ಪ್ರತಿಭಟಿಸುತ್ತಿರಲಿಲ್ಲವೇ...? ಕಡೆಯ ಪಕ್ಷ ಬದುಕಿದ್ದ ಆತನ ಅನುಯಾಯಿಗಳ ಮೇಲೆ ತಮ್ಮನ್ನು ಧರ್ಮಭ್ರಷ್ಟ ಮಾಡಿದ್ದರಿಂದಾಗಿ ಸೇಡು ತೀರಿಸಿಕೊಳ್ಳುತ್ತಿರಲಿಲ್ಲವೇ...? ಅಂತಹ ಒಂದೇ ಒಂದು ಘಟನೆಯೂ ವರದಿಯಾಗಿಲ್ಲವೆಂದರೆ ಏನರ್ಥ...? ಅದು ಒಪ್ಪಿಗೆಯ, ಬಲಾತ್ಕಾರಗಳಿಲ್ಲದ ಮತಾಂತರ. ಟಿಪ್ಪುವಿನ ಕಾಲಾವಧಿ ಬಿಡಿ... ಮೊನ್ನೆ ಸಂದರ್ಶನ ಒಂದರಲ್ಲಿ ನಮ್ಮ ಜನಪ್ರಿಯ ಲೇಖಕ ಎಸ್ ಎಲ್ ಭೈರಪ್ಪನವರು ಒಂದು ಸಂಗತಿ ಹೇಳಿದ್ದಾರೆ: '...ಪಾಕಿಸ್ತಾನ ಸ್ವತಂತ್ರವಾದಾಗ ಅಲ್ಲಿನ ಹಿಂದೂಗಳ ಸಂಖ್ಯೆ ಶೇಕಡ ಹತ್ತಕ್ಕಿಂತಲೂ ಹೆಚ್ಚಿತ್ತು... ಈಗ ಶೇಕಡ ಎರಡಕ್ಕೆ ಕುಸಿದಿದೆ... ಅದನ್ನು ನಾವು ಹೇಳಬಾರದೆ...?' ಅದನ್ನು ಓದಿದಾಗ ಎಂತಹ ಉದಾರವಾದಿ ಹಿಂದೂವಿನ ಮನಸ್ಸೂ ಸಹ ಒಂದೆರೆಡು ಕ್ಷಣ ಸ್ತಬ್ಧವಾಗುತ್ತದೆ. ಹಾಗಾಗಿಯೆ ಭೈರಪ್ಪನಂಥವರು ಪದೇ ಪದೇ ಅದನ್ನು ಹೇಳುತ್ತಿರುತ್ತಾರೆ. ನಾನು ಈ ವೇದಿಕೆಯಿಂದ ಭೈರಪ್ಪನವರಿಗೆ ಕೇಳಬಯಸುತ್ತೇನೆ ಮತ್ತು ಹೇಳಬಯಸುತ್ತೇನೆ: '...ಸರ್ ಭೈರಪ್ಪನವರೆ, ಆ ಪ್ರಮಾಣದ ಹಿಂದೂಗಳನ್ನು ಅವರು ಕೊಂದಿರಬಹುದೆ...? ಖಂಡಿತವಾಗಿಯೂ ಭೈರಪ್ಪನವರಂಥವರೂ ಸಹ ಅಷ್ಟು ಪ್ರಮಾಣದಲ್ಲಿ ಹಿಂದೂಗಳನ್ನು ಕೊಂದಿರಲು ಸಾಧ್ಯವಿಲ್ಲ. ಬಲಾತ್ಕಾರದಿಂದ ಮತಾಂತರ ಮಾಡಿದ್ದಾರೆನ್ನುತ್ತಾರೆ. ಅದಕ್ಕೆ ನಾನು ಕೇಳಬಯಸುವುದೇನೆಂದರೆ, ಆ ರೀತಿ ಬಲಾತ್ಕಾರಕ್ಕೆ ಮಣಿದು ಮತಾಂತರ ಹೊಂದಿದ ಅಸಂಖ್ಯಾತರಲ್ಲಿ ಹಲವರಾದರೂ ಆ ಸಂಗತಿಯನ್ನು

ಬಹಿರಂಗಪಡಿಸಬೇಕಿತ್ತಲ್ಲವೆ...? ಹಲವರಿರಲಿ ಒಂದೇ ಒಂದು ಪತ್ರವಾಗಲಿ ಅಥವಾ ಟ್ವಿಟ್ಟರ್ ಆಗಲಿ ಆ ಕುರಿತು ಇದುವರೆಗೂ ಬಂದಿಲ್ಲ... ಅಂದರೆ, ಹಲವರು ಸ್ವಇಚ್ಛೆಯಿಂದ ಮತಾಂತರ ಹೊಂದಿರಬಹುದು... ಮತ್ತು ಅಲ್ಲಿನ ಸಾಕಷ್ಟು ಹಿಂದೂಗಳು ಯೂರೋಪ್ ಮತ್ತು ಅರಬ್ ರಾಷ್ಟ್ರಗಳಿಗೆ ವಲಸೆ ಹೋಗಿರಬಹುದು... ನೀವು ಮಾಡುತ್ತಿರುವ ಆರೋಪ ನೂರಕ್ಕೆ ನೂರರಷ್ಟು ಸುಳ್ಳು... ಕಲ್ಪಿತ... ಜನರಲ್ಲಿ ತಪ್ಪು ಸಂದೇಶ ಬಿತ್ತುವ ಪ್ರಯತ್ನ.

ಜಾತ್ಯತೀತತೆ ಈ ಕ್ಷಣದ ಸಿದ್ಧಾಂತವಲ್ಲ... ಪಶ್ಚಿಮದಲ್ಲಿರುವವರು ರವಾನಿಸಿದ್ದಲ್ಲ... ಎರಡು ಸಾವಿರದ ಐನೂರು ವರ್ಷಗಳ ಹಿಂದೆಯೆ ಬುದ್ಧ ಅದನ್ನು ಸಾರುತ್ತಾನೆ... ಅದು ರಾಜಕೀಯ ಸಿದ್ಧಾಂತವಲ್ಲ... ವ್ಯಕ್ತಿ ಪರಿಪೂರ್ಣತಾ ಸಿದ್ಧಾಂತ... ಹಾಗಾಗಿಯೆ ಮಾನವೀಯ ಪಂಥಗಳಾದ ವಚನಕಾರರು ಮತ್ತು ಸೂಫಿಗಳು ಅದಕ್ಕೆ ಇನ್ನಿಲ್ಲದ ಮಹತ್ವ ನೀಡಿದ್ದು... ಜಾತಿಹೀನನ ಮನೆಯ ಜ್ಯೋತಿ ಹೀನವಲ್ಲ... ಎಲ್ಲರ ರಕ್ತವೂ ಒಂದೇ... ಮುಂತಾದ ಸಾಕಷ್ಟು ಬಳಕೆಯಾಗಿರುವ ಮೆಟಫರ್‌ಗಳನ್ನು ಬಿಡಿ. ಇಂದು ವಿಜ್ಞಾನ ಅದನ್ನು ವೈಜ್ಞಾನಿಕ ಪರಿಭಾಷೆಯಲ್ಲಿ ಹೇಳುತ್ತಿದೆ. ಇಡೀ ವಿಶ್ವ ನಿಂತಿರುವುದೆ, ಸೃಷ್ಟಿಯಾಗಿರುವುದೆ ಬೆಳಕಿನ ಕಿರಣಗಳಿಂದ... Photonಗಳಿಂದ... ಅವು ನಮ್ಮ ಹೊರಗೆ ಮಾತ್ರ ಸಂಚರಿಸುವುದಿಲ್ಲ.. ನಮ್ಮ ಕಣಕಣದೊಳಗೆ ಪ್ರತಿಯೊಂದು ಅಣುವನ್ನೂ ಹಾಯ್ದು ಸಾಗುತ್ತಿರುತ್ತವೆ. ಇಲ್ಲಿ ಕುಳಿತಿರುವ ನಮ್ಮೆಲ್ಲರಲ್ಲೂ ಅವು ಹೊರಗಿನಿಂದ ಒಳಕ್ಕೆ, ಒಳಗಿನಿಂದ ಹೊರಕ್ಕೆ ಹರಿಯುತ್ತಿವೆ... ಇತ್ತೀಚೆಗಷ್ಟೆ ಭೌತವಿಜ್ಞಾನಿಗಳು ಅನ್ವೇಷಿಸಿದ ಗುರುತ್ವದ ಕಣಗಳೂ ಸಹ ನಮ್ಮೆಲ್ಲರಲ್ಲೂ ಸಂಚರಿಸುತ್ತಿವೆ... ಅವುಗಳಿಗೆ ಯಾವ ಜಾತಿ ಭೇದ, ಜನಾಂಗ ಭೇದಗಳಿಲ್ಲ... ಆ ವಿಜ್ಞಾನದ ಭಾಷೆಯನ್ನು ನಾವು ಎಲ್ಲರಿಗೂ ಹರಡಬೇಕಿದೆ...

ನಾವು ಇನ್ನು ಎರಡು ತಿಂಗಳುಗಳಲ್ಲಿ, 'ಹಿಂದೂಸ್ತಾನ್ ಸೂಫಿ ಮೂವ್‌ಮೆಂಟ್' ಎನ್ನುವ ಚಳವಳಿಯನ್ನು ಹುಟ್ಟುಹಾಕಲು ಹೊರಟಿದ್ದೇವೆ. ಏಕಕಾಲದಲ್ಲಿ ನಮ್ಮ ಹತ್ತಿರದಲ್ಲಿರುವ ಆರ್‌ಎಸ್‌ಎಸ್ ಹುಡುಗರ ಮತ್ತು ದೂರದ ಭೂತ ISISಗೆ ವಾಲುತ್ತಿರುವ ಮುಸ್ಲಿಂ ಯುವಕರ ಮನಸ್ಸುಗಳನ್ನು ತಲುಪುವ ಉದ್ದೇಶ ನಮ್ಮದು... ನಮಗೆ ಬುದ್ಧಯಾನಿಗಳು, ಸೂಫಿಗಳು ಮತ್ತು ವಚನಕಾರರು ಎಂದರೆ ಒಂದೇ ಎರಕದವರೆನ್ನುವ ನಂಬಿಕೆ... ಹಾಗಾಗಿ ಆ ಮೂವ್‌ಮೆಂಟ್‌ನಲ್ಲಿ ತೀವ್ರವಾಗಿ ತೊಡಗಲು ತೀರ್ಮಾನಿಸಿದ್ದೇನೆ...

ನಮ್ಮ ಶಿಸ್ತಿನ ಸಿಪಾಯಿ ಚಂಪಾರವರೂ ಸಹ ನಮ್ಮೊಡನಿರುತ್ತಾರೆಂದು ನಂಬಿದ್ದೇನೆ... ಜಾತ್ಯತೀತ ಸಿದ್ಧಾಂತವನ್ನು ಸಮಾಜದಲ್ಲಿ ಬದ್ಧತೆಯಿಂದ ಬಿತ್ತಲು ನಾವೆಲ್ಲರೂ ಕೈಜೋಡಿಸಿ ಹೆಜ್ಜೆ ಹಾಕಬೇಕಿದೆ...

■

ಡಬಿಂಗ್ ಎಂಬ ಮಹಾ ಮೋಸ

● ಸಿ. ಎನ್. ರಾಮಚಂದ್ರನ್

ಕರ್ನಾಟಕದಲ್ಲಿ ಡಬಿಂಗ್‌ಗೆ ಅವಕಾಶ ಕೊಟ್ಟರೆ ಅದು ಕನ್ನಡ ಭಾಷೆಗೆ ಮತ್ತು ಕನ್ನಡ ಚಿತ್ರೋದ್ಯಮಕ್ಕೆ ಮಾರಕವಾಗುತ್ತದೆಯೆ ಅಥವಾ ಇಲ್ಲವೆ ಎಂಬ ವಿಷಯವನ್ನು ಕುರಿತು ಕಳೆದ ದಶಕಗಳಲ್ಲಿ ಮತ್ತೆ ಮತ್ತೆ ವಾದ-ವಿವಾದಗಳು ನಡೆದಿವೆ ಮತ್ತು ಇಂದಿಗೂ ಈ ವಿಷಯದ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ಟಿ.ವಿ. ವಾರ್ತಾ ವಾಹಿನಿಗಳಲ್ಲಿ ಕಾವೇರಿದ ಚರ್ಚೆಗಳು ನಡೆಯುತ್ತಿವೆ. ಇದೊಂದು ಸಂಕೀರ್ಣ ವಿಷಯವಾದುದರಿಂದ ನನ್ನ ಚರ್ಚೆಯ ಚೌಕಟ್ಟನ್ನು ಕುರಿತು ಒಂದೆರಡು ಸಂಗತಿಗಳನ್ನು ಮಂಡಿಸಬೇಕು.

ಅ) ಮೊದಲನೆಯದಾಗಿ, ಡಬಿಂಗ್ ಕುರಿತು ಯಾವ ಚರ್ಚೆಯಾದರೂ ಅದು ಚಲನಚಿತ್ರವೆಂಬ ದೃಶ್ಯ-ಶ್ರವಣ ಮಾಧ್ಯಮದ ಎರಡೂ ಆಯಾಮಗಳನ್ನು ಪರಿಗಣಿಸಬೇಕು; ಇಲ್ಲದಿದ್ದರೆ ಆ ಚರ್ಚೆ ಅಪೂರ್ಣವಾಗುತ್ತದೆ. ಆ ಎರಡು ಆಯಾಮಗಳೆಂದರೆ, ಚಲನಚಿತ್ರವೆಂಬುದು ಒಂದು ಕಲೆ ಮತ್ತು ಒಂದು ಬೃಹತ್ ಉದ್ಯಮ. ನನ್ನ ಚರ್ಚೆ ಈ ಎರಡೂ ಆಯಾಮಗಳನ್ನು ಒಳಗೊಂಡಿದೆ.

ಆ) ಯಾವುದೇ ದೃಶ್ಯ-ಶ್ರವಣ ಮಾಧ್ಯಮವಾದರೂ ಅದರಲ್ಲಿ ಸ್ಥೂಲವಾಗಿ ಎರಡು ಪ್ರಕಾರಗಳಿರುತ್ತವೆ: ಮಾಹಿತಿ ಪ್ರಧಾನ ಚಿತ್ರಗಳು ಮತ್ತು ಕಾಲ್ಪನಿಕ ಕಥಾಪ್ರಧಾನ ಚಿತ್ರಗಳು. ಪ್ರಾಣಿ-ಪಕ್ಷಿ-ನಿಸರ್ಗ-ಕೋಟೆ-ಕೊತ್ತಲಗಳು ಇವುಗಳನ್ನು ಕುರಿತು ಡಿಸ್ಕವರಿ ವಾಹಿನಿ ಅಥವಾ ತತ್ಸಮಾನ ವಾಹಿನಿಗಳು / ಮಾಧ್ಯಮಗಳು ಅದ್ಭುತವಾಗಿ ತಯಾರಿಸುವ ಪ್ರಾತ್ಯಕ್ಷಿಕೆಗಳು / ಡಾಕ್ಯುಮೆಂಟರಿಗಳು ತಮ್ಮ ವಸ್ತುವನ್ನು ಕುರಿತು ಮಾಹಿತಿಯನ್ನು ರೋಚಕವಾಗಿ ಕೊಡುವುದರಿಂದ, ಅದು ಯಾವ ಭಾಷೆಯಿಂದ ಮತ್ತಾವ ಭಾಷೆಗೂ ಡಬ್ ಆದರೆ ಕಲಾತ್ಮಕವಾಗಿ ಏನೂ ನಷ್ಟವಾಗುವುದಿಲ್ಲ. ಹಾಗೆಯೇ, ವಿಶಿಷ್ಟ ವರ್ಗದ ಮಾಹಿತಿಯನ್ನು ಪ್ರೇಕ್ಷಕರಿಗೆ ಕೊಡುವ ಅಮೀರ್ ಖಾನ್ ತಯಾರಿಸಿದ "ಸತ್ಯಮೇವ ಜಯತೆ" ಬಗೆಯ ಡಾಕ್ಯುಮೆಂಟರಿಗಳನ್ನು ಡಬ್ ಮಾಡುವುದರಿಂದ ಏನೂ ಹೆಚ್ಚಿನ ನಷ್ಟವಾಗುವುದಿಲ್ಲ. ಆದುದರಿಂದ ಅಂತಹ ಡಾಕ್ಯುಮೆಂಟರಿಗಳನ್ನು ನನ್ನ ಚರ್ಚೆಯ ಹೊರಗೆ ಇಡುತ್ತೇನೆ.

●

ಈ ಎರಡು ಗೃಹೀತಗಳನ್ನೊಳಗೊಂಡ ಚೌಕಟ್ಟಿನಲ್ಲಿ ನಾನು ಮಂಡಿಸಲೆತ್ನಿಸುವ ವಾದವೇನೆಂದರೆ ಕಾಲ್ಪನಿಕ ಕಥಾಪ್ರಧಾನ ಚಲನಚಿತ್ರಗಳನ್ನು (ಅವು ಪ್ರಯೋಗಾತ್ಮಕ

ಚಿತ್ರಗಳಾಗಿರಲಿ ಅಥವಾ ವ್ಯಾಪಾರೀ ಚಿತ್ರಗಳಾಗಿರಲಿ) ಯಾವುದೇ ಕಾರಣಕ್ಕೂ ಡಬಿಂಗ್ ಮಾಡಕೂಡದು.

ಹೀಗೆ ಸ್ಪಷ್ಟವಾಗಿ ಹಾಗೂ ನೇರವಾಗಿ ನನ್ನ ನಿಲುವನ್ನು ಮಂಡಿಸಿದ ಕೂಡಲೇ ಅನೇಕ ಆಕ್ಷೇಪಗಳನ್ನು ಹಾಗೂ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ; ಅವುಗಳಲ್ಲಿ ಕೆಲವನ್ನು ಈಗ ಗಮನಿಸಬಹುದು.

೧) **ಡಬಿಂಗ್ ಮತ್ತು ಕಾನೂನು** : ಮೊದಲನೆಯ ಹಾಗೂ ತುಂಬಾ ಮುಖ್ಯವಾದ ಆಕ್ಷೇಪವೆಂದರೆ 'ಡಬಿಂಗ್ ಕುರಿತ ಈ ಚರ್ಚೆಯೇ ಅರ್ಥಹೀನ, ಅನವಶ್ಯಕ; ಏಕೆಂದರೆ, ಚಲನಚಿತ್ರ ಉದ್ಯಮವನ್ನು ನಿಯಂತ್ರಿಸುವ ರಾಷ್ಟ್ರೀಯ ನೆಲೆಯ KDFCC ಸಂಸ್ಥೆಯೇ ಡಬಿಂಗ್ ವಿರೋಧಿಸುವುದೆಂದರೆ ಅದು ಕಾನೂನು ಬಾಹಿರವಾಗುತ್ತದೆ ಎಂದು ಮತ್ತೆ ಮತ್ತೆ ಘೋಷಿಸಿದೆ. ಆದುದರಿಂದ ಪುನಃ ಈಗ ಅದೇ ಚರ್ಚೆಯನ್ನು ಮಾಡುವುದರಿಂದ ಪ್ರಯೋಜನವೇನು?'

೨) ನಿಜ; ಡಬಿಂಗ್ ಅನ್ನು ವಿರೋಧಿಸುವುದು ಕಾನೂನು ಬಾಹಿರ. ಆದರೆ, ಅನೇಕ ಸಂದರ್ಭಗಳಲ್ಲಿ ಇರುವ ಕಾನೂನನ್ನು ವಿರೋಧಿಸಬೇಕಾಗುತ್ತದೆ; ಕಾಲಾಂತರದಲ್ಲಿ ಆ ವಿರೋಧದ ಕಾರಣದಿಂದ ಕಾನೂನು ಬದಲಾಗುತ್ತದೆ. ಸಾರ್ವತ್ರಿಕ ಬಂದ್, ಮುಷ್ಕರ, ಇತ್ಯಾದಿಗಳನ್ನು ಸುಮಾರು ಒಂದೂವರೆ ದಶಕಗಳ ಹಿಂದೆಯೇ ಮೊದಲಿಗೆ ಕೇರಳದ ಹೈಕೋರ್ಟ್ ಕಾನೂನುಬಾಹಿರವೆಂದು ಸಾರಿತು; ನಂತರ ಇತರ ರಾಜ್ಯಗಳ ಹೈಕೋರ್ಟ್‌ಗಳೂ ಕೂಡಾ ಅದೇ ತೀರ್ಪನ್ನು ಸಮರ್ಥಿಸಿದವು. ಆದರೂ ಕೂಡಾ ಒಂದಲ್ಲಾ ಒಂದು ಕಡೆ ಇಡೀ ನಗರ ಅಥವಾ ರಾಜ್ಯದ ಬಂದ್ ನಡೆಯುತ್ತದೆ, ಸಾರ್ವತ್ರಿಕ ಮುಷ್ಕರಗಳು ನಡೆಯುತ್ತವೆ. ಮಹದಾಯಿ ನೀರಿಗಾಗಿ ಕಳೆದ ಸುಮಾರು ೨೦೦ ದಿನಗಳಿಂದ ಸಾಮೂಹಿಕ ಮುಷ್ಕರ, ರೈಲ್ ರೋಕೋ ಇತ್ಯಾದಿಗಳು ನಡೆಯುತ್ತಿವೆ. ಅತ್ಯಾಚಾರವನ್ನು ಕುರಿತು ಮೊದಲು ಇದ್ದ ಕಾನೂನನ್ನು ರಾಷ್ಟ್ರಾದ್ಯಂತ ಅನೇಕಾನೇಕ ಮಹಿಳಾ ಸಂಘಟನೆಗಳು ವಿರೋಧಿಸಿದ್ದರಿಂದಲೇ ಅದರ ತಿದ್ದುಪಡಿ ನಾಲ್ಕು ವರ್ಷಗಳ ಹಿಂದೆಯಾಯಿತು. ಎಂದರೆ, ಸಕಾರಣವಾಗಿದ್ದರೆ ಮತ್ತು ಇರುವ ಕಾನೂನು ದೋಷಪೂರ್ಣವಾಗಿದೆ ಎಂದಾದರೆ ಅದನ್ನು ವಿರೋಧಿಸಲೇ ಬೇಕು.

೨) **ಡಬಿಂಗ್ ಮತ್ತು ಅನುವಾದ** : ಈ ಸಂದರ್ಭದಲ್ಲಿ ಡಬಿಂಗ್ ಪರ ಇರುವವರು ಎತ್ತುವ ಒಂದು ಪ್ರಶ್ನೆಯೆಂದರೆ, 'ಸಾಹಿತ್ಯ ಕ್ಷೇತ್ರದಲ್ಲಿ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಆಗುವ ಅನುವಾದವನ್ನು ಸ್ವೀಕರಿಸುವವರು

ಅದೇ ಬಗೆಯ ಕಾರ್ಯವನ್ನು (ಎಂದರೆ ಡಬಿಂಗ್ ಅನ್ನು) ಚಲನಚಿತ್ರ ಕ್ಷೇತ್ರದಲ್ಲಿ ಮಾತ್ರ ಏಕೆ ವಿರೋಧಿಸಬೇಕು? ಇದು ಇಬ್ಬಂದಿತನವಲ್ಲವೆ?

ಈ ವಾದದಲ್ಲಿ ಇರುವ ಗೃಹೀತವೆಂದರೆ ಡಬಿಂಗ್ = ಅನುವಾದ. ಆದರೆ ಇದು ಸತ್ಯದೂರ. ಉತ್ತಮ ಅನುವಾದವು ಮೂಲದ ಪದಕ್ಕೆ ಪದ ಎನ್ನುವಂತಹ 'ಯಾಂತ್ರಿಕ / ಕಂಪ್ಯೂಟರ್' ಭಾಷಾಂತರವನ್ನು ಮಾಡುವುದಿಲ್ಲ. ಅನುವಾದಕನು ಮೂಲ ಪಾತ್ರಗಳ ಹೆಸರುಗಳನ್ನು ಹಾಗೆಯೇ ಉಳಿಸಿಕೊಳ್ಳಬಹುದು ಅಥವಾ ಬದಲಾಯಿಸಬಹುದು; ಘಟನೆಗಳನ್ನು ಹೊಸದಾಗಿ ಜೋಡಿಸಬಹುದು ಅಥವಾ ಕೆಲವನ್ನು ಬಿಡಬಹುದು; ಮೂಲದ ಒಂದು ವಾಕ್ಯವನ್ನು ಮೂರು ವಾಕ್ಯಗಳಲ್ಲಿ ವಿಸ್ತರಿಸಬಹುದು – ಎಂದರೆ ಅನುವಾದಕನು ತನಗೆ ಉಚಿತವೆನಿಸುವಷ್ಟು ಸ್ವಾತಂತ್ರ್ಯವನ್ನು ಮೂಲದೊಡನೆ ವಹಿಸುತ್ತಾನೆ. ಆ ಕಾರಣದಿಂದ ಸಾಹಿತ್ಯಕ್ಷೇತ್ರದಲ್ಲಾಗುವ ಅನುವಾದ ಕ್ರಿಯೆಯನ್ನು ಚಲನಚಿತ್ರ ಕ್ಷೇತ್ರದಲ್ಲಾಗುವ 'ರೀಮೇಕ್' ಅಥವಾ 'ಮರು ತಯಾರಿಕೆ' ಎಂದು ಹೇಳಬಹುದು ಮತ್ತು ರೀಮೇಕ್ ಚಿತ್ರಗಳು ಕನ್ನಡದಲ್ಲಾಗಲಿ ಇತರ ಭಾಷೆಗಳಲ್ಲಾಗಲಿ ಎಂದಿನಿಂದಲೂ ತಯಾರಾಗುತ್ತಿವೆ. ಕೆಲವು ಸೋಲುತ್ತವೆ ಮತ್ತೆ ಕೆಲವು ಗೆಲ್ಲುತ್ತವೆ.

'ರೀಮೇಕ್' ಮತ್ತು 'ಡಬಿಂಗ್' ಇವೆರಡರ ನಡುವೆ ಅಗಾಧ ವ್ಯತ್ಯಾಸವಿದೆ. ಒಂದು ಚಿತ್ರವನ್ನು ಡಬ್ ಮಾಡುವುದಕ್ಕೆ ಎಂಟು–ಹತ್ತು ಡಬಿಂಗ್ ಕಲಾವಿದರು ಸಾಕು. ಆದರೆ ರೀಮೇಕ್ ತಯಾರಿಕೆಯಲ್ಲಿ ನಟ–ನಟಿಯರೊಡನೆ (ಲೈಟ್‌ಬಾಯ್ಸ್, ಡ್ರೈವರ್ಸ್, ಆಹಾರವನ್ನು ಒದಗಿಸುವವರು, ಮೇಕಪ್ ತಜ್ಞರು, ಇತ್ಯಾದಿ) ನೂರಾರು ಇತರ ಕಲಾವಿದರು–ತಂತ್ರಜ್ಞರು–ಕಾರ್ಮಿಕರು ಇರುತ್ತಾರೆ. ಅರ್ಥಾತ್ ರೀಮೇಕ್ (ಸ್ವಂತ ಭಾಷೆಯ ಚಿತ್ರದ ತಯಾರಿಕೆಯಲ್ಲಿರುವಂತೆ) ನೂರಾರು ಜನರಿಗೆ ಅನ್ನವನ್ನು, ಉದ್ಯೋಗವನ್ನು ಕೊಡುತ್ತದೆ; ಡಬಿಂಗ್ ಅವರೆಲ್ಲರನ್ನೂ ಬೀದಿಗೆ ದಬ್ಬುತ್ತದೆ.

೩) **ಪರಭಾಷಾ ನಟ–ನಟಿಯರು** : ಡಬಿಂಗ್ ಪರ ಇರುವವರು ತೋರಿಸುವ ಮತ್ತೊಂದು 'ಸೋಗಲಾಡಿತನ'ದ ನಿದರ್ಶನವೆಂಥರೆ ಈಗಲೂ ಪರಭಾಷಾ ನಟ–ನಟಿಯರಿಗೆ ಕನ್ನಡದಲ್ಲಿ ಇರುವ ಸ್ಥಾನ. ನಿಜ; ಪ್ರತಿಯೊಂದು ಕನ್ನಡ ಚಿತ್ರದಲ್ಲಿಯೂ ಒಬ್ಬರಲ್ಲ ಒಬ್ಬರು ಕನ್ನಡ ಗೊತ್ತಿಲ್ಲದ ನಟ–ನಟಿಯರು ಇದ್ದೇ ಇರುತ್ತಾರೆ. ಆದರೆ ಅಂತಹವರು ಬೆರಳೆಣಿಕೆಯಷ್ಟು. ಇಲ್ಲಿ ಮುಖ್ಯವಾಗುವುದು ಎಲ್ಲಿ ಇಡೀ ಚಿತ್ರದ ತಯಾರಿಕೆ ನಡೆಯುತ್ತದೆ ಎಂಬುದು. ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ್ದು ಪ್ರಾರಂಭದಲ್ಲಿ ಕನ್ನಡ ಗೊತ್ತಿರದಿದ್ದ ರವಿಚಂದ್ರನ್

ಕೂಡಾ ತಮ್ಮ ಖ್ಯಾತ ಚಿತ್ರಗಳನ್ನು ತಯಾರಿಸಿದುದು ಕರ್ನಾಟಕದಲ್ಲಿ. ಕನ್ನಡ ಚಲನಚಿತ್ರ ರಂಗವು ಕರ್ನಾಟಕದಲ್ಲಿ ಗಟ್ಟಿಯಾಗಿ ಬೇರೂರಲು ರವಿಚಂದ್ರನ್ ಅವರ ಚಿತ್ರಗಳೂ ಒಂದು ಪ್ರಮುಖ ಕಾರಣ.

೪) ಎಲ್ಲಾ ಬಗೆಯ ಚಿತ್ರಗಳಿಗೂ ಮುಕ್ತ ಅವಕಾಶ : ತಾತ್ವಿಕ ನೆಲೆಯಲ್ಲಿ, ಎಲ್ಲಾ ಬಗೆಯ ಚಿತ್ರಗಳನ್ನು ತಯಾರಿಸುವ ಹಾಗೂ ನೋಡುವ ವ್ಯಕ್ತಿ ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನ ಕೊಟ್ಟಿದೆ. ಆದುದರಿಂದ ಕನ್ನಡ ಚಿತ್ರಗಳು, ಕನ್ನಡದಲ್ಲಿ ರೀಮೇಕ್ ಆದ ಚಿತ್ರಗಳು, ಕನ್ನಡಕ್ಕೆ ಡಬ್ ಆದ ಚಿತ್ರಗಳು ಮತ್ತು ಇತರ ಭಾಷಾ ಚಿತ್ರಗಳು – ಇವೆಲ್ಲಕ್ಕೂ ಏಕೆ ಮುಕ್ತ ಅವಕಾಶ ಕರ್ನಾಟಕದಲ್ಲಿ ಇರಬಾರದು? ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಇತ್ಯಾದಿ ಭಾರದ ಹೆಚ್ಚಿನ ರಾಜ್ಯಗಳಲ್ಲಿ ಈ ಬಗೆಯ ಅವಕಾಶ ಇದ್ದಾಗ, ಕರ್ನಾಟಕದಲ್ಲಿ ಮಾತ್ರ ಏಕಿಲ್ಲ?

ತಾತ್ವಿಕ ನೆಲೆಯಲ್ಲಿ ಈ ವಾದವು ಸತ್ಯ; ಆದರೆ, ವಾಸ್ತವ ಸತ್ಯ ಬೇರೆಯೇ ಆಗುತ್ತದೆ. ಮೊದಲಿಗೆ, ಎಲ್ಲಾ ಬಗೆಯ ಚಿತ್ರಗಳಿಗೂ ಸಮಾನ ಅವಕಾಶ ಸಿಗುವಷ್ಟು ಚಿತ್ರಮಂದಿರಗಳು ಕನ್ನಡದಲ್ಲಿ ಇವೆಯೆ? ಒಟ್ಟು ಇಡೀ ಕರ್ನಾಟಕದಲ್ಲಿ ಇರುವ ಚಿತ್ರಮಂದಿರಗಳ ಸಂಖ್ಯೆ (ಟೆಂಟ್ ಚಿತ್ರಮಂದಿರಗಳನ್ನೂ ಸೇರಿಸಿ) ಸುಮಾರು ೫೫೦–೬೦೦ ಆಗಬಹುದು ಅಷ್ಟೇ. ಅದರಲ್ಲಿಯೂ ಕಳೆದೆರಡು ದಶಕಗಳಿಂದ ನಗರಗಳ ಖ್ಯಾತ ಚಿತ್ರಮಂದಿರಗಳೂ ಒಂದೊಂದಾಗಿ ಮುಚ್ಚುತ್ತಾ ಕಾಂಪ್ಲೆಕ್ಸ್‌ಗಳಾಗುತ್ತಿವೆ ಮತ್ತು ಈ ಕಾರಣದಿಂದ ಇಂದು, ಬೆಂಗಳೂರಿನಲ್ಲಿ ಒಂದು ಕನ್ನಡ ಚಿತ್ರ ಎಷ್ಟೇ ಜನಪ್ರಿಯವಾಗಿದ್ದರೂ ಅದನ್ನು ಯಾವ ಚಿತ್ರಮಂದಿರದಲ್ಲಿಯೂ ಒಂದೆರಡು ವಾರಗಳಿಂದ ಹೆಚ್ಚಿಗೆ ಪ್ರದರ್ಶಿಸುವುದಿಲ್ಲ; ಪ್ರದರ್ಶಿಸಿದರೆ ಮತ್ತೊಂದು ಕನ್ನಡ ಚಿತ್ರ ಬಿಡುಗಡೆಯಾಗಲು ಸಾಧ್ಯವಿಲ್ಲ. ಇನ್ನು ಮಲ್ಟಿಪ್ಲೆಕ್ಸ್ ಮಂದಿರಗಳಲ್ಲಿ ಎರಡು–ಮೂರು ದಿನಗಳಿಗಿಂತ ಯಾವ ಭಾಷೆಯ ಚಿತ್ರವೂ ಓಡುವುದಿಲ್ಲ. (ಅಥವಾ ಓಡಲು ಅವಕಾಶ ಕೊಡುವುದಿಲ್ಲ).

ಎರಡನೆಯದಾಗಿ, ಸಂಖ್ಯೆಯ ದೃಷ್ಟಿಯಿಂದ ತಮಿಳಿಗರು, ತೆಲುಗು ಭಾಷಿಕರು ಕನ್ನಡಿಗರಿಗಿಂತ ಮೂರು–ನಾಲ್ಕು ಪಟ್ಟು ಭಾರತದಲ್ಲಿ ಹಾಗೂ ಹೊರದೇಶಗಳಲ್ಲಿ ಇದ್ದಾರೆ; ಎಂದರೆ, ತಮಿಳು–ಹಿಂದಿ–ತೆಲುಗು ಪ್ರೇಕ್ಷಕರ ಸಂಖ್ಯೆ ಕನ್ನಡ ಪ್ರೇಕ್ಷಕರಿಗೆ ಹೋಲಿಸಿದರೆ ಅಗಾಧ. ವೃತ್ತ ಪತ್ರಿಕೆಗಳಲ್ಲಿ ಓದಿದಂತೆ, ರಜನೀಕಾಂತ್ ಅವರ ಚಿತ್ರಗಳು ವಿಶ್ವದಾದ್ಯಂತ ಒಂದೇ ಬಾರಿಗೆ ೨೦೦೦ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತವೆ; ಪ್ರಸಿದ್ಧ ಹಿಂದಿ ನಟ–ನಟಿಯರ ಚಿತ್ರಗಳ ಬಗ್ಗೆ ಹೇಳಲೇಬೇಕಾಗಿಲ್ಲ. ಆದುದರಿಂದ ಅವುಗಳಿಗೆ ಸರಕಾರದಿಂದ / ಭಾಷಾ ಸಮುದಾಯದಿಂದ ಯಾವುದೇ ಬಗೆಯ ರಕ್ಷಣೆ ಬೇಕಾಗುವುದಿಲ್ಲ; ಆದರೆ

ಕನ್ನಡ ಚಿತ್ರಗಳಿಗೆ (ಎಂದರೆ ಕನ್ನಡ ಕಲಾವಿದರಿಗೆ-ತಂತ್ರಜ್ಞರಿಗೆ) ಯಾವುದಾದರೂ ಒಂದು ಬಗೆಯ ರಕ್ಷಣೆ ಅತ್ಯಂತ ಅವಶ್ಯಕವಾಗುತ್ತದೆ.

೫) **ಅವಕಾಶ ವಂಚನೆ** : ಇದು ಕೊನೆಯದಾಗಿ ಏಳುವ ಪ್ರಶ್ನೆ : "ಟೈಟಾನಿಕ್," "ಬಾಹುಬಲಿ" ಮುಂತಾದ ಚಿತ್ರಗಳನ್ನು ಇಂಗ್ಲಿಷ್, ತೆಲುಗು (ಅಥವಾ ಸಮಾನ ಭಾಷೆಗಳು) ಗೊತ್ತಿರದ ಕನ್ನಡ ಪ್ರೇಕ್ಷಕರು ನೋಡಿ ಆನಂದಿಸಲೇ ಸಾಧ್ಯವಿಲ್ಲವೇ? ಇದು ಕನ್ನಡ ಮಾತ್ರ ಬಲ್ಲ ಕನ್ನಡಿಗರಿಗೆ ನಾವು ಮಾಡುವ ಮೋಸವಲ್ಲವೇ?

ಈ ಪ್ರಶ್ನೆಗಳಿಗೆ ಅನೇಕ ಸಾಧ್ಯ ಉತ್ತರಗಳಿವೆ. ಒಂದೆಂದರೆ, ಎಲ್ಲರೂ ವಿಶ್ವದ ಎಲ್ಲಾ ಚಿತ್ರಗಳನ್ನೂ (ಅಥವಾ ಕಥೆ-ಕಾದಂಬರಿಗಳನ್ನು / ನೃತ್ಯಪ್ರಕಾರಗಳನ್ನು) ನೋಡುವುದು ಸಾಧ್ಯವೇ ಇಲ್ಲ. ಯಾವ ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡಿದರೂ ಅದನ್ನು ಪ್ರದರ್ಶಿಸುವ ಚಿತ್ರಮಂದಿರಗಳು ೫೦-೧೦೦ ಮೈಲಿ ದೂರವಿದ್ದರೆ, ಎಷ್ಟು ಬಡ ರೈತಾಪಿ ಜನ ಅದನ್ನು ನೋಡಲು ಸಾಧ್ಯ?

ಇನ್ನೂ ಮುಖ್ಯವಾಗಿ, ಮೇಲಿನ 'ಅವಕಾಶ ವಂಚನೆ'ಯ ಉದ್ಗಾರದಲ್ಲಿ / ವಾದದಲ್ಲಿ ಇರುವ ಗೃಹೀತವೆಂದರೆ ಆಯಾಯಾ ಭಾಷೆಗಳು ಗೊತ್ತಿರದಿದ್ದರೆ ಅಂತಹ ಭಾಷೆಗಳ ಚಲನಚಿತ್ರಗಳನ್ನು ನೋಡಿ ಸಂತೋಷಪಡುವುದು ಸಾಧ್ಯವಿಲ್ಲ. ಈ ಗೃಹೀತವು ಸತ್ಯದೂರ. ದೃಶ್ಯಮಾಧ್ಯಮದಲ್ಲಿ ಭಾಷೆ ಒಂದು ಆಯಾಮ ಮಾತ್ರ, ಅದೇ ಎಲ್ಲ ಅಲ್ಲ. ಒಂದು ಉತ್ತಮ ದೃಶ್ಯ ಮಾಧ್ಯಮವು ನಟ-ನಟಿಯರ ಆಂಗಿಕ ಅಭಿನಯದಿಂದ, ಆ ಸನ್ನಿವೇಶದ ಚಿತ್ರಣದಿಂದ, 'ಅರ್ಥ'ವನ್ನು ಪ್ರೇಕ್ಷಕರಿಗೆ ಸಂವಹಿಸುತ್ತದೆ. 'ನನಗೆ ಹಿಂದಿ-ಇಂಗ್ಲಿಷ್-ತಮಿಳು ಇತ್ಯಾದಿ ಬರುವುದಿಲ್ಲ; ನಾನೇನು ಮಾಡಲಿ?' ಎಂಬ ಪ್ರಶ್ನೆಗೆ ಉತ್ತರಿಸುವುದಾದರೆ 'ಆ ಚಿತ್ರಗಳನ್ನು ಮೂಲಭಾಷೆಯಲ್ಲಿಯೇ ನೋಡಿ. ಒಂದು ಚಿತ್ರದ ಎಲ್ಲಾ ಪದ-ವಾಕ್ಯಗಳು ಪ್ರೇಕ್ಷಕನಿಗೆ ಅರ್ಥವಾಗಲೇ ಬೇಕೆಂದಿಲ್ಲ'. ಇದು ನಿಜವಲ್ಲದಿದ್ದರೆ ಬಿ.ವಿ. ಕಾರಂತರು ಸುಮಾರು ೧೫ ಭಾಷೆಗಳಲ್ಲಿ ನಾಟಕಗಳನ್ನು ನಿರ್ದೇಶಿಸಲು ಸಾಧ್ಯವಾಗುತ್ತಿರಲಿಲ್ಲ; ಗುಬ್ಬಿ ವೀರಣ್ಣನವರ ವಿಖ್ಯಾತ "ದಶಾವತಾರ" ನಾಟಕ ಆಂಧ್ರದಲ್ಲಿ (ತೆಲುಗು ಭಾಷೆಗೆ ಡಬ್ ಆಗದೆ) ಅದ್ಭುತ ಯಶಸ್ಸನ್ನು ಕಾಣುತ್ತಿರಲಿಲ್ಲ. ನಾನು ಮೈಸೂರಿನಲ್ಲಿ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ನನಗೆ ತಮಿಳಿನ / ತೆಲುಗಿನ ಒಂದು ಪದವೂ ಅರ್ಥವಾಗುತ್ತಿರಲಿಲ್ಲ; ಆದರೂ ಆಗ ನಾನು (ಮತ್ತು ನನ್ನಂತಹ ನೂರಾರು ಪ್ರೇಕ್ಷಕರು) ನೋಡಿದ, ನೋಡಿ ಆನಂದಿಸಿದ ಶಿವಾಜಿ ಗಣೇಶನ್ ಅಭಿನಯದ 'ರತ್ತ ಕಣ್ಣೀರ್' (ತಮಿಳು), ನಾಗೇಶ್ವರರಾವ್ ಅಭಿನಯದ 'ದೇವದಾಸ್' (ತೆಲುಗು), ಪೃಥ್ವೀರಾಜ್-ಸೊಹ್ರಾಬ್ ಮೋದಿ ಅಭಿನಯದ 'ಸಿಕಂದರ್' (ಹಿಂದಿ) ಈಗಲೂ ನನ್ನ ಕಣ್ಣಿಗೆ

ಕಟ್ಟಿದಂತಿವೆ. ಇನ್ನೂ ಮುಂದುವರೆದು ಹೇಳಬೇಕಾದರೆ, ಪ್ರಾಯಃ ೧೯೪೬-೪೭ ಹೊರಬಂದ ಜೆಮಿನಿ ಸಂಸ್ಥೆಯ "ಚಂದ್ರಲೇಖಾ" ಹಳೆಯ ಮೈಸೂರಿನ ಹಳ್ಳಿಗಳಲ್ಲಿ ಟೆಂಟ್ ಚಿತ್ರಮಂದಿರಗಳ ಮೂಲಕ ಎಷ್ಟು ಜನಪ್ರಿಯವಾಗಿತ್ತೆಂದರೆ, ಅದರಲ್ಲಿ ಎನ್.ಎಸ್.ಕೃಷ್ಣನ್ ಮತ್ತು ಟಿ.ಎ. ಮಧುರಂ ಅವರ ಹಾಸ್ಯ ಸನ್ನಿವೇಶಗಳನ್ನು ಹುಡುಗರು ತೋಟ-ಹೊಲಗಳಲ್ಲಿ ಕೆಲಸ ಮಾಡುವಾಗ, ಸಂಜೆ ಒಟ್ಟಾಗಿ ಆಡುವಾಗ ಅಭಿನಯಿಸಿ ಆನಂದಿಸುತ್ತಿದ್ದರು. (ಅವರ ತಮಿಳು ಪದಗಳ ಉಚ್ಚಾರ ಕನ್ನಡದಂತೆಯೇ ಇದ್ದರೂ).

ಈ ಸಂದರ್ಭದಲ್ಲಿ ಸುಬ್ಬಣ್ಣನವರು ಹೆಗ್ಗೋಡಿನಲ್ಲಿ ಮಾಡಿದ ಒಂದು ಮಹತ್ ಪ್ರಯೋಗವನ್ನು ಉಲ್ಲೇಖಿಸಬೇಕು. ಭಾರತದಲ್ಲಿಯೇ ಮೊಟ್ಟ ಮೊದಲಬಾರಿಗೆ, ಹೆಗ್ಗೋಡಿನಂತಹ ಪುಟ್ಟ ಹಳ್ಳಿಯಲ್ಲಿ ೧೯೭೭ರಲ್ಲಿ ಹತ್ತು ದಿನಗಳ ಅಂತರಾಷ್ಟ್ರೀಯ ಚಲನಚಿತ್ರೋತ್ಸವವೊಂದನ್ನು ಸುಬ್ಬಣ್ಣನವರು ಆಯೋಜಿಸಿದರು. ಆ ಉತ್ಸವದಲ್ಲಿ ಸತ್ಯಜಿತ್ ರೇ, ಕುರೋಸಾವಾ, ಚಾರ್ಲಿ ಚಾಪ್ಲಿನ್ ಮುಂತಾದವರ ವಿಶಿಷ್ಟ ಚಿತ್ರಗಳನ್ನು ಮೂಲ ಭಾಷೆಗಳಲ್ಲಿಯೇ ಪ್ರದರ್ಶಿಸಲಾಯಿತು. ೧೯೭೭ರಲ್ಲಿ ನಡೆದ ಆ ಚಿತ್ರೋತ್ಸವ ಜನಸಾಮಾನ್ಯರ ಗ್ರಹಣ ಶಕ್ತಿಯ ಬಗ್ಗೆಯೇ ಹೊಸ ಒಳನೋಟವೊಂದನ್ನು ಕೊಟ್ಟಿತು ಎಂದು ದಾಖಲಿಸುತ್ತಾ, ಅಕ್ಷರ ಹೀಗೆ ಸತೀಶ್ ಬಹಾದೂರ್ ಅವರನ್ನು ಕುರಿತ ಲೇಖನವನ್ನು ಹೀಗೆ ಮುಗಿಸುತ್ತಾರೆ : "...ಜಾಗತಿಕ ಚಲನಚಿತ್ರದ ಮೇರು ಕೃತಿಗಳೆಲ್ಲವೂ ಆಯಾ ಚಿತ್ರದ ಭಾಷೆ - ಸಂಸ್ಕೃತಿಗಳೆರಡೂ ಗೊತ್ತಿಲ್ಲದ ಈ ಊರಿನ ಅನಕ್ಷರಸ್ಥ ಪ್ರೇಕ್ಷಕರಿಗೂ ಅರ್ಥವಾಗುತ್ತದೆ.. ಸಂವಹನ ನಡೆಯುವುದು ಬಹುಪಾಲು ಮನುಷ್ಯಸಂಕಲ್ಪದಿಂದಲೇ ಹೊರತು ಭಾಷೆಯಿಂದಲ್ಲ ಎಂಬೊಂದು ವಿಶಾಲ ಸತ್ಯ ನಮಗೆ ಗೋಚರವಾಗ ತೊಡಗುತ್ತದೆ." (**ನೀನಾಸಮ್ ಮತುಕತೆ,** ೧೧೬:ಪು.೪೦).

ಡಬಿಂಗ್ ತಂತ್ರವೆಂಬುದು ಪ್ರೇಕ್ಷಕರಿಗೆ, ಕಲಾವಿದರಿಗೆ ಹಾಗೂ ತಂತ್ರಜ್ಞರಿಗೆ ಕೂಡಿಯೇ ಮಾಡುವ ಮಹಾಮೋಸ. ಚಲನಚಿತ್ರದ / ನಾಟಕದ ಒಂದು ಪ್ರಮುಖ ಆಯಾಮ ಅದರ ನಟ-ನಟಿಯರು ಹೇಗೆ ತಮ್ಮ ಭಾವನೆಗಳನ್ನು ಧ್ವನಿ, ಅದರ ಏರಿಳಿತಗಳು, ಉಚ್ಚಾರ, ಸ್ಫುಟತೆ, ಇತ್ಯಾದಿಗಳ ಮೂಲಕ ವ್ಯಕ್ತಪಡಿಸುತ್ತಾರೆ ಎಂಬುದು. ಪೃಥ್ವೀರಾಜ್ ಕಪೂರ್, ಅಮಿತಾಭ್ ಬಚ್ಚನ್, ಚಾರ್ಲ್‌ಟನ್ ಹೆಸ್ಟನ್, ಮೀನಾಕುಮಾರಿ, ರಾಜಕುಮಾರ್ ಇಂತಹ ಮೇರು ನಟ-ನಟಿಯರು ತಮ್ಮದೇ ಆದ ಅನುಕರಣಾತೀತ ವಿಶಿಷ್ಟ ಮಾತುಗಾರಿಕೆಯನ್ನು ಹಾಗೂ ಸಂಭಾಷಣಾ ಶೈಲಿಯನ್ನು ರೂಢಿಸಿಕೊಂಡಿರುತ್ತಾರೆ. ಕಾಮ-ಕ್ರೋಧ-ದುಃಖ ಇತ್ಯಾದಿ ಭಾವನೆಗಳಲ್ಲಿಯೇ ಅದ್ದಿದಂತಿರುವ ಅವರ ಸಂಭಾಷಣೆಯನ್ನು

ಕೇಳುವುದಕ್ಕಾಗಿಯೇ ಹೆಚ್ಚಿನ ಪ್ರೇಕ್ಷಕರು ಅವರ ಚಿತ್ರಗಳಿಗೆ ಹೋಗುತ್ತಾರೆ. ಆದರೆ ಡಬಿಂಗ್ ಇಂತಹ ಮೌಖಿಕ ಸಂಬಹನೆಯ ಆಯಾಮವನ್ನೇ ಕೊಲ್ಲುತ್ತದೆ. ಹಾಗೆಯೇ, ಕನ್ನಡದ / ತಮಿಳಿನ / ತೆಲುಗುವಿನ ಯಾವ ಕಲಾವಿದ – ತಂತ್ರಜ್ಞ – ಕೆಲಸಗಾರರಿಗೂ ಕೆಲಸ ಕೊಡದ, ಕೊನೆಗೆ ಆಯಾಯ ಭಾಷಾ ಪ್ರಾಂತ್ಯಗಳ ವಿಶಿಷ್ಟ ನೆಲ–ಜಲ–ಸಂಸ್ಕೃತಿಯನ್ನೂ ತೋರಿಸದ ಚಿತ್ರವನ್ನು ಕನ್ನಡ ಚಿತ್ರವೆಂದು (ಅಥವಾ ತಮಿಳು, ತೆಲುಗು ಚಿತ್ರವೆಂದು) ಹೇಳುವುದು ಪ್ರೇಕ್ಷಕರಿಗೆ ಮಾಡುವ ಮಹಾಮೋಸ.

ಕೊನೆಯದಾಗಿ, ಕಳೆದ ಶತಮಾನದ ೪–೫ನೆಯ ದಶಕಗಳಲ್ಲಿ ಕನ್ನಡ ಚಲನಚಿತ್ರ ಉದ್ಯಮ ಎಂತಹ ದುರವಸ್ಥೆಯಲ್ಲಿತ್ತು ಎಂಬುದು ಕನ್ನಡಿಗರೆಲ್ಲರಿಗೂ ಗೊತ್ತು. ಆ ಕಾಲಘಟ್ಟದಲ್ಲಿ ಚೆನ್ನೈನಲ್ಲಿಯೇ ಕಲಾವಿದರೆಲ್ಲರೂ ತಾತ್ಕಾಲಿಕವಾಗಿ ನೆಲೆಸಿ, ಚೆನ್ನೈನ ಸ್ಟುಡಿಯೋಗಳು ಅವಕಾಶಕೊಟ್ಟ ದಿನ–ಸಮಯದಲ್ಲಿ ಶೂಟಿಂಗ್ ನಡೆಸಿ, ಅಲ್ಲಿಯ ಲ್ಯಾಬ್‌ಗಳು ತಮಗೆ ಬಿಡುವಾದಾಗ ಮಾಡಿಕೊಟ್ಟಷ್ಟು ಪ್ರತಿಗಳನ್ನು ಕರ್ನಾಟಕಕ್ಕೆ ತಂದು ಚಿತ್ರಮಂದಿರಗಳು ಸಿಕ್ಕರೆ ಅವುಗಳನ್ನು ಬಿಡುಗಡೆ ಮಾಡುತ್ತಿದ್ದುದು ಸಾಮಾನ್ಯವಾಗಿತ್ತು. ಅಂದು ಮೈಸೂರಿನಲ್ಲಿದ್ದ ನವಜ್ಯೋತಿ ಸ್ಟುಡಿಯೋದಲ್ಲಿ ಆಧುನಿಕ ಉಪಕರಣಗಳು ಇಲ್ಲದಿದ್ದುದರಿಂದ ವರ್ಷಕ್ಕೆ ಒಂದೋ ಎರಡೋ ಚಿತ್ರಗಳು ನಿರ್ಮಾಣವಾದರೆ ಅದೇ ದೊಡ್ಡ ಸಂಗತಿಯಾಗಿತ್ತು. ಅಂತಹ ಪರಿಸ್ಥಿತಿಯನ್ನು ಬದಲಾಯಿಸಬೇಕೆಂದು ಹಟ ತೊಟ್ಟು ಒಂದು ಕಡೆ ಅ.ನ.ಕೃ., ಮ. ರಾಮಮೂರ್ತಿ, ಮುಂತಾದ ಪ್ರತಿಷ್ಠಿತ ಸಾಹಿತಿಗಳ, ಮತ್ತೊಂದು ಕಡೆ ಏನಾದರೂ ಕನ್ನಡೇತರ ಚಿತ್ರಗಳಲ್ಲಿ ಅಭಿನಯಿಸುವುದಿಲ್ಲ ಎಂದು ಪಣ ತೊಟ್ಟಿದ್ದ ಮಹಾನ್ ನಟ–ಗಾಯಕ ರಾಜಕುಮಾರ್ ಅವರ ಕನ್ನಡಾಭಿಮಾನ, ಈ ಎರಡು ಪ್ರಮುಖ ಕಾರಣಗಳಿಂದ ಕನ್ನಡ ಚಲನಚಿತ್ರೋದ್ಯಮವು ಕರ್ನಾಟಕಕ್ಕೆ ಬರುವಂತಾಯಿತು. ಇಂದು ಅದು ಗಟ್ಟಿಯಾಗಿ ಬೇರು ಬಿಟ್ಟಿದೆ; ಅನೇಕ ಉತ್ತಮ ಚಿತ್ರಗಳನ್ನು ಕನ್ನಡಿಗರಿಗೆ ಕೊಟ್ಟಿದೆ. ಅಂತಹ ಉದ್ಯಮ ಇಂದು ಮರಳಿ ಚೆನ್ನೈಗೆ ಅಥವಾ ಹೈದರಾಬಾದಿಗೆ ಹೋಗುವಂತಾಗಬೇಕೆ? ಅಥವಾ ಕನ್ನಡಿಗರು ಡಬ್ ಚಿತ್ರಗಳನ್ನೇ ನೊಡುವ, ಮೆಚ್ಚುವ ಯಂತ್ರಗಳಾಗಬೇಕೆ? ಹಾಗಾಗಬಾರದು ಎಂದಿದ್ದರೆ, ನಾವೆಲ್ಲರೂ ಒಟ್ಟಿಗೇ ಡಬಿಂಗ್ ಎಂಬ ಮೋಸವನ್ನು ದೂರವಿಡಬೇಕು.

■

ಡಬ್ಬಿಂಗ್ ನಿಷೇಧ ಎಂಬ ಔಷಧ ತಂದ ಮಾರಕ ಖಾಯಿಲೆ

● ತುಮಕೂರು ಚಂದ್ರಕಾಂತ

ಸುಮಾರು ೧೯೬೦ರಲ್ಲಿ ಕನ್ನಡ ಚಿತ್ರರಂಗ ನೆರೆ ರಾಜ್ಯದ ಡಬಿಂಗ್ ಚಿತ್ರಗಳಿಂದ ಸಾಕಷ್ಟು ಸಂಕಷ್ಟಕ್ಕೀಡಾಗಿ ತನ್ನ ಉಳಿವಿನ ಬಗ್ಗೆ ಎಚ್ಚೆತ್ತುಕೊಂಡಾಗ ಮೂಡಿಬಂದ ಪರಿಹಾರವೇ ಡಬ್ಬಿಂಗ್ ನಿಷೇಧ. ಆಗ ಕನ್ನಡ ಸಾಹಿತ್ಯರಂಗದೊಂದಿಗೆ ಚಿತ್ರರಂಗದ ಒಡನಾಟ ತುಂಬಾ ಮಧುರವೂ, ಆಳವೂ ಮತ್ತು ವಿಶಿಷ್ಟವೂ ಆಗಿತ್ತು. ಅಂದಿನ ದಿನಗಳಲ್ಲಿ ಪ್ರಖ್ಯಾತ ಸಾಹಿತಿಗಳ ಕಾವ್ಯ-ಕವನಗಳನ್ನು ಚಿತ್ರಗಳಿಗೆ ಅಳವಡಿಸಿಕೊಳ್ಳುವುದು ಮತ್ತು ಸಾಹಿತಿಗಳನ್ನು ತಮ್ಮ ಚಿತ್ರಗಳಲ್ಲಿ ಅತಿಥಿಗಳನ್ನಾಗಿ ತೋರಿಸುವುದು ಸರ್ವೇ ಸಾಮಾನ್ಯವಾಗಿತ್ತು. ವಿಶೇಷವಾಗಿ ಕುವೆಂಪು, ತ.ರಾ.ಸು., ದ.ರಾ. ಬೇಂದ್ರೆ ಇವರನ್ನು ಚಿತ್ರರಂಗ ಬಹಳವಾಗಿ ಬಳಸಿಕೊಂಡಿತ್ತು. ಈ ಒಡನಾಟದ ಪರಿಣಾಮವಾಗಿ, ಚಿತ್ರರಂಗದ ಸಂಕಷ್ಟದ ಬಗ್ಗೆ ಅಪಾರ ಅನುಕಂಪದಿಂದ ಅಂದಿನ ಹೆಸರಾಂತ ಸಾಹಿತಿಗಳು ವಿಶೇಷವಾಗಿ ಅ.ನ.ಕೃ.ರವರೂ ಡಬಿಂಗ್ ನಿಷೇಧಕ್ಕೆ ಕೈ ಜೋಡಿಸಿದರು. ಕನ್ನಡಿಗರ ಕಣ್ಮಣಿ ಡಾ॥ ರಾಜ್‌ರವರ ಬೆಂಬಲ ಸಿಕ್ಕಕೂಡಲೇ ಈ ನಿರ್ಣಯ ಕಾನೂನು ಬಾಹಿರವಾಗಿದ್ದರೂ ಕೂಡಾ ಯಾರೂ ವಿರೋಧಿಸುವುದಿರಲಿ ಅದರ ದೂರಗಾಮಿ ಪರಿಣಾಮಗಳ ಬಗ್ಗೆ ಚರ್ಚಿಸುವ ಧೈರ್ಯವನ್ನೂ ಮಾಡಲಿಲ್ಲ. ಕನ್ನಡ ಚಿತ್ರರಂಗದ ಉಳಿವು ಕನ್ನಡ ಸಂಸ್ಕೃತಿಯ ಉಳಿವು ಎಂದು ನಂಬಿಕೊಂಡ ಸಂಘಟಿತ ಚಿತ್ರರಂಗಕ್ಕೆ ಅಸಂಘಟಿತ ಪ್ರೇಕ್ಷಕನ ಅನಿಸಿಕೆಯನ್ನು ಕೇಳುವ ಅವಶ್ಯಕತೆ ಕಂಡುಬರಲಿಲ್ಲ. ೧೯೮೦ರ ನಂತರ ನಡೆದ ದೂರದರ್ಶನದ ಪ್ರಬಲ ಜನಪ್ರಿಯತೆಯಿಂದ ಚಿತ್ರರಂಗಕ್ಕೆ ಒಂದು ರೀತಿಯ ಭಾರಿ ಹೊಡೆತ ಬಿತ್ತು. ನಾಟಕರಂಗದ ಅವನತಿಗೆ ಚಿತ್ರರಂಗ ಹೇಗೆ ಕಾರಣವಾಯಿತೋ ಅದೇ ರೀತಿ ಚಿತ್ರರಂಗದ ಅವನತಿಗೆ ದೂರದರ್ಶನ ಕಾರಣವಾಯಿತು. ದುರದೃಷ್ಟವಶಾತ್ ನಿಶ್ಯಕ್ತ ಅಸಂಘಟಿತ ನಾಟಕರಂಗ ಪ್ರಬಲ ಚಿತ್ರರಂಗಕ್ಕೆ ಯಾವುದೇ ನಿಷೇಧ ಹೇರಲಾಗದೆ ತತ್ತರಿಸಿಹೋಗಿ ಈಗ ಅಳಿವಿನ ಅಂಚಿನಲ್ಲಿರುವ ಪ್ರಾಣಿ ಪ್ರಬೇಧದ ರೀತಿ ಕೆಲವು ಅಪ್ರತಿಮ ನಾಟಕ ಕರ್ಮಿಗಳ ಮತ್ತು ವಿಶಿಷ್ಟ ರಂಗಾಸಕ್ತರ ನೆರವಿನಿಂದ ತಾನು ಜೀವಂತ ಇರುವುದನ್ನು ಅಲ್ಲಲ್ಲಿ ಸಾದರಪಡಿಸುತ್ತಿದೆ. ಚಿತ್ರರಂಗ ಮಾತ್ರ ತಾನು ತೆಗೆದುಕೊಂಡ ಡಬಿಂಗ್ ನಿಷೇಧದಿಂದ ಕಲಾವಿದರು, ತಂತ್ರಜ್ಞರು ಮತ್ತು ಮುಖ್ಯವಾಗಿ ಕನ್ನಡ ಸಂಸ್ಕೃತಿ ಇತ್ಯಾದಿ ಉಳಿದಿದೆ ಎಂಬ ದಿವ್ಯ ತೃಪ್ತಿಯಲ್ಲಿದೆ. ಈ ಪರಿಯ ನಿಷೇಧದಿಂದ ಸ್ಫೂರ್ತಿಪಡೆದ ದೂರದರ್ಶನದ ಸಂಘಟಿತ ಬಳಗವೂ ತನ್ನ ಉಳಿಯುವಿಕೆಯೇ ಕನ್ನಡ-ಸಂಸ್ಕೃತಿಗೆ ರಕ್ಷಣೆ

ಎಂದು ಆರೋಪಿಸಿಕೊಂಡು ಟಿ.ವಿ. ಸೀರಿಯಲ್‌ಗಳಿಗೆ ಮತ್ತು ಜಾಹೀರಾತುಗಳಿಗೆ ಡಬ್ಬಿಂಗ್ ನಿಷೇಧ ಹೇರಿತು. ಈ ವಿಷಯದಲ್ಲೂ ಕೂಡಾ ಪ್ರಬಲ ಸಂಘಟಿತ ಟಿ.ವಿ. ಬಳಗ ಅಸಂಘಟಿತ ಪ್ರೇಕ್ಷಕರ ಅನಿಸಿಕೆಯನ್ನು ಪರಗಣಿಸುವ ಅವಶ್ಯಕತೆಯನ್ನೇ ಕಾಣಲಿಲ್ಲ. ಈಗ ಚಿತ್ರರಂಗ ಮತ್ತು ದೂರದರ್ಶನ ರಂಗ ಎರಡೂ ತಂತಮ್ಮ ಉಳಿವಿಗೆ ತಾವೇ ಕೊಟ್ಟುಕೊಂಡಿರುವ ಡಬಿಂಗ್ ನಿಷೇಧ ಎಂಬ ಔಷಧದಿಂದ ಉಂಟಾದ ಇನ್ನೊಂದು ಪ್ರಬಲವಾದ ಖಾಯಿಲೆ ಸದ್ದಿಲ್ಲದೆ ಅಮರಿಕೊಂಡು ಇಬ್ಬರನ್ನೂ ಸರ್ವನಾಶ ಮಾಡುವ ರೀತಿಯಲ್ಲಿ ಸಾಗುತ್ತಿದೆ. ಇದನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿ, ಮುಕ್ತ ಮನಸ್ಸಿನಿಂದ ಆಲೋಚಿಸಿ, ತಾಳ್ಮೆಯಿಂದ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಿದೆ. ಡಬಿಂಗ್ ನಿಷೇಧವನ್ನು ವಿರೋಧಿಸುವವರು ಕೇವಲ ಹೈಟೆಕ್ ಪ್ರೇಕ್ಷಕರು ಮತ್ತು ಸುಲಭವಾಗಿ ದಕ್ಕುವ ಅಂತರ್ಜಾಲದ ಸಾಮಾಜಿಕ ತಾಣಗಳ ಮುಖಾಂತರ ನಿರಂತರವಾಗಿ ಪ್ರತಿಕ್ರಿಯೆ ತೋರಿ ಜನಾಭಿಪ್ರಾಯವನ್ನು ಮಣಿಸುವವರು. ಅವರು ಕನ್ನಡ ಅಭಿಮಾನಿಗಳಲ್ಲ ಎಂಬ ನಂಬಿಕೆಯನ್ನು ಕೊಂಚ ಸಡಿಲಿಸಬೇಕಿದೆ. ನಿಜವಾದ ಕನ್ನಡ ಪ್ರೇಕ್ಷಕರು ಮತ್ತು ಅಭಿಮಾನಿಗಳು ಗ್ರಾಮೀಣ ಪ್ರದೇಶದ ಜನ. ಅವರು ಡಬಿಂಗ್ ನಿಷೇಧದ ಬಗ್ಗೆ ಚಕಾರ ಎತ್ತುತ್ತಿಲ್ಲ; ಆದ್ದರಿಂದ ಅವರೆಲ್ಲಾ ಈ ನಿಷೇಧದ ಬೆಂಬಲಿಗರು ಎಂಬ ಅತಾರ್ಕಿಕ ಹಾಸ್ಯಾಸ್ಪದ ನಂಬಿಕೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕಿದೆ. ಗ್ರಾಮೀಣ ಜನತೆಯಿಂದ ಮತ್ತು ಅನುದಿನವೂ ಹೋರಾಡುತ್ತಿರುವ ಕನ್ನಡಪರ ಸಂಘಟನೆಗಳಿಂದ ಮಾತ್ರ ಇವತ್ತು ಕನ್ನಡ ಮತ್ತು ಕನ್ನಡತನ ಉಳಿದಿದೆ ಎಂಬುದು ಎಷ್ಟು ಸತ್ಯವೋ ಅಷ್ಟೇ ಸತ್ಯ ಎಂದರೆ ನಮ್ಮ ಗ್ರಾಮೀಣ ಜನಕ್ಕೆ ಧ್ವನಿ ಇಲ್ಲದಿರುವುದು. ಅವರ ಮೌನವನ್ನು ಈ ನಿಷೇಧಕ್ಕೆ ಒಪ್ಪಿಗೆ ಎಂದು ಭಾವಿಸುವುದು ಅವರಿಗೆ ಮಾಡುವ ಅಪಚಾರ. ಡಾ॥ ರಾಜ್ ಅವರು ತಮ್ಮ ಅಭಿಮಾನಿಗಳನ್ನು "ಅಭಿಮಾನಿ ದೇವರುಗಳು" ಎಂದು ಕರೆಯುತ್ತಿದ್ದರು. ಈಗ ಆ ಅಭಿಮಾನಿ ದೇವರುಗಳ ಮುಂದಿನ ಪೀಳಿಗೆಗೆ ತಮ್ಮ ಡಬ್ಬಿಂಗ್ ನಿಷೇಧದಿಂದ ಅಂಟಿರುವ ಖಾಯಿಲೆ ಮೂಲಭೂತವಾಗಿ ಕನ್ನಡದ ಉಳಿವಿಗೆ ಸವಾಲಾಗಿ ನಿಂತಿದೆ. ಈ ಖಾಯಿಲೆ ಏನೆಂದರೆ ನವಪೀಳಿಗೆಯನ್ನು "ಕನ್ನಡ ಧ್ವನಿ" ಯಿಂದ ದೂರ ತಳ್ಳಿ ಇತರೆ ಭಾಷೆಗಳ ಧ್ವನಿಗೆ ಅವರನ್ನು ಒಗ್ಗಿಸಲ್ಪಡುತ್ತಿರುವುದು. ಡಬ್ಬಿಂಗ್ ನಿಷೇಧದ ಪರಿಣಾಮಗಳನ್ನು ಎರಡು ವಿಭಾಗಗಳಲ್ಲಿ ಚರ್ಚಿಸಿ ಅರ್ಥಮಾಡಿಕೊಳ್ಳಬಹುದು.

೧. ಚಲನಚಿತ್ರದ ಡಬಿಂಗ್ ನಿಷೇಧದಿಂದ ಆದ ಪರಿಣಾಮಗಳು

ಡಬ್ಬಿಂಗ್ ನಿಷೇಧದಿಂದ ಪರಭಾಷಾ ಚಿತ್ರಗಳು ತಮ್ಮ ಮೂಲಭಾಷೆಯಲ್ಲೇ ಬಿಡುಗಡೆಯಾಗುತ್ತಿವೆ. ಮೊದಲು ಈ ಚಿತ್ರಗಳು ಬೆಂಗಳೂರು ಮತ್ತು ಗಡಿ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬೀದರ್, ಬಿಜಾಪುರ ಮತ್ತು ಬೆಳಗಾಂಗಳಲ್ಲಿ ಸಾಕಷ್ಟು ವ್ಯಾಪಾರ

ಮಾಡಿಕೊಳ್ಳುತ್ತಿದ್ದು ಈಗ ಒಳಭಾಗದ ಜಿಲ್ಲೆಗಳಲ್ಲೂ ಒಳ್ಳೆ ಪ್ರದರ್ಶನಗಳನ್ನು ಕಾಣುತ್ತಿವೆ. ಇದರರ್ಥ ಜನಪ್ರಿಯ ಮನರಂಜನೆಯ ಅಂಶಗಳನ್ನು ಪಡೆದಿದ್ದ ಪರಭಾಷಾ ಚಿತ್ರಗಳು ನಿಧಾನವಾಗಿ ಕನ್ನಡ ಪ್ರೇಕ್ಷಕನನ್ನು ತಮ್ಮ ಭಾಷೆಗೆ ಒಗ್ಗಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿವೆ. ಹಾಗಾಗಿ ಕನ್ನಡದ ಪ್ರೇಕ್ಷಕನಿಗೆ ತೆಲುಗು, ತಮಿಳು, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳು ನಿಧಾನವಾಗಿ ಅರ್ಥವಾಗತೊಡಗಿವೆ. ಆತನ ಜನಪ್ರಿಯ ನಟರಾದ ರಜನಿಕಾಂತ್, ಚಿರಂಜೀವಿ, ರಾಮ್‌ಚರಣ್‌ತೇಜ, ಪವನ್ ಕಲ್ಯಾಣ್, ಆಮಿರ್ ಖಾನ್, ಶಾರುಕ್ ಖಾನ್, ಸಲ್ಮಾನ್ ಖಾನ್, ಐಶ್ವರ್ಯ ಬಚ್ಚನ್, ಕರೀನಾ, ಕರಿಶ್ಮಾ, ಅರ್ನಾಲ್ಡ್, ಸಿಲ್ವಿಸ್ಟರ್, ಡಿ ಕ್ಯಾಪ್ರಿಯೋ, ಕೇಟ್ ಇವರೆಲ್ಲಾ ತಮ್ಮ ಹಿಟ್ ಚಿತ್ರಗಳಿಂದ ತಮ್ಮ ಭಾಷೆಯನ್ನು ಆತನ ಅರಿವಿಗೆ ಬಾರದಂತೆ ನಿಧಾನವಾಗಿ ಕಲಿಸತೊಡಗಿದರು. ಹೀಗಾಗಿ ಕನ್ನಡ ಪ್ರೇಕ್ಷಕ ಇತರೆ ಭಾಷಾ ಪ್ರೇಕ್ಷಕನಾಗಿ ಪರಿವರ್ತನೆಗೊಂಡ. ಡಬ್ಬಿಂಗ್ ನಿಷೇಧದಿಂದ ಪರಭಾಷಾ ಚಿತ್ರಗಳು ನಮ್ಮ ರಾಜ್ಯದಲ್ಲಿ ಬಿಡುಗಡೆ ಆಗದಂತೆ ತಡೆಯಲು ಆಗಲಿಲ್ಲ. ಅವುಗಳ ವೈಭವ ಮತ್ತು ತಾಂತ್ರಿಕತೆಯಿಂದ ಕನ್ನಡ ಪ್ರೇಕ್ಷಕನನ್ನು ಸೊಗಸಾಗಿ ಆಕರ್ಷಿಸಿ ಅವನನ್ನು ತಮ್ಮವನನ್ನಾಗಿಸಿಕೊಂಡವು. ಇದರಿಂದ ಕನ್ನಡ ಚಿತ್ರರಂಗಕ್ಕೆ ಎಷ್ಟು ಲಾಭವಾಯಿತೋ ಗೊತ್ತಿಲ್ಲ ಆದರೆ ಕನ್ನಡಕ್ಕೆ ಬಹುದೊಡ್ಡ ಘಾಸಿಯಾಯಿತು. ಪರಭಾಷಾ ಚಿತ್ರಗಳನ್ನು ವೀಕ್ಷಿಸುವ ಕನ್ನಡ ಪ್ರೇಕ್ಷಕನಿಗೆ ಕನ್ನಡ ಧ್ವನಿ ತಪ್ಪಿಹೋಯಿತು. ಭಾಷಾತೊಡಕಿನಿಂದ ಒಂದು ಒಳ್ಳೆಯ ಮನರಂಜನೀಯ ಪರಭಾಷಾ ಚಿತ್ರ ಸರಿಯಾಗಿ ಅರ್ಥ ಆಗದೇ ಹೋದಾಗ ಇನ್ನೊಂದು ಬಾರಿ, ಮತ್ತೊಂದು ಬಾರಿ ಅದೇ ಚಿತ್ರವನ್ನು ನೋಡಿದ ಪ್ರೇಕ್ಷಕರಿಗೇನೂ ಕೊರತೆ ಇಲ್ಲ. ಡಬ್ಬಿಂಗ್ ನಿಷೇಧ ಇಲ್ಲದಿದ್ದರೆ ಆತನ ಎಲ್ಲಾ ಜನಪ್ರಿಯ ನಟರೂ ಕನ್ನಡದಲ್ಲಿ ಆತನನ್ನು ತಲುಪುತ್ತಿದ್ದರು. ಹಾಗಾಗಿ ಆತನಿಗೆ ಕನ್ನಡದ ಧ್ವನಿ ಸತತವಾಗಿ ಅನುರಣಿಸಿ ಆತ ಕನ್ನಡ ಪ್ರೇಕ್ಷಕನಾಗಿಯೇ ಉಳಿಯುತ್ತಿದ್ದ. ಇದರಿಂದ ಕನ್ನಡ ಭಾಷೆಗೆ ಬಹುದೊಡ್ಡ ಲಾಭ ಆಗುತ್ತಿತ್ತು. ಪರಭಾಷಾ ಚಿತ್ರಗಳು ಕನ್ನಡೀಕರಣಗೊಂಡರೆ, ಕನ್ನಡತನಕ್ಕೆ ಒಗ್ಗುತ್ತಿರಲಿಲ್ಲ ಅದರಿಂದಾಗಿ ಕನ್ನಡ ಸಂಸ್ಕೃತಿ ನಾಶ ಆಗುತ್ತಿತ್ತು ಬೊಬ್ಬಿಡುವ ಡಬ್ಬಿಂಗ್ ವಿರೋಧಿ ಕನ್ನಡ ವೀರರು ಗಮನಿಸಲೇಬೇಕಾದ ಅಂಶ ಎಂದರೆ, ತಮ್ಮ ನೀತಿಯಿಂದ ಕನ್ನಡಿಗರಿಗೆ ಕನ್ನಡದ ಮುಖಾಂತರ ತಲುಪಬೇಕಿದ್ದ ಮನೋರಂಜನೆ ಪರಭಾಷೆಯಿಮದ ತಲುಪಿ ಆತ ಅನಿವಾರ್ಯವಾಗಿ ಪರಭಾಷೆಯ ಒಗ್ಗುವಿಕೆಗೆ ಒಳಗಾಗಿದ್ದು. ಇದರಿಂದ ಆದ ನಷ್ಟವನ್ನು ಲೆಕ್ಕಹಾಕುವುದು ಹೇಗೆ? ಡಬ್ಬಿಂಗ್ ವಿರೋಧಿಸುವ ಮುಖಾಂತರ ಪರಭಾಷಾ ಚಿತ್ರಗಳ ಪ್ರದರ್ಶನ ಮತ್ತು ವ್ಯಾಪಾರ ಏನಾದರೂ ಕಡಿಮೆ ಆಯಿತೆ? ಅದರಿಂದ ಕನ್ನಡ ಚಿತ್ರರಂಗ ಉದ್ಧಾರವಾಗಿದ್ದೆಷ್ಟು? ಈಗ ವರ್ಷಕ್ಕೆ ನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳು ಬರುತ್ತಿವೆಯಲ್ಲಾ ಅದರಲ್ಲಿ ಹಾಕಿದ ಬಂಡವಾಳವನ್ನು ವಾಪಸ್ ಗಳಿಸಿದ ಚಿತ್ರಗಳೆಷ್ಟು? ಕನ್ನಡಿಗರು ಕನ್ನಡ

ಚಿತ್ರಗಳನ್ನು ಪ್ರೋತ್ಸಾಹಿಸುತ್ತಿಲ್ಲ ಎಂದು ಹಲಬುವ ನೀವು ಕನ್ನಡ ಚಿತ್ರಗಳ ಗುಣಮಟ್ಟವನ್ನು ಹೆಚ್ಚಿಸುವ ಯಾವ ಜವಾಬ್ದಾರಿಗಳನ್ನು ಹೊತ್ತಿದ್ದೀರಿ? ಕನ್ನಡ ಚಿತ್ರರಂಗವನ್ನು ನಂಬಿರುವವರನ್ನು ಉಳಿಸುವುದು ಮಾತ್ರ ತಮ್ಮ ಜವಾಬ್ದಾರಿಯೇ? ಒಟ್ಟಾರೆ ಕನ್ನಡ ಪ್ರೇಕ್ಷಕನಿಗೆ ಕನ್ನಡದ ಧ್ವನಿಯನ್ನು ತಪ್ಪಿಸುವ ಮುಖಾಂತರ ಕನ್ನಡ ಭಾಷೆಗೆ ಉಂಟಾಗುತ್ತಿರುವ ಶಾಶ್ವತ ನಷ್ಟಕ್ಕೆ ಯಾರು ಹೊಣೆ?

ಎಲ್ಲಾ ಕನ್ನಡ ಚಿತ್ರಗಳನ್ನು ನೋಡಲೇ ಬೇಕಾದ್ದು ಕನ್ನಡಿಗರ ಆದ್ಯ ಕರ್ತವ್ಯವೇ? ಕನ್ನಡ ಚಿತ್ರಗಳ ಶೀರ್ಷಿಕೆ ಪೂರ್ಣ ಇಂಗ್ಲಿಷ್‌ನಲ್ಲಿದ್ದರೂ, ಕನ್ನಡದ ಹಾಡುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪದಗಳು ಬೇರೆ ಭಾಷೆಯಲ್ಲಿದ್ದರೂ, ಐತಲಕಡಿ ಎಂಬ ವಿಚಿತ್ರ ಹೆಸರಿದ್ದರೂ ನಾವು ಕನ್ನಡ ಚಿತ್ರಗಳನ್ನು ನೋಡಲೇ ಬೇಕು! ಕನ್ನಡ ಚಿತ್ರರಂಗದ ಕಾರ್ಮಿಕರ ಒಕ್ಕೂಟದ ಶಾಶ್ವತ ಅಧ್ಯಕ್ಷರಾದ ಶ್ರೀ ಅಶೋಕ ಅವರು ತಿಳಿಸುವಂತೆ ಡಬಿಂಗ್ ನಿಷೇಧ ಸುಮಾರು ೩೦ ಸಾವಿರ ಜನದ ಅನ್ನದ ಪ್ರಶ್ನೆ. ಈ ೨೦ ಸಾವಿರ ಕಾರ್ಮಿಕರೆಲ್ಲಾ ಕನ್ನಡಿಗರೇ? ಕನ್ನಡ ಚಿತ್ರಗಳ ತಾಂತ್ರಿಕ ವರ್ಗದಲ್ಲಿ, ನಿರ್ದೇಶಕರಲ್ಲಿ ಹಾಗೂ ಗಾಯಕರಲ್ಲಿ ಎಷ್ಟು ಮಂದಿ ಕನ್ನಡಿಗರಿದ್ದಾರೆ? ಸೋನು ನಿಗಮ್, ಶ್ರೇಯಾ ಗೋಶ್ವಾಲ್, ಕುಣಾಲ್ ಗಾಂಜಾವಾಲ, ಕೈಲಾಷ್ ಖೇರ್ ಇವರೆಲ್ಲಾ ಕನ್ನಡಿಗರೇ? ನಾವು ಧ್ವನಿ ಇಲ್ಲದ ಪ್ರೇಕ್ಷಕರು. ನಾವು ಈ ಪ್ರಶ್ನೆಗಳನ್ನು ಕೇಳಬಾರದು. ನೀವು ರೀಮೇಕ್ ಚಿತ್ರಗಳನ್ನು ಮಾಡಿದಾಗಲೂ ನಾವು ಸುಮ್ಮನಿರಬೇಕು. ಟೈಟಾನಿಕ್, ಅವತಾರ್, ತ್ರೀ ಈಡಿಯಟ್ಸ್, ರೋಬೋ, ಮಗಧೀರ, ಲಗಾನ್ ಇವುಗಳನ್ನು ನಮ್ಮ ನೆರೆಯ ರಾಜ್ಯದವರು ಅವರವರ ಭಾಷೆಯಲ್ಲೇ ನೋಡಿ ಸಂಪೂರ್ಣ ಮನೋರಂಜನೆ ಪಡೆದು ತಮ್ಮ ಭಾಷೆಯನ್ನು ಉಳಿಸಿಕೊಂಡರು. ನಾವು ಇದೇ ಚಿತ್ರಗಳನ್ನು ಕನ್ನಡದಲ್ಲಿ ರೀಮೇಕ್ ಮಾಡಲು ಸಿದ್ಧರಿದ್ದೀರಾ? ಕನ್ನಡ ಚಿತ್ರರಂಗ ಉಳಿದರೆ ಮಾತ್ರ ಕನ್ನಡ ಸಂಸ್ಕೃತಿ ತಿಳಿಯುತ್ತದೆ ಎನ್ನುವುದು ನೀವೇ ನಮ್ಮ ಅನುಕೂಲಕ್ಕಾಗಿ ಮಾಡಿಕೊಂಡು ವ್ಯಾಖ್ಯಾನ ಮತ್ತು ನಮಗೆ ಕೊಟ್ಟ ಎಚ್ಚರಿಕೆ. (ಕನ್ನಡ ಚಿತ್ರರಂಗದ ಮೇರು ನಟರ ಪುತ್ರ ಹಗೂ ಜನಪ್ರಿಯ ನಟರೊಬ್ಬರು ಟಿ.ವಿ. ಸಂದರ್ಶನದಲ್ಲಿ ತೋರು ಬೆರಳು ತೋರಿಸಿಕೊಂಡು ತಮ್ಮ ತಂದೆ ಮೇಲೆ ಆಣೆಮಾಡಿ ಡಬಿಂಗ್ ನಿಷೇಧದ ವಿರೋಧಿಗಳನ್ನು ಕೊನೆಗಾಣಿಸುತ್ತೇವೆ ಎಂದು ಫತ್ವಾ ನೀಡಿದರು). ದಯವಿಟ್ಟು ಗಮನಿಸಿರಿ, ತಮ್ಮ ಅನ್ನದ ಪ್ರಶ್ನೆಗೆ ಉತ್ತರವನ್ನು ಭಾಷೆ ಮತ್ತು ಸಂಸ್ಕೃತಿಯಲ್ಲಿ ಹುಡುಕಿದರೆ ಇದೇ ತರ್ಕದಲ್ಲಿ ನಮ್ಮ ಉಡುಪಿ ಹೋಟಲ್‌ಗಳ ಮಾಲೀಕರು ಮತ್ತು ಸಿಬ್ಬಂಧಿ ಆಂಧ್ರ, ಚೈನೀಸ್ ಹಾಗೂ ಉತ್ತರ ಭಾರತದ ತಿನಿಸುಗಳ ಹೋಟೆಲ್‌ಗಳನ್ನು ನಿಷೇಧಿಸಬೇಕೆಂದು ಒತ್ತಾಯಿಸಬಹುದು. ನೆನಪಿರಲಿ ಉಡುಪಿ ಹೋಟೆಲ್ ಉಧ್ಯಮದಲ್ಲಿ ೩೦ ಸಾವಿರಕ್ಕಿಂತ ಹೆಚ್ಚಿನ ಕೆಲಸಗಾರರಿದ್ದಾರೆ.

೨. ಟಿ.ವಿ. ಸೀರಿಯಲ್‌ಗಳ ಡಬಿಂಗ್ ನಿಷೇದಿಂದಾಗಿ ಪರಿಣಾಮಗಳು

ಟಿ.ವಿ. ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಹೋಗಿದೆ. ಪುಟ್ಟ ಮಕ್ಕಳಿಗೆ ಕಾರ್ಟೂನ್ ಚಾನಲ್‌ಗಳು, ಯುವ ಜನರಿಗೆ ಕ್ರೀಡಾ ಚಾನಲ್‌ಗಳು, ದೊಡ್ಡವರಿಗೆ ವಾರ್ತೆ ಮತ್ತು ಕೌಟುಂಬಿಕ ಧಾರವಾಹಿಗಳು ಮತ್ತು ಜ್ಞಾನಾರ್ಜನೆಗೆ ನ್ಯಾಷನಲ್ ಜಿಯೋಗ್ರಾಫಿಕ್, ಡಿಸ್ಕವರಿ, ಅನಿಮಲ್ ಪ್ಲಾನೆಟ್, ಹಿಸ್ಟರಿ ಚಾನಲ್ ಮುಂತಾದವುಗಳು. ಇಲ್ಲಿ ಮುಖ್ಯವಾಗಿ ಗ್ರಾಮೀಣ ಮಕ್ಕಳಿಂದ ನಗರದ ಮಕ್ಕಳವರೆಗೆ ಎಲ್ಲರೂ ದಿನದ ಸಾಕಷ್ಟು ಸಮಯವನ್ನು ಕಾರ್ಟೂನ್ ಚಾನಲ್‌ಗಳಲ್ಲಿ ಕಳೆಯುತ್ತಾರೆ. ಇದು ಒಳ್ಳೆಯದೋ ಕೆಟ್ಟದ್ದೋ ಎನ್ನುವ ತಾತ್ವಿಕ ಚರ್ಚೆಯನ್ನು ಪಕ್ಕಕಿಟ್ಟು ನಿಜಕ್ಕೂ ನಡೆಯುತ್ತಿರುವ ಸ್ಥಿತಿಯನ್ನು ವಿಮರ್ಶಿಸೋಣ. ನೀವು ನೆರೆ ರಾಜ್ಯಕ್ಕೆ ಹೋಗಿ ನೋಡಿದರೆ ಅಲ್ಲಿನ ಮಕ್ಕಳು ಬಹುತೇಕ ಎಲ್ಲಾ ಕಾರ್ಟೂನ್ ಕಾರ್ಯಕ್ರಮಗಳನ್ನು ಅವರವರ ಭಾಷೆಯಲ್ಲಿ ನೋಡಿ ಆನಂದಿಸುತ್ತಿರುವುದನ್ನು ಕಾಣುತ್ತೀರಿ. ನಮ್ಮ ಮಕ್ಕಳಿಗೆ ಆ ಸೌಲಭ್ಯವಿಲ್ಲ. ಅವರು ಕಣ್ಣು–ಬಾಯಿ ಬಿಟ್ಟುಕೊಂಡು ಒಂಚೂರೂ ಅರ್ಥವಾಗದ ಭಾಷೆಯಲ್ಲಿ ಈ ಚಾನಲ್‌ಗಳನ್ನು ನೋಡುತ್ತಿರುತ್ತಾರೆ. ಸ್ವಲ್ಪ ಕಾಲದ ನಂತರ ಆ "ಅರ್ಥವಾಗದ ಭಾಷೆ" ಸಾಂದರ್ಭಿಕ ಧ್ವನಿಗಳ ಮುಖಾಂತರ ನಿಧಾನವಾಗಿ "ಅರ್ಥವಾಗಲು" ಪ್ರಾರಂಭಿಸುತ್ತದೆ. ಚಿಕ್ಕ ಮಕ್ಕಳ ಗ್ರಹಣ ಶಕ್ತಿ ತೀವ್ರವಾಗಿರುವುದರಿಂದ ಈ ಧ್ವನಿಗಳು ಭಾಷೆಯ ಪದಗಳಾಗಿ ಮಾರ್ಪಟ್ಟು ಮುಂದೆ ತಂತಾನೆ ಒಂದು ವ್ಯಾಕರಣದ ಶಿಸ್ತಿಗೆ ಒಳಪಡುತ್ತಾ ಆ ಮಕ್ಕಳಲ್ಲಿ ಆ ಭಾಷೆಯ ಕೌಶಲ್ಯವನ್ನು ಬೆಳೆಸುತ್ತವೆ. ಆ ಮಗು ತನಗರಿವಿಲ್ಲದೆಯೇ ಒಂದು ಹೊಸ ಭಾಷೆಯನ್ನು ಕಲಿತಿರುತ್ತದೆ. ಅಂದರೆ ಮಕ್ಕಳು ತಮಗೆ ತುಂಬಾ ಇಷ್ಟವಾಗುವ ಒಂದು ಕಾರ್ಯಕ್ರಮವನ್ನು ಬೇರೆ ಭಾಷೆಯಲ್ಲಿ ನೋಡಿ ಕೇಳಿಸಿಕೊಂಡಾಗ ಆ ಭಾಷೆಯನ್ನು ಸ್ವಾಭಾವಿಕವಾಗಿ ಕಲಿಯುತ್ತಾರೆ. ಇದು ಮಕ್ಕಳ ಭವಿಷ್ಯದ ದೃಷ್ಟಿಯಲ್ಲಿ ಒಳ್ಳೆಯದೇ ಎಂದು ವಾದಿಸಿದರೂ, ಡಬ್ಬಿಂಗ್ ನಿಷೇಧದಿಂದ ಕನ್ನಡದ ಪುಟ್ಟ ಪ್ರೇಕ್ಷಕನನ್ನು ಪರಭಾಷಾ ಅವಲಂಬಿಯನ್ನಾಗಿ ಮಾಡಲಾಗುತ್ತಿದೆ. ಇದು ನಮ್ಮ ನೆರೆ ರಾಜ್ಯಗಳಲ್ಲಿ ನಡೆಯುತ್ತಿಲ್ಲ. ಈ ಅಂಶವನ್ನು ಉಪೇಕ್ಷಿಸಿದರೆ ಇನ್ನು ಕೆಲವೇ ವರ್ಷಗಳಲ್ಲಿ ಕನ್ನಡ ಚಿತ್ರಗಳ ಪ್ರೇಕ್ಷಕರ ಸಂಖ್ಯೆ ದಾರುಣವಾದ ಕನಿಷ್ಟ ಮಟ್ಟವನ್ನು ತಲುಪಿ ಈ ಕನ್ನಡ ಚಿತ್ರರಂಗದ ಉಳಿವಿಗೆ ಕೊಟ್ಟ ಔಷಧಿಯೇ ವಿಷವಾಗಿ ಪರಿಣಮಿಸಲಿದೆ.

ಕನ್ನಡದ ಅಭಿಮಾನಿಗಳು ಕನ್ನಡವನ್ನು ಅದರ ಮುಖಾಂತರ ಕನ್ನಡ ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿಯನ್ನು ಬಹಳ ಎಚ್ಚರಿಕೆಯಿಂದ ನಿಭಾಯಿಸುವ ಕಾಲ ಬಂದಿದೆ. ಯಾವುದೇ ಕಾರಣಕ್ಕೂ ನಮ್ಮ ಚಲನಚಿತ್ರಗಳ ಮತ್ತು ದೂರದರ್ಶನದ ಪ್ರೇಕ್ಷಕರಿಗೆ ಕನ್ನಡದ ಧ್ವನಿ ತಪ್ಪದಂತೆ ಕಾಯ್ದುಕೊಳ್ಳುವ ಮುಖಾಂತರ ಅವರನ್ನು ಆದಷ್ಟೂ ಶುದ್ಧ ಕನ್ನಡಿಗರನ್ನಾಗಿ ಉಳಿಸಬೇಕಿದೆ. ಕನ್ನಡ ಚಿತ್ರಗಳಿಗೆ ಡಬಿಂಗ್

ಚಿತ್ರಗಳಿಂದ ಚಿತ್ರಮಂದಿರಗಳ ಕೊರತೆ ಇತ್ಯಾದಿ ಸಮಸ್ಯೆಗಳುಂಟಾದಾಗ ಅದನ್ನು ಬೇರೆ ರೀತಿಯಲ್ಲಿ ಪರಿಹರಿಸಿಕೊಳ್ಳಬೇಕಿದೆ.

ಒಬ್ಬ ಜವಾಬ್ದಾರಿಯುತ ಕನ್ನಡಿಗನಾಗಿ ಡಬಿಂಗ್ ನಿಷೇಧದ ಪರ ಇರುವ ಎಲ್ಲರಲ್ಲಿ ನಮ್ರ ಮನವಿ ಏನೆಂದರೆ, ನಮ್ಮನ್ನು ಕನ್ನಡ ಚಿತ್ರಗಳನ್ನು ನೋಡದ, ಕನ್ನಡಕ್ಕೆ ಹೋರಾಡದ ಮತ್ತು ಕನ್ನಡದ ಸಮಸ್ಯೆಗಳ ಅರಿವಿರದ ಹೈಟೆಕ್-ಅಂತರ್ಜಾಲದಲ್ಲಿ ಸದಾ ಮುಳುಗಿರುವ ಬೇಜವಾಬ್ದಾರಿ ವ್ಯಕ್ತಿಗಳು ಎಂದು ದಯವಿಟ್ಟು ಭಾವಿಸದೆ, ಇಲ್ಲಿ ಚರ್ಚಿಸಿರುವ ವಿಷಯವನ್ನು ಮುಕ್ತ ಮನಸ್ಸಿನಿಂದ ಅರ್ಥಮಾಡಿಕೊಳ್ಳಿ. ಕಲಾವಿದರ ಮತ್ತು ತಂತ್ರಜ್ಞರ ಬದುಕಿನ ಪ್ರಶ್ನೆಗೆ ಉತ್ತರವನ್ನು ಡಬಿಂಗ್ ನಿಷೇಧದಲ್ಲಿ ಕಂಡುಕೊಳ್ಳಬೇಡಿ. ಕನ್ನಡ ಭಾಷೆಯ ಉಳಿವಿಗೆ ಬೇಕಾಗಿರುವ ಕನ್ನಡ ಧ್ವನಿ ಪರಿಸರವನ್ನು ಕನ್ನಡದ ಪ್ರೇಕ್ಷಕನಿಗೆ ತಪ್ಪದಂತೆ ಕಾಯ್ದುಕೊಳ್ಳಿ. ಕನ್ನಡಿಗನ ಮನೆಯಲ್ಲೇ ಆತನ ಟಿ.ವಿ. ಮುಖಾಂತರ ಇಂಗ್ಲಿಷ್, ತೆಲುಗು, ತಮಿಳು ಇತ್ಯಾದಿ ಭಾಷೆಗಳು ಅನಿವಾರ್ಯವಾಗದಂತೆ ಕಾಯಬೇಕಾದದ್ದು ನಮ್ಮೆಲ್ಲರ ಬಹು ಮುಖ್ಯ ಜವಾಬ್ದಾರಿ. ಇದನ್ನು ಒಪ್ಪಿದರೆ ಡಬಿಂಗ್ ನಿಷೇಧದ ಪರಿಣಾಮಗಳನ್ನು ಮುಕ್ತವಾಗಿ ಚರ್ಚಿಸಿ ಪರಿಹಾರವನ್ನು ಕಂಡುಕೊಳ್ಳಬಹುದು. ಸಧ್ಯಕ್ಕೆ ಟಿ.ವಿ. ಚಾನಲ್ಗಳ ಮೇಲೆ ಹೇರಿರುವ ಡಬಿಂಗ್ ನಿಷೇಧವನ್ನು ಸಡಿಲಿಸುವುದು ತುರ್ತಾಗಿ ಆಗದಿದ್ದರೆ ನಮ್ಮ ಎಲ್ಲಾ ವರ್ಗದ, ಎಲ್ಲ ಅಭಿರುಚಿಯ ಹಾಗೂ ಎಲ್ಲಾ ವಯಸ್ಸಿನ ಪ್ರೇಕ್ಷಕರನ್ನು ಅವರವರ ಮನೆಗಳಲ್ಲೇ ಅನ್ಯ ಭಾಷಾ ಅವಲಂಬಿಗಳಾಗುತ್ತಾರೆ. ಇದರ ಮುಖಾಂತರ ಅವರ ಕನ್ನಡ ಅವಲಂಬನೆ ತಪ್ಪಿ ಕನ್ನಡ ಭಾಷೆಗೆ ಮತ್ತು ಕನ್ನಡದ ಅಭಿಮಾನಕ್ಕೆ ತೀವ್ರ ಹೊಡೆತ ಬೀಳಲಿದೆ. ಡಬ್ಬಿಂಗ್ ನಿಷೇಧ ಎಂಬ ಔಷಧಿಯಿಂದ ಉಂಟಾದ ಈ ಖಾಯಿಲೆಗೆ ಕನ್ನಡ ಭಾಷೆ ತತ್ತರಿಸಿ ಹೋಗಲಿದೆ. ಇದರ ಅಂತಿಮ ಪರಿಣಾಮವಾಗಿ ಚಿತ್ರರಂಗ ಮತ್ತು ದೂರದರ್ಶನದ ಕನ್ನಡ ಚಟುವಟಿಕೆಗಳು ಸರ್ವನಾಶವಾಗಲಿವೆ. ಹಾಗಾದಿರಲಿ ಎಂದು ಹಾರೈಸಲು ನಿಮ್ಮ ಡಬಿಂಗ್ ನಿಷೇಧ ಅಡ್ಡ ಬರುತ್ತಿದೆ.

■

'ಸಂಕ್ರಮಣ'ದಲ್ಲಿ ಮೊದಮೊದಲು ಸಾಹಿತ್ಯ ಸೃಷ್ಟಿ, ಸಾಹಿತ್ಯ ವಿಮರ್ಶೆಗೆ ಮಾತ್ರ ಅವಕಾಶವಿತ್ತು. ಅನಂತರದಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬೆಳವಣಿಗೆಗಳನ್ನು ದಾಖಲಿಸುತ್ತ ಮುಕ್ತ ಚರ್ಚೆ, ವಾದ-ವಿವಾದಗಳಿಗೆ ಪ್ರಜಾಸತ್ತಾತ್ಮಕ ನೆಲೆಯಲ್ಲಿ ವೇದಿಕೆಯನ್ನು ನಿರಂತರವಾಗಿ ನಿರ್ಮಿಸುತ್ತಲೇ ಬಂದಿದೆ.

– ಡಾ. ಎನ್. ಶಿವಣ್ಣ

ದೃಶ್ಯೋದ್ಯಮದಲ್ಲಿನ ಮನಾಪಲಿ ವ್ಯವಸ್ಥೆ : ಎದುರಿಸುತ್ತಾ ಈಸುವ ಬಗೆ

● ಬಿ. ಸುರೇಶ

ನಾನಿಲ್ಲಿ ಈ ಸಮ್ಮೇಳನಕ್ಕೆ ಆಕಸ್ಮಿಕವಾಗಿ ಬಂದವನು. ಈ ಹೊತ್ತಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಇರಬೇಕಿದ್ದವನು ಕಾರ್ಮಿಕರ ಹೋರಾಟದ ಸಲುವಾಗಿ ಮರಳಿ ರಾಜಧಾನಿಗೆ ಹಿಂದಿರುಗಿದೆ. ನಿನ್ನೆ ಹದಿನೈದು ಸಾವಿರ ಕಾರ್ಮಿಕರು ರಾಜಧಾನಿಯಲ್ಲಿ ಸೇರಿದ್ದರು. ಕನಿಷ್ಟ ವೇತನ ಮತ್ತು ಕಾರ್ಮಿಕರ ಹಕ್ಕುಗಳ ಬೇಡಿಕೆಯೊಂದಿಗೆ. ಈ ವಿಷಯ ನಮ್ಮ ವಾಹಿನಿಗಳಲ್ಲಿ ಸುದ್ದಿಯಾಗಲಿಲ್ಲ. ಆದರೆ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆದ ಸುದ್ದಿ ಮಾತ್ರ ದಿನವೆಲ್ಲಾ ಬರುತ್ತಿತ್ತು. ಇಂತಹ ಸಂದರ್ಭದಲ್ಲಿ ನಾವು "ಡಬಿಂಗ್" ಎಂಬ ವಿಷಯದ ಬಗ್ಗೆ ಮಾತಾಡುತ್ತಾ ಇರುವುದು ಸಹ ಪ್ರಾಯಶಃ ಕಾರ್ಮಿಕರ ಮತ್ತು ಕ್ರಿಯಾಶೀಲ ಕೆಲಸಗಾರರ ನೆಲೆಯಿಂದ ಅತ್ಯಂತ ಸಮಯೋಚಿತ ಎಂದು ಭಾವಿಸುತ್ತೇನೆ.

ನಿನ್ನೆ ಹಗಲಿನ ಆರಂಭಕ್ಕೆ ಗುರುಗಳಾದ ಚಂಪಾ ಅವರು ಕರೆ ಮಾಡಿದರು, "ಈ ಗೋಷ್ಠಿಯ ಒಬ್ಬ ಭಾಷಣಕಾರರು ಸಂಪರ್ಕಕ್ಕೆ ಸಿಗುತ್ತಿಲ್ಲ, ನೀನು ಸ್ಥಾನ ತುಂಬು" ಎಂದು ಆಜ್ಞಾಪಿಸಿದರು. ನಾನು ಗುರುಗಳ ಮಾತು ಮೀರಲಾಗದೆ ಬಂದು ಮಾತಿಗೆ ನಿಂತಿದ್ದೇನೆ. ನಮ್ಮ ಗುರುಗಳ ಇಂತಹ ಪ್ರೀತಿಪೂರ್ವಕ ಆಗ್ರಹಗಳನ್ನು ನಾನು ಯಾವಾಗಲೂ ಇಷ್ಟಪಡುತ್ತೇನೆ. ಅಂತಹ ಪ್ರೀತಿಯಿಂದಲೇ ನಮ್ಮ ಜಗತ್ತು ಮತ್ತಷ್ಟು ಸುಂದರವಾಗುವುದು ಸಾಧ್ಯ ಎಂದು ನಂಬುತ್ತೇನೆ. ಈ ಹಾದಿಯಲ್ಲಿ ನನ್ನ ಪ್ರೀತಿಯ ಗುರುಗಳಾದ ಚಂಪಾ, ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಗಿರಡ್ಡಿ ಗೋವಿಂದರಾಜ ಅವರು, ಹೀಗೆಯೇ ಅನೇಕರಿಗೆ ತೋರಿದ ಪ್ರೀತಿಯ ಬೆಳಕೇ ಕಾರಣವಾಗಿ "ಸಂಕ್ರಮಣ" ಪತ್ರಿಕೆ ೫೧ನೆಯ ವಸಂತಕ್ಕೆ ಕಾಲಿರಿಸಿದೆ. ಇದು ಸಣ್ಣ ಸಾಧನೆಯಲ್ಲ. ಇಂತಹ ಸಾಹಿತ್ಯ ಪತ್ರಿಕೆಗಳಲ್ಲಿ ಲಾಭವಿಲ್ಲ. ಕೇವಲ ಚಂದಾದಾರರು ನೀಡುವ ಹಣ ಮಾತ್ರದಿಂದಲೇ ಈ ಪತ್ರಿಕೆ ಐವತ್ತು ಮುಟ್ಟಿದೆ. ಇದಕ್ಕೆ ಕಾರಣರಾದ ಪ್ರತಿಯೊಬ್ಬರಿಗೂ (ಕಳೆದ ಹತ್ತು ವರ್ಷಗಳಿಂದ ಚಂದಾದಾರನಾದ ನನ್ನನ್ನೂ ಸೇರಿದಂತೆ) ಎಲ್ಲರಿಗೂ ಅಭಿನಂದನೆಗಳು. ನಿಮ್ಮ ಪ್ರೀತಿಯ ಪ್ರವಾಹವೂ ಈ ನಾಡಿನ ಸಾಕ್ಷಿ ಪ್ರಜ್ಞೆಯಾದ ಸಂಕ್ರಮಣ ಪತ್ರಿಕೆಯನ್ನು ಶತಮಾನದಾಚೆಗೂ ಸಾಗುವಂತೆ ಮಾಡಲಿ ಎಂದು ಹಾರೈಸುತ್ತೇನೆ.

ಇನ್ನು ಇವತ್ತಿನ ವಿಷಯದ ಕಡೆಗೆ ಸಾಗೋಣ. ಈ ಡಬಿಂಗ್ ಎಂಬ ವಿಕೃತಿಯ ಬಗ್ಗೆ ನಾನು ಕಳೆದ ಐದಾರು ವರ್ಷಗಳಲ್ಲಿ ಅದೆಷ್ಟೋ ಮಾತಾಡಿದ್ದೇನೆ. ಈ ಗೋಷ್ಠಿಯಲ್ಲಿ ನನಗಿಂತ ಮುಂಚಿತವಾಗಿ ಪ್ರಬಂಧ ಮಂಡಿಸಿರುವ ಪ್ರೊ. ಸಿ.ಎನ್.ರಾಮಚಂದ್ರನ್ ಅವರು ಸವಿವರವಾಗಿ ಮತ್ತು ಅತ್ಯಂತ ಅಕೆಡೆಮಿಕ್ ಶಿಸ್ತಿನಿಂದ ಡಬ್ಬಿಂಗ್ ಯಾಕೆ ಬೇಡ ಎಂದು ತಿಳಿಸಿದ್ದಾರೆ. ಅವರು ಆಡಿರುವ ಪ್ರತೀ ಮಾತಿಗೂ ನನ್ನ ಸಹಮತವಿದೆ.

ಕೇವಲ ಚಲನಚಿತ್ರ ಎನ್ನಬಹುದೇ?

ಮೊದಲಿಗೆ ನನಗೆ ಈ ಗೋಷ್ಠಿಗೆ ನೀಡಿರುವ ಹೆಸರಿನ ಕುರಿತು ಎರಡು ವಿಷಯಕ್ಕೆ ಭಿನ್ನಾಭಿಪ್ರಾಯವಿದೆ. ಮೊದಲಿಗೆ 'ಕನ್ನಡ ಚಲನಚಿತ್ರೋದ್ಯಮ' ಎಂಬುದು. ಇದು ಚಲನಚಿತ್ರ ಹಾಗೂ ಟಿವಿ ಮಾಧ್ಯಮ ಎಂದಾಗಬೇಕಿತ್ತು. ಏಕೆಂದರೆ ಚಲನಚಿತ್ರ ಅಲಿಯಾಸ್ ಸಿನಿಮಾ ಎನ್ನುವ ಮಾಧ್ಯಮ ಮತ್ತು ಟೆಲಿವಿಷನ್ ಮಾಧ್ಯಮಗಳಲ್ಲಿ ಬೃಹತ್ತಾದ ವ್ಯತ್ಯಾಸವಿದೆ. ಎರಡೂ ಚಲಿಸುವ ಚಿತ್ರಗಳನ್ನೇ ಉಳ್ಳದ್ದು ಎಂಬುದು ಮಾತ್ರ ಇವುಗಳಿಗಿರುವ ಸಾಮ್ಯ. ಉಳಿದಂತೆ ಕಥನ ಕ್ರಮ ಮತ್ತು ಕಥನ ವಿನ್ಯಾಸದಲ್ಲಿ ಇವೆರಡೂ ಮಾಧ್ಯಮಗಳೂ ಬೇರೆಯದೇ. ಒಂದು ಸಿನಿಮಾವನ್ನು ಟಿವಿಯಲ್ಲಿಯೂ ನೂರಾರು ತುಂಡುಗಳನ್ನಾಗಿ ಮಾಡಿ ಪ್ರಸಾರ ಮಾಡಬಹುದು. ಆದರೆ ಧಾರಾವಾಹಿ ಅಥವಾ ಟಿವಿಗಾಗಿಯೇ ತಯಾರಾದ ಕಾರ್ಯಕ್ರಮವನ್ನು ಸಿನಿಮಾ ಮಂದಿರದಲ್ಲಿ ಪ್ರದರ್ಶಿಸಲು ಸಾಧ್ಯವಿಲ್ಲ. ಅಕಸ್ಮಾತ್ ಪ್ರದರ್ಶಿಸಿದರೂ ಅದನ್ನು ನೋಡುವವರಿಗೆ 'ಸಿನಿಮಾ' ನೀಡುವ ಅನುಭೂತಿಯನ್ನು ಟಿವಿ ಕಾರ್ಯಕ್ರಮ ನೀಡುವುದಿಲ್ಲ. ಇದಕ್ಕೆ ಇವೆರಡೂ ಮಾಧ್ಯಮಗಳ ನಿರೂಪಣಾ ವಿನ್ಯಾಸ ಕಥನ ಕಟ್ಟಡದ ವಿನ್ಯಾಸದಲ್ಲಿ ಇರುವ ವ್ಯತ್ಯಯಗಳೇ ಪ್ರಧಾನ ಕಾರಣ. ಇದಲ್ಲದೆ, ಸರಿಸುಮಾರು ೧೯೯೦ರ ಆಚೆಗೆ ಕನ್ನಡಿಗರಿಗೆ ದೊರಕಿದ ಟೆಲಿವಿಷನ್ ಮಾಧ್ಯಮವು ತನ್ನ ಎರಡು ದಶಕದ ಹಾದಿಯಲ್ಲಿ ಮಾಡಿದ ಮೊದಲ ಕೆಲಸ ಸಹಸ್ರಾರು ಕನ್ನಡ ಕತೆಗಾರರಿಗೆ, ತಂತ್ರಜ್ಞರಿಗೆ ಹಾಗೂ ಕಾರ್ಮಿಕರಿಗೆ ಆರ್ಥಿಕ ಸುಭದ್ರತೆಯನ್ನು ಕೊಟ್ಟಿದೆ. ನಾವು ಕೇವಲ ಸಿನಿಮಾ ಎಂದು ಯೋಚಿಸುವುದಾದರೆ, ಆ ಮಾಧ್ಯಮ/ಉದ್ಯಮವು ಟೆಲಿವಿಷನ್ನಿನ ಹಾಗೆ ಸುಭದ್ರತೆ ಹಾಗೂ ಬದುಕು ಕಟ್ಟಿಕೊಳ್ಳುವ ಆತ್ಮವಿಶ್ವಾಸವನ್ನು ಇಂದಿಗೂ ನೀಡಲಾಗಿಲ್ಲ. ಸಿನಿಮಾ ಮಾತ್ರ ನೆಚ್ಚಿಕೊಂಡು ನೆಮ್ಮದಿಯಾಗಿ ಬದುಕಲು ಸಾಧ್ಯವಿಲ್ಲ ಎಂಬುದಕ್ಕಾಗಿಯೇ ಬಹುತೇಕ ಸಿನಿಮಾ ನಟರು ಸಹ ಇಂದು ಟೆಲಿವಿಷನ್ನಿನ ರಿಯಾಲಿಟಿ ಷೋಗಳಲ್ಲಿ ಹಾಗೂ ದೈನಿಕ ಧಾರಾವಾಹಿಗಳಲ್ಲಿ ಕಾಣಿಸಿಕೊಳ್ಳುತ್ತಾ ಇದ್ದಾರೆ ಎಂಬುದು ಸಹ ಗಮನಿಸಬೇಕಾದ ವಿಷಯವಾಗಿದೆ. ಹೀಗಾಗಿ ಟೆಲಿವಿಷನ್ ಎಂಬುದು 'ಸೋಷಿಯೋ – ಡೆಮಾಕ್ರೆಟಿಕ್ ಸ್ಪೇಸ್' ಎಂತಲೂ ಸಿನಿಮಾವನ್ನು 'ಹೆಗಮಾನಿಕಲ್–ಫ್ಯೂಡಲಿಸ್ಟಿಕ್ ಸ್ಪೇಸ್' ಎಂತಲೂ

ಗುರುತಿಸಬಹುದು. ಈ ಮಾತಿಗೆ ಟೆಲಿವಿಷನ್ನಿನಲ್ಲಿ ಕಲಾವಿದರು ತಮ್ಮ ಪ್ರತಿಭೆಯಿಂದ ಮಾತ್ರ ಗುರುತಿಸಿಕೊಳ್ಳುತ್ತಾರೆ ಮತ್ತು ನೆಲೆ ಕಂಡುಕೊಳ್ಳುತ್ತಾರೆ ಎಂಬುದು, ಸಿನಿಮಾದಲ್ಲಿ ಆಯಾ ವ್ಯಕ್ತಿ ಯಾವ ನಟನ ನೆಚ್ಚಿನ ವ್ಯಕ್ತಿ ಅಥವಾ ಯಾರ ಮಕ್ಕಳು ಎಂಬ ನೆಲೆಯಲ್ಲಿ ಅವಕಾಶ ಪಡೆಯುತ್ತಾರೆ ಎಂಬುದನ್ನು ಸಹ ಸಿನಿಮಾ ಇತಿಹಾಸ ಬಲ್ಲವರು ಗುರುತಿಸಬಹುದು. ಈ ವ್ಯತ್ಯಾಸದ ಕಾರಣವಾಗಿಯೇ ಟಿವಿ ಮತ್ತು ಸಿನಿಮಾಗಳನ್ನು ಬೇರೆ ಬೇರೆಯಾಗಿಯೇ ನೋಡಬೇಕಾದ ಅಗತ್ಯವಿದೆ. ಇದಲ್ಲದೆ ಇವೆರಡೂ ಮಾಧ್ಯಮಗಳ ವ್ಯಾಪಾರದ ಕ್ರಮ ಮತ್ತು ಜನಪ್ರಿಯತೆಯ ಮೌಲ್ಯಮಾಪನ ಕ್ರಮಗಳು ಸಹ ಸಂಪೂರ್ಣ ಭಿನ್ನವಾದುದು. ಈ ಹಿನ್ನೆಲೆಯಲ್ಲಿ ಇಂದು ಚರ್ಚಿತವಾಗುತ್ತಾ ಇರುವ ವಿಷಯವನ್ನು ಕೇವಲ 'ಸಿನಿಮಾ' ಎಂದು ಗಮನಿಸದೆ 'ಟಿವಿ' ಎಂದು ಸಹ ಗುರುತಿಸಿ, ವ್ಯತ್ಯಯಗಳ ಹಿನ್ನೆಲೆಯಲ್ಲಿ ಮಾತಾಡಬೇಕಾಗುತ್ತದೆ. ಅದಕ್ಕಾಗಿ ಇಂದಿನ ವಿಷಯವನ್ನು "ಕನ್ನಡ ಚಲನಚಿತ್ರ ಹಾಗೂ ಟಿವಿ ಮಾಧ್ಯಮ" ಎಂದು ಹೆಸರಿಸಿಕೊಳ್ಳಬೇಕಾಗುತ್ತದೆ.

ವಿಕೃತಿಯನ್ನು ಸಂಸ್ಕೃತಿ ಎನ್ನಲಾದೀತೇ?

ಇನ್ನು ಎರಡನೆಯ ವಿಷಯ "ಡಬಿಂಗ್ ಸಂಸ್ಕೃತಿ" ಎಂಬುದು. ಡಬ್ಬಿಂಗನ್ನು ಸಂಸ್ಕೃತಿ ಎನ್ನುವುದೇ ಬಹುದೊಡ್ಡ ಅಪಾಯ. ಅದು ಯಾವತ್ತಿಗೂ ಸಂಸ್ಕೃತಿಯಾಗುವುದಿಲ್ಲ, ಅದು ಕೇವಲ ವಿಕೃತಿ. ಅದಾಗಲೇ ಒಂದು ಸಂಸ್ಕೃತಿಯಲ್ಲಿ ಹುಟ್ಟುಪಡೆದ ಕಲಾಕೃತಿಗೆ ಮತ್ತೊಂದು ಭಾಷೆಯ ಪೋಷಾಕು ತೊಡಿಸುವ ಕೆಲಸವನ್ನು ಡಬ್ಬಿಂಗ್ ಎನ್ನುತ್ತೇವೆ. ಅಂದರೆ ಕೇವಲ ಮಾತಿನ ಮರುಲೇಪನ ಮಾಡುವುದನ್ನು ಡಬ್ಬಿಂಗ್ ಎನ್ನುತ್ತೇವೆ. ಇಂಗ್ಲೀಷ್ ಭಾಷೆಯಲ್ಲಿಯೂ ಯಾವುದಾದರೂ ವಿಷಯವನ್ನು ಕುರಿತು ಆರೋಪಿಸುವ ಸಂದರ್ಭದಲ್ಲಿ "ಇಟ್ ಇಸ್ ಡಬ್ಡ್ ಆಸ್ ಸೋ ಅಂಡ್ ಸೋ..." ಎನ್ನುತ್ತಾರೆ. ಅಂದರೆ ಅಲೆಜ್ಡ್ ಅಥವಾ ಆರೋಪಿತ ಎನ್ನುವ ಪದಕ್ಕೆ ಸಂವಾದಿಯಾಗಿ ಡಬ್ಡ್ ಎನ್ನುವ ಪದ ಇಂಗ್ಲೀಷ್ ಭಾಷೆಯಲ್ಲಿ ಬಳಕೆಯಲ್ಲಿದೆ. ಅಂದರೆ ಯಾವುದೇ ಡಬ್ಡ್ ಎನ್ನುವುದು ಆರೋಪಿತವಾದದ್ದು ಮಾತ್ರ, ಅಂದರೆ ಡಬ್ಬಿಂಗ್ ಆಗಿ ಬಂದದ್ದು ಸ್ವತಂತ್ರ ಕೃತಿಯಲ್ಲ. ಅದು ಬರ್ಗರ್‌ನಲ್ಲಿ ರಾಗಿಮುದ್ದೆ ಇರಿಸಿದ ಹಾಗೆ ಹೈಬ್ರಿಡ್ ಮತ್ತು ಕೃತಕ ಪೋಷಾಕಿನ ವಿಕೃತಿ. ಹಾಗಾಗಿಯೇ ಇದನ್ನು ಸಂಸ್ಕೃತಿ ಎಂದು ಕರೆಯಲಾಗದು. ಕರೆಯುವುದಾದರೆ 'ಸಂಸ್ಕೃತಿ ಎಂದು ಆರೋಪಿತವಾದದ್ದು' ಎಂದು ಕರೆಯಬಹುದು. ಹೀಗಾಗಿ ಈ ಗೋಷ್ಠಿಯ ಹೆಸರಲ್ಲಿ ಇರುವ 'ಡಬ್ಬಿಂಗ್ ಸಂಸ್ಕೃತಿ' ಎಂಬುದನ್ನು 'ಆಧುನಿಕ ವಿಕೃತಿ' ಎಂದು ಗುರುತಿಸಬಹುದು.

ಇನ್ನು ಇಲ್ಲಿ ಉದ್ಯಮ ಎಂದು ಕರೆಯಲಾಗಿರುವ ಕನ್ನಡದ ದೃಶ್ಯ ಮಾಧ್ಯಮ ಕುರಿತು ಗಮನಿಸೋಣ. ಸಿನಿಮಾ ಅಂತೂ ಈಗ ಉದ್ಯಮವೇ ಆಗಿದೆ. ೨೦೧೬ರ ಜನವರಿಯಿಂದ ಈ ಗೋಷ್ಠಿ ನಡೆಯುತ್ತಾ ಇರುವ ಕಾಲಕ್ಕೆ ೪೭ ಕನ್ನಡ ಚಿತ್ರಗಳು ಬಿಡುಗಡೆಯಾಗಿವೆ. ಒಂಬತ್ತು ವಾರಕ್ಕೆ ೪೭ ಅಂದರೆ ಪ್ರತಿ ವಾರ ಸರಾಸರಿ ಐದು ಚಿತ್ರಗಳು. ಇದು ಈ ವರ್ಷಾಂತ್ಯಕ್ಕೆ ೨೦೦ರ ಗಡಿ ದಾಟಬಹುದು. ಆದರೆ ಇವುಗಳಲ್ಲಿ ಯಶಸ್ಸು ಪಡೆದ ಸಿನಿಮಾಗಳ ಸಂಖ್ಯೆ ಮಾತ್ರ ೨ರ ಗಡಿ ದಾಟುವುದಿಲ್ಲ. ಶಿವರಾಜಕುಮಾರ್ ಅವರ ಅಭಿನಯದ 'ಕಿಲ್ಲಿಂಗ್ ವೀರಪ್ಪನ್', 'ಶಿವಲಿಂಗ' ಹೊರತು ಪಡಿಸಿ ಇನ್ನಾವುದೇ ಸಿನಿಮಾ ಬಾಕ್ಸ್ ಆಫೀಸಿನಲ್ಲಿ ಲಾಭಗಳಿಸಿಲ್ಲ. ಇನ್ನೊಂದೆರಡು ಸಿನಿಮಾಗಳು ಕೇವಲ ಬಂಡವಾಳ ಹಿಂದಿರುಗಿಸಿವೆ. (ಈ ಪಟ್ಟಿಯಲ್ಲಿ ನನ್ನ ನಿರ್ದೇಶನದ 'ದೇವರ ನಾಡಲ್ಲಿ' ಸಿನಿಮಾ ಸಹ ಇದೆ.) ಅಂದರೆ ಒಂದು ಸಿನಿಮಾಕ್ಕೆ ಅಂದಾಜು ವೆಚ್ಚ ೨ ಕೋಟಿ ಎಂದು ನಿಗದಿ ಪಡಿಸಿದರೆ ಕನ್ನಡ ಸಿನಿಮಾಕ್ಕೆ ಈ ವರೆಗೆ ಹೂಡಿದ ಬಂಡವಾಳ ೧೦೦ ಕೋಟಿಯಾದರೆ ಹಿಂದಿರುಗಿರುವ ಹಣ ಶೇಕಡಾ ೨೫ರಷ್ಟೂ ಇಲ್ಲ. ಹೀಗಾಗಿಯೇ ಈ ೪೭ ಚಿತ್ರಗಳಲ್ಲಿ ಒಬ್ಬ ನಿರ್ಮಾಪಕರು ಹೃದಯಾಘಾತದಿಂದ ತೀರಿಕೊಂಡಿದ್ದಾರೆ. ಮತ್ತೊಬ್ಬರು ಆತ್ಮಹತ್ಯೆಯ ಪ್ರಯತ್ನ ಮಾಡಿದ್ದಾರೆ. ಇನ್ನಿಬ್ಬರು ನಿರ್ಮಾಪಕರ ಆರೋಗ್ಯ ನಾಜೂಕಾಗಿದೆ. ಈ ವಿವರಗಳು ನಮ್ಮ ಉದ್ಯಮದ ಸಧ್ಯದ ವ್ಯಾವಹಾರಿಕ ಆರೋಗ್ಯವನ್ನು ತಿಳಿಸುತ್ತವೆ.

ಸಮಾನಂತರವಾಗಿ ಕನ್ನಡದ ಟೆಲಿವಿಷನ್ ಮಾಧ್ಯಮವಂತೂ ಈಗ ವಾರ್ಷಿಕವಾಗಿ ಹದಿನಾರು ಸಾವಿರ ಕೋಟಿಯಷ್ಟು ವಹಿವಾಟನ್ನು ನಡೆಸುವ ಹಂತಕ್ಕೆ ಬೆಳೆದಿದೆ. (ಇದು ವಾರ್ಷಿಕವಾಗಿ ಕರ್ನಾಟಕದ ಮಾರುಕಟ್ಟೆಗೆ ಟೆಲಿವಿಷನ್ ಮೂಲಕ ಬಿಡುಗಡೆಯಾದ ಜಾಹೀರಾತಿನ ಹಣದ ಲೆಕ್ಕವನ್ನು ಆಧರಿಸಿದ್ದು. ವಾಸ್ತವದ ಲೆಕ್ಕಗಳನ್ನು ಗಮನಿಸದರೆ ಈ ಸಂಖ್ಯೆ ಇನ್ನೂ ಹೆಚ್ಚೇ ಇರಬಹುದು.) ಹೀಗಾಗಿ ಅನೇಕ ಹೊಸ ವಾಹಿನಿಗಳನ್ನು ಆರಂಭಿಸಲಾಗುತ್ತಿದೆ. ೧೯೯೫ರಲ್ಲಿ ಒಂದೇ ಒಂದು ವಾಹಿನಿಯಿದ್ದ ಕಾಲದಿಂದ ೨೦೧೬ರ ಕಾಲಕ್ಕೆ ಏಳು ಕನ್ನಡ ಸುದ್ದಿ ವಾಹಿನಿಗಳು, ಐದು ಕನ್ನಡ ಮನರಂಜನಾ ವಾಹಿನಿಗಳು ಮತ್ತು ಹಲವಾರು ಸ್ಥಳೀಯ ಕೇಬಲ್ ವಾಹಿನಿಗಳವರೆಗೆ ಬೆಳೆದಿದ್ದೇವೆ. ಇದು ಕಳೆದೆರಡು ದಶಕದಲ್ಲಿ ಆದ ಬೃಹತ್ ಲಂಘನ. ಮುಂಬರುವ ದಿನಗಳಲ್ಲಿ ತುಳು, ಕೊಂಕಣಿ, ಕೊಡವ ಭಾಷೆಗಳ ಮನರಂಜನಾ ವಾಹಿನಿಗಳು ಸಹ ಆರಂಭವಾಗುವ ಸಾಧ್ಯತೆ ಇದೆ ಎಂಬ ಮಾತು ಕೇಳಿಬರುತ್ತಿದೆ. ಇವೆಲ್ಲವೂ ನಮ್ಮಲ್ಲಿನ ಅನೇಕ ಪ್ರಾದೇಶಿಕ ಭಾಷೆಗಳಿಗೆ ಸಿಗುತ್ತಾ ಇರುವ ಅವಕಾಶಗಳ ಸಾಗರ ಎಂದೇ ನಾನು ಭಾವಿಸುತ್ತೇನೆ. ಆದರೆ ಈ ಅವಕಾಶಗಳ ಸಾಗರದಲ್ಲಿ ಆಗುತ್ತಾ ಇರುವುದೇನು

ಎಂದು ಗಮನಿಸಿ. ಸರಿಸುಮಾರು ೬೦ ರಿಂದ ೬೫ ದೈನಿಕ ಧಾರಾವಾಹಿಗಳು ಆರು ಮನರಂಜನಾ ಉಪಗ್ರಹ ವಾಹಿನಿಗಳಲ್ಲಿ ತಯಾರಾಗುತ್ತಾ ಇವೆ. ಇವುಗಳಲ್ಲಿ ಎಂಟು ಧಾರಾವಾಹಿಗಳನ್ನು ಹೊರತುಪಡಿಸಿ ಉಳಿದುದೆಲ್ಲ ರಿಮೇಕ್ ಅಥವಾ ಪರಭಾಷೆಯ ನಕಲು ಮಾಡಿದ ಧಾರಾವಾಹಿಗಳು. ಇದಕ್ಕೆ ಆಯಾ ಖಾಸಗಿ ವಾಹಿನಿಗಳಲ್ಲಿ ಕುಳಿತ ಅಧಿಕಾರಸ್ಥರು (ಪ್ರೋಗ್ರಾಮಿಂಗ್ ಹೆಡ್) ಪ್ರಧಾನ ಕಾರಣ. ಅವರಿಗೆ ಸ್ವತಂತ್ರ ಕೃತಿಗಳನ್ನು ಕಟ್ಟಿ ಗೆಲ್ಲುವ ಛಾತಿಯೇ ಇಲ್ಲ. ಬದಲಿಗೆ ನೆರೆಯ ಭಾಷೆಯಲ್ಲಿ ಯಶಸ್ವಿಯಾದುದರ ನಕಲುಗಳನ್ನು ಮಾಡಿ 'ನಾವು ಗೆದ್ದೆವು' ಎಂದು ಬೀಗುವ 'ಅರೆ'ಗನ್ನಡ ಮನಸ್ಥಿತಿ ಇದೆ. ಇಷ್ಟಕ್ಕೂ ಇಂತಹ ಖಾಸಗಿ ವಾಹಿನಿಗಳ ಅಧಿಕಾರಸ್ಥರಲ್ಲಿ ಕನ್ನಡಿಗರು ಎನ್ನುವ ಜನ ಸಿಗುವುದೇ ಕಡಿಮೆ. ಅಕಸ್ಮಾತ್ ಕನ್ನಡ ಮಾತೃಭಾಷಿಕರು ಸಿಕ್ಕರೂ ಅವರು ಇಂಗ್ಲೀಷ್ ಮಾಧ್ಯಮದಲ್ಲಿ ಕಲಿತವರಾಗಿರುತ್ತಾರೆ. ಅವರು ಆರಿಸಿಕೊಳ್ಳುವ ಮಾದರಿಗಳೆಲ್ಲಾ ಪಾಶ್ಚಾತ್ಯವಾದುದಾಗಿರುತ್ತದೆ ಅಥವಾ ಹಿಂದಿ ಭಾಷೆಯಿಂದ ಬಂದುದಾಗಿರುತ್ತದೆ. ಈ ಮನಸ್ಥಿತಿಯ ಜನರಿಗೆ ನಮ್ಮ ನೆಲದ ಜೊತೆಗೆ ಸೃಜನಶೀಲ ಕೃತಿ ಕಟ್ಟಬೇಕೆಂಬ ಆಲೋಚನೆಯು ಬರುವುದೇ ದುರ್ಲಭ. ಹೀಗಾಗಿ ಇಂದು ಸ್ವತಂತ್ರ ಕೃತಿಗಳನ್ನು ಬರೆಯಬಲ್ಲ ಬರಹಗಾರರು ಹಾಗೂ ನಿರ್ದೇಶಕರ ಕೊರತೆಯೂ ಇದೆ. ಇನ್ನೂ ಪ್ರಸಾರವಾಗುತ್ತಾ ಇರುವ ಬಹುತೇಕ ಧಾರಾವಾಹಿಗಳಲ್ಲಿ ಬಳಸಲಾಗುವ ಕನ್ನಡವೂ ಸಹ ದುರ್ಬಲವಾದುದೇ. ಯಾಕೆಂದರೆ ಇಂದು ಕಲಾವಿದರಾಗಲು ಬರುವ ಬಹುತೇಕರಲ್ಲಿ ಕನ್ನಡವನ್ನು 'ಸರಿಯಾಗಿ' ಮಾತಾಡಬಲ್ಲವರು ಕೆಲವರೇ. (ಸರಿಯಾಗಿ ಮಾತಾಡುವುದು ಎಂಬುದು ಚರ್ಚಾಸ್ಪದ ವಿಷಯ. ನಾನಿಲ್ಲಿ ಗುರುತಿಸುತ್ತಾ ಇರುವುದು 'ಕನ್ನಡದ ಬಹುಬಗೆಯ ಸೊಗಡುಗಳನ್ನು ಸರಿಯಾಗಿ ಮಾತಾಡುವುದು' ಎಂಬರ್ಥದಲ್ಲಿ ಮಾತ್ರ) ಈ ಮಾತಿಗೆ ಅಪವಾದ ಎಂಬಂತೆ ಕೆಲವು ಅದ್ಭುತ ಆಂಗಿಕ ಮಾತು ವಾಚಿಕಾಭಿನಯ ಬಲ್ಲ ಕಲಾವಿದರೂ ಸಹ ನಮ್ಮಲ್ಲಿದ್ದಾರೆ. ಅಂತಹವರ ಸಂಖ್ಯೆ ಕಿರಿದು.

ಇಂತಹ ಸಂದರ್ಭದಲ್ಲಿ ನಾವು, ಕೆಲವು ಕನ್ನಡಿಗರು ಬಯಸಿದ್ದಾರೆ ಎಂದು ಡಬಿಂಗ್ ಎಂಬ ವಿಕೃತಿಯನ್ನು ಬಳಕೆಗೆ ತಂದರೆ ಕನ್ನಡಕ್ಕೆ ಒಳಿತಾಗುವ ಬದಲು ಕೆಡುಕುಗಳು ಹೆಚ್ಚಾಗುವ ಸಾಧ್ಯತೆಯೇ ಹೆಚ್ಚು. ಅದು ಯಾಕೆ ಮತ್ತು ಹೇಗೆ ಎಂಬುದನ್ನು ಗಮನಿಸೋಣ.

ಸಂಖ್ಯೆಗಳ ಜಗತ್ತಿನಲ್ಲಿ ಹೃದಯಕ್ಕೆ ಜಾಗವಿಲ್ಲ

ಇದು ನಂಬರುಗಳ ಯುಗ. ಟೆಲಿವಿಷನ್ ಕಾರ್ಯಕ್ರಮವೇ ಇರಲಿ, ಸಿನಿಮಾವೇ ಇರಲಿ; ಆಯಾ ಮಾಧ್ಯಮಗಳಲ್ಲಿ ಅವು ಗಳಿಸಿದ ನಂಬರುಗಳನ್ನಾಧರಿಸಿಯೇ ಆಯಾ ಕಾರ್ಯಕ್ರಮಗಳು ನಾಳೆಗೆ ಉಳಿಯುವುದು. ಸಿನಿಮಾವೊಂದು ಆಯಾ ಪ್ರದರ್ಶನ ಮಂದಿರದಲ್ಲಿ ಶೇಕಡಾ ೪೦ಕ್ಕಿಂತ ಹೆಚ್ಚು ಹಣ ಗಳಿಸದೆ ಇದ್ದರೆ

ಮುಂದಿನ ವಾರಕ್ಕೆ ಪ್ರದರ್ಶನ ಇರುವುದಿಲ್ಲ. ಮಲ್ಟಿಪ್ಲೆಕ್ಸ್ ಎಂಬುವರಲ್ಲಂತೂ ಪ್ರತಿ ಪ್ರದರ್ಶನಕ್ಕೆ ಕನಿಷ್ಟ ಒಂದು ಲಕ್ಷ ರೂಪಾಯಿಯಷ್ಟು ಹಣ ಗಳಿಸದೆ ಇದ್ದರೆ ಮುಂದಿನ ಪ್ರದರ್ಶನ ಸಹ ಇರುವುದಿಲ್ಲ. (ಈ ಮಲ್ಟಿಪ್ಲೆಕ್ಸ್‌ಗಳಲ್ಲಿ ಇರುವ ಕೆಲವು ಕನ್ನಡ ಪ್ರೀತಿಯ ಹುಡುಗರಿಂದ ಕೆಲವೊಮ್ಮೆ ಕಡಿಮೆ ಹಣ ಗಳಿಸಿದಾಗಲೂ ಮುಂದಿನ ವಾರಕ್ಕೆ ಸಿನಿಮಾ ಉಳಿದಿರುವುದುಂಟು. ಅಂತಹ ಹುಡುಗರ ಸಂಖ್ಯೆ ಹೆಚ್ಚಲಿ ಎಂದು ಆಶಿಸೋಣ.) ಇಂತಲ್ಲಿ ಕೆಲವು ಪ್ರಸಿದ್ಧ ಕಂಪೆನಿಗಳ/ನಟರ ಸಿನಿಮಾಗಳು ಗಳಿಕೆಯಿಲ್ಲದಿದ್ದರೂ ಕೈಯಿಂದ ಬೇಕಾದ ಹಣ ತುಂಬಿಸಿ ಕೆಲಕಾಲ ನಡೆದ ಅಪವಾದ / ಆರೋಪಗಳೂ ಇವೆ. ಆದರೆ ಅಂತಹ ಅಪವಾದ/ಆರೋಪಗಳಿಗೆ ಸಿಗಬಹುದಾದ ಸಿನಿಮಾಗಳು ತೀರಾ ವಿರಳ. ಹೀಗಾಗಿ ಇವುಗಳನ್ನು ಸ್ಪರ್ಧೆಯ ಆಚೆಗೆ ಇಟ್ಟೇ ನೋಡುವುದು ಒಳಿತು. ಇನ್ನು ಟೆಲಿವಿಷನ್ನಿನ ಕಾರ್ಯಕ್ರಮಗಳಂತೂ ಟಿಆರ್‌ಪಿ ಎಂದು ಹೆಸರಿಸಲಾದ ಟ್ಯಾಮ್ ಮತ್ತು ಬಾರ್ಕ್ ಎಂಬ ಸಂಸ್ಥೆಗಳು ನೀಡುವ ಸಂಖ್ಯೆಗಳನ್ನಾಧರಿಸಿಯೇ ಬದುಕುವುದು. (ಈ ಸಂಖ್ಯೆಗಳನ್ನು ನೀಡುವ ಪದ್ಧತಿಯ ಬಗ್ಗೆಯೂ ಭಿನ್ನಾಭಿಪ್ರಾಯವಿದೆಯಾದರೂ ಸಧ್ಯಕ್ಕೆ ಇರುವ ಸಂಖ್ಯೆಗಳನ್ನು ಆಧರಿಸಿಯೇ ವ್ಯಾಪಾರ ನಡೆಯುತ್ತಾ ಇದೆ.) ಯಾವುದೇ ಧಾರಾವಾಹಿಯು ತನ್ನ ಮೇಲೆ ಹೂಡಿದ ಬಂಡವಾಳಕ್ಕಿಂತ ಹೆಚ್ಚು ಹಣ ಹಿಂತರಬಲ್ಲ ಸಂಖ್ಯೆಯ ವೀಕ್ಷಕರನ್ನು ಪಡೆಯದೆ ಹೋದರೆ ಆ ಕಾರ್ಯಕ್ರಮ ಮುಂದಿನ ವಾರಕ್ಕೆ ಸಹ ಉಳಿಯುವುದು ಕಷ್ಟ. ಇಲ್ಲಿ ಕನಿಷ್ಟ ೪ ರಿಂದ ೬ರಷ್ಟು ಜನರಲ್ ಕೆಟಗರಿಯ ಟಿಆರ್‌ಪಿ/ಟಿವಿಆರ್ ಇದ್ದರೆ ಮಾತ್ರ ಉಳಿಗಾಲ. ಅದಕ್ಕಿಂತ ಕಡಿಮೆ ಇದ್ದರೆ ಆ ಕಾರ್ಯಕ್ರಮ ತಯಾರಕರು ಬಾಗಿಲು ಹಾಕಿಕೊಳ್ಳಲು ಸಿದ್ಧರಾಗಿರಬೇಕು. ಪ್ರಕಾಶ್ ಬೆಳವಾಡಿ ನಿರ್ದೇಶನದ 'ಗರ್ವ' ಧಾರಾವಾಹಿಯು ನಾನು ಮಾತ್ರವಲ್ಲ ಅನೇಕರು ಮೆಚ್ಚುವ ಧಾರಾವಾಹಿಯಲ್ಲಿ ಒಂದಾಗಿತ್ತು. ಆದರೆ ಅದಕ್ಕೆ ವಾರಾಂತ್ಯದಲ್ಲಿ ಸಿಕ್ಕ ಸಂಖ್ಯೆಗಳು ಕಡಿಮೆ ಇದ್ದುದರಿಂದ ಆ ಧಾರಾವಾಹಿಯು ಅರ್ಧ ದಾರಿಯಲ್ಲೇ ನಿಲ್ಲಬೇಕಾಯಿತು. ಹೀಗೆ ಗರ್ಭಪಾತಕ್ಕೊಳಗಾದ ಕಾರ್ಯಕ್ರಮಗಳ ಸಂಖ್ಯೆ ದೊಡ್ಡದು. ಈ ಸಂಖ್ಯಾ ಲೆಕ್ಕಾಚಾರದಲ್ಲಿಯೇ ಇಂದು ಜಗತ್ತಿನ ಬಹುತೇಕ ವಹಿವಾಟು ನಡೆಯುತ್ತಾ ಇರುವುದು. ಇದು ಹೃದಯಹೀನ ಜಗತ್ತು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಹೀಗಾಗಿಯೇ ಇಲ್ಲಿ ಗೆದ್ದವರಿಗಿಂತ ಸೋತವರ ಕತೆಗಳೇ ಹೆಚ್ಚು.

ಇಂತಹ ಸಂಖ್ಯೆಗಳ ಜಗತ್ತಲ್ಲಿ ನನಗಿಂತ ಮುಂಚಿತವಾಗಿ ಮಾತಾಡಿದ ಗೆಳೆಯರ ಮಾತಿನಂತೆ ಡಬಿಂಗ್ ಎಂಬ ವಿಕೃತಿಯು ಬಳಕೆಗೆ ಬಂದಿತು ಎಂದುಕೊಳ್ಳುವ, ಆಗ ಮೊದಲ ಹೊಡೆತ ಬೀಳುವುದು ಸಿನಿಮಾಕ್ಕಲ್ಲ, ಟೆಲಿವಿಷನ್ನಿಗೆ. ಅದು ಹೇಗೆ ಎಂಬುದನ್ನು ಅರ್ಥ ಮಾಡಿಕೊಳ್ಳೋಣ. ಈಗಿರುವ ವ್ಯವಸ್ಥೆಯಲ್ಲಿ ಅತಿ ಹೆಚ್ಚು ಪುನರವತರಣಿಕೆಗಳ ಚಿತ್ರೀಕರಣವಾಗುತ್ತಾ ಇದೆ. ಆದರೂ ಒಂದು ಧಾರಾವಾಹಿಯ ತಯಾರಿಕೆಯಲ್ಲಿ ಅನೇಕ ಸ್ಥಳೀಯರು ಅವಕಾಶ ಪಡೆಯುತ್ತಾ ಇದ್ದಾರೆ. ಜೊತೆಗೆ

ಪ್ರತಿ ಪ್ರಕರಣಕ್ಕೆ ಕನಿಷ್ಠ ೭೦-೮೦ ಸಾವಿರ ತಯಾರಿಕಾ ವೆಚ್ಚ, ೩೦-೪೦ ಸಾವಿರ ಪ್ರಸಾರ ವೆಚ್ಚ, ೨೦-೩೦ ಸಾವಿರ ಮಾರುಕಟ್ಟೆ ವೆಚ್ಚ ಎಂಬಂತೆ ಸರಿಸುಮಾರು ೧.೬೦-೧.೮೦ ಲಕ್ಷ ರೂ. ವರೆಗಿನ ಖರ್ಚು ರಾಯಧನದ ಕಾರ್ಯಕ್ರಮಗಳಿಗೆ, ೨.೩೦-೨.೫೦ ಲಕ್ಷ ರೂ.ವರೆಗಿನ ಖರ್ಚು ಪ್ರಾಯೋಜಿತ ಕಾರ್ಯಕ್ರಮಗಳಿಗೆ ಆಗುತ್ತಾ ಇದೆ. ಹೀಗೆ ಹೂಡಿದ ಹಣವನ್ನು ಹಿಂಪಡೆಯುವಲ್ಲಿ ೬ಕ್ಕಿಂತ ಹೆಚ್ಚು ಟಿವಿಆರ್ ಇದ್ದರೆ ಸಾಧ್ಯವಾದೀತು. ಅದಕ್ಕಿಂತ ಕಡಿಮೆ ಸಂಖ್ಯೆ ಇದ್ದರೆ ಬರುವ ಆದಾಯ ಕಡಿಮೆಯಾಗುತ್ತಾ ಹೋಗುತ್ತದೆ. ಇಂತ ಸಂದರ್ಭದಲ್ಲಿ 'ಡಬ್ಬಿಂಗ್ ಧಾರಾವಾಹಿಗಳು' ಬರಲು ಶುರುವಾದರೆ ಆ ಕಾರ್ಯಕ್ರಮಗಳ ತಯಾರಿಕೆಗೆ ತಗಲುವ ವೆಚ್ಚ ಕೇವಲ ಏಳೆಂಟು ಸಾವಿರ ರೂ.ಗಳು ಮಾತ್ರ. ಹೀಗಾಗಿ ಅಂತಹ ಕಾರ್ಯಕ್ರಮದ ಒಟ್ಟು ಖರ್ಚು ೫೦ ಸಾವಿರ ರೂ. ದಾಟುವುದಿಲ್ಲ. ಇಂತಹ ಕಾರ್ಯಕ್ರಮಗಳು ಚೆನ್ನಾಗಿರಲಿ ಬಿಡಲಿ ಅವುಗಳಿಗೆ ಕೇವಲ ಒಂದು ಟಿವಿಆರ್‌ನಷ್ಟು ಸಂಖ್ಯೆ ಇದ್ದರೂ ಸಾಕು, ಆಯಾ ವಾಹಿನಿಯ ಮಾರುಕಟ್ಟೆಯ ಅಧಿಕಾರಿಗಳು ಕಡಿಮೆ ಹಣಕ್ಕೆ ಮಾರಿ ಲಾಭ ತಂದುಕೊಡುತ್ತಾರೆ. ಖಾಸಗಿ ವಾಹಿನಿಗೆ ಹಣ ಹೂಡಿರುವ ಮಾಲೀಕನಿಗೆ ಬೇಕಾಗಿರುವುದು ಸಹ ಲಾಭವೇ ಆಗಿರುವುದರಿಂದ ಅಂತಹ ಕಾರ್ಯಕ್ರಮಗಳು ಇಡಿಯಾಗಿ ಟೆಲಿವಿಷನ್ ಅನ್ನು ಆವರಿಸಿಕೊಳ್ಳುತ್ತವೆ. ಆ ಮೂಲಕ ಟೆಲಿವಿಷನ್ ಎಂಬ ಮಾಧ್ಯಮಕ್ಕೆ ಇರುವ 'ಸೋಷಿಯೋ-ಡೆಮಾಕ್ರಟಿಕ್ ಫ್ಯಾಬ್ರಿಕ್'ನ್ನು ಹಾಗೂ 'ಎಲ್ಲರಿಗೂ ಸಮಾನ ಅವಕಾಶ' ಎಂಬ ತೆರಪನ್ನು ಹರಿದೊಗೆಯುತ್ತವೆ. ಇಷ್ಟಲ್ಲದೆ ಸ್ಥಳೀಯ ಸಂಸ್ಕೃತಿ ಇರಲಿ ಸ್ಥಳೀಯ ಭಾಷೆಯ ಮೇಲೂ ಈ ಡಬಿಂಗ್ ವಿಕೃತಿಯು ತನ್ನ ಪರಿಣಾಮವನ್ನು ಬೀರುತ್ತಾ ಸಾಗುತ್ತದೆ. ತಮಿಳರು ಡಬಿಂಗ್ ಕಾರ್ಯಕ್ರಮಗಳನ್ನು ನೋಡುತ್ತಾ ವಣಕ್ಕಂ ಎಂಬ ತಮಿಳಿನ ಮೂಲ ಶಬ್ದವನ್ನು ಮರೆತಿದ್ದಾರೆ ಎಂದು ಹಿರಿಯ ತಮಿಳು ಕವಿಗಳಾದ ವೈರಮುತ್ತು ಅವರು ಸಂದರ್ಶನವೊಂದರಲ್ಲಿ ಹೇಳಿರುವ ಹಾಗೆ ನಾವೂ ಸಹ ಗೊಣಗುತ್ತಾ - ಹಲುಬುತ್ತಾ ಕೂರಬೇಕಾಗುತ್ತದೆ. (ತಮಿಳಿನಲ್ಲಿ ಬಹುತೇಕ ಮನರಂಜನಾ ವಾಹಿನಿಗಳು ಡಬಿಂಗ್ ಆದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ. ಹೀಗೆ ಪರಭಾಷೆಯಿಂದ ಬರುವ ಕಾರ್ಯಕ್ರಮಗಳಲ್ಲಿ 'ನಮಸ್ಕಾರ್/ನಮಸ್ಕಾರಮ್/ ನಮಸ್ಕಾರ' ಎಂಬ ಪದ ಬಳಸಿದ್ದರೆ ಅದಕ್ಕೆ ಸಂವಾದಿಯಾದ ತಮಿಳಿನ 'ವಣಕ್ಕಂ' ಪದದ ಬದಲಿಗೆ ತುಟಿ ಚಲನೆಗೆ ಮಾತು ಕೂಡಿಸುವವರು "ನಮಸ್ಕಾರಂ" ಎಂದು ಡಬ್ ಮಾಡುತ್ತಾರೆ. ಇದರಿಂದಾಗಿ 'ವಣಕ್ಕಂ' ಪದದ ಬಳಕೆ ಕಡಿಮೆಯಾಗುತ್ತಾ ಇದೆ ಎಂಬುದು ವೈರಮುತ್ತು ಅವರ ಹೇಳಿಕೆಗೆ ಕಾರಣ.) ಇನ್ನು ಟೆಲಿವಿಷನ್ನಿನಲ್ಲಿ ಪ್ರಸಾರವಾಗುವ ಸಿನಿಮಾಗಳ ವಿಷಯಕ್ಕೆ ಬಂದರೆ ಈಗ ಕೋಟ್ಯಾಂತರ ರೂ.ಗಳನ್ನು ಕೊಟ್ಟು ಮೂಲ ಚಿತ್ರ ಕೊಳ್ಳುತ್ತಾ ಇರುವ ವಾಹಿನಿಗಳಿವೆ. (ಆ ಮಾರುಕಟ್ಟೆಗೂ ಇತ್ತೀಚಿನ ದಿನಗಳಲ್ಲಿ ಭಾರಿ

ಹೊಡೆತ ತಿಂದಿದೆ. ಆ ಬಗ್ಗೆ ಇಲ್ಲಿ ಮತ್ತಷ್ಟು ವಿಸ್ತರಿಸುವುದು ಅನಗತ್ಯ.) ಆ ವಾಹಿನಿಗಳವರು ಅತ್ಯಂತ ಕಡಿಮೆ ದುಡ್ಡಿಗೆ ಡಬ್ ಆದ ಚಿತ್ರಗಳನ್ನು ಕೊಂಡು ಪ್ರಸಾರದ ಸಮಯವನ್ನು ತುಂಬಿಸಿಕೊಳ್ಳುತ್ತವೆ. ಅದಕ್ಕಾಗಿ ತೊಡಗಿಸಿದ ಸಣ್ಣ ಹಣವನ್ನು ಮೂಲ ಸಿನಿಮಾದಲ್ಲಿ ಇರುವ ಪರಭಾಷೆಯ ಸ್ಟಾರ್‌ಗಳ ಹೆಸರಲ್ಲಿ ಎತ್ತುವುದು ಸಹ ಸಾಧ್ಯವಾಗುತ್ತದೆ. ಅಂತಹ ಸಿನಿಮಾಗಳಲ್ಲಿ ಸಣ್ಣ ಲಾಭ ಬಂದರೂ ಸ್ಥಳೀಯ ಸಿನಿಮಾಗಳನ್ನು ಟೆಲಿವಿಷನ್ನಿಗಾಗಿ ಕೊಳ್ಳುವ ಮಾರುಕಟ್ಟೆಯು ಕೇವಲ ಸ್ಟಾರ್ ಸಿನಿಮಾಗಳಿಗೆ ಮಾತ್ರ ಉಳಿದು, ಸಣ್ಣ ಸಿನಿಮಾ ತಯಾರಕರ ಪಾಲಿಗೆ ಇಲ್ಲವಾಗಿ ಹೋಗುತ್ತದೆ. ಆ ಮೂಲಕ ಸಣ್ಣ ಸಿನಿಮಾ ತಯಾರಕರಿಗೆ ದೊರಕುತ್ತಿದ್ದ ಸಣ್ಣ ಉಸಿರಾಟದ ಅವಕಾಶವೂ ಕರಗಿ, ಹೊಸ ಪ್ರಯೋಗ ಎಂಬುದು ನಾಪತ್ತೆಯಾಗುತ್ತದೆ.

ಈ ಮಾತನ್ನಾಡಿದ ಕೂಡಲೇ 'ನೆರೆಯ ರಾಜ್ಯಗಳಲ್ಲಿ ಹಾಗಾಗಿಲ್ಲವಲ್ಲ. ಅಲ್ಲಿ ಭಾಷೆಗಾಗಲೀ ಸಂಸ್ಕೃತಿಗಾಗಲಿ ತೊಂದರೆಯಾಗಿಲ್ಲವಲ್ಲ' ಎಂದು ಡಬಿಂಗ್ ಪರವಾಗಿರುವವರು ಮರುಪ್ರಶ್ನೆ ಹಾಕುತ್ತಾರೆ. ಇಲ್ಲಿ ನಾವು ಗಮನಿಸಬೇಕಾದ್ದು ಕರ್ನಾಟಕದ ಪರಿಸ್ಥಿತಿಯು ಬೇರೆಲ್ಲಾ ಭಾಷಾವಾರು ಪ್ರಾಂತ್ಯಕ್ಕಿಂತ ಭಿನ್ನ. ನಮ್ಮ ರಾಜ್ಯದಲ್ಲಿ ಇರುವ ೨೯ ಜಿಲ್ಲೆಗಳಲ್ಲಿ ಕನ್ನಡ ಭಾಷಿಕರು ಬಹುಸಂಖ್ಯಾತರಾಗಿರುವ ಜಿಲ್ಲೆಗಳ ಸಂಖ್ಯೆ ೧೦ನ್ನು ಮೀರುವುದಿಲ್ಲ. ಉಳಿದ ಜಿಲ್ಲೆಗಳಲ್ಲಿ ನೆರೆಯ ಸೋದರ ಭಾಷೆಗಳು ಪ್ರಾಬಲ್ಯ ಹೊಂದಿವೆ. (ಈ ಜನರನ್ನು ಕರ್ನಾಟಕ ಎಂಬ ಒಂದು ಪ್ರಾಂತ್ಯದೊಳಗಡೆಗೆ ತರುವುದಕ್ಕೆ ಆದ ಏಕೀಕರಣ ಚಳುವಳಿಯ ವಿವರಗಳನ್ನು ಗಮನಿಸಿದರೆ ಅಚ್ಚರಿ ಮೂಡಿಸುವ ವಿವರಗಳು ದೊರೆಯುತ್ತವೆ.) ಹೀಗಾಗಿ ಕರ್ನಾಟಕದಲ್ಲಿ ಡಬಿಂಗ್ ಜಾರಿಗೆ ತಂದು ಕನ್ನಡ ಸಿನಿಮಾಗಳನ್ನು ಮಾತ್ರ ಬಿಡುಗಡೆ ಮಾಡುತ್ತೇವೆ ಎಂಬಂತಹ ಪರಿಸ್ಥಿತಿ ತರುವುದಸಾಧ್ಯ. ಹೀಗಾಗಿ ಈ ಡಬ್ಬಿಂಗ್ ಎಂಬ ಆರೋಪಿತ ಕನ್ನಡ ಸಿನಿಮಾಗಳು ಮೂಲ ಸಿನಿಮಾಗಳ ಮಾರುಕಟ್ಟೆಯಲ್ಲಿ ತುಂಬಿಕೊಳ್ಳುತ್ತವೆ. ಇಲ್ಲಿಯೂ ಸ್ಟಾರ್ ಸಿನಿಮಾಗಳು ಉಳಿದುಕೊಂಡು ಸಣ್ಣ ಸಿನಿಮಾಗಳು ಬಹುತೇಕ ನಾಪತ್ತೆಯಾಗುತ್ತವೆ. ಒಟ್ಟಾರೆಯಾಗಿ ಅಪದ್ಧಗಳನ್ನು ಬೇಡುತ್ತಾ ಇರುವ ಕೆಲವು ಕನ್ನಡಿಗ ಸಹೋದರರ ಬೇಡಿಕೆಯ ಹಿನ್ನೆಲೆಯಲ್ಲಿ ನಿನ್ನೆ ಬೆಂಗಳೂರಿನಲ್ಲಿ ಆದಂತಹ ಕಾರ್ಮಿಕ ಚಳುವಳಿಯಂತಹವನ್ನು ಸಿನಿಮಾ ಮತ್ತು ಟಿವಿ ಕಾರ್ಮಿಕರು ಸಹ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಈ ಮಾತಾಡಿದಾಗ ಡಬಿಂಗ್ ಬಯಸುವ ಗೆಳೆಯರು ಹೇಳುತ್ತಾರೆ, 'ಆಟೋ ಬಂತೆಂದು ಜಟಕಾ ಗಾಡಿಯವರು ಮುಷ್ಕರ ಮಾಡಿದಂತಾಯಿತು' ಎಂದು. ಆ ಮಾತನ್ನು ಒಪ್ಪೋಣ. ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಹೊಸ ಬದುಕು ಕಟ್ಟಿಕೊಳ್ಳುವುದು ಮನುಷ್ಯ ಸಹಜ ಗುಣವೇ... ಆದರೆ ಇದು ಯಾವ ಬೆಲೆ ತೆತ್ತು ಮಾಡಿಕೊಳ್ಳಬೇಕಾದ ಹೊಂದಾಣಿಕೆ ಎಂಬುದು ನೆನಪಲ್ಲಿರಬೇಕು. ಕೆಲವರ ಅಗತ್ಯಕ್ಕಾಗಿ ಸುಮಾರು ಆರು ಸಾವಿರ ಕಾರ್ಮಿಕರು ಇರುವ ಚಲನಚಿತ್ರ

ಉದ್ಯಮವನ್ನು ಮತ್ತು ಹದಿನೈದು ಸಾವಿರ ಕಾರ್ಮಿಕರನ್ನೊಳಗೊಂಡ ಟೆಲಿವಿಷನ್ ಉದ್ಯಮವನ್ನು ಮುಳುಗಿಸುವುದೇ ಉದ್ದೇಶವಾಗಬಾರದು. ಕಳೆದ ಮೂರು ದಶಕಗಳಿಂದ ಭಾರತದಲ್ಲಿ ಬಂದಿರುವ ಮುಕ್ತ ಮಾರುಕಟ್ಟೆಯ ವ್ಯವಸ್ಥೆ ಮತ್ತು ಜಾಗತೀಕರಣಗಳು ಅದಾಗಲೇ ಸೋಷಿಯಲ್ ಸೆಕ್ಯುರಿಟಿ ಎಂಬುದನ್ನು ನುಂಗಿಕೊಂಡಿದೆ. ಅದರ ಜೊತೆಗೆ 'ಡಬ್ಬಿಂಗ್'ನಂತಹದು ಬಂದರೆ ರೈತರ ಆತ್ಮಹತ್ಯೆಯ ಪಟ್ಟಿಗೆ ಸಮಾನಂತರವಾಗಿ ದೃಶ್ಯೋದ್ಯಮದ ಕೃಷಿಕರ ಆತ್ಮಹತ್ಯೆಯ ಪಟ್ಟಿಯನ್ನು ಸಹ ಪ್ರಕಟಿಸಬೇಕಾಗುತ್ತದೆ.

ಜೊತೆಯಲ್ಲಿಯೇ ಹೇಳಬೇಕಾದ ಕೆಲವು ವಿವರಗಳು

ಈ ಹಿಂದೆಯೂ ನಾನು ಆಡಿರುವ ಅನೇಕ ಮಾತುಗಳಲ್ಲಿ/ಲೇಖನಗಳಲ್ಲಿ 'ಡಬಿಂಗ್ ಯಾಕೆ ಅಪದ್ಧ' ಎಂಬುದನ್ನು ತಿಳಿಸಿದ್ದೇನೆ. ಆಸಕ್ತರು ಈ ವಿಷಯ ಕುರಿತು ನಾನು ಬರೆದಿರುವ ಅನೇಕ ಲೇಖನಗಳನ್ನು ನನ್ನ ಬ್ಲಾಗಿನಲ್ಲಿ ಗಮನಿಸಬಹುದು. ಅವುಗಳಲ್ಲಿ ಅತಿ ಮುಖ್ಯವಾದುದು ಡಬಿಂಗ್ ಎಂಬುದು ತುಟಿ ಚಲನೆಗೆ ಮಾತು ಹೊಂದಿಸುವ ಆರೋಪಿತ ಭಾಷಾ ಪ್ರಯೋಗ ಎಂಬುದು ಮುಖ್ಯವಾದುದು. ಈ ಪ್ರಯೋಗದಿಂದ ಅದಾಗಲೇ ಕನ್ನಡದ್ದು ಎಂದು ಕಾಣಿಸಿಕೊಳ್ಳುತ್ತಾ ಇರುವ ಬಹುತೇಕ ಜಾಹೀರಾತುಗಳಲ್ಲಿ ಕನ್ನಡ ವಾಕ್ಯ ಕಟ್ಟುವ ಜಾಯಮಾನವು ಪಲ್ಲಟವಾಗಿವೆ. ಇದಕ್ಕೆ ಉದಾಹರಣೆಯಾಗಿ 'ಮಮ್ಮೀಕೋ ದೇಖೋ! ಹೆಲ್ತ್ ಕೋ ದೇಖೋ!' ಎಂಬುದು 'ಮಮ್ಮಿಗೇ ನೋಡು, ಹೆಲ್ತ್‌ಗೆ ನೋಡು' ಎಂದು ಡಬ್ ಆಗಿ ಪ್ರಸಾರವಾಗುತ್ತಾ ಇರುವುದನ್ನು ಗಮನಿಸಬಹುದು. ಈ ಕನ್ನಡ ಎಂದು ಕರೆಸಿಕೊಳ್ಳುವ ವಾಕ್ಯದಲ್ಲಿ 'ಮಮ್ಮಿಗೆ ನೋಡು' ಎನ್ನುವಾಗಲೇ ಕನ್ನಡ ವಾಕ್ಯ ರಚನಾ ಜಾಯಮಾನ ನಾಪತ್ತೆಯಾಗಿದೆ. ಇಂತಹ ಉದಾಹರಣೆಯ ಅಡಿಗೆ ನಿತ್ಯ ಪ್ರಸಾರವಾಗುತ್ತಾ ಇರುವ ಅನೇಕ ಜಾಹೀರಾತುಗಳನ್ನು ಗಮನಿಸಬಹುದು. ಈ ವಿಷಯ ತಿಳಿಸಿದ ಕೂಡಲೇ ಕೆಲವು ಡಬಿಂಗ್ ಪರ ನಿಂತಿರುವವರು, "ಜಾಹೀರಾತಿನಲ್ಲಿ ಡಬಿಂಗ್ ಬಿಟ್ಟು, ಬೇರೆಯದನ್ನು ಯಾಕೆ ತಡೆದಿದ್ದೀರಿ" ಎಂದು ಕೇಳುತ್ತಾರೆ. ಮೊದಲಿಗೆ ಆ ಜನ ಅರಿಯಬೇಕಾದ್ದು ಇಲ್ಲಿ ಯಾವುದನ್ನೂ ಯಾರೂ ತಡೆದಿಲ್ಲ. ಇಲ್ಲಿ ಯಾವುದೇ ನಿಷೇಧಗಳಿಲ್ಲ. ಅ.ನ.ಕೃ. ಮುಂತಾದ ಕನ್ನಡದ ಸಾಹಿತಿಗಳು ನೀಡಿದ ಕರೆಗೆ ಕನ್ನಡ ಸಂಘಟನೆಗಳು ಓಗೊಟ್ಟು ೧೯೬೧ರಿಂದ ೧೯೬೫ರ ವರೆಗೆ ನಡೆಸಿದ 'ಡಬಿಂಗ್ ವಿರೋಧಿ ಚಳುವಳಿ' ಕಾರಣವಾಗಿ ೧೯೬೫ರಲ್ಲಿ ಸಿನಿಮಾ ಪ್ರದರ್ಶನ ಮಂದಿರದ ಮಾಲೀಕರು ಮೌಖಿಕವಾಗಿ 'ನಾವು ಡಬ್ ಸಿನಿಮಾಗಳನ್ನು ಪ್ರದರ್ಶಿಸುವುದಿಲ್ಲ' ಎಂದು ತಿಳಿಸಿದರಷ್ಟೆ. ಇದು ಲಿಖಿತ ಒಪ್ಪಂದವೂ ಅಲ್ಲ. ಕೇವಲ ಮೌಖಿಕ ಒಪ್ಪಂದ. ಹಾಗಾಗಿ ಮನರಂಜನಾ ಸಿನಿಮಾಗಳು ಡಬ್ ಆಗಿ ಬಾರದಂತೆ ನಮ್ಮಲ್ಲಿ ಒಂದು ಸಾಮಾಜಿಕ ಕಟ್ಟುಪಾಡು ಇದೆಯಷ್ಟೆ. ದೂರದರ್ಶನ ಹಾಗೂ

ಖಾಸಗಿ ವಾಹಿನಿಗಳವರು ಸಿನಿಮೋದ್ಯಮದವರ ಜೊತೆಗೆ ಮಾಡಿಕೊಂಡ ಒಪ್ಪಂದದಂತೆ ಜಾಹೀರಾತುಗಳನ್ನು ಡಬ್ ಮಾಡಬಹುದು ಎಂಬಂತೆ ಕಟ್ಟುಪಾಡುಗಳನ್ನು ಸಡಿಲಗೊಳಿಸಲಾಯಿತು. ಇನ್ನೂ ಟೆಲಿವಿಷನ್ನಿನಲ್ಲಿ ಬರುವ ಡಬ್ ಆದ ಜಾಹೀರಾತುಗಳಲ್ಲಿ ಕನ್ನಡವನ್ನು ನಿಯಂತ್ರಿಸುವ ವ್ಯವಸ್ಥೆಯು ಈ ಹಿಂದೆ ದೂರದರ್ಶನ ಎಂಬ ಒಂದೇ ವಾಹಿನಿ ಇದ್ದಾಗ ಜಾರಿಯಲ್ಲಿತ್ತು. ಆ ಸಂಸ್ಥೆಯಲ್ಲಿದ್ದ ಅಧಿಕಾರಿಗಳು ಪ್ರತಿ ಜಾಹೀರಾತನ್ನೂ ಗಮನಿಸಿ ಪ್ರಸಾರ ಯೋಗ್ಯವಾದರೆ ಮಾತ್ರ ಬಿಡುತ್ತಾ ಇದ್ದರು. ಖಾಸಗಿ ವಾಹಿನಿಗಳ ಸಂಖ್ಯೆ ಹೆಚ್ಚಾದಂತೆ ದೂರದರ್ಶನದ ಪರವಾನಗಿಯು ಇಲ್ಲದೆ ಜಾಹೀರಾತುಗಳ ಪ್ರಸಾರ ಆರಂಭವಾಯಿತು. ಈ ಖಾಸಗಿ ವಾಹಿನಿಗಳಲ್ಲಿ, ಅದಾಗಲೇ ತಿಳಿಸಿದ ಹಾಗೆ 'ಕನ್ನಡಿಗರು' ಎನ್ನುವವರೇ ಅಲ್ಪಸಂಖ್ಯಾತರಾಗಿರುವುದರಿಂದ ಆದಾಯ ಬಂದರೆ ಸಾಕು ಎಂದು ಜಾಹೀರಾತುಗಳ ಪ್ರಸಾರ ಆರಂಭವಾಯಿತು. ಇದರಿಂದಾಗಿ ಜಾಹೀರಾತುಗಳಲ್ಲಿ ಬಳಕೆಯಾಗುವ ಕನ್ನಡದ ಮೇಲೆ ನಿಯಂತ್ರಣ ತಪ್ಪಿತು. ಹೀಗಾಗಿ ಇಂದು ನಾವು ನೋಡುತ್ತಿರುವ ವೈರುಧ್ಯಗಳು ಹಾಗೂ ಅಪದ್ಧಗಳು ಉಳಿದುಕೊಂಡಿವೆ.

ಇಂತಹ ಕೆಲವು ವಿವರಗಳಲ್ಲದೆ ಕೆಲ ಹೊತ್ತಿಗೆ ಮುಂಚೆ ಪ್ರೊ. ಸಿಎನ್‌ಆರ್ ಅವರು ಅತ್ಯಂತ ಅಕೆಡೆಮಿಕ್ ಆದ ವಿವರಗಳ ಜೊತೆಗೆ ಡಬಿಂಗ್ ಯಾಕೆ ಬೇಡ ಎಂಬುದನ್ನು ತಿಳಿಸಿದ್ದಾರೆ ಮತ್ತು ಕೆಲವು ಮಾಹಿತಿ ಪೂರ್ಣ ವಿಷಯಗಳು ಡಬ್ ಆಗಬಹುದು ಎಂದಿದ್ದಾರೆ. ಅವರಾಡಿದ ಬಗೆಯಲ್ಲಿಯೇ ಇಂದು ನಮ್ಮ ನಾಡಿನಲ್ಲಿ ಡಬಿಂಗ್ ಎಂಬುದು ಚಾಲ್ತಿಯಲ್ಲಿದೆ. ಮನರಂಜನಾತ್ಮಕವಾದ ಕಥಾನಕಗಳನ್ನು ಉಳಿದು ಸಾಕ್ಷ್ಯ ಚಿತ್ರಗಳು ಮತ್ತು ಇನ್ನಿತರ ಮಾಹಿತಿ ಪೂರ್ಣ ವಿವರಗಳು ಡಬ್ ಆಗಿ ಬರುತ್ತಾ ಇವೆ. ಅವುಗಳನ್ನು ಯಾರೂ ಕಳೆದ ಐವತ್ತು ವರ್ಷಗಳಿಂದ ಬೇಡವೆಂದಿಲ್ಲ. ಆದರೆ ನನಗಿಂತ ಮುಂಚಿತವಾಗಿ ಮಾತಾಡಿದ ಗೆಳೆಯರು ಬಯಸಿದ ಮನರಂಜನೆಗಾಗಿಯೇ ತಯಾರಾದ ಕೃತಿಗಳನ್ನು ಡಬ್ ಮಾಡುವುದು ಯಾವತ್ತಿಗೂ ಅಪಾಯ ಮತ್ತು ಯಾವ ಮನಾಪಲಿ ವ್ಯಾಪಾರೀ ವ್ಯವಸ್ಥೆಯನ್ನು ತಪ್ಪಿಸಲೆಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರೂಪಿಸಿದ್ದೇವೋ ಆ ಉದ್ದೇಶವೇ ಸೋಲುತ್ತದೆ.

ಕಾನೂನು ಎಂಬ ಹಳವಂಡ

ಈ ಮಧ್ಯೆ ಕೆಲವು ಕನ್ನಡ ಪ್ರಿಯ ಡಬ್ಬಿಂಗ್ ಪರ ಇರುವ ಗೆಳೆಯರು ಸ್ಪರ್ಧಾತ್ಮಕ ಆಯೋಗಕ್ಕೆ ದೂರು ನೀಡಿ, ಆ ಆಯೋಗವು ಒಂದು ವರದಿಯನ್ನು ನೀಡಿದೆ. ಕೆಲ ಸಂಸ್ಥೆಗಳಿಗೆ ದಂಡ ಹಾಕಿ ಸ್ಪರ್ಧಾತ್ಮಕ ವ್ಯಾಪಾರಕ್ಕೆ ಚ್ಯುತಿ ಉಂಟು ಮಾಡಿದ್ದೀರಿ ಎಂದಿದೆ. ಇದು ವ್ಯಾಪಾರೀ ಧೋರಣೆಯ ಆಯೋಗ ಹೇಳ

ಬೇಕಾದ ಮಾತೇ. ಅದರಲ್ಲಿಯೂ ಮುಕ್ತ ಮಾರುಕಟ್ಟೆ ಒಪ್ಪಂದವನ್ನು ಭಾರತ ಸರ್ಕಾರವು ವಿಶ್ವಬ್ಯಾಂಕ್ ಜೊತೆಗೆ ಮಾಡಿಕೊಂಡ ನಂತರ ಆರಂಭವಾದ ಅದೇ ಧೋರಣೆಯ ಆಯೋಗಕ್ಕೆ ನಮ್ಮ ಸಮಾಜವಾದಿ ನಿಲುವನ್ನು ಅರ್ಥೈಸಿಕೊಳ್ಳುವ ಹೃದಯವಾದರೂ ಎಲ್ಲಿರುತ್ತದೆ ಹೇಳಿ. ಇನ್ನೂ ಆ ಆಯೋಗದಲ್ಲಿರುವ ಸದಸ್ಯರಾದರೂ ಈ ಹಿಂದೆ ಬೃಹತ್ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಈಗ ಬಹುತೇಕ ವಾಹಿನಿಗಳನ್ನು ನಿಯಂತ್ರಿಸುತ್ತಾ ಇರುವ ಕಂಪೆನಿಗಳಲ್ಲಿ ದುಡಿದು ಬಂದವರು. ಅವರ ಆಲೋಚನಾ ಕ್ರಮಕ್ಕೆ ನಾವು ಡಬಿಂಗ್ ಅನ್ನುವುದು ನಮ್ಮ ಸಾಂಸ್ಕೃತಿಕ ಲೋಕದ ಮೇಲೆ ಆಗುವ ಧಾಳಿ ಎಂದು ಹೇಳಿದರೂ ಅದು ವ್ಯಾಪಾರಕ್ಕೆ ಸಂಬಂಧಿಸಿದ ವಿಷಯವಲ್ಲ ಮತ್ತು ಹೈಪಾಥೆಟಿಕಲ್ ಆಲೋಚನೆ ಎಂದು ದೂರ ತಳ್ಳಿಬಿಡುತ್ತಾರೆ. ಹೀಗಿರುವಾಗ ಒಂದು ಸಾಮಾಜಿಕ ಕಟ್ಟುಪಾಡಿಗೆ ಕಾನೂನಿನ ಬೇಲಿಯನ್ನು ಹಾಕುವುದೆಂದರೆ ಮೂಢನಂಬಿಕೆ ಪ್ರತಿಬಂಧಕ ಕಾಯಿದೆ ಜಾರಿಗೆ ತರಲು ಕರ್ನಾಟಕ ಸರ್ಕಾರ ಕಳೆದ ಮೂರು ವರ್ಷದಿಂದ ಮಾಡುತ್ತಾ ಇರುವ ಪ್ರಯತ್ನದ ಹಾಗೆಯೇ ಆಗುತ್ತದೆ. ಈ ಮನಾಪಲಿ ಮಾರುಕಟ್ಟೆಯ ಶಕ್ತಿಗಳು ನಮ್ಮ ಕನ್ನಡದ ಜನರನ್ನೇ ಒಡೆದು ಎದುರಾಬದುರಾ ನಿಲ್ಲಿಸಿವೆ. ಎರಡೂ ಬಣಗಳೂ ಕನ್ನಡದ ಉಳಿವಿಗಾಗಿ ಎನ್ನುತ್ತಾ ತಮ್ಮ ತಮ್ಮ ವಾದ ಮಂಡಿಸುತ್ತಿವೆ. ಇದರಿಂದ ನಾವು ನಾವು ಕಿತ್ತಾಡುತ್ತಾ ಇದ್ದೇವೆ. ನಮ್ಮಲ್ಲಿನ ಭಿನ್ನಾಭಿಪ್ರಾಯಗಳು ಹೆಚ್ಚಾಗುತ್ತಾ ಇವೆ. ಒಂದು ಬಣ ಮತ್ತೊಂದನ್ನು ವೈರಿ ಎಂಬಂತೆ ನೋಡುತ್ತಾ ಇದೆ. ಈ ಒಡಕು ಸೃಷ್ಟಿಸಿದ ಶಕ್ತಿಗಳು ಮಾತ್ರ ಈ ಜಗಳದಲ್ಲಿ ತಮಗೆ ಸಿಗಬಹುದಾದ ಲಾಭವೇನು ಎಂದು ನೋಡುತ್ತಾ ಇವೆ. ಇಂತಹ ಸಂದರ್ಭದಲ್ಲಿ ಡಬಿಂಗ್ ಪರ ಅಥವಾ ವಿರುದ್ಧದ ನಿಲುವಿಗೆ ಕಾನೂನಿನ ಮೂಲಕ ಬೇಲಿ ಸೃಷ್ಟಿಸುವುದು ಸಹ ಬೃಹತ್ ಹಳವಂಡವೇ ಆಗಿದೆ. ಹೀಗಾಗಿ ನಾವು ಈ ಸಮಸ್ಯೆಗೆ ಕಾನೂನು ಏನು ಹೇಳುತ್ತದೆ ಎಂದು ನೋಡುವುದಕ್ಕಿಂತ ೨೦೦೧ರ ವಿಶ್ವಸಂಸ್ಥೆಯ ಪ್ರಾದೇಶಿಕ ಭಾಷಾ ರಕ್ಷಣೆಯ ಘೋಷಣೆಯ ಅಡಿಯಲ್ಲಿ ಯೋಚಿಸಬೇಕಾಗುತ್ತದೆ. (ಡಬ್ಬಿಂಗ್ ಪರವಾಗಿ ನಿಂತ ಬಣದವರು ೧೯೯೬ರ ವಿಶ್ವಸಂಸ್ಥೆಯ ಯೂನಿವರ್ಸಲ್ ಲ್ಯಾಂಗ್ವೇಜ್ ಡಿಕ್ಲರೇಷನ್ ಹಿಡಿದು ಮಾತಾಡುತ್ತಾ ಇದ್ದಾರೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.) ೨೦೦೧ರ ಪ್ರಾದೇಶಿಕ ಭಾಷಾ ಘೋಷಣೆಯು ತೀರಾ ಸ್ಪಷ್ಟ ಮಾತುಗಳಲ್ಲಿ "ಡಬಿಂಗ್" ತಂತ್ರಜ್ಞಾನಕ್ಕೆ ಬದಲಾಗಿ ಅನುವಾದ, ಸಬ್ ಟೈಟಲಿಂಗ್ ತರಹದ ಇತರ ತಂತ್ರಜ್ಞಾನ ಬಳಸಬೇಕೆಂದು ತಿಳಿಸುತ್ತದೆ. ಈ ವಾದಕ್ಕೆ ಅದು ಫ್ರಾನ್ಸ್ ದೇಶದ ತಜ್ಞರ ಅನುಭವಾಧಾರಿತ ವಿಶ್ಲೇಷಣೆಯನ್ನು ಬಳಸಿಕೊಳ್ಳುತ್ತದೆ. ಈ ವಾದದ ಅಡಿಯಲ್ಲಿ ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ದೂರ ಮಾಡಿಕೊಂಡು ಸಮಸ್ಯೆಗೆ ಪರಿಹಾರ ಹುಡುಕಬೇಕಾಗಿದೆ.

■

ಶಿಕ್ಷಣದಲ್ಲಿ ಸಮಾನತೆಯ ಹುಡುಕಾಟ : ಸಾಂವಿಧಾನಿಕ ಮೌಲ್ಯಗಳು

● ಎ. ಪಿ. ನಿರಂಜನಾರಾಧ್ಯ

ಜಗತ್ತಿನ ಪ್ರಸಿದ್ಧ ಹಾಸ್ಯಗಾರ ಜಾರ್ಜ ಕಾರ್ಲಿನರು ಹೇಳುವಂತೆ,
ನಮ್ಮಲ್ಲಿ ಎತ್ತರದ ಕಟ್ಟಡಗಳಿವೆ, ಆದರೆ ಸ್ಫೋಟಿಸುವ ಸ್ವಭಾವಗಳು ಇವೆ!
ಅಸಾಮಾನ್ಯ ವಿದ್ಯಾರ್ಹತೆಗಳಿವೆ, ಆದರೆ ಸಾಮಾನ್ಯ
ಜ್ಞಾನ ಕಡಿಮೆಯಾಗಿದೆ!
ವಿಷಯ ಸಂಗ್ರಹ ಹೆಚ್ಚಾಗಿದೆ, ಆದರೆ ವಿವೇಚನೆ ಕಡಿಮೆಯಾಗಿದೆ!
ನಮ್ಮ ಆಸ್ತಿ ಪಾಸ್ತಿಗಳ ಬೆಲೆ ಏರಿದೆ, ಆದರೆ ನಮ್ಮ ಮೌಲ್ಯಗಳ
ಬೆಲೆ ಇಳಿದಿವೆ!
ನಾವು ಚಂದ್ರಲೋಕಕ್ಕೆ ಹೋಗಿ ಮುಟ್ಟಿ ಬಂದಿದ್ದೇವೆ, ಆದರೆ ನಮ್ಮ
ಕಾಂಪೋಂಡ್ ದಾಟಿ ನೆರೆಹೊರೆಯವರನ್ನು ಭೇಟಿಯಾಗಲು ಹೋಗಿಲ್ಲ!
ನಾವು ಬಹಿರಂಗದಲ್ಲಿ ಗೆಲ್ಲುತ್ತಿದ್ದೇವೆ, ಆದರೆ ಅಂತರಂಗದಲ್ಲಿ
ಸೋಲುತ್ತಿದ್ದೇವೆ.!
ವಿಶ್ವ ಶಾಂತಿಯ ಬಗ್ಗೆ ಮಾತನಾಡುತ್ತೇವೆ, ಆದರೆ ಮನೆಯಲ್ಲಿ
ಕಾದಾಡುತ್ತೇವೆ!
ಇದು ಇಂದಿನ ವಿಶ್ವದ ವಿಚಿತ್ರ ಅಲ್ಲವೇ? ಯೋಚಿಸಿ[೧]

ನಿಜ! ಮಾನವೀಯತೆಯ ನೆಲೆಯಲ್ಲಿ ಮೌಲ್ಯಾಧಾರಿತ ಮನೋಸ್ಥಿತಿ, ಬಹುತ್ವ, ಬಹು-ಸಂಸ್ಕೃತಿ, ಬಹು-ಭಾಷೆಗೆ ಸಮಾನ ಗೌರವದ ಮೂಲಕ ಸಹಿಷ್ಣುತೆಯ ಬದುಕನ್ನು ಕಟ್ಟಿಕೊಳ್ಳಬೇಕಾದ ನಾವು ಪರಸ್ಪರ ಕಾದಾಟ, ಕೆಸರೆರಚಾಟ ಮತ್ತು ಅಸಹಿಷ್ಣುತೆಯ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿದ್ದೇವೆ.

ಭಾರತದಲ್ಲಿನ ರಾಜಕೀಯ ಪ್ರಭುತ್ವಗಳಿಗಿರುವ ವೈಯುಕ್ತಿಕ ಪ್ರತಿಷ್ಠೆ ಮತ್ತು ದ್ವೇಷ ಹಾಗೂ ಕ್ಲೀಷೆ ರಾಜಕಾರಣದ ಸೈದ್ಧಾಂತಿಕ ಸಂಘರ್ಷಗಳಿಗೆ ಜನಸಾಮಾನ್ಯರು ಬಲಿಪಶುವಾದಂತಿದೆ. ಇದರಿಂದ ದೇಶಕ್ಕೆ ಒಳಿತಾಗುವ ಬದಲು ಕೆಡುಕಾಗುವ ಸಂಭವವೇ ಹೆಚ್ಚು.

---

೧ http://www.snopes.com/politics/soapbox/paradox.asp

ಇದಕ್ಕೆ ಮೂಲ ಕಾರಣ ನಮ್ಮ ಶಿಕ್ಷಣ ವ್ಯವಸ್ಥೆ. ನಮ್ಮ ಸಹ–ನಾಗರೀಕನ ಕಷ್ಟ ಸುಖಗಳನ್ನು ಅರಿತುಕೊಳ್ಳುವ ಹೃದಯವಂತಿಕೆಯನ್ನು ಶಿಕ್ಷಣ ನಮಗೆ ಕಟ್ಟಿ ಕೊಡಬೇಕು. ಮಾನವೀಯ ಮೌಲ್ಯಗಳ ನೆಲೆಯಲ್ಲಿ ತಾರತಮ್ಯರಹಿತ ಸಮ–ಸಮಾಜ ಕಟ್ಟಿಕೊಳ್ಳುವುದು ಶಿಕ್ಷಣದ ಮೂಲ ಆಶಯವಾಗಬೇಕು. ಆದರೆ ಇಂದು ಶಿಕ್ಷಣ ಮಾನವೀಯ ಮೌಲ್ಯಗಳನ್ನು ದೂರ ಸರಿಸಿ ಅನರೋಗ್ಯಕರ ಪೈಪೋಟಿಗೆ ಇಳಿದಿದೆ. ಸಾಮಾಜಿಕ ಒಳಿತಾಗಬೇಕಿದ್ದ ಶಿಕ್ಷಣ ಇಂದು ಮಾರಾಟದ ಸರುಕಾಗಿದೆ. ನಿಜವಾದ ಶಿಕ್ಷಣವನ್ನು ಮನುಷ್ಯನ ಜ್ಞಾನದ ತಳಹದಿಯು ಮೇಲೆ ಕಟ್ಟಿಕೊಳ್ಳಬೇಕಾಗುತ್ತದೆ. ಆದರೆ ಪ್ರೀತಿಯಿಲ್ಲದೆ ಮನುಷ್ಯನ ಜ್ಞಾನ ತಳಹದಿಯು ಇರಲು ಸಾಧ್ಯವಿಲ್ಲ[೨]. ಪ್ರತಿಯೊಬ್ಬ ಮನುಷ್ಯನನ್ನು ಮಾನವೀಯತೆಯ ಪ್ರೀತಿಯ ನೆಲೆಗಟ್ಟಿನಲ್ಲಿ ಕಾಣುವುದೇ ನಿಜವಾದ ಜ್ಞಾನ.

ಈ ಹಿನ್ನೆಲೆಯಲ್ಲಿ ನಮ್ಮೆಲ್ಲರಿಗೆ ಮಾನವೀಯತೆಯ ಮೂಲ ಗ್ರಂಥ ನಮ್ಮ ಸಂವಿಧಾನ. ಮಾನವೀಯತೆಯನ್ನು ಪ್ರೀತಿಸುವ ಎಲ್ಲರ ಧರ್ಮ ಗ್ರಂಥವೂ ಹೌದು. ಹೀಗಾಗಿ, ಶಿಕ್ಷಣದಲ್ಲಿ ಸಮಾನತೆಯ ನಮ್ಮ ಹುಡುಕಾಟ ಸಂವಿಧಾನದ ಆಶಯಕ್ಕೆ ಅನುಗುಣವಾಗಿರಬೇಕು. ಅದರಲ್ಲೂ ವಿಶೇಷವಾಗಿ ಸಂವಿಧಾನದ ಮೂಲ ಆಶಯಗಳು ಹೊಸ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳುವ ತಾತ್ವಿಕ ನೆಲೆಗಟ್ಟಾಗಬೇಕು. ಈ ನಿಟ್ಟಿನಲ್ಲಿ ಸಂವಿಧಾನದ ಕೆಲವು ಮೂಲ ಆಶಯಗಳನ್ನು ಅವಲೋಕಿಸೋಣ.

•

ಮೊದಲಿಗೆ, ಸಂವಿಧಾನದ ಪ್ರಸ್ತಾವನೆ ಸಂವಿಧಾನದ ಪ್ರಧಾನ ಗುಣ ಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆ. ಅದರಂತೆ, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ, ಗಣರಾಜ್ಯವಾಗಿ ರಚಿಸಲು ಮತ್ತು ಆ ಮೂಲಕ ದೇಶದ ಎಲ್ಲ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ಚಿಂತನೆ, ಅಭಿವ್ಯಕ್ತಿ, ನಂಬಿಕೆ ವಿಶ್ವಾಸ ಮತ್ತು ಧಾರ್ಮಿಕ ಸ್ವಾತಂತ್ರ್ಯ; ಎಲ್ಲರಿಗೂ ಸಮಾನ ಸ್ಥಾನಮಾನ ಹಾಗೂ ಅವಕಾಶ ಮತ್ತು ವೈಯುಕ್ತಿಕ ಘನತೆ, ದೇಶದ ಏಕತೆ ಹಾಗೂ ಸಮಗ್ರತೆ ಸಾರುವ ಭ್ರಾತೃತ್ವ ಕಲ್ಪಿಸುವ[೩] ವಾಗ್ದಾನ ಮಾಡುತ್ತದೆ. ಹೀಗಾಗಿ, ನಾವು ಕಟ್ಟಿಕೊಳ್ಳಲು ಹೊರಟಿರುವ ಶಿಕ್ಷಣ ಮೇಲಿನ ಮೌಲ್ಯಗಳ ಅಂತಸ್ಸಾರವನ್ನು ಮೂಲ ತಿರುಳನ್ನಾಗಿಸಿಕೊಳ್ಳಬೇಕು.

ಎರಡನೆಯದಾಗಿ, ಸಂವಿಧಾನ ಮೂಲಭೂತ ಹಕ್ಕುಗಳ ಭಾಗವಾಗಿ ಸಮಾನತೆಯ ಹಕ್ಕನ್ನು ನೀಡಿದೆ. ಈ ನಿಟ್ಟಿನಲ್ಲಿ ಶಿಕ್ಷಣದಲ್ಲಿ ಸಮಾನ ಅವಕಾಶ ಮತ್ತು ಸಮತೆಗೆ

---

೨ http://wn.rsarchive.org/Lectures/GA310/English/RSP1971/HumVal index.html

೩ ಪೂರ್ಣ ವಿವರಗಳಿಗೆ ಸಂವಿಧಾನದ ಪ್ರಸ್ತಾವನೆಯನ್ನು ನೋಡಿ

ಬುನಾದಿಯಾಗಬಲ್ಲ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರುವುದು ನಮ್ಮ ಸಮಾನತೆಯ ಹುಡುಕಾಟದ ಮೊದಲ ಆದ್ಯತೆಯಾಗಬೇಕು. ಈ ಸಂಬಂಧ, ಈ ಹಿಂದೆ ಜುಲೈ ೧೪, ೧೯೬೪ರಲ್ಲಿ ದೇಶದಲ್ಲಿ ಒಂದು ಸಮಗ್ರ 'ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ'ಯನ್ನು ಕಟ್ಟಿಕೊಳ್ಳುವ ವಿಧಿ-ವಿಧಾನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ರಚನೆಯಾಗಿದ್ದ ಶಿಕ್ಷಣ ಆಯೋಗವು (ಕೊಠಾರಿ ಆಯೋಗ) ದೇಶದ ಶೈಕ್ಷಣಿಕ ಸಮಸ್ಯೆಗಳನ್ನು ಆಳವಾಗಿ ಅಭ್ಯಸಿದ ನಂತರ ದೇಶದ ಶಿಕ್ಷಣ ಸಮಸ್ಯೆ ಕುರಿತಂತೆ ಹೇಳಿದ್ದ ಒಂದು ಪ್ಯಾರಾವನ್ನು ಇಲ್ಲಿ ಉದ್ಧರಿಸುವುದು ಶಿಕ್ಷಣದಲ್ಲಿ ಸಮಾನತೆಯ ಹುಡುಕಾಟಕ್ಕೆ ದಾರಿದೀಪವಾಗಬಹುದೆಂದು ಭಾವಿಸುತ್ತೇನೆ. ಆಯೋಗದ ವಿಶ್ಲೇಷಣೆಯಂತೆ "ನಮ್ಮ ದೇಶದ ಮುಂದಿರುವ ಮುಖ್ಯ ಸಮಸ್ಯೆಯೆಂದರೆ ದೇಶದ ಎಲ್ಲಾ ಪ್ರದೇಶಗಳು ಮತ್ತು ಶಿಕ್ಷಣದ ಎಲ್ಲಾ ಹಂತಗಳನ್ನು ಒಳಗೊಂಡಂತೆ ದೇಶದ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸುವ ಒಂದು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಮೂಲಕ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವುದು. ಇಂತಹ ಒಂದು ವ್ಯವಸ್ಥೆಯು ಎಲ್ಲಾ ಶಾಲೆಗಳನ್ನು ಅಂದರೆ ಸರ್ಕಾರಿ, ಸ್ಥಳೀಯ ಸರ್ಕಾರ, ಅಂಗೀಕೃತ ಮತ್ತು ಖಾಸಗಿ ಅನುದಾನಿತ ಶಾಲೆಗಳನ್ನು ಒಳಗೊಂಡಿರುತ್ತದೆ. ಇಂತಹ ವ್ಯವಸ್ಥೆಯು ಅತ್ಯಂತ ದಕ್ಷತೆಯಿಂದ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸಬಲ್ಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸಿದರೆ ಯಾವ ತಂದೆ ತಾಯಿಗೂ ಸಾಮಾನ್ಯವಾಗಿ ಈ ವ್ಯವಸ್ಥೆಯಿಂದ ಹೊರಗಿರುವ ಸಂಸ್ಥೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವ ಅವಶ್ಯಕತೆ ಕಾಣುವುದಿಲ್ಲ. ಈ ಗುರಿಯನ್ನು ಮುಟ್ಟಲು ದೇಶವು ತ್ವರಿತ ಗತಿಯಲ್ಲಿ ಹತ್ತು-ಹಲವು ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಅದಷ್ಟು ಶೀಘ್ರವಾಗಿ ಅಂಥಹ ವ್ಯವಸ್ಥೆಯನ್ನು ರೂಪಿಸಲು ಪ್ರಯತ್ನಿಸಬೇಕು[೪]". ಆಯೋಗದ ಈ ಶಿಫಾರಸ್ಸು ಇಂದಿಗೂ ಕೇವಲ ಶಿಫಾರಸ್ಸಾಗಿಯೇ ಉಳಿದಿದೆ. ಆದ್ದರಿಂದ ಶಿಕ್ಷಣದಲ್ಲಿ ಸಮಾನತೆಯ ನಮ್ಮ ಹುಡುಕಾಟಕ್ಕೆ ಇದು ಘೋಷ ವಾಕ್ಯವಾಗಬೇಕು.

ಮೂರನೆಯದಾಗಿ, ನಮ್ಮ ಸಂವಿಧಾನವು ಎಲ್ಲ ತಾರತಮ್ಯಕ್ಕೆ ನಿಷೇಧ ಹೇರಿ ತಾರತಮ್ಯರಹಿತ ಸಮಾಜವನ್ನು ಕಟ್ಟಿಕೊಳ್ಳುವ ಘನ ಆಶಯವನ್ನು ಹೊಂದಿದೆ. ಅದರಂತೆ, ಧರ್ಮ, ವರ್ಗ, ಜಾತಿ, ಲಿಂಗ ಜನ್ಮಸ್ಥಳ ಅಥವಾ ಅವುಗಳಲ್ಲಿ ಯಾವುದಾದರೂ ಒಂದರ ನೆಲೆಯಲ್ಲಿ ಸರ್ಕಾರ ಯಾವತ್ತೂ ಯಾವುದೇ ನಾಗರೀಕರ ವಿರುದ್ಧ ತಾರತಮ್ಯ ಮಾಡುವಂತಿಲ್ಲ[೫].

---

೪ ಪ್ಯಾರಾ ೧೦.೦೫, ಶಿಕ್ಷಣ ಮತ್ತು ರಾಷ್ಟ್ರೀಯ ಅಭಿವೃದ್ಧಿ - ಶಿಕ್ಷಣ ಆಯೋಗದ ವರದಿ, ೧೯೬೪-೬೬

೫ ವಿವರಗಳಿಗೆ ದಯವಿಟ್ಟು ಸಂವಿಧಾನದ ಪರಿಚ್ಛೇದ ೧೫ ನೋಡಿ

ಆದರೆ, ಇಂದಿನ ಶಿಕ್ಷಣ ವ್ಯವಸ್ಥೆ ತಾರತಮ್ಯಗಳ ಆಗರವಾಗಿದೆ. ಈ ಹಿಂದೆ ೧೯೬೮ರಲ್ಲಿ ಮೊಟ್ಟ ಮೊದಲ ಶಿಕ್ಷಣ ನೀತಿಯನ್ನು ರೂಪಿಸಿದಾಗ ಈ ಎಲ್ಲ ತಾರತಮ್ಯಗಳನ್ನು ತೊಡೆದು ಹಾಕುವ ಆಶಯವನ್ನು ನೀತಿ ಒಳಗೊಂಡಿತ್ತು. ಆದರೆ, ತಾರತಮ್ಯಗಳನ್ನು ತೊಡೆದು ಹಾಕುವ ಬದಲು ತಾರತಮ್ಯಗಳನ್ನು ನೀರೆರೆದು ಪೋಷಿಸಲಾಯಿತು. ಇಂದು, ನಮ್ಮ ಶಿಕ್ಷಣ ವ್ಯವಸ್ಥೆ ಅಸಮಾನತೆ ಮತ್ತು ತಾರತಮ್ಯಗಳಿಂದ ನರಳುತ್ತಿದೆ. ಅತೀ ಶ್ರೀಮಂತರಿಗೆ ಒಂದು ಬಗೆಯ ಶಿಕ್ಷಣ, ಶ್ರೀಮಂತರಿಗೆ ಮತ್ತೊಂದು ಬಗೆಯ ಶಿಕ್ಷಣ, ಮೇಲ್ವರ್ಗ ಹಾಗೂ ಮಧ್ಯಮ ವರ್ಗದವರಿಗೆ ಮೂರನೆ ಬಗೆಯ ಶಿಕ್ಷಣ ಮತ್ತು ಕೊನೆಯದಾಗಿ ಬಡವರಿಗೆ ಮತ್ತು ಕಡುಬಡವರಾದ ಕೂಲಿ ಕಾರ್ಮಿಕರಿಗೆ ನಾಲ್ಕನೇ ಬಗೆಯ ಶಿಕ್ಷಣ ಎಂಬಂತೆ ನಾಲ್ಕು ಶಿಕ್ಷಣ ಭಾರತಗಳನ್ನು ನಿರ್ಮಿಸಿದೆ. ಇದು ಒಂದು ಬಗೆಯ ಆಧುನಿಕ ಅಸ್ಪೃಶ್ಯತೆಯನ್ನು ಸೃಷ್ಟಿಸಿದೆ. ನಾವು ಕಂಡುಕೊಳ್ಳಬೇಕಿರುವ ಸಮಾನತೆಯ ಆಶಯ ಈ ಎಲ್ಲ ತಾರತಮ್ಯಗಳಿಗೆ ಇತಿಶ್ರೀ ಹಾಡಬೇಕಿದೆ.

ಶಿಕ್ಷಣ ಆಯೋಗದ ಆಶಯದಂತೆ, "ಶೈಕ್ಷಣಿಕ ಅವಕಾಶಗಳನ್ನು ಒದಗಿಸುವಲ್ಲಿ ಇರುವ ಪ್ರಾದೇಶಿಕ ಅಸಮತೋಲನ ಸರಿಪಡಿಸುವುದು ಮತ್ತು ಗ್ರಾಮೀಣ ಮತ್ತು ಇತರೆ ಹಿಂದುಳಿದ ಪ್ರದೇಶಗಳಲ್ಲಿ ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದು; ಸಾಮಾಜಿಕ ಸಾಮರಸ್ಯ, ಒಗ್ಗಟ್ಟು ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಉತ್ತೇಜಿಸಲು ಶಿಕ್ಷಣ ಆಯೋಗ ಶಿಫಾರಸ್ಸು ಮಾಡಿರುವ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು. ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಪ್ರಯತ್ನಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ಶಾಲೆಗಳಂತಹ ವಿಶೇಷ ಶಾಲೆಗಳು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ಅರ್ಹತೆಯ ಆಧಾರದ ಮೇಲೆಯೇ ಪ್ರವೇಶ ನೀಡುವುದರ ಜೊತೆಗೆ ಸಾಮಾಜಿಕ ವರ್ಗಗಳಲ್ಲಿ ಪ್ರತ್ಯೇಕತೆಯನ್ನು ತಡೆಯಲು ಒಂದು ನಿರ್ದಿಷ್ಟ ಸಂಖ್ಯೆಯ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸುವುದು; ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಆದರೆ ಇದು ಕೇವಲ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮಾತ್ರವಲ್ಲ ಜೊತೆಗೆ ಇದು ಸಾಮಾಜಿಕ ಪರಿವರ್ತನೆ ಪ್ರಕ್ರಿಯೆಯ ವೇಗವರ್ಧಕವನ್ನಾಗಿಸುವುದು; ಮತ್ತು ತೀವ್ರಗತಿಯ ಪ್ರಯತ್ನಗಳನ್ನು ಕೈಗೊಳ್ಳುವುದು. ಆಯೋಗದ ಈ ಶಿಫಾರಸಸುಗಳನ್ನು ಜಾರಿಗೊಳಿಸುವಂತೆ ಒತ್ತಾಯಿಸಲು ನಾವು ಒಂದು ಜನಾಂದೋಲನವನ್ನೇ ಪ್ರಾರಂಭಿಸಬೇಕಿದೆ.

ಕೊನೆಯದಾಗಿ, ಶಿಕ್ಷಣವೆಂದರೆ ಕೇವಲ ಓದು-ಬರಹ-ಲೆಕ್ಕಾಚಾರವಲ್ಲ. ಬದಲಿಗೆ ಶಿಕ್ಷಣ ಸಾಮಾಜಿಕ ಪರಿವರ್ತನೆಯ ಸಾಧನ. ಗಾಂಧೀಜಿ ಪ್ರಕಾರ ಶಿಕ್ಷಣವೆಂದರೆ ಬುದ್ಧಿ, ಅಂತಃಕರಣ ಮತ್ತು ಕೌಶಲಗಳ (ಹೆಡ್-ಹಾರ್ಟ್-ಹ್ಯಾಂಡ್ಸ್) ಸಮಾಗಮ. ಜ್ಯೋತಿಬಾ ಫುಲೆಯವರ ಚಿಂತನೆಯಲ್ಲಿ ಸಾಮಾಜಿಕ ನ್ಯಾಯ ಮತ್ತು ಶಿಕ್ಷಣಕ್ಕೆ ಅವಿಭಾಜ್ಯ ಸಂಬಂಧ ಇದೆ. ಅದನ್ನು ಅವರ ಮಾತಿನಲ್ಲಿಯೇ ಹೇಳುವುದಾದರೆ "ವಿದ್ಯೆಯಿಲ್ಲದಿದ್ದರಿಂದ ಬುದ್ಧಿ ನಾಶವಾಯಿತು; ಬುದ್ಧಯಿಲ್ಲದಿದ್ದರಿಂದ ನೈತಿಕತೆ ನಾಶವಾಯಿತು, ನೈತಿಕತೆಯಿಲ್ಲದಿದ್ದರಿಂದ ಕ್ರಿಯಾಶೀಲತೆ ನಾಶವಾಯಿತು, ಕ್ರಿಯಾಶೀಲತೆಯಿಲ್ಲದಿದ್ದರಿಂದ ಸಂಪತ್ತು ನಾಶವಾಯಿತು, ಸಂಪತ್ತಿಲ್ಲದಿದ್ದರಿಂದ ಶೂದ್ರರು ಅವನತಿ ಹೊಂದಿದರು. ವಿದ್ಯೆ ಇಲ್ಲದ ಕಾರಣ ಇಷ್ಟೆಲ್ಲಾ ಅನಾಹುತವಾಯಿತು[೬]".

ಈ ಎಲ್ಲ ಕಾರಣಗಳಿಂದ, ಶಿಕ್ಷಣದಲ್ಲಿ ಸಮಾನತೆಯ ನಮ್ಮ ಹುಡುಕಾಟ ಸಾಮಾಜಿಕ ನ್ಯಾಯ ಮತ್ತು ತಾರತಮ್ಯರಹಿತ ಸಮಾನತೆಯ ಹೊಸ ನಾಡಿಗೆ ಮುನ್ನುಡಿ ಯಾಗುವುದರ ಜೊತೆಗೆ ಮಾನವೀಯತೆಯ ನೆಲೆಗಟ್ಟಿನಲ್ಲಿ ಸಮ-ಸಮಾಜವನ್ನು ಕಟ್ಟಿಕೊಳ್ಳಲು ಭದ್ರ ಬುನಾದಿಯಾಗಬೇಕು.

■

. . . .

[೬] http://www.google.co.in/?gws rd=cr,ssl#q=jyotiba+phule+without+education+wisdom+destroyed

---

ಸಂಕ್ರಮಣದ ದೀರ್ಘ ಇತಿಹಾಸ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಇತಿಹಾಸವೇ. ಪತ್ರಿಕೆಯನ್ನುವುದು ಉದ್ಯಮವಾಗಿ ಬದಲಾವಣೆಯಾಗುವ ಮುಂಚೆಯೇ ತನ್ನ ಪಯಣವನ್ನು ಪ್ರಾರಂಭಿಸಿದ 'ಸಂಕ್ರಮಣ' ಈ ಮೂಲಕ ನಮ್ಮ ಅಕ್ಷರಲೋಕದಲ್ಲಿ ಒಂದು ಮರೆಯದ ಪುಟವಾಗುವುದರೊಂದಿಗೆ ನಾವೆಂದೂ ನಿರಾಕರಿಸಲಾಗದ ಸತ್ಯವೂ ಆಯಿತು. ಕನ್ನಡಿಗರ ಆಲೋಚನಾ ಕ್ರಮಕ್ಕೆ, ಸಂವಹನದ ರೀತಿಗೆ, ಸಂವೇದನೆಗಳ ಬುಡಕ್ಕೆ, ಸಂಘಟನೆ ಮತ್ತು ಚಳುವಳಿಗಳ ಆಶಯಕ್ಕೆ ಹೊಸ ಚೈತನ್ಯವನ್ನು, ಆಯಾಮವನ್ನು ಒದಗಿಸಿತು.

– ರಾಜಶೇಖರ ಮಠಪತಿ (ರಾಗಂ)

ಶಿಕ್ಷಣದಲ್ಲಿ ಸಮಾನತೆಯ 'ನಿರ್ಮಾಣ'

● ಬಿ. ಎಂ. ಪುಟ್ಟಯ್ಯ

ನಮ್ಮ ಗೋಷ್ಠಿಯ ವಿಷಯ **'ಶಿಕ್ಷಣದಲ್ಲಿ ಸಮಾನತೆಯ ಹುಡುಕಾಟ'** ಅಂತ ಇದೆ. ಈ ಶೀರ್ಷಿಕೆ ನನಗೆ ಸರಿ ಕಾಣುತ್ತಿಲ್ಲ. ಯಾಕೆಂದರೆ, ಒಂದು ಕಾಲದಲ್ಲಿ ಶಿಕ್ಷಣದಲ್ಲಿ ಸಮಾನತೆ ಇದ್ದು, ಅದು ಈಗ ಏನಾದರೂ ಕಳೆದುಹೋಗಿದ್ದರೆ ಅದರ ಹುಡುಕಾಟ ಅನ್ನೋದು ಸರಿ ಹೋಗ್ತಾ ಇತ್ತು. ಆದರೆ ಭಾರತದ ಶಿಕ್ಷಣದಲ್ಲಿ ಯಾವತ್ತೂ ಸಮಾನತೆ ಇರಲೇ ಇಲ್ಲ. ಅಂದಿನ ಅಗ್ರಹಾರಗಳಿಂದ ಹಿಡಿದು, ಇಂದಿನ ಕಾರ್ಪೋರೇಟ್ ಶಿಕ್ಷಣದವರೆಗೆ ಇದು ಇಲ್ಲವೇ ಇಲ್ಲ. ಹಾಗಾಗಿ ಈ ಶೀರ್ಷಿಕೆಯನ್ನು **'ಶಿಕ್ಷಣದಲ್ಲಿ ಸಮಾನತೆಯ ನಿರ್ಮಾಣ'** ಎಂದು ಬದಲಾಯಿಸಿಕೊಳ್ಳಬೇಕು.

ಶಿಕ್ಷಣದ ಬಗ್ಗೆ ನಾವು ಮಾತಾಡ್ತಾ ಬಂದಿರೋದ್ರಲ್ಲಿ ಅತ್ಯಂತ ಸರಳೀಕೃತವಾದ ಒಂದು ಸಮರ್ಥನೆ ಕಾಣ್ತಾ ಇದೆ. ಅದು ಏನು ಅಂತ ಅಂದ್ರೆ, ಅಕ್ಷರ ಶಿಕ್ಷಣದ ಮೂಲಕ ನಮಗೆ ಕೊಡಲಾಗಿರುವ ಪ್ರಜ್ಞೆಯ ಭಾಗವಾಗಿಯೇ ಈ ಬಗ್ಗೆ ಮಾತಾಡಿದಿವಿ. ಈ ಪ್ರಜ್ಞೆಯನ್ನು ಬದಿಗಿಟ್ಟು ಮಾತಾಡಲು ಆಗಿಲ್ಲ. ಉದಾಹರಣೆಗೆ, ಪಾಸಾಗಿ ನೌಕರಿಗೆ ಬಂದವರನ್ನೇ ನಾವು ಲೆಕ್ಕ ಹಾಕಿದಿವಿ. ನಮ್ಮ ನಿಮ್ಮ ಜೊತೆಯೇ ಓದಿ ಫೇಲಾದ ಸಾವಿರಾರು ಜನ ನಮ್ಮ ಕಣ್ಣಿಗೆ ಕಾಣ್ತಾ ಇಲ್ಲ. ಪರಿಣಾಮ ಏನಾಗಿದೆ ಅಂದ್ರೆ ಶಿಕ್ಷಣ ಅನ್ನೋದನ್ನು ಸಾಮಾಜಿಕ ಬದಲಾವಣೆಯ ಬಹಳ ದೊಡ್ಡ ಶಕ್ತಿ ಅಂತ ಭಾವಿಸಿದಿವಿ, ನಂಬಿದಿವಿ. ಸಾಮಾಜಿಕ ಬದಲಾವಣೆಗೆ ಶಿಕ್ಷಣವೇ ಏಕೈಕ ಬುಡ ಅಂತ ಭಾವಿಸಿದಿವಿ. ಮೂಲಭೂತವಾಗಿ ಈ ನಂಬಿಕೆಯೇ ತಪ್ಪು. ಯಾಕೆಂದ್ರೆ ಅವತ್ತಿನಿಂದ ಇವತ್ತಿನವರೆಗೆ ಶಿಕ್ಷಣವು ತನ್ನ ಪರಿಣಾಮದಲ್ಲಿ ಶಕ್ತಿಯಾಗಿ ಕೆಲಸ ಮಾಡುವ ಬದಲು ಬಹಳ ದೊಡ್ಡ ಅಸ್ತ್ರವಾಗಿ ಕೆಲಸ ಮಾಡಿದೆ. ಎಲ್ಲಾ ಬಗೆಯ ಶೋಷಕರು ಮತ್ತು ಪ್ರಭುತ್ವಗಳು ಶಿಕ್ಷಣವನ್ನು ಅಸ್ತ್ರವನ್ನಾಗಿಯೇ ಪ್ರಯೋಗಿಸಿವೆ.

ನಾವು ಸ್ವಲ್ಪ ಹೊತ್ತು ಈ ರೀತಿ ಯೋಚನೆ ಮಾಡೋಣ. ನಾವೆಲ್ಲ ಅನಕ್ಷರಸ್ಥರ ತರ ಯೋಚನೆ ಮಾಡಿದರೆ ಏನಾಗಬಹುದು? ಹಾಗೆ ಆಲೋಚನೆ ಮಾಡೋಕೆ ಆಗಲ್ಲ, ಅದೇನಿದ್ರೂ ಒಂದು ಕಲ್ಪನೆ ಮತ್ತು ಊಹೆ ಅಂತಲೂ ಅನಿಸಬಹುದು; ಇರಲಿ. ಹಾಗೆಯೇ ಆಗಲಿ. ನಮ್ಮೆಲ್ಲ ಆಲೋಚನೆಗಳು ಕೂಡ ಹೀಗೆ ಕಲ್ಪನೆ ಮತ್ತು ಊಹೆಗಳ ಬುಡದ ಮೇಲೆ ನಿಂತಿವೆ. ಭೌತ ವಿಜ್ಞಾನದ ಅದೆಷ್ಟೋ ಪ್ರಮೇಯಗಳೂ ಕೂಡ ಹೀಗೆ ಕಲ್ಪನೆಗಳ ಮೇಲೇ ಸುರುವಾಗಿವೆ. ಅದಿರಲಿ. ಅನಕ್ಷರಸ್ಥರು ನಮ್ಮನ್ನು ನೋಡಿ ಏನು ಅಂದ್ಕೋಬಹುದು? ಇವರು

ಅಕ್ಷರದ ಮೂಲಕ ಮೋಸ ಮಾಡ್ತಾ ಇರುವವರು ಅಂದ್ಕೋಬಹುದಾ? ಅಥವಾ ಇವರಿಂದ ನಮ್ಮ ಬದುಕು ಬದಲಾಗಬಹುದು ಅಂತ ನಿರೀಕ್ಷೆ ಮಾಡ್ತಾ ಇರಬಹುದಾ?

ಅಕ್ಷರ ಶಿಕ್ಷಣ ಪಡೆದಿರುವ ನಾವು ಸಾಮಾಜಿಕ ಅನ್ಯಾಯವನ್ನು ಬದಲಾಯಿಸುವ ಕೆಲಸ ಮಾಡುತ್ತಿದ್ದೇವೆಯೋ ಅಥವಾ ಅದನ್ನು ಬಲಪಡಿಸುವ ಕೆಲಸ ಮಾಡುತ್ತಿದ್ದೇವೆಯೋ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಇದು ಪ್ರತ್ಯಕ್ಷ ಇರಬಹುದು ಇಲ್ಲವೆ ಪರೋಕ್ಷ ಇರಬಹುದು. ಬಹುಶಃ ಇದರಲ್ಲಿ ಆಯ್ಕೆ ಎಂಬುದು ಇಲ್ಲ. ನಮ್ಮ ಆಲೋಚನೆ ಮತ್ತು ಆಚರಣೆಯಲ್ಲಿ ಅನೇಕ ತರದ ಸಾಮಾಜಿಕ ಅಸಮಾನತೆಗಳನ್ನು, ಅನ್ಯಾಯಗಳನ್ನು ಬಲಪಡಿಸುತ್ತಾ ಇದಿವಿ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಇದು ಸಿನಿಕತನದ ಮಾತಲ್ಲ. ಸಮಾಜದ ಅಂಚಿನ ನೆಲೆಯ, ಅಸಹಾಯಕತೆಯ ವಿಷಾದದ ಮಾತು. ಒಂದು ವೇಳೆ ಸಾಮಾಜಿಕ ಅನ್ಯಾಯಗಳನ್ನು ಬದಲಾಯಿಸುವ ಕೆಲಸದಲ್ಲಿ ನಾವು ತೊಡಗಿದ್ದರೆ ಇಷ್ಟೊತ್ತಿಗೆ ಇದು ಸ್ವಲ್ಪವಾದರೂ ಕಡಿಮೆ ಆಗಬೇಕಿತ್ತು. ಆದರೆ ಇದು ಕಡಿಮೆ ಆಗುವ ಬದಲು ಇನ್ನೂ ಜಾಸ್ತಿಯಾಗ್ತಿದೆ; ಬೇರೆ ಬೇರೆ ರೂಪ ತಾಳ್ತಾ ಇದೆ. ಇದಕ್ಕೆ ಕಾರಣ ಯಾರು? ಹಾಗಿದ್ದರೆ ನಾವು ಕಲಿತ ಅಕ್ಷರ ಶಿಕ್ಷಣ, ಅದರಿಂದ ಉತ್ಪಾದನೆ ಮಾಡಿದ ಜ್ಞಾನ ಇವುಗಳ ಪರಿಣಾಮಗಳು ಮತ್ತು ಫಲಿತಗಳು ಏನಾದವು?

ಅನಕ್ಷರಸ್ಥರ ಶ್ರಮ, ಬೆವರು, ಕಣ್ಣೀರಿನ ದುಡಿಮೆಯಿಂದ ನಾವು ಪ್ರತ್ಯೇಕವಾಗಿದ್ದೇವೆ. ನಮ್ಮನ್ನು ಹೀಗೆ ಪ್ರತ್ಯೇಕ ಮಾಡಿರುವುದೇ ಈ ಅಕ್ಷರ ಶಿಕ್ಷಣ. ಅನಕ್ಷರಸ್ಥರ ಶ್ರಮ, ಬೆವರು, ಕಣ್ಣೀರಿನ ದುಡಿಮೆಯ ಪ್ರತಿಫಲವನ್ನು ನಾವು ಉಣ್ತಾ ಇದಿವಿ. ಪ್ರತಿಯಾಗಿ ಆ ಸಮೂಹಕ್ಕೆ ಏನನ್ನು ಕೊಟ್ಟಿದ್ದೇವೆ ಎಂಬ ಪ್ರಶ್ನೆಯನ್ನು ನೇರವಾಗಿ ಕೇಳಿಕೊಳ್ಳಬೇಕು. ಹೆಚ್ಚೆಂದರೆ ಆ ಬಗ್ಗೆ ಕವನವನ್ನೋ, ಕಾವ್ಯವನ್ನೋ, ಇನ್ನ್ಯಾವುದೋ ಸಾಹಿತ್ಯವನ್ನೊ ಬರೆದು, ಮತ್ತೆ ಯಾರ್‍ಯಾರಿಗೋ ಹಲ್ಲುಗಿಂಜಿ ಪ್ರಶಸ್ತಿನೊ, ಬಹುಮಾನನೋ ತಗೋಬಹುದು. ಆಗಲೂ ನಮ್ಮನ್ನು ಅನಕ್ಷರಸ್ಥರ ಶ್ರಮ, ಬೆವರು, ಅವರ ಕಣ್ಣೀರು ಕಾಡುವುದಿಲ್ಲ.

ಕಾರ್ಪೋರೇಟ್ ಶಕ್ತಿಗಳು, ಅವರ ಬಂಡವಾಳ, ಅವರ ಮಾರುಕಟ್ಟೆ ಪ್ರಜಾಪ್ರಭುತ್ವವನ್ನು ಕಾಲುಕಸ ಮಾಡಿವೆ. ಅವರು ಸಂವಿಧಾನವನ್ನು ಲೆಕ್ಕಕ್ಕೇ ಇಟ್ಟಿಲ್ಲ. ಆಳುವ ಜನ ಅದರ ಗುಲಾಮರಾಗಿದ್ದಾರೆ; ದಲ್ಲಾಳಿಗಳಾಗಿದ್ದಾರೆ. ಈಗ ಅವರ ಕೈಯಲ್ಲಿ ಶಿಕ್ಷಣ ಇದೆ. ಹಾಗಾಗಿ ವ್ಯಾಪಾರ, ವಾಣಿಜ್ಯ, ಲಾಭಕೋರತನ, ಜಾತಿ, ಕೋಮು ಈ ಮನೋಧರ್ಮಗಳನ್ನು ಶಿಕ್ಷಣದಲ್ಲಿ ಗಟ್ಟಿಯಾಗಿ ಬಿತ್ತುತ್ತಿದ್ದಾರೆ. ಶಿಕ್ಷಣದ ಎಲ್ಲಾ ಹಂತಗಳಲ್ಲಿ ಶಿಕ್ಷಕರನ್ನು ಅತಂತ್ರ ಮತ್ತು ಅಭದ್ರ ಸ್ಥಿತಿಯಲ್ಲಿ ಇಟ್ಟಿದ್ದಾರೆ. ಶಿಕ್ಷಣದ ಸಾಮಾನ್ಯ ಹಕ್ಕುಗಳನ್ನು ಕಿತ್ತುಕೊಂಡಿದ್ದಾರೆ.

ಆಳುವ ವರ್ಗಗಳು ಶಿಕ್ಷಕರನ್ನು ತಮ್ಮ ಗುಲಾಮರಂತೆ ನಡೆಸಿಕೊಳ್ಳುತ್ತಿವೆ. ಹಾಗಾಗಿ ಶಿಕ್ಷಕ ಸಮೂಹದಲ್ಲಿ ಸ್ವಾಭಿಮಾನದ ಕಿಚ್ಚು ಬೆಳೆಯಬೇಕು.

ಬಹುಸಂಖ್ಯಾತ ದುಡಿಯುವ ವರ್ಗಗಳಿಗೆ ಶಿಕ್ಷಣ ಕೊಡಲೇಬಾರದು ಎಂಬುದು ಅವರ ಖಚಿತ ತೀರ್ಮಾನ ಮತ್ತು ಗುರಿ. ಇದಕ್ಕಾಗಿ ದುಡಿಯುವ ವರ್ಗಗಳನ್ನು ಶಿಕ್ಷಣದಿಂದ ನೇರವಾಗಿ ಹೊರಗೆ ತಳ್ಳುತ್ತಿದ್ದಾರೆ. ಮತ್ತೊಂದು ಕಡೆ ಅವರು ಶಿಕ್ಷಣಕ್ಕೆ ಪ್ರವೇಶವನ್ನೇ ಪಡೆಯದ ಹಾಗೆ ಮಾಡಿದ್ದಾರೆ. ಇದಕ್ಕೆಲ್ಲ ವಿಕೃತ ಕುತಂತ್ರಗಳನ್ನು ಜಾರಿಗೊಳಿಸಿದ್ದಾರೆ. ಬಿ.ಎ. ಮಾಡಿದರೆ ಎಂ.ಎ. ಮಾಡು ಅಂತಾರೆ. ಎಂ.ಎ. ಮಾಡಿದರೆ ಪಿಎಚ್.ಡಿ. ಮಾಡು ಅಂತಾರೆ. ಪಿಎಚ್.ಡಿ.ನೂ ಮಾಡಿದ್ರೆ ಯು.ಜಿ.ಸಿ. ಮತ್ತು ನೆಟ್ ಪಾಸ್ ಮಾಡು ಅಂತಾರೆ. ಅದನ್ನೂ ಪಾಸ್ ಮಾಡಿದರೆ ಮತ್ತೊಂದನ್ನು ಸೃಷ್ಟಿ ಮಾಡ್ತಾರೆ. ಇದಕ್ಕೆ ಕೊನೆ ಎಂಬುದೇ ಇಲ್ಲ. ಬಹುಸಂಖ್ಯಾತರನ್ನು ಶಿಕ್ಷಣದಿಂದ ಹೊರಗಿಟ್ಟು, ಅಸಮಾನತೆಯನ್ನು ಮುಂದುವರಿಸುವುದೇ ಅವರ ಗುರಿ. ಹೀಗಾಗಿ ಭಾರತದಲ್ಲಿ ಉನ್ನತ ಶಿಕ್ಷಣ ಪಡೆದವರು ಶೇಕಡ ೧೧. ಈ ೧೧ರಲ್ಲೂ ಕೆಳಜಾತಿ, ಕೆಳವರ್ಗ ಮತ್ತು ಮಹಿಳೆಯರು ಎಷ್ಟು ಜನ ಇರಬಹುದು? ಇದು ಭವ್ಯ ಭಾರತದ ದಿವ್ಯ ಸಾಧನೆ.

ಮನುಷ್ಯರ ಆಲೋಚನೆ, ಭಾವನೆ, ವರ್ತನೆ, ಸ್ವಭಾವ, ಸಂವೇದನೆ ಮತ್ತು ಮೂಲ ಪ್ರವೃತ್ತಿ (ಇನ್‌ಸ್ಟಿಂಕ್ಟ್)ಗಳಿಗೆ ಕಿಂಚಿತ್ ಕೆಲಸ ಕೊಡುತ್ತಿಲ್ಲ. ಅದನ್ನು ಮನುಷ್ಯ ಪರವಾಗಿ ಬದಲಾಯಿಸುತ್ತಿಲ್ಲ. ಕೇವಲ ಸರ್ಟಿಫಿಕೇಟ್‌ಗಳ ಮೂಲಕ, ಅಂಕಿಸಂಕಿಗಳ ಮೂಲಕ ಶಿಕ್ಷಣದ ಗುಣಮಟ್ಟವನ್ನು ಅಳೆಯಲಾಗುತ್ತಾ ಇದೆ. ಮನುಷ್ಯ ಸಂವೇದನೆಯೇ ಇಲ್ಲದ ಯಾಂತ್ರಿಕ ರೋಬೋಟ್‌ಗಳನ್ನು ಕ್ರಿಯೇಟ್ ಮಾಡ್ತಾ ಇದಾರೆ. ಅವರಿಗೆ ಸಮಾಜವೇ ಗೊತ್ತಿಲ್ಲ. ಇನ್ನು ಸಮಾಜದಲ್ಲಿರುವ ಅನ್ಯಾಯಗಳು ಮತ್ತು ಸಾಮಾಜಿಕ ನ್ಯಾಯಗಳು ಇನ್ನೆಲ್ಲಿ ಗೊತ್ತಿರುತ್ತವೆ? ಅನ್ಯಾಯ ಮತ್ತು ಅಸಮಾನತೆಗಳಿಂದ ಕೂಡಿರುವ ಕ್ರೂರವ್ಯವಸ್ಥೆಯನ್ನು ಸಮರ್ಥಿಸಿಕೊಂಡು, ಬೆಂಬಲಿಸಿಕೊಂಡು ಹೋಗ್ತಾರೆ. ಇದು ದೊಡ್ಡ ದುರಂತ.

ಶಿಕ್ಷಣವು ಸಮಾಜದ ಅನ್ಯಾಯಗಳನ್ನು ತೆರೆದು ತೋರಿಸಬೇಕಿತ್ತು. ಅದನ್ನು ಬದಲಾಯಿಸಲು ಚಾಲಕ ಶಕ್ತಿಯಾಗಿ ಕೆಲಸ ಮಾಡಬೇಕಿತ್ತು. ಆದರೆ ಈಗ ಅದು ದುಡ್ಡು ಹಾಕಿ ದುಡ್ಡು ಮಾಡಿಕೊಳ್ಳುವ ದೊಡ್ಡ ದಂಧೆಯಾಗಿದೆ.

ಚೈನಾದಲ್ಲಿ ಮಾವೋತ್ಸೆ ತುಂಗ್, ಭಾರತದಲ್ಲಿ ಜಯಪ್ರಕಾಶ ನಾರಾಯಣ ಇವರು ವಿಶ್ವವಿದ್ಯಾಲಯಗಳ ಬದಲು ಹಳ್ಳಿಗಳಿಗೆ ಹೋಗೋಣ ಎಂದರು. ಮಾವೋತ್ಸೆ ತುಂಗ್ ಹಳ್ಳಿಗಳಿಗೆ ಹೋಗಿಯೇ ಬಿಟ್ಟರು. ಇವತ್ತು ವಿಶ್ವವಿದ್ಯಾಲಯಗಳು ಸಾಮಾಜಿಕ ಅನ್ಯಾಯಗಳನ್ನು ಬಲಪಡಿಸಲು ಮತ್ತು ಹೊಸ ರೂಪದ ಅನ್ಯಾಯಗಳನ್ನು ಸೃಷ್ಟಿ ಮಾಡಲು ಬಳಕೆಯಾಗುತ್ತಿವೆ. ಇವು ಬಂಡವಾಳಶಾಹಿ

ಮಾರುಕಟ್ಟೆಗೆ ಲಾಭ ತರುವ ಜ್ಞಾನವನ್ನು ಉತ್ಪಾದನೆ ಮಾಡುತ್ತಿವೆ. ಈ ಜ್ಞಾನವನ್ನು ಪುರಸ್ಕರಿಸುವ ಮೂಲಕ ಅನ್ಯಾಯ, ಅಸಮಾನತೆಗಳ ಪ್ರತ್ಯಕ್ಷ ಸಮರ್ಥನೆ ನಡೆಯುತ್ತಿದೆ. ಶೋಷಕ ವ್ಯವಸ್ಥೆ ಇವಕ್ಕೆ ಸಾಮಾಜಿಕ ಅಂಗೀಕಾರ ಪಡೆಯುತ್ತಿದೆ. ಅನ್ಯಾಯಗಳನ್ನು ಕಡಿಮೆ ಮಾಡೋ ಬದಲು ಜಾಸ್ತಿ ಮಾಡ್ತಿವೆ.

ಹಾಗಿದ್ದರೆ ಮುಂದೇನು? ಶಿಕ್ಷಣವನ್ನು ಸಾಮಾಜಿಕ ಬದಲಾವಣೆಯ ಶಕ್ತಿ ಮತ್ತು ಸಾಮಾಜಿಕ ಬದಲಾವಣೆಯ ಬುಡ ಎಂಬ ನಮ್ಮ ನಂಬಿಕೆಯನ್ನು ಕೈಬಿಡಬೇಕು. ಶಿಕ್ಷಣದ ಬೇರೆ ಬೇರೆ ಹಂತಗಳಲ್ಲಿ ಫೇಲು ಎಂಬ ಆರೋಪ ಹೊತ್ತು, ಶಿಕ್ಷಣದಿಂದ ಹೊರಗೆ ತಳ್ಳಲ್ಪಟ್ಟಿರುವ ಲಕ್ಷ ಲಕ್ಷ ಜನ ಇದ್ದಾರೆ. ಇನ್ನೂ ಶಾಲೆಗಳನ್ನು ನೋಡದೇ ಇರುವ ಲಕ್ಷ ಲಕ್ಷ ಜನ ಇದ್ದಾರೆ. ಈ ಬಹುಸಂಖ್ಯಾತರನ್ನು ಕಣ್ಣುಬಿಟ್ಟು ನೋಡೋಣ. ಸಂವಿಧಾನ ಜಾರಿಗೆ ಬಂದು ೬೫ ವರ್ಷ ಕಳೆದರೂ ಇವರಿಗೆ ಶಿಕ್ಷಣ ಏನು ಮಾಡಿದೆ?

ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಉಳಿಸುವ ವ್ಯಾಪಕವಾದ ಜನತಾ ಹೋರಾಟವನ್ನು ನಿರ್ಮಾಣ ಮಾಡಬೇಕು. ಬಾಬಾಸಾಹೇಬ್ ಡಾ. ಅಂಬೇಡ್ಕರ್ ಅವರು ದೇಶದ ಎಲ್ಲಾ ಸಂಪತ್ತನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಕರೆಕೊಟ್ಟಿದ್ದರು. ಸಾಮೂಹಿಕ ದುಡಿಮೆ ಮತ್ತು ಸಾಮೂಹಿಕ ಪ್ರತಿಫಲದ ಆಶಯವನ್ನು ವ್ಯಕ್ತಪಡಿಸಿದ್ದರು. ಈಗ ಇವನ್ನು ಕಾರ್ಯರೂಪಕ್ಕೆ ತರುವುದೇ ನಮಗೆ ಉಳಿದಿರುವ ದಾರಿ. ಈ ನಿರಂತರ ಕೆಲಸದ ಭಾಗವಾಗಿ ಶಿಕ್ಷಣದ ಮೂಲಕ ಸಮಾನತೆಯ ಗಟ್ಟಿಯಾದ ಕನಸುಗಳನ್ನು ಬಿತ್ತಬಹುದು.

ಈಗ ನಮ್ಮ ಗೋಷ್ಠಿಯ ಶೀರ್ಷಿಕೆಯನ್ನು 'ಶಿಕ್ಷಣದಲ್ಲಿ ಸಮಾನತೆಯ ನಿರ್ಮಾಣ : ಅಂದ್ರೆ ನಮ್ಮನೇ ನಾವು ನೋಡಿಕೊಂಡಾಗ' ಎಂದು ನಾನು ಬದಲಾಯಿಸಿಕೊಂಡೆ ಅಂತ ಅನಿಸುತ್ತಿದೆ. ಎಲ್ಲರಿಗೂ ವಂದನೆಗಳು.

■

'ಸಂಕ್ರಮಣ' ಪತ್ರಿಕೆ ಅನೇಕರ ದೃಷ್ಟಿಯಲ್ಲಿ ಸಂಕ್ರಮಣ ಸ್ಥಿತಿ ದಾಟಿ ಮುಂದೆ ಬಂದಾಗಿದೆ. ಆದರೆ ಚಂಪಾಗೆ ಮಾತ್ರ ಅದು ಸಂಕ್ರಮಣ ಸ್ಥಿತಿಯಲ್ಲಿಯೇ ಇದೆ. ಕನ್ನಡದಲ್ಲಿ ಲೆಕ್ಕವಿಲ್ಲದಷ್ಟು ಹೊಸ ಲೇಖಕರನ್ನು ಪರಿಚಯಿಸಿದ ಖ್ಯಾತಿ ಅದರದ್ದು. ಅನೇಕ ಇಂಥ ಪತ್ರಿಕೆಗಳು ಹುಟ್ಟಿಕೊಂಡಿವೆ, ಹಾಗೇ ಸತ್ತಿವೆ. 'ಸಂಕ್ರಮಣ' ಮಾತ್ರ ಪುನರಪಿ ಜನನಂ ರೀತಿಯಲ್ಲಿ ಮತ್ತೆ ಮತ್ತೆ ಕಾಣಿಸಿ ಕೊಳ್ಳುತ್ತಲೇ ಇದೆ.

– ಲಿಂಗದೇವರು ಹಳೆಮನೆ

ಮಹಿಳಾ ಚಳುವಳಿ: ಇಂದು–ಮುಂದು

● ಎಚ್.ಎಸ್. ಅನುಪಮಾ

ತೆರಣಿಯ ಹುಳದ ತಳಮಳ

ಮಹಿಳಾ ಚಳುವಳಿ ಎಂಬುದೊಂದು ಸಂಭವಿಸುತ್ತಿದೆಯೆ ಎಂಬ ಪ್ರಶ್ನೆ ಮತ್ತೆಮತ್ತೆ ಕೇಳಿಬರುತ್ತದೆ. ನಮ್ಮ ಹಲವಾರು ಸಂಗಾತಿಗಳು, ಸಮಾನ ಮನಸ್ಕರು ಈ ಪ್ರಶ್ನೆ ಎತ್ತುತ್ತಾರೆ. ಕೆಲ ಕುಹಕಿಗಳು 'ನೀವು ಇಷ್ಟು ಹೋರಾಡಿದರೂ ದಿನನಿತ್ಯ ಅತ್ಯಾಚಾರ, ದೌರ್ಜನ್ಯಗಳು ಸಂಭವಿಸುತ್ತಿದೆಯಲ್ಲ? ಮಹಿಳಾ ಚಳುವಳಿ ಇಲ್ಲ ಎನ್ನಲು ಇದೇ ಸಾಕ್ಷಿಯಲ್ಲವೆ' ಎಂದೂ ಕಟಕಿ ಯಾಡುತ್ತಾರೆ.

ನಿಜ. ಜನ್ಮಾಂತರಗಳಿಂದ ಒಳಗನ್ನು ಹೊರತೋರದೆ ಒತ್ತಿಒತ್ತಿ ಇಟ್ಟುಕೊಂಡವರು ಆಡುವುದು ಕಷ್ಟ, ಅವರು ಆಡಿದ್ದನ್ನು ಅರಗಿಸಿಕೊಳ್ಳುವುದೂ ಕಷ್ಟ. ಆದರೆ ಹಿಂದೆಯೂ ಇಂದಿಗೂ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರೆಲ್ಲ ಒಟ್ಟಾಗಿ ತಮ್ಮ ಕೊನೆಯಿರದ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸಂಘಟಿತರಾಗಿ ಹೋರಾಟ ಕಟ್ಟಲಾಗಿಲ್ಲ. ಒಂದು ಸಿದ್ಧಾಂತ, ಪಕ್ಷ, ನಾಯಕತ್ವದಡಿ ಸಮಗ್ರ ಚಳುವಳಿ ರೂಪಿಸಲಾಗಿಲ್ಲ. ಚಳುವಳಿಯ ಮಾತು ಹೋಗಲಿ, ಬಹುಪಾಲು ಮಹಿಳೆಯರಿಗೆ ತಾರತಮ್ಯ ಇದೆಯೆಂದು, ತಾರತಮ್ಯದ ಮೂಲ ಯಾವುದಿರ ಬಹುದು ಎಂದು ಇನ್ನೂ ಅರ್ಥವಾಗಿಲ್ಲ. ತುಳಿದವರು ಮೇಲೇಳಬಾರದು ಎಂದೇ ದಮನದ ನೆಲೆಯನ್ನು ಅತ್ಯಂತ ಜಾಗರೂಕವಾಗಿ, ನಾಜೂಕಾಗಿ, ಆದರೆ ಗಟ್ಟಿಯಾಗಿ ಹೆಣೆಯಲಾಗಿದೆ. 'ತೆರಣಿಯ ಹುಳು' ತನಗರಿವಿಲ್ಲದೆ ತಾನೇ ಬಲೆ ನೇಯ್ದು ಬಂಧಿಸಿಕೊಳ್ಳುವಂತೆ ಹೆಣ್ಣು ಸಹಾ ತನ್ನ ಸುತ್ತ ಬೇಲಿಯನ್ನು ತಾನೇ ಬಿಗಿದುಕೊಳ್ಳುವಂತೆ ಮಾಡಲಾಗಿದೆ. ಪಿತೃಪ್ರಾಧಾನ್ಯದ ಸಕಲ ಭಾರಗಳನ್ನೂ ತನ್ನ ಮೇಲಲೆದುಕೊಂಡೇ ಬದುಕಬೇಕಿರುವುದರಿಂದ ಮಹಿಳೆ ತನ್ನ ದಮನದ ನೆಲೆಗಳು ಮತ್ತು ಬಿಡುಗಡೆಯ ಹೋರಾಟಗಳನ್ನು ಗುರುತಿಸುವುದೂ ಕಷ್ಟವಾಗಿದೆ.

ಈ ಹಿನ್ನೆಲೆಯಲ್ಲಿ ಮಹಿಳೆಯ ದೃಷ್ಟಿಯಿಂದ ಚಳುವಳಿ ಎಂದರೇನು? ಚಳುವಳಿಯ ವ್ಯಾಖ್ಯೆ, ಅರ್ಥ ಏನು ಎಂದು ಪರಿಶೀಲಿಸುವ ಅಗತ್ಯವಿದೆ.

ಭಾರತೀಯ ಸಮಾಜದ ಲಿಂಗತಾರತಮ್ಯ ಮಗು ತಾಯಿಯ ಹೊಟ್ಟೆಯಲ್ಲಿರು ವಾಗಲೇ ಶುರುವಾಗುತ್ತದೆ. ಬೆಳೆಯುವ ಹೆಣ್ಣುಮಗು ಒಂದಲ್ಲ ಒಂದು ಹಂತದಲ್ಲಿ ತಾನು ಹೆಣ್ಣು, ಅದಕ್ಕೇ ಹೀಗಿರಬೇಕು; ತಾನು ಹೆಣ್ಣು, ಆ ಕಾರಣಕ್ಕೇ ಅವಕಾಶ ವಂಚಿತಳಾದರೂ ಸುಮ್ಮನಿರಬೇಕು ಎನ್ನುವುದನ್ನು ಹೆಜ್ಜೆಹೆಜ್ಜೆಗೂ ಅರಗಿಸಿಕೊಂಡು ಬದುಕಬೇಕಾಗಿದೆ. ಅವಳಿಗೆ ಶಿಕ್ಷಣಕ್ಕಿಂತ ವಿವಾಹವೇ ಮುಖ್ಯ, ಉದ್ಯೋಗಕ್ಕಿಂತ ಮನೆ ಕೆಲಸಗಳ ನಿಭಾಯಿಸಬಲ್ಲ ಕೌಶಲ್ಯವೇ ಮುಖ್ಯ.

ಮದುವೆ–ಮನೆವಾಳ್ತೆ–ತಾಯ್ತನಗಳು ಹೊರಿಸುವ ಕೊನೆಮೊದಲಿಲ್ಲದ ಜವಾಬ್ದಾರಿಗಳ ನಡುವೆ ಕುಟುಂಬದ ಆರ್ಥಿಕ ಚಟುವಟಿಕೆಯಲ್ಲೂ ಪಾಲ್ಗೊಳ್ಳಬೇಕು. ಹೀಗೆ ಬಹುವಿಧದ ಹೊರೆಗಳಿಂದ ನಲುಗುವ ಹೆಣ್ಣಿಗೆ ಅದರ ನಡುವೆಯೇ ತನ್ನತನ ಹಾಗೂ ವ್ಯಕ್ತಿತ್ವ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಒಂದು ಹೆಜ್ಜೆ ಹೊರಗಿಟ್ಟು ಸಂಘಟಿತಳಾಗಬೇಕು ಅನಿಸಿಬಿಟ್ಟರೆ ಅದೇ ಒಂದು ಹೋರಾಟ. ವ್ಯಕ್ತಿಗತ ನೆಲೆಯ ಈ ಹೋರಾಟ ನಿರಂತರ. ಕುಟುಂಬದ ಪ್ರತಿ ಸದಸ್ಯರ, ಸಮಾಜದ ಅನುಮಾನ, ಅರೆಸಮ್ಮತಿ, ಅಸಹಕಾರಗಳ ನಡುವೆಯೇ ಅವಳು ತನ್ನ ಸಾರ್ವಜನಿಕ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಸಾರ್ವಜನಿಕ ರಂಗಕ್ಕೆ ಬಂದಮೇಲೂ ತಾರತಮ್ಯ, ಅಸಡ್ಡೆ, ಅಸುರಕ್ಷಿತತೆ, ಅವಕಾಶ ವಂಚನೆ, ದಬ್ಬಾಳಿಕೆಯನ್ನು ಹೆಜ್ಜೆಹೆಜ್ಜೆಗೂ ಎದುರುಗೊಳ್ಳಬೇಕು. ಹಾಗಾಗಿಯೇ ಭಾರತೀಯ ಸಮಾಜದ, ಅಷ್ಟೇ ಏಕೆ ಪ್ರಪಂಚದ ಬಹುಪಾಲು ಹೆಣ್ಮಕ್ಕಳು ಬಿಡುಗಡೆಯನ್ನು ವೈಯಕ್ತಿಕ ಹಾಗೂ ಸಾಮೂಹಿಕ ಎರಡೂ ನೆಲೆಗಳಲ್ಲಿ ಹೋರಾಡಿಯೇ ಪಡೆಯಬೇಕಾಗಿದೆ.

ಹಾಗಾದರೆ ಈಗ ಮಹಿಳಾ ಚಳುವಳಿ ನಡೆಯುತ್ತಿದೆಯೆ?

ಚಳುವಳಿ ಒಂದು ಸಮಸ್ಯೆಗೆ ಮೂಲ ಕಾರಣವಾದ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಹೊರಡುತ್ತದೆ. ದಮನದ ನೆಲೆ ನಿರಂತರವಾಗುಳಿವ ವ್ಯವಸ್ಥೆಯಲ್ಲಿ ಚಳುವಳಿಯೂ ನಿರಂತರವಾಗಿ ರೂಪಾಂತರ ಹೊಂದುತ್ತ ಚಾಲ್ತಿಯಲ್ಲಿರುತ್ತದೆ. ಒಂದು ಚಳುವಳಿ ಹುಟ್ಟಿಕೊಳ್ಳುವ ಕಾರಣ, ಅದರ ಸ್ವರೂಪ, ನಡೆಗಳನ್ನು ಆಯಾ ಕಾಲ, ಸಮಾಜಗಳೇ ನಿರ್ಧರಿಸುತ್ತವೆ. ಅದೊಂದು ನಿರಂತರ ಪ್ರಕ್ರಿಯೆ.

ಈ ಕಾಲದ ಮಹಿಳಾ ಸಮಸ್ಯೆಗಳಾದರೂ ಯಾವುವು? ಅದರ ವಿಸ್ತಾರ ಬಹು ದೊಡ್ಡದು. ಸಮಾಜವನ್ನು ಕಾಡುವ ಎಲ್ಲ ಸಮಸ್ಯೆಗಳೂ ಮಹಿಳೆಯರನ್ನೇ ಅಂತಿಮವಾಗಿ ಬಾಧಿಸುತ್ತವೆ. ಎಂದೇ ಪರಿಸರ ನಾಶ, ಯುದ್ಧ, ನೆರೆ, ಬರ, ಜಾಗತೀಕರಣ, ನಿರುದ್ಯೋಗ, ಗಣಿಗಾರಿಕೆ, ಅನಕ್ಷರತೆ, ಬಡತನ, ಕೃಷಿ ಬಿಕ್ಕಟ್ಟು, ವಲಸೆ ಮುಂತಾದ ಸಮಾಜದ ಸಕಲೆಂಟು ಸಮಸ್ಯೆಗಳು ಮಹಿಳಾ ಸಮಸ್ಯೆಗಳೂ ಆಗಿವೆ. ಇದರ ಜೊತೆಗೆ ವರದಕ್ಷಿಣೆ, ವೇಶ್ಯಾವಾಟಿಕೆ, ಸ್ತ್ರೀ ಭ್ರೂಣಹತ್ಯೆ, ಮರ್ಯಾದಾ ಹತ್ಯೆ, ಎಚ್ಚೈವಿ ಕಾಯಿಲೆ, ಅತ್ಯಾಚಾರ, ಉದ್ಯೋಗ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ವಿಧವಾ ಪದ್ಧತಿ, ಜಾತಿ ದೌರ್ಜನ್ಯ, ಕೌಟುಂಬಿಕ ದೌರ್ಜನ್ಯ, ವೇತನ ತಾರತಮ್ಯ, ದೇವದಾಸಿ ಪದ್ಧತಿ ಮೊದಲಾದವು ಹೆಣ್ಣು ತಾನು ಹೆಣ್ಣೆಂಬ ಕಾರಣಕ್ಕೇ ಅನುಭವಿಸುವ ತೊಂದರೆಗಳು. ಈ ಎಲ್ಲವನ್ನೂ ಒಂದು ಹೋರಾಟ, ಒಂದು ಪ್ರತಿಭಟನೆ, ಒಂದು ಸಂಘಟನೆ, ಒಬ್ಬ ವ್ಯಕ್ತಿಯ ಜೀವಮಾನ ಕಾಲದಲ್ಲಿ ಬದಲಾಯಿಸಲು ಸಾಧ್ಯವಿಲ್ಲ. ಎಂದೇ ಇವೆಲ್ಲವನ್ನೂ ಪ್ರತ್ಯೇಕವಾಗಿ ನೋಡುವ ಸಂಘಟನೆ, ಸಂಸ್ಥೆಗಳು ರೂಪುಗೊಂಡಿವೆ. ಆಳದಲ್ಲಿ ಅವೆಲ್ಲದರ ಉದ್ದೇಶ ಭಿನ್ನವಾಗಿದ್ದರೂ ಅವುಗಳ ಹೋರಾಟ ಲಿಂಗತಾರತಮ್ಯ ಹಾಗೂ ಅದರ ಮೂಲವಾದ ಪಿತೃಪ್ರಾಧಾನ್ಯವನ್ನೇ ಪ್ರಶ್ನಿಸುತ್ತವೆ.

ಸಡಿಲವಾದ ಅರ್ಥದಲ್ಲಿ ಈ ಬಹುನೆಲೆಯ ಹೋರಾಟಗಳು ಹಂಚಿಕೊಳ್ಳಲ್ಪಟ್ಟ ಮಹಿಳಾ ಸಮಸ್ಯೆಗಳು. ಆದರೆ ಈ ಎಲ್ಲ ವಿಷಯಾಧಾರಿತ ಸಂಘಟನೆ, ಹೋರಾಟಗಳ ಒಟ್ಟೂ ಪ್ರಯತ್ನವೇ ಮಹಿಳಾ ಚಳುವಳಿ. ಆದ್ದರಿಂದ ಚಳುವಳಿ ಎಂಬ ಪದವನ್ನು ಮಹಿಳಾ ಚಳುವಳಿಯ ವಿಷಯದಲ್ಲಿ ಮರುವ್ಯಾಖ್ಯಾನ ಮಾಡಬೇಕಾದ ಅವಶ್ಯಕತೆಯಿದೆ.

ಭಾರತದ ಮಹಿಳಾ ಚಳುವಳಿ

ಭಕ್ತಿ ಚಳುವಳಿಯ ಕಾಲದಿಂದಲೂ ಮಹಿಳೆ ಧಾರ್ಮಿಕ ಸಮಾನತೆ ಕೇಳಲು ಶಕ್ತಳಾಗಿದ್ದಳೇ ಹೊರತು ಸಾಮಾಜಿಕ ಸ್ಥಾನಮಾನಗಳಲ್ಲಿ ಯಾವ ಬದಲಾವಣೆಯೂ ಸಾಧ್ಯವಾಗಿರಲಿಲ್ಲ. ದೇವರ ಎದುರು ಸಮಾನತೆಯನ್ನು ಭಕ್ತಿಯ ನೆಪದಲ್ಲಾದರೂ ಸಾಧಿಸಲು ಹಲವು ಹೆಣ್ಮಕ್ಕಳು ಪ್ರಯತ್ನಪಟ್ಟರು. ಕೆಲ ಆಧ್ಯಾತ್ಮಿಕ ಪುರುಷರೂ ಹೆಣ್ಣಿನ ಸಂಕಷ್ಟಗಳ ಅರಿತು ಹಾಡಿದರು. ಕರ್ನಾಟಕದ ವಚನ ಚಳುವಳಿ ಹಲವು ಹೆಣ್ಣುಮಕ್ಕಳಿಗೆ, ಅದರಲ್ಲೂ ತಳ ಸಮುದಾಯದ ಹೆಣ್ಣುಮಕ್ಕಳಿಗೆ ಸಮಾಜದ ಆಗುಹೋಗುಗಳಲ್ಲಿ ನೇರ ಪಾಲ್ಗೊಳ್ಳುವ ಅವಕಾಶ ನೀಡಿತು. ಸಂಪ್ರದಾಯದ ಚೌಕಟ್ಟಿನೊಳಗೆ ಬಂಧಿತಳಾಗಿದ್ದರೂ ಅದರ ನಡುವೆಯೇ ಪ್ರತಿರೋಧದ ಪರೋಕ್ಷ ಪ್ರಯತ್ನಗಳು ಮಹಿಳೆಯರಿಂದ ಅಲ್ಲಿಲ್ಲಿ ಕಂಡುಬಂದಿದೆ. ಆದರೂ ಅದು ಚಳುವಳಿಯ ರೂಪ ಪಡೆದದ್ದು ೧೯ನೇ ಶತಮಾನದಿಂದೀಚೆಗೆ ಎಂದು ಗುರುತಿಸಲಾಗುತ್ತದೆ. ಒಟ್ಟಾರೆ ಭಾರತೀಯ ಮಹಿಳೆಯ ಸಾಮಾಜಿಕ ಸ್ಥಿತಿಗತಿಗಳಲ್ಲಿ ಈ ಮೂರ್ನಾಲ್ಕು ತಲೆಮಾರುಗಳಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದ್ದರೆ ಅದಕ್ಕೆ ಮಹಿಳಾ ಹೋರಾಟ ಮತ್ತದು ಅನಿವಾರ್ಯಗೊಳಿಸಿದ ಕಾನೂನು ಜಾರಿಯೂ ಒಂದು ಕಾರಣವಾಗಿದೆ. ಎಲ್ಲ ಮಹಿಳಾಪರ ಕಾನೂನುಗಳೂ ಲಿಂಗತಾರತಮ್ಯವನ್ನು ಗುರುತಿಸಿ ವಿರೋಧಿಸಿದ ಬಳಿಕವೇ ಜಾರಿಯಾಗಿವೆ.

ಭಾರತದ ಮಹಿಳಾ ಚಳುವಳಿ ಕೆಲವು ವಿಶೇಷತೆಗಳನ್ನು ಹೊಂದಿದೆ. ಕೈಗಾರಿಕಾ ಕ್ರಾಂತಿ ಮತ್ತು ವೈಜ್ಞಾನಿಕ ಆವಿಷ್ಕಾರಗಳು ಯೂರೋಪಿನಲ್ಲಿ ಸುಧಾರಣಾವಾದಿ ಚಿಂತನೆಗಳನ್ನು ಸೃಷ್ಟಿಸಿ ಹೋರಾಟ ಶುರುಮಾಡುವ ೭೫ ವರ್ಷ ಮೊದಲೇ ಭಾರತದಲ್ಲಿ ಮಹಿಳಾ ಚಳುವಳಿ ಶುರುವಾಯಿತು. ಇದು ಒಂದು ವಿಶೇಷವಾದರೆ ಶುರುಮಾಡಿದವರು ಪುರುಷರು ಎನ್ನುವುದು ಇನ್ನೊಂದು ವಿಶೇಷ. ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದ ಭಾರತೀಯ ಪುರುಷರು ಅಥವಾ ಭಾರತೀಯ ಸಮಾಜದಲ್ಲಿ ಆಸಕ್ತಿ–ಹಿತಾಸಕ್ತಿ ಹೊಂದಿದ್ದ ವಸಾಹತುಶಾಹಿ ಸಮಾಜಶಾಸ್ತ್ರಜ್ಞರು ಮಹಿಳಾ ಸಮಸ್ಯೆಗಳ ಸುಧಾರಣೆಯ ಹೋರಾಟಕ್ಕೆ ನಾಂದಿ ಹಾಡಿದರು. ಒಟ್ಟೂ ಭಾರತದ ಮಹಿಳಾ ಜಾಗೃತಿಯಲ್ಲಿ ೪ ಹಂತಗಳನ್ನು ಗುರುತಿಸಲಾಗಿದೆ:

೧. ೧೯ನೇ ಶತಮಾನದ ಆದಿಭಾಗದಲ್ಲಿ ರಾಜಾರಾಮ್ ಮೋಹನರಾಯ್ ಅವರಿಂದ ಶುರುವಾದ ಜಾಗೃತಿಯು ಸಾಮಾಜಿಕ ಸುಧಾರಣಾ ಚಳುವಳಿಯ ಆರಂಭವೆನ್ನಬಹುದು. ೧೮೭೫ರ ವೇಳೆಗೆ ಶುರುವಾದ ಇದು ನಂತರ ಬಾಲ್ಯ ವಿವಾಹ ನಿಷೇಧ, ವಿಧವಾ ಪದ್ಧತಿ ನಿಷೇಧ, ವಿಧವಾ ಮರುವಿವಾಹಕ್ಕೆ

ಅವಕಾಶದಂತಹ ಇತರ ವಿಷಯಗಳನ್ನು ಗಣನೆಗೆ ತೆಗೆದುಕೊಂಡಿತು. ಸರಿಸುಮಾರು ಇದೇ ವೇಳೆ ಈಶ್ವರಚಂದ್ರ ವಿದ್ಯಾಸಾಗರ ಅವರು ಬಾಲ್ಯವಿವಾಹ, ವಿಧವಾ ಪದ್ಧತಿ, ಬಹುಪತ್ನಿತ್ವದಂತಹ ವಿಷಯಗಳನ್ನು ವಿರೋಧಿಸಿ ಕಾನೂನಾತ್ಮಕ ಹೋರಾಟವನ್ನೂ ರೂಪಿಸಿದರು. ಆದರೆ ಈ ಎಲ್ಲ ಸುಧಾರಣೆಗಳು ಮೇಲ್ಜಾತಿ ಮಹಿಳೆಯರ ಸಮಸ್ಯೆಗಳನ್ನೇ ಮುಖ್ಯವಾಗಿ ಗುರಿಯಾಗಿಸಿಕೊಂಡಿದ್ದವು. ಆ ದೃಷ್ಟಿಯಿಂದ ಫುಲೆ ದಂಪತಿಗಳು ಭಾರತದ ಮಹಿಳಾ ಚಳುವಳಿಯ ಆದ್ಯರು ಎನ್ನಬಹುದು. ಫುಲೆ ದಂಪತಿಗಳು ೧೮೪೮ರಷ್ಟು ಹಿಂದೆಯೇ ಮಹಿಳೆಯರಿಗೆ ಮತ್ತು ಅಸ್ಪೃಶ್ಯರಿಗಾಗಿ ಶಾಲೆ ತೆರೆದು ಪ್ರಬಲ ವಿರೋಧದ ನಡುವೆಯೇ ಶಾಲೆ ನಡೆಸಿ ಮಹಿಳಾ ಸಬಲೀಕರಣಕ್ಕೆ ತಾತ್ವಿಕ ನೆಲೆಗಟ್ಟನ್ನು ಒದಗಿಸಿದರು. ಅಷ್ಟೇ ಅಲ್ಲ, ಸಮಾಜ ಬಹಿಷ್ಕರಿಸಿದ ಬಸುರಾದ ವಿಧವೆಯರು ಮಕ್ಕಳನ್ನು ಹೆರಲು ಹಾಗೂ ಅಂಥ ಮಕ್ಕಳನ್ನು ಸಾಕಲು ಆಶ್ರಮಗಳನ್ನು ಶುರುಮಾಡಿದರು. ಹೀಗೆ ತಿರಸ್ಕೃತ ಮಹಿಳೆಯರನ್ನು ಮುಖ್ಯವಾಹಿನಿಯಲ್ಲಿರುವಂತೆ ನೋಡಿಕೊಳ್ಳುವ ಕ್ರಾಂತಿಕಾರಿ ಕ್ರಮಗಳನ್ನು ಕೈಗೊಂಡರು. ಫುಲೆಗಳಿಂದ ಪ್ರಭಾವಿತಗೊಂಡಿದ್ದ ತಾರಾಬಾಯಿ ಶಿಂಧೆ ೧೮೮೨ರಲ್ಲಿ 'ಸ್ತ್ರೀ ಪುರುಷ ತುಲನ' ಎಂಬ ಭಾರತದ ಮೊತ್ತಮೊದಲ ಮಹಿಳಾ ಸಂವೇದನೆಯುಳ್ಳ ಹೊತ್ತಿಗೆಯನ್ನು ಪ್ರಕಟಿಸಿದಳು. ನಿರ್ಭಿಡೆಯಿಂದ ದೇವರನ್ನೂ, ಪುರಾಣ ಶಾಸ್ತ್ರಗ್ರಂಥಗಳನ್ನೂ ತರಾಟೆಗೆ ತೆಗೆದುಕೊಂಡಳು. ಆಗ ಪ್ರಕಟವಾಗಿದ್ದ ಪುಸ್ತಕವೊಂದರ ಕಥೆಗಳ ಸ್ತ್ರೀಪಾತ್ರ ಪೋಷಣೆ, ನಾಟಕಗಳ ಸ್ತ್ರೀ ಪಾತ್ರ, ಪುರಾಣದಲ್ಲಿ ಮಹಿಳೆಯ ಚಿತ್ರಣ, ದೇವಾನುದೇವತೆಗಳ ವರ್ತನೆಗಳು, ಅಂದಿನ ಸಮಾಜದಲ್ಲಿ ಪುರುಷರ ತಾರತಮ್ಯದ ನಡವಳಿಕೆಗಳು ಮುಂತಾದವನ್ನೆಲ್ಲ ತರಾಟೆಗೆ ತೆಗೆದುಕೊಂಡ ತಾರಾಬಾಯಿ ಆ ಲೇಖನವನ್ನು ಪುಸ್ತಕ ಮಾಡಿ ಅಚ್ಚು ಹಾಕಿದ್ದೇ ದೊಡ್ಡ ಹೋರಾಟವಾಗಿತ್ತು. ಮಹಿಳೆ ಧೈರ್ಯವಾಗಿ ತನ್ನ ಕುಲಕ್ಕಾಗುತ್ತಿರುವ ಅನ್ಯಾಯವನ್ನು ಅಷ್ಟು ಕಟುಮಾತುಗಳಲ್ಲಿ ಗಟ್ಟಿದನಿಯಲ್ಲಿ ಹೇಳಲು ಸಾಧ್ಯವಾಗಿಸಿದ್ದು ಫುಲೆಗಳು ತಂದ ಶಿಕ್ಷಣ, ಸಾಮಾಜಿಕ ಸುಧಾರಣೆ. ಅವರ ಸಮಕಾಲೀನಳಾಗಿದ್ದ ಪಂಡಿತಾ ರಮಾಬಾಯಿ ಎಂಬ ಬ್ರಾಹ್ಮಣ ಮಹಿಳೆ ಅಂತರ್ಜಾತಿ ವಿವಾಹವಾದದ್ದೇ ಅಲ್ಲದೆ ವಿಧವೆಯಾದ ನಂತರ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಳು. ಆಕೆ ೧೮೮೭ರಲ್ಲಿ ಬರೆದ ಹೈ ಕ್ಯಾಸ್ಟ್ ಹಿಂದೂ ವುಮನ್ ಪುಸ್ತಕವು ಹಿಂದೂ ಮೇಲ್ಜಾತಿಯಲ್ಲಿದ್ದ ಮಹಿಳಾ ವಿರೋಧಿ ಅಂಶಗಳನ್ನು ಢಾಳಾಗಿ ತೆರೆದಿಟ್ಟಿತು. ಅಲ್ಲಿಂದಾಚೆಗೆ ಹಲವು ಸುಧಾರಣಾಕಾರರು ವಿವಿಧ ವಿಷಯಗಳನ್ನೆತ್ತಿಕೊಂಡು ಬೇರೆಬೇರೆ ನೆಲೆಯಲ್ಲಿ ಮಹಿಳಾ ಸುಧಾರಣೆಗೆ ಪ್ರಯತ್ನಿಸಿದರು. ಇದು **ಸುಧಾರಣೆಯ ಕಾಲ** ಎನ್ನಬಹುದು.

೨. ಎರಡನೆಯ ಹಂತದ ಮಹಿಳಾ ಚಳುವಳಿ ೧೯೧೫-೧೯೪೭ರವರೆಗಿನದು. ಇದು ಸ್ವಾತಂತ್ರ್ಯ ಚಳುವಳಿಯ ಕಾವು ಉತ್ತುಂಗದಲ್ಲಿದ್ದ ಕಾಲ. ಮಹಿಳೆಯರ ರಾಜಕೀಯ ಜಾಗೃತಿಯ ಕಾಲ. ಆಗ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರನ್ನು

ಗಾಂಧಿ ಹೆಚ್ಚೆಚ್ಚು ತೊಡಗಿಸಿಕೊಂಡರು. ಕ್ವಿಟ್ ಇಂಡಿಯಾ, ದಂಡಿ ಮುಂತಾದ ಚಳುವಳಿ-ಸತ್ಯಾಗ್ರಹಗಳ ಸಮಯದಲ್ಲಿ ಸಾಮಾನ್ಯ ಮಹಿಳೆಯರು ಕೂಡಾ ಭಾಗವಹಿಸಿದರು. ಅದೇ ವೇಳೆಗೆ ಅಂಬೇಡ್ಕರ್ ಡಿಪ್ರೆಸ್ಡ್ ಕ್ಲಾಸ್ ವುಮೆನ್ಸ್ ಅಸೋಸಿಯೇಷನ್ ಶುರುಮಾಡಿ ೧೯೨೭ರ ಹೊತ್ತಿಗೆ ಸಾವಿರಾರು ಹಿಂದುಳಿದ ಮಹಿಳೆಯರನ್ನು ಸಂಘಟಿಸಿದ್ದರು. ಮಹಿಳಾ ಶೋಷಣೆಯ ವಿವಿಧ ಮಗ್ಗುಲುಗಳ ಬಗ್ಗೆ ಆಳವಾಗಿ ಚಿಂತಿಸಿ, ಧಾರ್ಮಿಕ-ಸಾಮಾಜಿಕ-ರಾಜಕೀಯ ಹಕ್ಕುಗಳನ್ನು ಸಂವಿಧಾನದತ್ತವಾಗಿ ನೀಡಲು ಶ್ರಮಿಸಿದ ಮೊದಲ ವ್ಯಕ್ತಿ ಅಂಬೇಡ್ಕರ್. 'ಯಾವುದೇ ಸಮುದಾಯದ ಏಳ್ಗೆಯನ್ನು ಅಳೆಯಬೇಕಾದರೆ ಆ ಸಮುದಾಯದ ಸ್ತ್ರೀಯರ ಏಳ್ಗೆಯನ್ನು ಪರಿಗಣಿಸಬೇಕು' ಎಂದು ಮಹಿಳೆಯರ ಸ್ಥಿತಿಗತಿಯನ್ನು ಸಮಾಜದ ಏಳ್ಗೆಯ ಸೂಚ್ಯಂಕವಾಗಿ ಪರಿಗಣಿಸಿದ ಅಂಬೇಡ್ಕರ್ ಭಾರತದಲ್ಲಿ ಮಾನವ ಹಕ್ಕು ಹಾಗೂ ಮಹಿಳಾ ಹಕ್ಕು ಹೋರಾಟಗಳಿಗೆ ಕಾನೂನಿನ ಚೌಕಟ್ಟು ನೀಡಿದ ಮೊದಲ ನಾಯಕರಾಗಿದ್ದಾರೆ. ಅವರ ಕಾಲದಲ್ಲಿ ಮಹಿಳಾ ಶಾಲೆ, ಕಾಲೇಜು, ಹಾಸ್ಟೆಲುಗಳು ಶುರುವಾದವು. ಮಹಿಳೆಯರು ಪತ್ರಿಕೆ ಶುರುಮಾಡಿದರು. ಧಾರ್ಮಿಕವಾಗಿ ಬೌದ್ಧ ಧರ್ಮದ ಪ್ರಚಾರದಲ್ಲಿ ತೊಡಗಿಸಿಕೊಂಡರು. ಅಂಬೇಡ್ಕರ್ ಶುರುಮಾಡಿದ್ದ ಚಳುವಳಿಯು ಶೋಷಿತ ವರ್ಗದ ಮಹಿಳೆಯರಲ್ಲಿ ಹೊಸಜಾಗೃತಿಯನ್ನೇ ಮೂಡಿಸಿತು. ಹೀಗೆ ಸ್ವಾತಂತ್ರ್ಯ ಚಳುವಳಿಯ ಕಾಲದ ಎರಡು ಭಿನ್ನಧಾರೆಗಳಲ್ಲಿ ಸಾಕಷ್ಟು ಮಹಿಳೆಯರು ತೊಡಗಿಕೊಂಡು ಕೌಟುಂಬಿಕ ಜಗತ್ತಿನಾಚೆಗೂ ತಮ್ಮ ಕ್ರಿಯಾಶೀಲತೆಯ ಪರಿಧಿಯನ್ನು ವಿಸ್ತರಿಸಿಕೊಂಡರು. ಮಹಿಳಾ ಲಾಯರ್, ಡಾಕ್ಟರ್, ರಾಜಕಾರಣಿ, ಗಮನಾರ್ಹ ಬರಹಗಾರರೆಲ್ಲ ಈ ಅವಧಿಯಲ್ಲೇ ಬಂದರು.

೩. ಮೂರನೆಯ ಹಂತ ಸ್ವಾತಂತ್ರ್ಯಾನಂತರದ ಹಂತ. ಆದರೆ ಸ್ವಾತಂತ್ರ್ಯ ಬಂದ ಮೊದಲ ವರುಷಗಳಲ್ಲಿ ಮಹಿಳಾ ಚಳುವಳಿ ಕೊಂಚ ಮಂಕಾಯಿತು. ಸರ್ವರಿಗೂ ಸಮಾನತೆಯೊದಗಿಸಿದ ಸಂವಿಧಾನವು ಮಹಿಳೆಗೂ ಸಮಾನ ನಾಗರಿಕ ಹಕ್ಕುಗಳನ್ನು ನೀಡಿತು. ಮತದಾನದ ಹಕ್ಕು, ವಿಚ್ಛೇದನದ ಹಕ್ಕು, ಆಸ್ತಿ ಹಕ್ಕು, ದತ್ತು ಸ್ವೀಕಾರದ ಹಕ್ಕುಗಳೆಲ್ಲ ಕೊಡಲ್ಪಟ್ಟವು. ಆದರೆ ನಂತರ ವರದಕ್ಷಿಣೆ, ಲೈಂಗಿಕ ದೌರ್ಜನ್ಯ, ಕೌಟುಂಬಿಕ ದೌರ್ಜನ್ಯ, ದೇವದಾಸಿ ಪದ್ಧತಿ, ಪ್ರಜನನ ಹಕ್ಕುಗಳು, ಉದ್ಯೋಗ ಸ್ಥಳದಲ್ಲಿ ಭದ್ರತೆಯಂತಹ ವಿಷಯಗಳು ಮುನ್ನೆಲೆಗೆ ಬಂದವು. ಪರಂಪರೆ, ರೂಢಿ, ಆಚರಣೆ, ಸಾಹಿತ್ಯ ಎಲ್ಲವನ್ನು ಮಹಿಳಾ ದೃಷ್ಟಿಕೋನದಿಂದ ನೋಡುವ ಪರಿಪಾಠ ಬೆಳೆಯಿತು. ಆಧುನಿಕ ಭಾರತವನ್ನು ಪ್ರಭಾವಿಸಿದ ಗಾಂಧಿ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್ ಮೊದಲಾದ ಅನೇಕ ಚಿಂತಕರು ಹೆಣ್ಮಕ್ಕಳ ಚಿಂತನೆ-ಹೋರಾಟಗಳನ್ನೂ ಪ್ರಭಾವಿಸಿದರು.

೧೯೭೨ರಲ್ಲಿ ಸಂಭವಿಸಿದ ಮಹಾರಾಷ್ಟ್ರದ ಆದಿವಾಸಿ ಬಾಲಕಿ ಮಥುರಾ ಅತ್ಯಾಚಾರ ಪ್ರಕರಣವು ಮಹಿಳಾ ಚಳುವಳಿಯ ಹೊಸ ಅಲೆ ಶುರುವಾಗಲು ಕಾರಣವಾಯಿತು. ಅತ್ಯಾಚಾರವನ್ನು ಮುಖ್ಯ ವಿಷಯವಾಗೆತ್ತಿಕೊಂಡು ಹೆಣ್ಣಿನ

ಕುರಿತು ಸಮಾಜದ ದೃಷ್ಟಿಕೋನವನ್ನು ಪ್ರಶ್ನಿಸುತ್ತ ಕಾನೂನಿನ ಆಮೂಲಾಗ್ರ ಬದಲಾವಣೆಗೆ ಈ ಪ್ರಕರಣ ನಾಂದಿ ಹಾಡಿತು. ೧೯೭೫-೮೫ರ ದಶಕವನ್ನು ಮಹಿಳಾ ದಶಕವೆಂದು ಯುನಿಸೆಫ್ ಘೋಷಿಸಿದ್ದು ಹಲವು ಮಹಿಳಾ ವಿಷಯಗಳು ಮುನ್ನೆಲೆಗೆ ಬರಲು ಕಾರಣವಾಯಿತು. ಮಹಿಳಾ ಪ್ರಕಾಶನ ಹುಟ್ಟಿಕೊಂಡಿತು. ಮಹಿಳಾ ಚಳುವಳಿ ಹಾಗೂ ದೌರ್ಜನ್ಯ ವಿರೋಧ ಒಟ್ಟೊಟ್ಟಿಗೆ ಬೆಳೆದವು. ದೌರ್ಜನ್ಯ ಪ್ರಕರಣ, ತನಿಖೆ, ತೀರ್ಪು, ಶಿಕ್ಷೆಯ ಸ್ವರೂಪ, ಪ್ರಮಾಣ ಮತ್ತಿತರ ಕಾನೂನು ಪರಿಭಾಷೆ ಬದಲಾದವು. ದೇಶದ ಮೊತ್ತಮೊದಲ ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ – 'ಫೋರಂ ಅಗೇನ್ಸ್ಟ್ ರೇಪ್' ಲೋತಿಕಾ ಸರ್ಕಾರ್ ಅವರಿಂದ ಶುರುವಾಯಿತು. ನಂತರ ಅದು 'ಫೋರಂ ಅಗೇನ್ಸ್ಟ್ ಅಪ್ರೆಷನ್ ಆಫ್ ವುಮನ್' ಎಂದಾಯಿತು. ಅದು ಒಂದು ರಾಷ್ಟ್ರೀಯ ಸಮ್ಮೇಳನ ಏರ್ಪಡಿಸಿ ಸಾಮಾನ್ಯ ಮಹಿಳೆಗೆ ನ್ಯಾಯಾಂಗ ಸಹಾಯ ಪಡೆಯುವುದು ಎಷ್ಟು ಅಸಾಧ್ಯವಾಗಿದೆ ಎಂದು ಪ್ರತಿಪಾದಿಸುತ್ತ ಅತ್ಯಾಚಾರ ಕಾನೂನು ಬದಲಾಗಬೇಕೆಂದು ಒತ್ತಾಯಿಸಿತು. ಆ ಸಮಯದಲ್ಲೇ ಸಹೇಲಿ ಗುಂಪು ಹುಟ್ಟಿಕೊಂಡಿತು. ಸೀಮಾ ಸಖಾರೆ ಅಖಿಲ ಭಾರತ ಮಟ್ಟದಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ಸಂಘಟನೆಯಲ್ಲಿ ಸಕ್ರಿಯವಾದರು. ಒಮ್ಮೆ ಅತ್ಯಾಚಾರಕ್ಕೊಳಗಾದವಳು ವಿಚಾರಣೆಯ ವೇಳೆ ಪೊಲೀಸರಿಂದ, ನ್ಯಾಯಾಲಯದಿಂದ, ಮಾಧ್ಯಮದವರಿಂದ ಮತ್ತೆ ಮತ್ತೆ ಅತ್ಯಾಚಾರಕ್ಕೊಳಗಾಗುವಂತಹ ನ್ಯಾಯ ವ್ಯವಸ್ಥೆಯನ್ನು ಬಲವಾಗಿ ಟೀಕಿಸಿದರು. ಈ ಪ್ರಕರಣ ಲೈಂಗಿಕ ದೌರ್ಜನ್ಯದ ಪ್ರಕರಣಗಳಲ್ಲಿ ಬಲಿಪಶುವಿನ ಪರವಾಗಿ ನಿಂತು ಮಹಿಳೆ ಸಂಘಟಿತವಾಗಿ ಧ್ವನಿಯೆತ್ತುವಲ್ಲಿ ಹೊಸ ಯುಗವನ್ನೇ ತೆರೆಯಿತು. ದೇಶದ ಹಲವಾರು ಕಡೆ ಅತ್ಯಾಚಾರಕ್ಕೊಳಗಾದ ದುರ್ಬಲ ಮಹಿಳೆಯರ ಪರವಾಗಿ ಕೆಲಸ ಮಾಡುವ ಸಂಘಟನೆ, ವೇದಿಕೆಗಳು ಹುಟ್ಟಿಕೊಂಡವು.

ಆಮೇಲಿನ ಶಾಬಾನೊ ಪ್ರಕರಣ, ರೂಪ್ ಕನ್ವರ್ ಸತಿ ಪ್ರಕರಣ, ಭನವಾರಿ ದೇವಿಯ ಪ್ರಕರಣಗಳು ಮಹಿಳೆಯರ ಮೇಲಾಗುವ ಹಲವು ತೆರನ ಹಿಂಸೆಗಳನ್ನು ಮುನ್ನೆಲೆಯ ಚರ್ಚೆಗೆ ಬರುವಂತೆ ಮಾಡಿದವು. ರಾಜಸ್ಥಾನದ ಬಾಲ್ಯವಿವಾಹ ವಿರೋಧಿ ಆಂದೋಲನದ ಭನವಾರಿ ಅತ್ಯಾಚಾರಕ್ಕೊಳಗಾಗಿದ್ದು ತನ್ನ ಉದ್ಯೋಗದ ಕಾರಣಕ್ಕಾಗಿ. ಇದನ್ನು ಆಧಾರವಾಗಿಟ್ಟುಕೊಂಡು ವಿಶಾಖ ಹಾಗೂ ಇನ್ನಿತರ ನಾಲ್ಕು ಸಂಘಟನೆಗಳು ರಾಜಸ್ಥಾನ ಹಾಗೂ ಭಾರತ ಸರ್ಕಾರದ ವಿರುದ್ಧ ಕೋರ್ಟಿಗೆ ಹೋದವು. ಆ ಕೇಸಿನ ವಿಚಾರಣೆಯ ವೇಳೆ ಕೋರ್ಟ್ 'ವಿಶಾಖ ಗೈಡ್‌ಲೈನ್ಸ್' ನಿರೂಪಿಸಿದ್ದು ಅದನ್ನು ಇಂದಿಗೂ ಅನುಸರಿಸಲಾಗುತ್ತಿದೆ. ೧೯೯೭ರ ತೀರ್ಪು ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳದ ವ್ಯಾಖ್ಯೆ ನೀಡಿ ಅದನ್ನು ನಿಭಾಯಿಸುವುದರ ಕುರಿತು ನೀತಿ ನಿಯಮಾವಳಿ ರೂಪಿಸಿತು.

ಭಾರತೀಯ ಅರೆಸೇನಾಪಡೆ ಅಸ್ಸಾಂ ರೈಫಲ್ಸ್‌ನ ಯೋಧರು ತಂಗ್ಜಂ ಮನೋರಮಾ ಎಂಬ ೩೨ ವರ್ಷದ ಮಹಿಳೆಯನ್ನು ಇಂಫಾಲದ ಹೊರವಲಯದಲ್ಲಿದ್ದ ಅವಳ ಮನೆಯಿಂದ ಬಂಧಿಸಿ ಕರೆದೊಯ್ದರು. ಅವಳು ಸಶಸ್ತ್ರ ಕ್ರಾಂತಿಕಾರಿ ಗುಂಪಾದ ಪಿಎಲ್‌ಎನವಳು ಎನ್ನುವುದು ಬಂಧನಕ್ಕೆ ಕಾರಣ. ಮರುಬೆಳಗ್ಗೆ ಅಲ್ಲಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ಅರೆನಗ್ನಾವಸ್ಥೆಯ ಅವಳ ಶವ ಪತ್ತೆಯಾಯಿತು. ಗುದದ್ವಾರ, ಯೋನಿಗಳಲ್ಲಿ ಕಲ್ಲುಗಳಿದ್ದವು, ಬುಲೆಟ್‌ಗಳಿದ್ದವು. ಐದು ದಿನಗಳ ನಂತರ ಮಣಿಪುರದ ಮೀರಾ ಪೈಬಿ ಮಹಿಳಾ ಹೋರಾಟಗಾರರ ಗುಂಪಿನ ಸುಮಾರು ಮೂವತ್ತು ನಡುವಯಸ್ಕ ಮಹಿಳೆಯರು ನಗ್ನರಾಗಿ ಮಣಿಪುರದ ರಾಜಧಾನಿಯ ಬೀದಿಗಳಲ್ಲಿ ನಡೆದು ಹೋಗಿ 'ಭಾರತೀಯ ಸೇನೆಯೇ, ನಮ್ಮ ಮೇಲೆ ಅತ್ಯಾಚಾರವೆಸಗಿ, ನಾವು ಮನೋರಮಾ ತಾಯಂದಿರು' ಎಂದು ಘೋಷಣೆ ಕೂಗಿದರು. ಈಗಲೂ ಮನೋರಮಾ ದೇಹ ಇಂಫಾಲದ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನಲ್ಲಿ ಸೂಕ್ತ ಶವಪರೀಕ್ಷೆ ಆಗಿಲ್ಲವೆಂದು ಹಾಗೇ ಇದೆ. ಮರು ಶವಪರೀಕ್ಷೆಗಳಲ್ಲಿ ಹೊಸ ಹೊಸ ವಿಚಾರಗಳು ಬೆಳಕಿಗೆ ಬರುತ್ತಲೇ ಇವೆ. ಅವಳಂತೆ ಎಷ್ಟು ಜನ ಅತ್ಯಾಚಾರಕ್ಕೊಳಗಾದರೋ, ಕೊಲೆಯಾದರೋ ಯಾರಿಗೂ ಗಮನವೇ ಇರಲಿಲ್ಲ. ಆ ಅತ್ಯಾಚಾರದ ನಂತರ ದೇಶಾದ್ಯಂತ ಸಾರ್ವಜನಿಕರ ಗಮನ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯ ವಿರುದ್ಧವಾಗಿ, ವಿಶೇಷಾಧಿಕಾರ ದುರುಪಯೋಗಪಡಿಸಿಕೊಳ್ಳುವ ಸೈನ್ಯದ ಕುರಿತಾಗಿ ಹರಿಯಿತು. ಇರೋಂ ಶರ್ಮಿಳಾ ಉಪವಾಸ ಶುರು ಮಾಡಿ ಸಶಸ್ತ್ರ ಪಡೆಗಳ ದೌರ್ಜನ್ಯವನ್ನು ವಿರೋಧಿಸಿದರು. ಅವರ ಉಪವಾಸ ಇನ್ನೂ ಮುಂದುವರಿದೇ ಇದೆ.

ಇದಲ್ಲದೆ ಮಹಿಳಾ ಸಂಘಟನೆಗಳು ಮಹಿಳೆಗೆ ರಾಜಕೀಯ ಪ್ರಾತಿನಿಧ್ಯ, ಆಸ್ತಿ ಹಕ್ಕು, ಉದ್ಯೋಗ ಮತ್ತಿತರ ಅವಕಾಶಗಳಲ್ಲಿ ಮೀಸಲಾತಿ ಮುಂತಾದ ಬೇಡಿಕೆಗಳನ್ನಿಟ್ಟುಕೊಂಡು ಹೋರಾಟ ನಡೆಸಿದವು. ಅದರ ಫಲವೋ ಎಂಬಂತೆ ಹಲವಾರು ಮಹಿಳಾ ಪರ ಕಾನೂನುಗಳು ರೂಪುಗೊಂಡವು. ಈ ಅವಧಿಯ ಮಹಿಳಾ ಹೋರಾಟಗಳು **ಮಹಿಳಾ ಪರ ಕಾನೂನು ರೂಪಿಸುವುದರಲ್ಲಿ ಹಾಗೂ ನ್ಯಾಯವ್ಯವಸ್ಥೆ ಸುಧಾರಣೆಯತ್ತ** ಗಮನ ಕೊಟ್ಟವು. ಮಹಿಳಾ ದೃಷ್ಟಿಕೋನದಿಂದ ಕಲೆ, ಸಾಹಿತ್ಯ, ಘಟನೆ, ಪುರಾಣೇತಿಹಾಸಗಳನ್ನು ನೋಡುವ, ವಿಶ್ಲೇಷಿಸುವ ಪರಿಪಾಠ ಬೆಳೆಯಿತು.

ಜೊತೆಗೆ ದಲಿತ ಮಹಿಳಾ ಜಾಗೃತಿಯ ಹೊಸ ಅಧ್ಯಾಯ ಮಹಾರಾಷ್ಟ್ರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಶುರುವಾಯಿತು. ಅದುವರೆಗೆ ಮಹಿಳಾ ಚಳುವಳಿ ಹಿನ್ನೆಲೆಗೆ ಸರಿಸಿದ್ದ ಜಾತಿ ಪ್ರಶ್ನೆ ಮುಂಚೂಣಿಗೆ ಬರುವಂತಾಯಿತು. ಅರೆಕಾಲಿಕ ಹಾಗೂ ಗುತ್ತಿಗೆ ಆಧಾರಿತ ಮಹಿಳಾ ನೌಕರರ ಸಂಘಟನೆಗಳು ಕಾರ್ಮಿಕ ಹಕ್ಕುಗಳಿಗಾಗಿ ಹೋರಾಟ ನಡೆಸಿದವು. ಸಂಘಟಿತ ಹಾಗೂ

ಅಸಂಘಟಿತ ವಲಯದ ಮಹಿಳಾ ಉದ್ಯೋಗಿಗಳ ಸಂಘಟನೆ, ಹಕ್ಕೊತ್ತಾಯಗಳು ಕೇಳಿಬಂದವು.

೪. ಈಗೊಂದು ದಶಕದಿಂದ ನಾವು ನೋಡುತ್ತಿರುವುದು ಹೊಸ ಅಲೆಯ ಮಹಿಳಾ ಚಳುವಳಿ. ಸಂಪರ್ಕ ಕ್ರಾಂತಿಯ ಈ ಯುಗ ಜಾಗತೀಕರಣ, ಖಾಸಗೀಕರಣ, ಅಭಿವೃದ್ಧಿಯ ಯುಗವೂ ಆಗಿದ್ದು ಮಹಿಳೆಗೆ ಬಿಡುಗಡೆಯ ಭ್ರಮೆಯನ್ನೂ, ಅದರ ಬೆನ್ನಿಗೇ ನಾನಾ ಸಂಕಷ್ಟಗಳನ್ನೂ ತಂದೊಡ್ಡಿದೆ. ದೌರ್ಜನ್ಯದ ಜೊತೆಗೆ ಪರಿಸರ, ಸಮಾನ ಶಿಕ್ಷಣ, ಮಾತೃಭಾಷಾ ಶಿಕ್ಷಣ, ಉದ್ಯೋಗ ಹಕ್ಕು, ಮಾನವ ಸಾಗಾಟ, ಕನಿಷ್ಟ ವೇತನ, ಯುದ್ಧ, ವಲಸೆ, ಕೃಷಿ ಬಿಕ್ಕಟ್ಟು ಮೊದಲಾದ ಹತ್ತಾರು ಸಮಸ್ಯೆಗಳನ್ನಿಟ್ಟುಕೊಂಡು ಕೆಲಸ ಮಾಡುವ ಸ್ವಾಯತ್ತ ಸಂಘಟನೆಗಳು, ಸರ್ಕಾರೇತರ ಸಂಸ್ಥೆಗಳು ಹುಟ್ಟಿಕೊಂಡಿವೆ.

ಈಚಿನ ೨-೩ ದಶಕಗಳಲ್ಲಿ ಜಾಗತೀಕರಣ-ಅಭಿವೃದ್ಧಿ-ಕೋಮುವಾದದಿಂದ ತೊಂದರೆಗೀಡಾದ ಮಹಿಳೆಯರ ಸಂಘಟನೆಗಳೂ ಬಂದಿವೆ. ಮೇಧಾ ಪಾಟ್ಕರ್ ಅವರ ನರ್ಮದಾ ಬಚಾವೋ ಆಂದೋಲನ, ಭೂಪಾಲಿನ ವಿಷಾನಿಲ ಸಂತ್ರಸ್ತರ ಮಹಿಳಾ ಸಂಘಟನೆ, ಬಾಬ್ರಿ ಮಸೀದಿ-ಗುಜರಾತ್ ನರಮೇಧದ ಬಳಿಕ ಹುಟ್ಟಿಕೊಂಡ ಮಾನವ ಹಕ್ಕು ಸಂಘಟನೆಗಳ ಮಹಿಳೆಯರು, ಮಹಾಶ್ವೇತಾದೇವಿ ಅವರ ಸಂಘಟನೆ-ಬರಹ, ದಂಡಕಾರಣ್ಯದ ಜನಸಂಗ್ರಾಮ ಪರಿಷದ್‌ನ ಅನುರಾಧಾ ಗಾಂಧಿ ಮತ್ತಿತರ ಎಡಪಂಥೀಯ ಹೋರಾಟಗಾರರು ಶುರುಮಾಡಿದ ಆದಿವಾಸಿ ಕ್ರಾಂತಿಕಾರಿ ಮಹಿಳಾ ಸಂಘಟನ್ ಮೊದಲಾದವನ್ನು ಇಲ್ಲಿ ಉದಾಹರಿಸಬಹುದು. ದೌರ್ಜನ್ಯ ತಡೆ, ಲಿಂಗಸೂಕ್ಷ್ಮ ಸಮಾಜಕ್ಕೆ ಒತ್ತಾಯ, ಮಹಿಳಾ ಸ್ನೇಹಿ ಪರ್ಯಾಯ ಅಭಿವೃದ್ಧಿ ಮಾದರಿ, ಕೃಷಿ ಬಿಕ್ಕಟ್ಟು ನಿರ್ವಹಣೆ, ಸ್ವಚ್ಛತೆ, ಮಹಿಳಾ ಮೀಸಲಾತಿ ಜಾರಿಯೂ ಸೇರಿದಂತೆ ಹಲವು ವಿಷಯಗಳನ್ನೆತ್ತಿಕೊಂಡು ಮಹಿಳೆಯರು ಸಂಘಟಿತರಾಗಿದ್ದಾರೆ. ಭಾರತದ ಮಹಿಳಾ ಚಳುವಳಿ ದೌರ್ಜನ್ಯ ವಿರೋಧದ ಜೊತೆಜೊತೆಗೆ **ಸಮಾನ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಕ್ಕು**ಗಳನ್ನೂ ವ್ಯಾಖ್ಯಾನಿಸುತ್ತ ಸ್ಥಾಪಿಸಲೆತ್ನಿಸಿದೆ. ಸ್ತ್ರೀಭ್ರೂಣ ಹತ್ಯೆ, ಮರ್ಯಾದಾ ಹತ್ಯೆ, ಜಾತಿ ಪಂಚಾಯ್ತಿಯ ಮಹಿಳಾ ವಿರೋಧಿ ನೀತಿ, ಕೋಮುವಾದ, ಅಭಿವೃದ್ಧಿ ಮಾದರಿಗಳ ಮಹಿಳಾ ವಿರೋಧಿ ಅಂಶಗಳನ್ನು ಎತ್ತಿ ತೋರಿಸುತ್ತಲೇ ರಾಜಕೀಯ ಪ್ರಾತಿನಿಧ್ಯ, ಮಹಿಳೆಯ ದೇಹವನ್ನು ಸರಕೀಕರಣಗೊಳಿಸುವುದು, ವಸ್ತ್ರಸಂಹಿತೆ ವಿರೋಧ, ಅತ್ಯಾಚಾರ ತಡೆಗೆ ಕಠಿಣ ಕಾನೂನಿಗಾಗಿ ಒತ್ತಾಯಿಸಿ ಹೋರಾಟ ನಡೆದಿದೆ. ಗುಲಾಬಿ ಗ್ಯಾಂಗ್‌ನಂತಹ ಕೆಲವು ಸ್ವಾಯತ್ತ ಮಹಿಳಾ ಗುಂಪುಗಳು ಊರೂರುಗಳಲ್ಲಿ ಸ್ಥಳೀಯ ಸಮಸ್ಯೆಗಳನ್ನಿಟ್ಟುಕೊಂಡು ಹೋರಾಟ ಮಾಡುತ್ತಿವೆ. ಒಟ್ಟಾರೆ ಬದಲಾದ ಕಾಲದಲ್ಲೂ ಇರುವ ಪಿತೃಪ್ರಾಧಾನ್ಯದ ನಾನಾಮುಖಗಳ ಆಳಗಲವನ್ನು ಇವೆಲ್ಲವು ಎತ್ತಿ ತೋರಿಸುತ್ತಿವೆ.

ಚಳುವಳಿಗೆ ಪೂರಕವಾಗಿ ಎಂಬಂತೆ ಸರ್ಕಾರವೂ ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳು, ಮಹಿಳೆಯರಿಗೆಂದೇ ವಿಶಿಷ್ಟ ಕೋರ್ಸುಗಳು, ಮಹಿಳಾ ಬ್ಯಾಂಕು, ಮಹಿಳಾ ಠಾಣೆ, ಗ್ರಾಮೀಣ ಮಹಿಳೆಯರಿಗಾಗಿ ಸ್ತ್ರೀಶಕ್ತಿ ಮೊದಲಾದ ಯೋಜನೆಗಳನ್ನು ಹಾಕಿಕೊಂಡು ತಳವರ್ಗದ ಗ್ರಾಮೀಣ ಮಹಿಳೆಯರೂ ಜಾಗೃತರಾಗಿ ಕ್ರಿಯಾಶೀಲಗೊಳ್ಳಲು ಕಾರಣವಾಗಿದೆ. ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ.

ಮಹಿಳಾ ಚಳುವಳಿ : ಸವಾಲು–ಸಾಧ್ಯತೆಗಳು

ಇಷ್ಟೆಲ್ಲ ಹೋರಾಟ ನಡೆಯುತ್ತಿದೆಯೆಂದರೆ ೨೧ನೇ ಶತಮಾನದ ಮಹಿಳೆ ಆಧುನಿಕತೆಯನ್ನು ಮೈಗೂಡಿಸಿಕೊಂಡು ಲಿಂಗತಾರತಮ್ಯದ ಸಮಸ್ಯೆಗಳಿಲ್ಲದೆ ಬದುಕಲು ಸಾಧ್ಯವಾಗಿದೆಯೆ? ಖಂಡಿತ ಇಲ್ಲ. ಮೇಲೆ ಉದಾಹರಿಸಿದ, ಉದಾಹರಿಸದ ಇನ್ನೂ ಅನೇಕ ಸಂಘ, ಸಂಸ್ಥೆ, ಹೋರಾಟಗಳು ಮಾಡಿರುವ ಕೆಲಸ ಹೆಣ್ಣು ಎದುರಿಸುತ್ತಿರುವ ಸಮಸ್ಯೆಗಳಿಗೆ ಹೋಲಿಸಿದರೆ ಏನೇನೂ ಅಲ್ಲ. ಮಹಿಳಾ ಚಳುವಳಿಯೋ, ಹೋರಾಟವೋ, ಬಿಡುಗಡೆಯೋ, ಸಂಘಟನಾ ಕೆಲಸವೋ ಅಂತೂ ಮಹಿಳೆ ಇನ್ನೂ ಬಲಿತ ಹೆಜ್ಜೆಯನ್ನಿಟ್ಟು ಧೃಢವಾಗಿ ನಡೆಯುವುದು ಸಾಧ್ಯವಾಗಿಲ್ಲ.

ಸರ್ವಸಮಾನತೆ ಸಾರುವ ಸಂವಿಧಾನ ಬಂದು ೬೫ ವರ್ಷಗಳಾದ ನಂತರವೂ ಹಿಂದೂ ದೇವಾಲಯದೊಳಗೆ ಮಹಿಳೆಗೆ ಪ್ರವೇಶ ನೀಡಬೇಕೋ ಬೇಡವೋ ಎಂಬ ಬಗ್ಗೆ ಬಿಸಿಬಿಸಿ ಚರ್ಚೆ ನಡೆಯುತ್ತಿದೆ. ಮಹಿಳಾ ಮೀಸಲಾತಿ ಕುರಿತು ದಶಕಗಳಿಂದ ಮಾತು ಕೇಳಿಬರುತ್ತಿದ್ದರೂ ಬೆರಳೆಣಿಕೆಯಷ್ಟು ಮಹಿಳಾ ರಾಜಕಾರಣಿಗಳಿದ್ದಾರೆ. ಕಾನೂನಿನ ಒತ್ತಾಯವಿಲ್ಲದಿದ್ದರೆ ರಾಜಕೀಯ ಪಕ್ಷಗಳಾಗಲೀ, ಸಮಾಜವಾಗಲೀ ಅವಕಾಶವಂಚಿತರಿಗೆ ಯಾವ ಅವಕಾಶವನ್ನೂ ಮೀಸಲಿಡುವುದಿಲ್ಲ ಎನ್ನುವುದು ಮತ್ತೆಮತ್ತೆ ಸಾಬೀತಾಗುತ್ತಿದೆ. ಕಾನೂನಿನ ಬೆಂಬಲವಿದ್ದರೂ ಅದನ್ನು ನಿರುಪಯೋಗಿಯಾಗಿಸುವ ರಾಜಕೀಯ ಹುನ್ನಾರಗಳೂ ದಿನನಿತ್ಯ ಸಂಭವಿಸುತ್ತಿವೆ. ಧರ್ಮಾಧಾರಿತ ಧೃವೀಕರಣದ ತಂತ್ರವಾಗಿ ದಲಿತರನ್ನು, ಮಹಿಳೆಯರನ್ನು ಕೋಮುವಾದ ದಿಕ್ಕು ತಪ್ಪಿಸುತ್ತಿದೆ. ಜನಸಾಮಾನ್ಯರ ಮಾತಂತಿರಲಿ, ದಲಿತ – ಮಹಿಳಾ ನಾಯಕಿಯರನ್ನೂ ಸಹಾ ಹಿಂದೂತ್ವದ ಜಾಲದೊಳಗೆ ಸೆಳೆಯಲಾಗಿದೆ. ತಮಗರಿವಿಲ್ಲದೆ ಜಾತಿ, ಧರ್ಮ ಮತ್ತು ರಾಜಕಾರಣಗಳು ಒಡ್ಡುವ ಭಾವುಕ ಹಾಗೂ ಲೌಕಿಕ ಬಲೆಯೊಳಗೆ ಮಹಿಳೆಯರು ಬೀಳುತ್ತ ಲಿಂಗಪ್ರಶ್ನೆ ಮರೆಗೆ ಸರಿಯುತ್ತಿದೆ. ಮಹಿಳಾ ಜಾಗೃತಿಯ ಕೊರತೆ ಹಾಗೂ ಪ್ರಮುಖ ಸ್ಥಾನಗಳಲ್ಲಿ ಮಹಿಳೆಯರ 'ಇಲ್ಲದಿರುವಿಕೆ' ಎದ್ದುಕಾಣುತ್ತಿದೆ. ಇದಕ್ಕೆ ಕಾರಣಗಳು ಹಲವಾರು.

● ಇಂದಿಗೂ ಹೆಣ್ಣು ತನಗೆ ವಿಧಿಸಲಾದ ಮಿತಿಗಳನ್ನು ದಾಟಿ ಬರುವುದರಲ್ಲಿ ನಾಲ್ಕು ಘಟ್ಟಗಳನ್ನು ಗುರುತಿಸಲಾಗಿದೆ :

- ಅಸಹಾಯಕತೆಯ ಅರಿವು
- ಸ್ಥಿತಿಗತಿಯ ಕುರಿತು ಪ್ರಶ್ನೆ ಕೇಳಿಕೊಳ್ಳುವುದು
- ಆದ್ಯತೆಯ ಹುಡುಕಾಟ
- ಸ್ವಾಯತ್ತತೆಯ ಕಡೆಗಿನ ಪಯಣ

ಇಷ್ಟೆಲ್ಲ ವರ್ಷಗಳ ಸ್ವಾತಂತ್ರ್ಯದ ನಂತರವೂ, ಇನ್ನೂ ಈ ನಾಲ್ಕರಲ್ಲಿ ಎರಡನೆಯ ಘಟ್ಟದ ಅನುಭವವನ್ನೂ ಗುರುತಿಸಲಾರದ ಕೋಟ್ಯಂತರ ದಮನಿತ ಮಹಿಳೆಯರಿದ್ದಾರೆ. ಸಮಾಜ ಈಗ ಹೆಣ್ಣು ಎಂದು ಯಾರನ್ನು ನೋಡುತ್ತಿದೆಯೋ ಅವಳು ನಿಜವಾದ ಹೆಣ್ಣಲ್ಲ. ಅದು ಪುರುಷಪ್ರಧಾನ ಸಮಾಜದ ಕಲ್ಪನಾ ವಿಲಾಸ ಹೆಣ್ಣು ಹೇಗಿರಬೇಕೆಂದು ವ್ಯಾಖ್ಯಾನಿಸಿದೆಯೋ ಆ ಚೌಕಟ್ಟಿಗೆ ಸರಿಯಾಗಿ ತನ್ನನ್ನು ರೂಪಿಸಿಕೊಂಡ ಹೆಣ್ಣು. ಗುಟ್ಟು ಕಾಪಾಡುವುದರಲ್ಲೇ ಹೆಣ್ತನವಿದೆ ಎಂದು ಭಾವಿಸಿದ, ತಾನು ಕಳೆದುಕೊಂಡಿರುವುದೇನೆಂದೇ ತಿಳಿಯದವರು ಅವರು. ಮುಳುಗಿದ ಅರಿವೇ ಇಲ್ಲದವರನ್ನು ಮೇಲೆತ್ತುವುದು ಹೇಗೆ? ಅಂಥವರನ್ನು ಸಂಘಟಿಸುವುದು ಹೇಗೆ?

ಅಮೆರಿಕನ್ ಆಫ್ರಿಕನ್ ಬರಹಗಾರ್ತಿ ಗ್ರಾಡಾ ಕಿಲೋಂಬಾ ತಮ್ಮ ಒಂದು ಲೇಖನದಲ್ಲಿ ಅವರ ಹಿರಿಯರಾದ ಕರಿಯ ಗುಲಾಮರು ತಮ್ಮ ನೆನಪಿನಿಂದ ಹೇಳುತ್ತಿದ್ದ ಸಂಕಟವನ್ನು ಪ್ರಸ್ತಾಪಿಸಿದ್ದಾರೆ. ಅಮೆರಿಕದ ಬಿಳಿಯ ಮಾಲೀಕರು ತಮ್ಮ ಎಸ್ಟೇಟು, ತೋಟ, ಮನೆಗಳಲ್ಲಿ ಕೆಲಸ ಮಾಡುವ ಕರಿಯ ಗುಲಾಮರ ಬಾಯಿಯಲ್ಲಿ ದವಡೆಗಳ ನಡುವೆ ಒಂದು ಕಬ್ಬಿಣದ ಕಚ್ಚುಕಂಬಿಯನ್ನಿಡುತ್ತಿದ್ದರು. ಗುಲಾಮರು ಪರಸ್ಪರ ಮಾತನಾಡುತ್ತ ಕಾಲ ವ್ಯಯಿಸಬಾರದು ಹಾಗೂ ಕಬ್ಬು, ಕಾಫಿ-ಕೋಕೋ ಬೀಜಗಳ ಅವರು ತಿನ್ನಬಾರದು ಎನ್ನುವುದು ಕಚ್ಚುಕಂಬಿಯ ಉದ್ದೇಶ. ಈ ಪದ್ಧತಿ ಸುಮಾರು ೩೦೦ ವರ್ಷ ಚಾಲ್ತಿಯಲ್ಲಿತ್ತು. ಅದು ಸೊಲ್ಲಡಗಿಸುವ, ಬಲವಂತದ ಮೌನ ಹೇರುವ ಕ್ರಮ. ಜನಸಮುದಾಯದ ಹಕ್ಕಿನ ನಿರಾಕರಣೆ. ಕರಿಯ ಗುಲಾಮರಂತೆ ಮಹಿಳೆಯರೂ ಸಾವಿರಾರು ವರ್ಷಗಳಿಂದ ಅದೃಶ್ಯ ಕಚ್ಚುಕಂಬಿಯನ್ನು ತಮ್ಮ ಬಾಯಲ್ಲಿಟ್ಟುಕೊಂಡೇ ಬದುಕಿದ್ದಾರೆ. ಅದನ್ನು ತೆಗೆಯಲಾಗಿದ್ದರೂ ಅದೃಶ್ಯವಾದದ್ದನ್ನು ಊಹಿಸಿ ಕೊಂಡೇ ಮೌನವಾಗಿದ್ದಾರೆ. ಹೀಗೆ ಹಲ್ಲು ಕಚ್ಚಿ ಸಹಿಸಿಕೊಂಡಿರುವವರ ಬಾಯಿ ಬಿಚ್ಚಿಸುವುದಕ್ಕೆ ಇರುವ ಸವಾಲುಗಳೇ ಮಹಿಳಾ ಚಳುವಳಿ ಕಟ್ಟಲು ಇರುವ ಮೊದಲ ತೊಡಕುಗಳಾಗಿವೆ.

ಸಮಾಜ ವೇಗವಾಗಿ ಚಲಿಸುತ್ತಿದೆ. ಅದಕ್ಕೆ ಕಾರಣ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅದು ಸಾಧ್ಯವಾಗಿಸಿರುವ ಸಂವಹನ. ಆದರೆ ಈ ವೇಗದ

ಹೊರತಾಗಿಯೂ ಕೌಟುಂಬಿಕ ಹಾಗೂ ನೈತಿಕ ಮೌಲ್ಯಗಳೆಂದು ಮಹಿಳೆಯ ಮೇಲೆ ಹೇರಿದ ಆದರ್ಶಗಳಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಇವತ್ತಿಗೂ ಕಲಿತ, ವೇತನ ತರುವ ಹೆಣ್ಣುಮಗಳು ಮನೆಯ, ಮಕ್ಕಳ ಕೆಲಸಗಳನ್ನೆಲ್ಲ ಸಂಪೂರ್ಣ ನಿಭಾಯಿಸುವ ಜವಾಬ್ದಾರಿಯನ್ನು ಮಾತಿಲ್ಲದೇ ಒಪ್ಪಿಕೊಳ್ಳಬೇಕಾಗಿದೆ. ಮುಮ್ಮುಖ ನೋಟ, ಹಿಮ್ಮುಖ ಚಲನೆಯ ಅನುಭವವನ್ನು ಮಹಿಳೆಗೆ ಈ ಸನ್ನಿವೇಶ ನೀಡುತ್ತಿದ್ದು ಅವಳಿಗೆ ತನ್ನ ನಿಜ ಸ್ಥಿತಿಗತಿಯ ಅರಿವು ಮೂಡುವುದೇ ದುಸ್ತರವಾಗಿದೆ. ಎಂದೇ ಚಳುವಳಿ, ಹೋರಾಟಗಳು ನಿರಂತರವಾಗಿರಬೇಕಾದ ಅನಿವಾರ್ಯತೆ ಹುಟ್ಟಿಕೊಂಡಿದೆ. ನಿರಾಶಾವಾದಕ್ಕೆ, ಸಿನಿಕತನಕ್ಕೆ ಈಡುಮಾಡುವ ಅಪಾಯಗಳ ನಡುವೆಯೇ ಸಂಘಟಿತಳಾಗಬೇಕಿರುವುದು ಮಹಿಳಾ ಚಳುವಳಿ ಎದುರಿಸುವ ಸವಾಲಾಗಿದೆ. ಸಂಘಟನೆ ಎಲ್ಲ ಕಾಲದಲ್ಲೂ ಮಹಿಳೆಗೆ ಕಷ್ಟ. ಸಿಮನ್ ದಿ ಬೊವಾ ಕೂಡಾ ಸಂಘಟನೆಯ ಕಷ್ಟಗಳ ಬಗ್ಗೆ ಮಾತನಾಡಿದ್ದರು. ಸಂಘಟನೆಯ ಅವಶ್ಯಕತೆ ಇದೆಯೆಂದು ಹೆಣ್ಣಿಗೆ ಅನಿಸುತ್ತಿಲ್ಲ. ಸಂಘಟಿತವಾಗಿ ಪ್ರಯತ್ನಿಸಬೇಕೆಂದು, ಪರಿಹಾರ ಕಂಡುಕೊಳ್ಳಬಹುದೆಂದು ಭರವಸೆಯಿಲ್ಲ. ಇದು ದಾಟಬೇಕಾದ ದೊಡ್ಡ ಅಂತರಂಗದ ಮಿತಿಯಾಗಿದೆ. ಮಹಿಳೆಯ ಈ ಮನಸ್ಥಿತಿ ರೂಪಿಸಿರುವ ಸಮಾಜವೂ ಸಮಗ್ರ ಮಹಿಳಾ ಚಳುವಳಿ ರೂಪುಗೊಳ್ಳದಿರುವುದಕ್ಕೆ ಜವಾಬ್ದಾರಿ ಹೊತ್ತುಕೊಳ್ಳಬೇಕಾಗಿದೆ.

❖ ಕೌಟುಂಬಿಕ ಅಡೆತಡೆಗಳನ್ನು ದಾಟಿಕೊಂಡು ಹೊರಬಂದ ನಂತರವೂ ಮಹಿಳೆ ಸಂಘಟನಾತ್ಮಕವಾಗಿ ಹಲವು ಗೊಂದಲಗಳನ್ನು ಎದುರಿಸಬೇಕಿದೆ. ಚಳುವಳಿಗಳಿಗೆ ಸಿದ್ಧಾಂತ ಮತ್ತು ಆಚರಣೆ ಎಂಬ ಎರಡು ಆಯಾಮಗಳಿರುತ್ತವೆ. ಚಳುವಳಿಯೊಂದು ಪ್ರಬುದ್ಧಾವಸ್ಥೆ ತಲುಪುವವರೆಗೆ ಕೇವಲ ಆಲೋಚನೆಗಳಿರುತ್ತವೆ. ಆಲೋಚನೆಗಳು ಆಚರಣೆಗಳನ್ನು ರೂಪಿಸುತ್ತವೆ. ಆಲೋಚನೆಗಳ ಆಚರಣಾತ್ಮಕ ಪರಿಪಕ್ವತೆಯಲ್ಲಿ ಸಿದ್ಧಾಂತ ರೂಪುಗೊಳ್ಳುತ್ತದೆ. ಮಹಿಳಾ ಚಳುವಳಿ ಆಲೋಚನೆ, ಆಚರಣೆಗಳ ಮಟ್ಟದಲ್ಲೇ ಇದ್ದು ಕಾಲಕ್ಕೆ ತಕ್ಕಂತೆ ಸೈದ್ಧಾಂತಿಕವಾಗಿ ಗಟ್ಟಿಗೊಳ್ಳುವುದು, ಒಟ್ಟುಗೂಡುವುದು ಅವಶ್ಯವಿದೆ. ಹಾಗಾಗದಂತೆ ವ್ಯವಸ್ಥೆಯಲ್ಲೆ ಅಡಕವಾಗಿರುವ ಹಲವು ದ್ವಂದ್ವಗಳು ತಡೆಯುತ್ತಿವೆ. ನಮ್ಮ ಸಂವಿಧಾನ ಮಹಿಳೆಯನ್ನು ಒಬ್ಬ ವ್ಯಕ್ತಿಯಾಗಿ ನೋಡುತ್ತದೆ. ಆದರೆ ಧರ್ಮ ಬೇರೆಯೇ ಚೌಕಟ್ಟು ವಿಧಿಸುತ್ತದೆ. ಸಂವಿಧಾನ ಧರ್ಮದ ಕುರಿತು ಮಾತನಾಡಬಯಸುವುದಿಲ್ಲ. ಅದು ವ್ಯಕ್ತಿಯ ಸ್ವಾತಂತ್ರ್ಯ ಎನ್ನುತ್ತದೆ. ಆದರೆ ಅದೇ ಸ್ವಾತಂತ್ರ್ಯ ಹೆಣ್ಣುಮಕ್ಕಳಲ್ಲಿ ಹಲವು ಗೊಂದಲಗಳನ್ನು ಸೃಷ್ಟಿಸಿದೆ. ಯಾವ ಜಾತಿ/ಧರ್ಮವು ನಿಮ್ಮನ್ನು ಸಂಕಲೆಯೊಳಗಿಟ್ಟಿದೆಯೊ ಅದನ್ನೆ ನಿಮ್ಮ ಸಂಸ್ಕೃತಿಯ ಮೂಲ ಎನ್ನಲಾಗುತ್ತದೆ. ಯಾವ ಜಾತಿ/ಧರ್ಮ ನಿಮ್ಮನ್ನು ಅಧಿಕಾರಹೀನರನ್ನಾಗಿಸಿದೆಯೊ ಅದನ್ನು ಬಿಟ್ಟು ಬದುಕಲು ಜನಸಾಮಾನ್ಯರಿಗೆ, ಮಹಿಳೆಯರಿಗೆ ಅವಕಾಶವೇ ಇಲ್ಲವಾಗಿದೆ.

❖ ಸಮಾಜವು ಜಾತಿ–ಧರ್ಮ–ಭಾಷೆಗಳಿಂದ ಛಿದ್ರವಾಗಿದೆ. ಎಲ್ಲ ತಾರತಮ್ಯಕ್ಕೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಾರಣವಾಗಿರುವುದು ಜಾತಿಪದ್ಧತಿ. ಭಾರತೀಯ ಸಮಾಜದ ಸಾಮಾಜಿಕ, ಆರ್ಥಿಕ ಅಸಮಾನ ರಚನೆಗಳೇ ಲಿಂಗತಾರತಮ್ಯದ ಮೂಲ ಕಾರಣವಾಗಿ ಇವತ್ತಿಗೂ ಮುಂದುವರೆದಿವೆ. ಅವಮರ್ಯಾದಾ ಹತ್ಯೆ–ಖಾಪ್ ಪಂಚಾಯ್ತಿಗಳು ಸಂಭವಿಸುತ್ತಿರುವುದೇ ಅದಕ್ಕೆ ಸಾಕ್ಷಿ. ವಾಸ್ತವ ಹೀಗಿದ್ದರೂ 'ಸ್ತ್ರೀವಾದವೆಂಬುದೇ ಪಾಶ್ಚಾತ್ಯ ಪರಿಕಲ್ಪನೆ. ಭಾರತದಲ್ಲಿ ಲಿಂಗವಿಶಿಷ್ಟ ಜವಾಬ್ದಾರಿಗಳಿವೆ; ಲಿಂಗ ಅನನ್ಯತೆಯ ಕುರುಹಾದ ಆಚರಣೆಗಳಿವೆಯೇ ಹೊರತು ಲಿಂಗತಾರತಮ್ಯ ಇಲ್ಲ' ಎನ್ನುವುದು ಸನಾತನ ಭಾರತ ಸಂಸ್ಕೃತಿಯ ಪ್ರತಿಪಾದಕರ ಆರೋಪವಾಗಿದೆ. ಹೀಗಿರುತ್ತ ಜಾತಿ–ಧರ್ಮಗಳನ್ನು ಬಿಡಲಾಗದೆ, ಅವನ್ನಿಟ್ಟುಕೊಂಡು ಸಮಾನತೆ ಸಾಧಿಸಲಾಗದೆ ಜನಸಾಮಾನ್ಯರು ಚಳುವಳಿಗಳ ತಾತ್ವಿಕ ಸಂಕಥನಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿದೆ. ಕೋಮುವಾದವು ಈ ನಿರ್ವಾತವನ್ನು ಬಳಸಿಕೊಂಡು ಮಹಿಳೆಯನ್ನು ದಾಳವಾಗಿ ಮಾಡಿಕೊಂಡಿದೆ. ಮಹಿಳೆಯರಲ್ಲಿ ಇದರ ಅರಿವು ಮೂಡಿಸಿ ಜಾತಿ–ಧರ್ಮಗಳೆಂಬ ಸಂಸ್ಥೆಗಳು ತಮ್ಮ ರಚನೆಯಲ್ಲಿಯೇ ಮಹಿಳಾ ವಿರೋಧಿಗಳೆಂದು ಅರ್ಥ ಮಾಡಿಸುವುದು ಚಳುವಳಿಯ ಎದುರಿಗಿರುವ ದೊಡ್ಡ ಸವಾಲಾಗಿದೆ.

❖ ಹೆಣ್ಣಿಗೆ ಹಲವು ಶೋಷಿತ ಐಡೆಂಟಿಟಿಗಳಿವೆ. ಸಂಘಟನೆ–ಹೋರಾಟದ ಹಲವು ನೆಲೆಗಳೂ ಇವೆ. ಜಾತಿ–ವರ್ಗಗಳನ್ನು ಪರಿಗಣಿಸಿದಾಗ ಮಹಿಳೆಯ ಕಷ್ಟಗಳು ಬೇರೆಬೇರೆ. ಎಂದೇ ಜಾತಿದೌರ್ಜನ್ಯದ ವಿರುದ್ಧ ಹೋರಾಡಲು ಜಾತಿ ಅಸ್ಮಿತೆ ಬೇಕಿದೆ. ಆದರೆ ಮಹಿಳಾ ಚಳುವಳಿ ಮೊದಲು ಹೊಟ್ಟೆ ತುಂಬಿದವರ ಚಳುವಳಿ ಎಂಬ ಅಪಹಾಸ್ಯಕ್ಕೆ ಈಡಾಗಿತ್ತು. ಅವು ವರ್ಗ ಸಮಸ್ಯೆಯಷ್ಟು ಜಾತಿ ಸಮಸ್ಯೆಯನ್ನು, ಎಲ್ಲ ದೌರ್ಜನ್ಯ–ತಾರತಮ್ಯಕ್ಕಿರುವ ಜಾತಿ ಸಂಬಂಧವನ್ನು ಗುರುತಿಸುವಲ್ಲಿ ವಿಫಲವಾಗಿದ್ದವು. ಆದರೆ ಮೂರನೆಯ ಅಲೆಯ ಮಹಿಳಾ ಚಳುವಳಿಯ ಹೊತ್ತಿಗೆ ಹೆಣ್ಮಕ್ಕಳನ್ನು ಸೆಳೆದ ಅಂಬೇಡ್ಕರ್ ಚಿಂತನೆಗಳು ಹಾಗೂ ಪ್ರತ್ಯೇಕವಾಗಿ ರೂಪುಗೊಳ್ಳತೊಡಗಿದ ದಲಿತ ಮಹಿಳಾ ಚಳುವಳಿ ದಲಿತ ಮಹಿಳೆಯ ಸಮಸ್ಯೆಯನ್ನು ಎಲ್ಲ ಮಹಿಳಾಪರ ಮನಸುಗಳೂ ಪರಿಗಣಿಸುವಂತೆ, ಜಾತಿ ಎನ್ನುವುದು ಬಹುಮುಖ್ಯ ದಮನದ ನೆಲೆಯೆಂದು ಗುರುತಿಸುವಂತೆ ಮಾಡಿತು. ಐಡೆಂಟಿಟಿ ರಾಜಕಾರಣದ, ಜಾತಿ ರಾಜಕಾರಣ ದಿನಗಳಲ್ಲಿ ಇದೆಲ್ಲದರ ನಡುವೆಯೇ ಮಹಿಳೆ ಸಮನ್ವಯವನ್ನೂ, ಒಳಗೊಳ್ಳುವಿಕೆಯನ್ನೂ ಸಾಧಿಸುವುದು ದೊಡ್ಡ ಸವಾಲಾಗಿದೆ.

❖ ಸದಾ ಕೇಳಿಬರುವ ಒಂದು ಪ್ರಶ್ನೆ : ಮಹಿಳಾ ಚಳುವಳಿಯೆಂಬ ಪ್ರತ್ಯೇಕ ಚಳುವಳಿ ನಡೆಸುವುದು ಸಾಧುವೆ? ಹಾಗೆ ನೋಡಿದರೆ ಎಲ್ಲ ವಿಷಯಗಳೂ ಮಹಿಳೆಗೆ ಸಂಬಂಧಪಟ್ಟವೇ. ಬೆಲೆ ಏರಿಕೆ, ಎಸ್‌ಇಝಡ್, ಕೋಮುವಾದ,

ಪರಿಸರ ನಾಶ, ಗಣಿ, ಭ್ರಷ್ಟಾಚಾರ ಇವೆಲ್ಲ ಮಹಿಳೆಗೆ ಸಂಬಂಧಿಸಿದ್ದೇ. ಎಂದೇ ಈ ಎಲ್ಲ ಹೋರಾಟಗಳ ತಾತ್ವಿಕತೆಯೊಟ್ಟಿಗೆ ಮಹಿಳೆ ಬೆರೆತುಕೊಳ್ಳಬೇಕು. ಅದೇ ವೇಳೆಗೆ ಎಲ್ಲ ಜನಪರ ಹೋರಾಟಗಳೂ ಮಹಿಳಾ ಸಮಸ್ಯೆಗಳನ್ನು ತಮ್ಮವಾಗಿ ಎತ್ತಿಕೊಳ್ಳಬೇಕು. ಜಾಗತೀಕರಣದ ದಿನಗಳಲ್ಲಿ ಚಳುವಳಿಗಳನ್ನಾಗಲೀ, ಅದರ ದಾರಿ-ಗುರಿಗಳನ್ನಾಗಲೀ ತುಂಡುತುಂಡಾಗಿ ನೋಡುವುದರಿಂದ ಒಟ್ಟಾರೆ ಸಾಮಾಜಿಕ ಬದಲಾವಣೆ ಸಾಧ್ಯವಾಗದೇ ಹೋದೀತು. ಹಾಗಾಗಿ ಮಹಿಳೆ ಎಲ್ಲ ಹೋರಾಟಗಳ ಭಾಗವಾಗಬೇಕು. ಎಲ್ಲ ಹೋರಾಟಗಳೂ ಮಹಿಳಾ ಸಮಸ್ಯೆಗಳನ್ನು ಪರಿಗಣಿಸಬೇಕು. ಅದು ನಿಜವಾದ ಮಹಿಳಾ ಸಬಲೀಕರಣದ ದಾರಿ ಹಾಗೂ ಜನಚಳುವಳಿಗಳ ಅಂತಿಮ ಗುರಿ. ಎಲ್ಲ ಮಾನವ ಜೀವಿಗಳಂತೆಯೇ ಹೆಣ್ಣಿಗೂ ಸ್ವಾತಂತ್ರ್ಯ ಮತ್ತು ಸ್ವಾಯತ್ತ ಬದುಕನ್ನು ಸಾಕಾರಗೊಳಿಸಬೇಕಾದದ್ದು ಮಾನವ ಸಮಾಜದ ಉಳಿವಿನ ದಾರಿ.

'ಅಮೆಜಾನ್ ದಾಟಬಹುದು, ಅನುದಿನದ ಅಂತರಗಂಗೆಯನ್ನು ದಾಟುವುದು ಹೇಗೆ?'

ಭಾರತೀಯ ಮಹಿಳೆ ಜಾತಿ-ಧರ್ಮ-ಕುಟುಂಬಗಳು ಒಂದರೊಳಗೊಂದು ಹೆಣೆದುಕೊಂಡಿರುವ ಕಾರಣವಾಗಿ ಪರಿಣಾಮಕಾರಿ ಜಾತ್ಯತೀತ ಹೋರಾಟ ಕಟ್ಟುವುದು ಕಷ್ಟಸಾಧ್ಯವಾಗಿದೆ. ಒಂದು ಕಡೆ ಜಾತಿಧರ್ಮದ ಆಧಾರದ ಮೇಲೆ ಮನುಷ್ಯರನ್ನು ಒಡೆಯುವ ಕೋಮುವಾದವು ಅರಿವಿನ ಬೆಳಕಿನೆಡೆಗೆ ಒಯ್ಯಬಹುದಾದ ಧರ್ಮ ಎಂಬ ಸಂಸ್ಥೆಯನ್ನು ಸಂಪೂರ್ಣ ಧಾಂಭಿಕ ಆಚರಣೆಗಳಿಗಷ್ಟೆ ಸೀಮಿತಗೊಳಿಸಿದೆ. ಭಾರತ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ, ಹಿಂದೂತ್ವವನ್ನು ತನ್ನೆಲ್ಲ ಅಜೆಂಡಾಗಳ ಕಾರ್ಯಸೂಚಿಯಾಗಿಸಿಕೊಂಡಿರುವ ರಾಜಕಾರಣವು ಭಾರತೀಯ ಸಂಸ್ಕೃತಿಯನ್ನು ವೈಭವೀಕರಿಸುತ್ತ ಅದರ ಮುಖ್ಯ ವಕ್ತಾರಳಾಗಿ, ವಾಹಕಳಾಗಿ ಹೆಣ್ಣನ್ನು ಕಾಣಿಸುತ್ತ ಧಾರ್ಮಿಕ, ಸಾಂಸ್ಕೃತಿಕ ಸಂಕೇತಗಳಲ್ಲಿ ಹೆಣ್ಣನ್ನು ಬಳಸಿಕೊಳ್ಳುತ್ತಿದೆ. ಎಂದೇ ಬಹುಪಾಲು ಹೆಣ್ಮಕ್ಕಳು ಧರ್ಮ ಮತ್ತದು ವಿಧಿಸಿರುವ ಕೌಟುಂಬಿಕ-ಪಾರಂಪರಿಕ ಚೌಕಟ್ಟಿನಿಂದ ಹೊರಬರಲಾರದವರಾಗಿದ್ದಾರೆ.

ಇನ್ನೊಂದು ಕಡೆ ಮಾರುಕಟ್ಟೆ ಸೃಷ್ಟಿಸಿರುವ ಭ್ರಮಾತ್ಮಕ ಜಗತ್ತಿನಲ್ಲಿ, ಬಂಡವಾಳಶಾಹಿ ಲಾಭಕೋರತನದ ಕೊನೆಯ ಬಲಿಪಶು ಹೆಣ್ಣು ಮತ್ತವಳ ದೇಹವೇ ಆಗಿದೆ. ಎಲ್ಲವೂ ಸರಕಾಗಿರುವ ಕಾಲದಲ್ಲಿ ಹೆಣ್ಣು, ಹೆಣ್ತನ, ಗರ್ಭಕೋಶ, ಲೈಂಗಿಕತೆ, ಇಷ್ಟಾನಿಷ್ಟ, ಕಣ್ಣೀರು ಎಲ್ಲವೂ ಕಚ್ಚಾವಸ್ತುಗಳಾಗಿವೆ. ಸರಕೀಕರಣ ಸೃಷ್ಟಿಸಿರುವ ಕೊಳ್ಳುಬಾಕತನಕ್ಕೆ ಹಣವೇ ಮೌಲ್ಯ. ಅಲಂಕರಣವೇ ಸೌಂದರ್ಯ. ಆರೋಗ್ಯ, ನೈತಿಕತೆ, ಸಹಬಾಳ್ವೆ, ಚಿಂತನೆಗಳಿಗೆ ಬೆಲೆಯಿಲ್ಲ, ಸಮಯವೂ ಇಲ್ಲ.

ಹೀಗೆ ಧರ್ಮರಾಜಕಾರಣ ಮತ್ತು ಮಾರುಕಟ್ಟೆ ಹುಟ್ಟುಹಾಕಿರುವ ಅನೂಹ್ಯ ಸಾಮಾಜಿಕ ಬದಲಾವಣೆಗಳು ಮಹಿಳೆಯರ ಮತ್ತು ಶೋಷಿತರ ಚಳುವಳಿ ಕಟ್ಟಲು ದೊಡ್ಡ ತೊಡಕುಗಳಾಗಿವೆ. 'ಧರ್ಮ-ಅರ್ಥ'ಗಳು ರಾಜಕಾರಣದೊಂದಿಗೆ ಹಸ್ತಕ್ಷೇಪ ಮಾಡುತ್ತಿರುವುದರಿಂದಲೇ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಜನತಂತ್ರ ದುರ್ಬಲಗೊಳ್ಳುತ್ತ, ಸಾಂಕೇತಿಕಗೊಳ್ಳುತ್ತ ಸಾಗುತ್ತಿದೆ. ಹೀಗಿರುತ್ತ ಡೆಮಾಕ್ರಸಿ, ಧರ್ಮ, ರಾಷ್ಟ್ರೀಯತೆ, ಮಾರುಕಟ್ಟೆ ಮತ್ತಿತರ 'ಒಪ್ಪಿತ' ವ್ಯವಸ್ಥೆಗಳನ್ನು ಪ್ರಶ್ನಿಸುತ್ತಲೇ ಅವನ್ನು ಅರ್ಥಪೂರ್ಣಗೊಳಿಸುವ ಜವಾಬ್ದಾರಿ ಮಹಿಳೆಯ ಮೇಲಿದೆ. ಮದುವೆ ಮತ್ತು ಕುಟುಂಬ ಎಂಬ ಸಾಮಾಜಿಕ ರಚನೆಗಳನ್ನು ಹಾಗೂ ಧರ್ಮ / ರಾಜಕಾರಣಗಳನ್ನು ಚಲನ ಶೀಲಗೊಳಿಸುವ ಜವಾಬ್ದಾರಿಯೂ ಹೆಣ್ಮಕ್ಕಳ ಮೇಲಿದೆ.

ಭಾರತದಲ್ಲೇ ಆಗಲಿ, ಕರ್ನಾಟಕದಲ್ಲೇ ಆಗಲಿ, ಯಾವುದೇ ಚಳುವಳಿಯನ್ನು ಮಹಿಳೆಯೊಬ್ಬಳು ಮುನ್ನಡೆಸಿಲ್ಲ. ಅಂಥ ಸಮರ್ಥ ಮಹಿಳಾ ನಾಯಕತ್ವ ಇನ್ನೂ ರೂಪುಗೊಂಡಿಲ್ಲ. ನಾಯಕತ್ವಕ್ಕೆ ಬೇಕಾದ ತ್ಯಾಗ ಮತ್ತು ಅರಿವು ಹೆಣ್ಣಿಗೆ ಸಾಧ್ಯವಾಗಲಿಕ್ಕಿಲ್ಲ ಎಂದೇ ಅನುಮಾನಿಸಲಾಗುತ್ತದೆ. ನಾಯಕತ್ವ ರೂಪುಗೊಳ್ಳದೇ ಇರುವುದರ ಮೂಲ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿದೆ. ಇದನ್ನು ಎದುರಿಸಿ ಮಹಿಳೆ ನಿಲ್ಲಬೇಕಾದರೆ ಸ್ವ ಬಿಡುಗಡೆ ಅತಿ ಮುಖ್ಯ ಘಟ್ಟವಾಗುತ್ತದೆ. ಇದು ಕತ್ತಿಯಂಚಿನ ದಾರಿ. 'ನಾನು ಮಹಿಳೆ ಎನ್ನುವುದು ಗೊತ್ತು. ಆದರೆ ಅದು ಅದು ನನ್ನ ಮಿತಿಯಲ್ಲ ಎನ್ನುವುದೂ ಗೊತ್ತು' - ಎನ್ನುವುದು ಮಹಿಳಾ ಘೋಷವಾಕ್ಯವಾಗಬೇಕು. ಭಾರತೀಯರ ಕೌಟುಂಬಿಕ ಹಾಗೂ ವೈಯಕ್ತಿಕ ಬದುಕಿನಲ್ಲಿ ಲಿಂಗಸೂಕ್ಷ್ಮ ಬದಲಾವಣೆ ತರುವತ್ತ ಜನಚಳುವಳಿಗಳು ಗಮನ ಹರಿಸಬೇಕು. ಅದರಲ್ಲೂ ಮಹಿಳೆಗೆ ಈಗ ಎರಡೆರಡು ಗಹನ ಜವಾಬ್ದಾರಿಗಳಿವೆ: ಒಂದು ಸೆಲ್ಫಿ ಮತ್ತು ಇನ್ನೊಂದು ಗ್ರೂಪಿ. ಕುಟುಂಬ ಮತ್ತು ಸಮಾಜ. ಈ ಎರಡನ್ನೂ ನಿಭಾಯಿಸುವ ಶಕ್ತಿಯನ್ನೂ, ಬೆಸೆಯುವ ಪ್ರೀತಿಯನ್ನೂ ಮಹಿಳೆ ಬೆಳೆಸಿಕೊಳ್ಳಬೇಕು.

ಗೂಡುಗಳ ಬೆಳಗುವ ಜೋತಮ್ಮನಾಗುತ್ತಲೆ ಲೋಕ ಬೆಳಗುವ ದೀವಟಿಗೆಯೂ ಆಗಬೇಕು. ಕಾಲದ ಅಗತ್ಯಕ್ಕೆ ತಕ್ಕಂತೆ ತನ್ನತನವನ್ನು ಮರುರೂಪಿಸಿಕೊಳ್ಳದೆ ಸಂಕಷ್ಟದಲ್ಲಿರುವ ಪುರುಷ ಸಮುದಾಯಕ್ಕೆ ತಾಯಿಯಾಗಿ ಅವರನ್ನೂ ದಾಟಿಸಬೇಕು. ಅದೇ ಮಹಿಳಾ ರಾಜಕಾರಣ. ಅದೇ ಸುಂದರ ನಾಳೆಗಳನ್ನು ತರಬಹುದಾದ ಆಶಾಕಿರಣ.

■

ಮಹಿಳಾ ಚಳುವಳಿ: ಸಾಗಬೇಕಾದ ಹಾದಿ

● ಹಾಲತಿ ಸೋಮಶೇಖರ

ಇಂದು ಮಹಿಳಾ ಚಳವಳಿ ಅನ್ನುವುದು ಇದೆಯಾ? ಎಂದು ಕೇಳಿದರೆ, ಇದೆ ಎಂದು ಹೇಳಲು ಧೈರ್ಯ ಬರುತ್ತಿಲ್ಲ; ಇಲ್ಲಾ ಎನ್ನುವುದೂ ಸಾಧ್ಯವಾಗುತ್ತಿಲ್ಲ. 'ಮಹಿಳಾ ಚಳವಳಿ' ಎನ್ನುವುದು ಬಹಳ ಗಟ್ಟಿಯಾಗಿದ್ದರೆ ಮಹಿಳೆಯರ ಮೇಲೆ ದಿನ ನಿತ್ಯ ಇಷ್ಟೊಂದು ದೌರ್ಜನ್ಯ ನಡೆಯಲು ಅದು ಅವಕಾಶ ಕೊಡುತ್ತಿರಲಿಲ್ಲ. ಮಹಿಳಾ ಚಳವಳಿ ಅನ್ನುವುದು ಇಲ್ಲವೇ ಇಲ್ಲ ಎನ್ನುವುದಾಗಿದ್ದರೆ ಇಂಥ ಗೋಷ್ಠಿಯಾಗಲಿ ಅಥವಾ ಮಹಿಳಾ ದಿನಾಚರಣೆಗಳಾಗಲಿ ಅಸ್ತಿತ್ವದಲ್ಲಿಯೇ ಇರುತ್ತಿರಲಿಲ್ಲ. ಆದ್ದರಿಂದ ಅದು ಇದೆ, ಇಲ್ಲದಂತಿದೆ! ಯಾವುದೇ ಸಾಮಾಜಿಕ ಚಳವಳಿಗಳು ಬೇರುಮಟ್ಟದಲ್ಲಿ ಗಟ್ಟಿಯಾಗಿದ್ದರೆ ಅಂಥ ಚಳವಳಿಗಳ ಕೇಂದ್ರ ವಿಷಯ ಯಾವುದಿದೆಯೋ ಅದರ ಗುಣಾತ್ಮಕ ನಡಿಗೆಗೆ ಆ ಸಮುದಾಯದ ಸಾಮೂಹಿಕ ಆಂದೋಲನ ಕ್ರಿಯಾಶೀಲವಾಗಿರುತ್ತದೆ. ಸದಾ ಜಾಗೃತವಾಗಿರುತ್ತದೆ. ಉದಾ: ದಲಿತ ಚಳವಳಿ, ರೈತ ಚಳವಳಿ.

'ಮಹಿಳಾ ಚಳವಳಿ' ಆಕಾರ ಪಡೆದಿದ್ದೆ ಮೇಲ್ವರ್ಗದ ವಿದ್ಯಾವಂತ, ಉದ್ಯೋಗಸ್ಥ ಸ್ತ್ರೀ ಪುರುಷರಿಂದ. ಇವರ ಕೇಂದ್ರಸ್ಥಾನಗಳೆಂದರೆ ನಗರಗಳು. ನಗರಗಳಲ್ಲಿಯೂ ನಾವು ಮಾಡಿದ್ದೆಂದರೆ ಮಹಿಳಾವಾದದ ತಾತ್ವಿಕ ಚರ್ಚೆಯನ್ನು ಆರಂಭಿಸಿದ್ದು. ಇದರಿಂದ ಮಹಿಳಾವಾದ ಬೆಳೆಯಿತು. ವೇದಿಕೆಯಲ್ಲಿ ಮಾತನಾಡುವ ನಾವುಗಳೆಲ್ಲ ಮಹಿಳಾವಾದಿಗಳೇ ವಿನಾ ಮಹಿಳಾ ಚಳವಳಿಗಾರರಲ್ಲ. ಮಹಿಳಾವಾದದ ಅಥವಾ ಯಾವುದೇ ಇಸಂನ ತಾತ್ವಿಕ ಚರ್ಚೆ ಬೆಳೆಯುವುದು ಸಿದ್ಧಾಂತವಾಗಿ ರೂಪುಗೊಳ್ಳುವುದು ನಗರಗಳಲ್ಲಿ. ಏಕೆಂದರೆ ಇದು ಸ್ವಲ್ಪಮಟ್ಟಿನ ಅಧ್ಯಯನ ಹಾಗೂ ಸುತ್ತಮುತ್ತಲ ಸಾಮಾಜಿಕ ಬದುಕಿನ ಅವಲೋಕನ ಮತ್ತು ಚಿಂತನೆ ನಮಗಿದ್ದರೆ ಒಂದು ವಾದವನ್ನು ಬೆಳೆಸಬಹುದು, ಚರ್ಚೆಯನ್ನು ಹುಟ್ಟು ಹಾಕಬಹುದು. ಆದರೆ ಚಳವಳಿ ರೂಪಿಸುವುದು ಅತ್ಯಂತ ಕಷ್ಟದ ಕೆಲಸ, ಆಸಕ್ತಿ, ಶ್ರಮ, ಧೈರ್ಯ, ಬೀದಿಗಿಳಿಯುವ ಗುಣ ಬೇಕು. ಪೋಲಿಸರ ಲಾಟಿ ಏಟು ತಿನ್ನುವುದಕ್ಕೂ ತಯಾರಿರಬೇಕು, ಜೀಪಿನಲ್ಲಿ ಹತ್ತಿಸಿಕೊಂಡು ಹೋದರೆ ಸ್ಟೇಷನ್‌ನಲ್ಲಿರಲು ತಯಾರಿರಬೇಕು, ಕೇಸಾಕಿದರೆ ಕೋರ್ಟ್ ಅಲೆಯುವುದಕ್ಕೂ ತಯಾರಿರಬೇಕು, ಈ ಕೆಲಸಕ್ಕೆ ನಾವು ತಯಾರಾಗಿಲ್ಲ, ಅದಕ್ಕೆ ಹಳ್ಳಿಯಿಂದ ಜನ ಕರೆದುಕೊಂಡು ಬರಬೇಕು ಎನ್ನುತ್ತೇವೆ. ಅಂದರೆ ಚಳವಳಿ ಎನ್ನುವುದು ಗ್ರಾಮಸಂಸ್ಕೃತಿ, ತಳಸಂಸ್ಕೃತಿ, ದುಡಿಯುವ ವರ್ಗದ ಸಂಸ್ಕೃತಿ, ಶ್ರಮಿಕರ

ಸಂಸ್ಕೃತಿ, ಬೆವರಿನ ಸಂಸ್ಕೃತಿ. ಹೀಗೆ ಬೆವರದ ಜನ ಕಟ್ಟುವ ವಾದಕ್ಕೆ ತಾತ್ವಿಕ ಸಂಘರ್ಷ ಇರುತ್ತೆ. ತಳಮೂಲದಲ್ಲಿ ಹೋರಾಟ ಕಟ್ಟುವ ಗುಣ ಇರುವುದಿಲ್ಲ.

ನಮ್ಮ ಮಹಿಳೆಯರು ಎಂಥಾ ಕ್ಷಮಯಾಧರಿತ್ರಿಯರು ಎಂದರೆ ಮಹಿಳಾ ಮೀಸಲಾತಿ ಬಿಲ್ಲು ಸಂಸತ್ತಿನಲ್ಲಿ ಮಂಡಿಸಿ ಎರಡು ದಶಕಗಳು ಕಳೆಯಿತು. ಇಡೀ ಭಾರತೀಯ ಮಹಿಳೆಯರು ಏಕಕಾಲಕ್ಕೆ ಒಗ್ಗೂಡಿ ತಮ್ಮ ತಮ್ಮ ಮನೆಗಳಿಂದ ಹೊರಬಂದು ಬೀದಿಗಿಳಿದಿದ್ದರೆ ಇಷ್ಟು ವರ್ಷಗಳು ಈ ಬಿಲ್ಲು ಪಾಸು ಮಾಡಲು ಬೇಕಿರಲಿಲ್ಲ. ಸಂಸತ್ತಿನೆದುರೆ ನಿತ್ಯ ಚಳವಳಿ ಆಗಬೇಕಿತ್ತು. ಅದನ್ನು ಮಾಡಲಿಲ್ಲ. ಶತಮಾನಗಳಿಂದ ರೂಢಿಸಿ ಕೊಂಡು ಬಂದ ಮೆಲುದನಿಯನ್ನೆ ಚಳವಳಿಯಲ್ಲೂ ಇಟ್ಟುಕೊಂಡಿದ್ದೇವೆ. ಆದ್ದ ರಿಂದ ನಮ್ಮ ಚಳವಳಿಯ ಕೂಗು ಕೆಲವರಿಗೆ ಮಾತ್ರ ಕೇಳುತ್ತೆ. ಹಲವರಿಗೆ ಕೇಳುವುದೇ ಇಲ್ಲ. ಅದರಲ್ಲೂ ಕೇಳಬೇಕಾದವರಿಗೆ ಕೇಳುವುದೇ ಇಲ್ಲ.

ಇದರಲ್ಲಿ ಪುರುಷರ ಹುನ್ನಾರವೂ ಇದೆ. ಈಗ ಸಂಸತ್ತಿನಲ್ಲಿ ೬೨ ಮಂದಿ ಮಹಿಳಾ ಎಂ.ಪಿ.ಗಳಿದ್ದಾರೆ, ಉಳಿದವರೆಲ್ಲಾ ಪುರುಷರು. ಇವರಿಗೆ ಒಂದು ಆತಂಕ ಎದುರಾಗಿದೆ. ಅದೆಂದರೆ ಮಹಿಳಾ ಮೀಸಲಾತಿ ಬಂದು ಮಹಿಳೆಯರ ಸಂಖ್ಯೆ ಏರಿದರೆ ಪುರುಷರು ಈಗಿರುವ ಶೇ ೮೯ ರಷ್ಟು ಸ್ಥಾನಗಳಿಂದ ಕೆಳಗಿಳಿಯಬೇಕಾಗಿದೆ. ಆದ್ದರಿಂದಲೇ ಶೇ ೧೧ರಷ್ಟು ಸ್ಥಾನ ಮಾತ್ರ ಇಟ್ಟುಕೊಂಡು ವುಮೆನ್ ಬಿಲ್ಲನ್ನು ಸಂಸತ್ತಿನಲ್ಲಿ ಮಂಡಿಸುವುದು. ರಾಜ್ಯಸಭೆಯಲ್ಲಿ ಪಾಸು ಮಾಡುವುದು, ಲೋಕಸಭೆಯಲ್ಲಿ ಬೀಳಿಸುವುದು; ಸ್ತ್ರೀಪರವಾಗಿದ್ದೀವಿ ಎಂದು ತೋರಿಸಿಕೊಳ್ಳುವುದು; ಪುರುಷರ ಪರವಾಗಿಯೇ ಕ್ರಿಯೆಯಲ್ಲಿರು ವುದು; ಇಂಥ ಪಿತೃಪ್ರಧಾನ ಹುನ್ನಾರಗಳ ವಿರುದ್ಧ ಹೋರಾಟಕ್ಕೆ ಬೀದಿಗಿಳಿಯದೇ ಹೋದದ್ದು ಸ್ತ್ರೀ-ಪುರುಷರಾದಿಯಾಗಿ ಮಹಿಳಾ ಚಳವಳಿಗಾರರ ಲೋಪ.

ಶ್ರೀ ದೇವೇಗೌಡರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದಾಗ ಮಹಿಳಾ ಮೀಸಲಾತಿ ಬಿಲ್ಲು ಸಂಸತ್ತಿನಲ್ಲಿ ಮಂಡನೆಯಾದದ್ದು. ಅವರಿದ್ದದ್ದೇ ಕೇವಲ ೧೧ ತಿಂಗಳು. ಅಷ್ಟರಲ್ಲಿ ಇಂಥದೊಂದು ಒಳ್ಳೆ ಕೆಲಸ ಮಾಡಿದರು. ಇದನ್ನು ಪಾಸು ಮಾಡಲು ಸಕ್ರಿಯ ಹೋರಾಟವನ್ನು ಇಡೀ ದೇಶದ ಮಹಿಳೆಯರು ಮಾಡಬೇಕಿತ್ತು. ಅದು ಆಗಲಿಲ್ಲ. ಕನಿಷ್ಠ ನಮ್ಮ ರಾಜ್ಯದ ಪ್ರಧಾನಿಯವರ ಅವಧಿಯಲ್ಲಿ ಮಂಡಿತವಾದದ್ದು ಅನ್ನುವ ಅಭಿಮಾನಕ್ಕಾದರೂ ಶ್ರೀ ದೇವೇಗೌಡರ ನಾಯಕತ್ವದಲ್ಲಿ ಈ ರಾಜ್ಯದ ಸಂಸದರು, ಸ್ತ್ರೀ-ಪುರುಷರು ಒಗ್ಗೂಡಿ ಮಹಿಳಾವಾದಿಗಳಾದ ನಾವು ಹೋರಾಡಬೇಕಿತ್ತು. ಅದು ಆಗಲಿಲ್ಲ, ಈಗ ಶ್ರೀ ದೇವೇಗೌಡರು ಅದನ್ನು ಮರೆತಿದ್ದಾರೆ. ನಾವು ಮರೆತಿದ್ದೇವೆ.

ಶ್ರೀ ಎಚ್.ಜಿ.ಗೋವಿಂದೇಗೌಡರು ಪ್ರಾಥಮಿಕ ಶಿಕ್ಷಣ ಸಚಿವರಾಗಿದ್ದಾಗ ಸರ್ಕಾರಿ ಶಾಲೆಗಳಿಗೆ ಶಕ್ತಿ ತುಂಬುವ ಕೆಲಸ ಮಾಡಿದರು. ಹೆಚ್ಚು ಮಂದಿ ಶಿಕ್ಷಕ/

ಶಿಕ್ಷಕಿಯರನ್ನು ತುಂಬಿದರು. ಅಷ್ಟೇ ಅಲ್ಲದೆ ಶಿಕ್ಷಕರ ನೇಮಕಾತಿಯಲ್ಲಿ ಶೇ.೩೩ ಮಹಿಳಾ ಮೀಸಲಾತಿ ತಂದರು. ಹೆಚ್ಚು ಮಂದಿ ಶಿಕ್ಷಕಿಯರು ನೇಮಕವಾದರು. ಇದೊಂದು ಆರೋಗ್ಯಕರ ಬೆಳವಣಿಗೆ. ಅವರು ಶಿಕ್ಷಕಿಯರನ್ನೆ ಹುದ್ದೆಗಳಲ್ಲಿ ತುಂಬುತ್ತಿರುವುದಕ್ಕೆ ಕಾರಣ ಕೂಡ ಹೇಳಿದರು.

ಯಾಕೆ ಈ ಕ್ಷೇತ್ರದಲ್ಲಿ ಶಿಕ್ಷಕಿಯರೇ ಇರಬೇಕು ಎಂದರೆ, ಶಿಕ್ಷಕಿ ಕೇವಲ ಕಲಿಸುವವಳು ಮಾತ್ರವಲ್ಲ, ಅವಳಲ್ಲಿ ತಾಯ್ತನ ಇರುತ್ತದೆ. ಹೆಣ್ಣು ಮಕ್ಕಳು ಶಾಲೆಗೆ ಬಂದು ಕಲಿಯಲು ನೆರವಾಗುತ್ತದೆ. ಅವರಿಗೊಂದು ಭರವಸೆ ಮೂಡಿಸಬಲ್ಲರು. ಎಲ್ಲಾ ಖಾಸಗಿ ಶಾಲೆಗಳಲ್ಲೂ ಶಿಕ್ಷಕಿಯರೇ ನೇಮಕವಾಗಿ ಉತ್ತಮ ಪಾಠ ಮಾಡುತಿದ್ದಾರೆ. ಒಳ್ಳೆಯ ಫಲಿತಾಂಶ ಬರುತ್ತಿದೆ ಎಂದು ಸಮರ್ಥಿಸಿಕೊಂಡರು. ಇದು ನಿಜವೂ ಆಯಿತು. ಕಳೆದೆರಡು ದಶಕಗಳಲ್ಲಿ ಆಗಿರುವ ಬದಲಾವಣೆ ನೋಡಿದರೆ ತಿಳಿಯುತ್ತದೆ. ಹೆಚ್ಚು ಹೆಣ್ಣು ಮಕ್ಕಳು ವಿದ್ಯಾವಂತೆಯರಾಗಿದ್ದಾರೆ. ಮಹಿಳಾವಾದಿಗಳಾದ ನಾವು ಇಷ್ಟಕ್ಕೆ ತೃಪ್ತಿಪಟ್ಟು ಕೊಂಡೆವು. ಈ ಬಗ್ಗೆ ಯಾವ ಅಧ್ಯಯನವನ್ನೂ ಮಾಡಲಿಲ್ಲ. ಸಮೀಕ್ಷೆ ನಡೆಸಲಿಲ್ಲ. ಇದರಲ್ಲಿನ ಪ್ರಾಯೋಗಿಕ ಸಮಸ್ಯೆಗಳನ್ನು ವಿಶ್ಲೇಷಿಸಲಿಲ್ಲ. ನಮ್ಮ ಸವಾಲುಗಳನ್ನು ತಿಳಿದುಕೊಳ್ಳಲಿಲ್ಲ. ಈಗ ಏನಾಗಿದೆ? ಎಂದರೆ ನಗರ ಹಳ್ಳಿಗಳೆಂಬ ಭೇದವಿಲ್ಲದೆ ಸರ್ಕಾರಿ ಶಾಲೆಗಳಲ್ಲಿ ದಾಖಲಾಗುವ, ಕಲಿಯುವ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿದೆ. ೧೦ ಮಕ್ಕಳು ಸಹ ಒಂದು ಶಾಲೆಯಲ್ಲಿರದೆ ಪ್ರತಿವರ್ಷ ಸಾವಿರಾರು ಸರ್ಕಾರಿ ಶಾಲೆಗಳು ಮುಚ್ಚಿಕೊಂಡು ಹೋಗುತ್ತಿವೆ. ಸಾವಿರಾರು ಖಾಸಗಿ ಶಾಲೆಗಳು ಹುಟ್ಟಿಕೊಳ್ಳುತ್ತಿವೆ, ಸರ್ಕಾರಿ ಶಾಲೆಗಳು ನಾಶದ ಅಂಚಿಗೆ ಬರಲು ಕಾರಣವಾದದ್ದು ಶಾಲೆಗಳಲ್ಲಿ ಶಿಕ್ಷಕಿಯರೇ ಹೆಚ್ಚಾಗಿದ್ದು ಎಂಬ ಸರಳ ತೀರ್ಮಾನಕ್ಕೆ ಬರುತ್ತಿರುವುದು ಕಂಡುಬರುತ್ತಿದೆ, ಇದು ನಿಜನಾ ಯೋಚಿಸಿ.

ಸರ್ಕಾರಿ ಶಾಲೆಗಳ ಅವನತಿಗೆ ಬೇರೆಯದ್ದೇ ಕಾರಣಗಳಿವೆ, ಒಂದರ್ಥದಲ್ಲಿ ಸರ್ಕಾರವೂ ಇದಕ್ಕೆ ಕಾರಣ. ಸರ್ಕಾರವೇ ಸ್ಥಾಪಿಸಿದ ಜವಾಹರ್ ನವೋದಯ ಶಾಲೆ, ಮೊರಾರ್ಜಿ ವಸತಿ ಶಾಲೆ, ವಾಜಪೇಯಿ ವಸತಿ ಶಾಲೆ, ರಾಣಿ ಚೆನ್ನಮ್ಮ ಹೆಣ್ಣು ಮಕ್ಕಳ ವಸತಿ ಶಾಲೆ, ಇತ್ಯಾದಿಗಳು ಒಂದೆಡೆಯಾದರೆ ಸರ್ಕಾರ ಅನುಮತಿ ಕೊಟ್ಟು ಪೋಷಿಸಿದ ಸಿಬಿಎಸ್‌ಸಿ ಆಂಗ್ಲ ಮಾಧ್ಯಮ ಶಾಲೆ, ಐಸಿಎಸ್‌ಸಿ ಶಾಲೆಗಳು. ಖಾಸಗಿ ಅನುದಾನರಹಿತ ಶಾಲೆ, ಅಂತಾರಾಷ್ಟ್ರೀಯ ಗುಣಮಟ್ಟದ ಸ್ಮಾರ್ಟ್ ಶಾಲೆ, ಒಟ್ಟಾರೆ ಕಾನ್ವೆಂಟ್ ಸಂಸ್ಕೃತಿಯನ್ನು ಪೋಷಿಸಿದ್ದು. ಇದಲ್ಲದೆ ಮಕ್ಕಳ ಪೋಷಕರು ಸರ್ಕಾರಿ ಶಾಲೆಗಳ ಬಗ್ಗೆ ನಂಬಿಕೆ ಕಳೆದು ಕೊಂಡದ್ದು, ಸರ್ಕಾರ ತಾನು ಸ್ಥಾಪಿಸಿದ ಸರ್ಕಾರಿ ಶಾಲೆಗಳು ಮುಚ್ಚಲು ಖಾಸಗಿ ಶಾಲೆಗಳನ್ನು ಬಲಗೊಳಿಸಲು ಅನುಕೂಲವಾಗುವಂತೆ ಶೇ.೨೫ ದಾಖಲಾತಿಯನ್ನು ಖಾಸಗಿ ಶಾಲೆಗಳಲ್ಲಿ ಸಾಮಾನ್ಯ ಮಕ್ಕಳಿಗೆಂದು ಕಾಯ್ದಿರಿಸಲು

ಆದೇಶ ಮಾಡಿ ಆ ಮಕ್ಕಳ ಬೋಧನಾ ಶುಲ್ಕವನ್ನು ಸರ್ಕಾರವೇ ಭರಿಸಲು ಮುಂದಾದದ್ದು. ಜೊತೆಗೆ ಪೋಷಕರಲ್ಲಿ ಇಂಗ್ಲಿಷ್ ವ್ಯಾಮೋಹ ಹೆಚ್ಚಾಗಿದ್ದು. ಪರಿಣಾಮವಾಗಿ ಪ್ರತಿಭಾವಂತ ಶಿಕ್ಷಕ/ಶಿಕ್ಷಕಿಯರಿದ್ದು ಎಲ್ಲಾ ಮೂಲಭೂತ ಸೌಲಭ್ಯವಿರುವ ಕಟ್ಟಡ ಹೊಂದಿದ್ದು, ಉಚಿತ ಊಟ, ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಉಚಿತ ಸೈಕಲ್ಲು, ಉಚಿತ ಶಿಕ್ಷಣವನ್ನು ಸರ್ಕಾರ ನೀಡಿದ್ದರೂ ಪೋಷಕರು ವರ್ಷಕ್ಕೆ ಲಕ್ಷಾಂತರ ರೂ ಖರ್ಚುಮಾಡಿ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿದ್ದಾರೆ. ಹಳ್ಳಿ ಹಳ್ಳಿಗಳಿಗೂ ಖಾಸಗಿ ಶಾಲೆಯ ವಾಹನಗಳು ಬಂದು ಮಕ್ಕಳನ್ನು ತುಂಬಿಕೊಂಡು ಹೋಗುತ್ತಿವೆ. ಕಡುಬಡವರಿಗೆ ಸರ್ಕಾರಿ ಶಾಲೆ ಎಂಬಂತಾಗಿದೆ. ಶಿಕ್ಷಣ ರಂಗದಲ್ಲಾಗಿರುವ ಈ ಬೆಳವಣಿಗೆ, ಈ ತಾರತಮ್ಯ, ಲಿಂಗತಾರತಮ್ಯದಷ್ಟೆ ಕ್ರೂರವಾಗಿದೆ. ಉಳ್ಳವನಿಗೆ ಒಂದು ಬಗೆಯ ಶಿಕ್ಷಣ, ಇಲ್ಲದವನಿಗೆ ಇನ್ನೊಂದು ಬಗೆಯ ಶಿಕ್ಷಣ ಅಮೆರಿಕದಂಥ ಮುಂದುವರೆದ ದೇಶದಲ್ಲಿಯೂ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಇಂಥ ತಾರತಮ್ಯವಿಲ್ಲ. ಆದರೆ ನಮ್ಮಲ್ಲಿರುವ ತಾರತಮ್ಯ ನೋಡಿದರೆ ಭಯವಾಗುತ್ತದೆ. ಇದರತ್ತ ನಮ್ಮ ಮಹಿಳಾ ಚಳವಳಿ ಜಾಗೃತಿ ವಹಿಸಬೇಕಾಗಿದೆ.

ಇಡೀ ರಾಜ್ಯದಲ್ಲಿಯೇ ಭಿನ್ನವಾದ ಜಿಲ್ಲೆ ಕೊಡಗು ಜಿಲ್ಲೆ. ಇಲ್ಲಿ ೧೦೦೦ ಪುರುಷರಿಗೆ ೧೦೨೦ ಮಹಿಳೆಯರಿದ್ದಾರೆ. ಮಹಿಳೆ ಆಸ್ತಿಯ ಒಡತಿಯಾಗಿದ್ದಾಳೆ, ಹೆಣ್ಣು-ಗಂಡೆಂಬ ಭೇದ ಮಾಡದೆ ವಿದ್ಯೆ ಕಲಿಸುತ್ತಿದ್ದಾರೆ. ಒಂದರ್ಥದಲ್ಲಿ ವುಮೆನ್ ಡಾಮಿನೆಂಟ್ ಕಲ್ಚರ್ ಇರುವ ಜಿಲ್ಲೆ. ಆದರೆ ಇಲ್ಲಿಯೂ ಕೂಡ ಹೆಣ್ಣು ಸಾಮಾಜಿಕ ರಂಗದಲ್ಲಿ ಮುಂದೆ ಬರುತ್ತಿಲ್ಲ. ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಸಹ ಶಿಕ್ಷಣ ಇದ್ದರೂ ಅಲ್ಲಿ ಹೆಣ್ಣು ಮಕ್ಕಳು ಮಾತ್ರ ಶಿಕ್ಷಕ ತರಬೇತಿಗೆ ಸೇರುತಿದ್ದಾರೆ. ಪಕ್ಕದಲ್ಲಿಯೇ ಕ್ರೀಡಾ ಶಾಲೆಯಿದೆ. ಅಲ್ಲಿ ಸೇರಿರುವ ಹೆಣ್ಣು ಮಕ್ಕಳು ಕೇವಲ ಶೇ. ೨೦. ಇನ್ನೊಂದು ಪಕ್ಕದಲ್ಲಿ ಕೇಂದ್ರ ಸರ್ಕಾರದ ಸೈನಿಕ ಶಾಲೆ ಇದೆ. ಅಲ್ಲಿಗೆ ಹೆಣ್ಣು ಮಕ್ಕಳು ಒಬ್ಬರೂ ಸೇರುತ್ತಿಲ್ಲ. ಇಲ್ಲಿರುವ ಬಿಕ್ಕಟ್ಟುಗಳೇನು? ನಮ್ಮ ಮಹಿಳಾ ಚಳವಳಿ ಇಂಥ ಕಡೆ ಏಕೆ ಗಮನ ಹರಿಸುತ್ತಿಲ್ಲ. ಕಾವೇರಿ ಹುಟ್ಟುವ ಕೊಡಗಿನಲ್ಲಿಯೂ ಒಬ್ಬ ಮಹಿಳಾ ನಾಯಕಿಯನ್ನು ಕಾಣಲಾಗುತ್ತಿಲ್ಲವಲ್ಲ, ಇಂಥ ವಿಷಯ ಗಳನ್ನು ಹಗುರವಾಗಿ ತೆಗೆದುಕೊಳ್ಳಬೇಕಾ? ಅಥವಾ ಗಂಭೀರವಾಗಿ ನೋಡಬೇಕಾ ಎಂಬುದನ್ನು ಕೂಡ ಚರ್ಚಿಸಬೇಕಾಗಿದೆ.

ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ, ಇಂದು ಅನೇಕ ರಂಗಗಳಲ್ಲಿ ಮಹಿಳೆಯರು ಪ್ರವೇಶ ಪಡೆಯುತ್ತಿದ್ದಾರೆ. ಇದಕ್ಕೆ ಕಳೆದ ಮೂರು ನಾಲ್ಕು ದಶಕಗಳಿಂದ ಮಾಡಿದ ಮಹಿಳಾ ಹೋರಾಟಕ್ಕೆ ಕಾರಣರಾದ ಎಲ್ಲಾ ಸ್ತ್ರೀಪರ ಹೋರಾಟಗಾರರನ್ನು ನಾನು ಅಭಿನಂದಿಸುತ್ತೇನೆ. ಈ ಹೋರಾಟಗಳ ಫಲವಾಗಿ ಮಹಿಳಾ ಪೋಲಿಸ್ ಸ್ಟೇಷನ್‌ಗಳು ಆರಂಭವಾಗಿವೆ. ಅಲ್ಲಿ ಪೂರ್ಣವಾಗಿ ಕಾನ್ಸ್‌ಸ್ಟೇಬಲ್‌ನಿಂದ ಹಿಡಿದು ಇನ್ಸ್‌ಪೆಕ್ಟರ್‌ವರೆಗೆ ಮಹಿಳೆಯರೇ

ಇದ್ದಾರೆ. ಪೋಲಿಸ್ ಇಲಾಖೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಯಶಸ್ವಿಯಾಗಿ ಹುದ್ದೆಗಳಿಗೆ ಬರುತ್ತಿದ್ದಾರೆ. ಒಳ್ಳೆಯದು. ಅಲ್ಲದೆ ಸಾವಿರಾರು ಜನ ಪೋಲಿಸರು (ಮಹಿಳೆಯರು) ಕಾರ್ಯ ನಿರ್ವಹಿಸುತ್ತಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ನಾಲ್ಕಾರುಸಾವಿರ ಜನ ಮಹಿಳಾ ಕಂಡಕ್ಟರುಗಳು ಚಾಲಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೂ ಕೂಡ ಉತ್ತಮ ಬೆಳವಣಿಗೆ. ಆದರೆ ನೈಟ್ ಬೀಟ್‌ಗೆ ಮಹಿಳಾ ಪೋಲಿಸ್ ಹಾಕಿದರೆ ಯಾರೂ ಕಾರ್ಯ ನಿರ್ವಹಿಸಲು ಸಿದ್ಧರಿಲ್ಲ. ನೈಟ್ ಹಾಲ್ಟ್ ಬಸ್‌ಗಳಿಗೆ ಹೋಗಲು ಯಾವ ಕಂಡಕ್ಟರ್ ಗಳು, ಡ್ರೈವರ್‌ಗಳು ತಯಾರಿಲ್ಲ. ಮುಖ್ಯ ಚುನಾವಣೆ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಲೇಡಿಸ್ ಹಾಕಬೇಡಿ ಎನ್ನುತ್ತಾರೆ. ತರಬೇತಿಯಲ್ಲಿ ಸನಿವಾಸ ತರಬೇತಿಗೆ ಬನ್ನಿ ಎಂದರೆ ಹಾಲ್ಟ್ ಮಾಡುವುದಾದರೆ ಬರುವುದಿಲ್ಲ ಎನ್ನುತ್ತಾರೆ. ಡೇ ತರಬೇತಿ ಸಂದರ್ಭದಲ್ಲಿಯೂ ಮಧ್ಯಾಹ್ನ ೩ ಗಂಟೆ ಆಗುತ್ತಿದ್ದಂತೆಯೇ ಮನೆಗೆ ಹೊರಡಲು ತಯಾರಾಗಿ ಬಿಡುತ್ತಾರೆ.

ಈಗ "ಸಮಾನ ಕೆಲಸ; ಸಮಾನ ವೇತನ" ಎನ್ನುವುದನ್ನು ಒಪ್ಪುವುದಾದರೆ ಯಾವುದೇ ವೃತ್ತಿ ಅಪೇಕ್ಷಿಸುವ ಕೆಲಸವನ್ನು ಮಾಡಲು ತಯಾರಿರಬೇಕು. 'ಅಸುರಕ್ಷತೆ' ಎಂಬ ಮಂತ್ರವನ್ನು ಜಪಿಸುತ್ತಾ ಕೂತರೆ, ಸ್ವರಕ್ಷಣೆ ಕಲಿಯುವುದು ಯಾವಾಗ? ಸುರಕ್ಷತೆ ಅನುಭವಿಸುವುದು ಯಾವಾಗ? ತಾವು ಹಿಡಿದಿರುವ ವೃತ್ತಿಗೆ ನ್ಯಾಯ ಒದಗಿಸುವುದು ಯಾವಾಗ? ಮಹಿಳೆಯರು ಎಲ್ಲಾ ವಲಯಗಳಲ್ಲೂ ಬರಬೇಕು ಎಂದು ಹೋರಾಡಿದ ಮಹಿಳಾ ಚಳವಳಿ ಆ ನಂತರದಲ್ಲಿ ಏನಾಗುತ್ತಿದೆ? ಉದ್ಯೋಗಸ್ಥ ಮಹಿಳೆ ಸುರಕ್ಷಿತವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿದೆಯೇ? ಸಾಧ್ಯವಾಗದಿದ್ದರೆ ಅದಕ್ಕಿರುವ ಅಡ್ಡಿಗಳೇನು? ಪರಿಹಾರೋಪಾಯಗಳೇನು; ಇದು ಹೆಣ್ಣಿನ ಮನೋಬಲದ ಕೊರತೆಯೋ? ಸರ್ಕಾರದ ನೀತಿಯಲ್ಲಿ ತಪ್ಪಿದೆಯೋ? ಸಮಾಜ ಎನ್ನುವುದಾದರೆ ಅದನ್ನು ಪರಿಹರಿಸಲು ನಮ್ಮಲ್ಲಿರುವ ಅಜೆಂಡಾ ಯಾವುದು? ಇಂಥ ವಿಚಾರವನ್ನು ನಾಳಿನ ಮಹಿಳಾ ಚಳವಳಿ ಚರ್ಚೆಗೊಳಪಡಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ನಾಳಿನ ಮಹಿಳಾ ಚಳವಳಿ ವೃತ್ತಿನಿರತ ಮಹಿಳಾ ಉದ್ಯೋಗಿಗಳಿಗೆ ವೃತ್ತಿ ಸಾಮರ್ಥ್ಯಾಭಿವೃದ್ಧಿ ಕೌಶಲ ತರಬೇತಿಗೆ ಕೂಡ ಒತ್ತಾಯಿಸಬೇಕಾದ ಅಗತ್ಯವಿದೆ. ಈ ಸಾಮರ್ಥ್ಯದ ಕೊರತೆ ಯಾರಿಗಿದೆಯೋ ಅವರೆಲ್ಲರಿಗೂ ಸಿಗಬೇಕು ಇದರಲ್ಲಿ ಯಾವ ಲಿಂಗಭೇದವೂ ಇರಬಾರದು.

ಇದಲ್ಲದೆ ನಮ್ಮೆಲ್ಲ ಚಳವಳಿಗಳೂ ಗ್ರಾಮಮುಖಿಯಾಗಬೇಕು. ಇಂದಿಗೂ ಯಾವುದೇ ಹಳ್ಳಿಗೆ ಹೋದರೂ ರೈತ ಸಂಘಟನೆಯ ಬೋರ್ಡ್ ಕಾಣಿಸುತ್ತದೆ. ದಲಿತ ಸಂಘರ್ಷ ಸಮಿತಿಯ ಬೋರ್ಡ್ ಕಾಣಿಸುತ್ತದೆ. ಇಡೀ ಜಗತ್ತಿನಲ್ಲಿ ರೈತರಿಲ್ಲದ ಊರುಗಳಿರಬಹುದು. ದಲಿತರಿಲ್ಲದ ಊರುಗಳಿರಬಹುದು. ಆದರೆ

ಮಹಿಳೆಯರಿಲ್ಲದ ಯಾವ ಊರೂ ಇಲ್ಲ. ಆದರೆ ಮಹಿಳಾ ಸಂಘಟನೆಯ ಬೋರ್ಡುಗಳೇ ಇಲ್ಲವಲ್ಲ ಯಾಕೆ?

ಕರ್ನಾಟಕದಲ್ಲಿ ಬರುತ್ತಿರುವ ರಾಜ್ಯಮಟ್ಟದ ಕನ್ನಡ ದಿನ ಪತ್ರಿಕೆಗಳು ಎಷ್ಟಿವೆ? ಅಂದಾಜು ೧೦ ಎಂದಿಟ್ಟುಕೊಳ್ಳೋಣ. ಅವುಗಳಲ್ಲಿ ಮಹಿಳೆ ಸಂಪಾದಕಿಯಾಗಿ ಮಹಿಳೆಯರೇ ನಡೆಸುವ ಪತ್ರಿಕೆಗಳು ಎಷ್ಟಿವೆ? ನನ್ನ ಪ್ರಕಾರ ಒಂದೂ ಇಲ್ಲ. ಜನರಿಗೆ ವಿಷಯ ಮುಟ್ಟಿಸಿ, ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ದೊಡ್ಡ ಜಾಲವಾಗಿ ಕೆಲಸ ಮಾಡುವ ಮೀಡಿಯಾಗಳ ಒಡೆತನ ಹೆಣ್ಣಿಗಿಲ್ಲ. ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಳವಳಿ ರೂಪಿಸುತ್ತಿರುವ ಮಾನವಕುಲದ ಅರ್ಧದಷ್ಟಿರುವ ಬಹುದೊಡ್ಡ ಶಕ್ತಿಯಾಗಿರುವ ಮಹಿಳೆಗೆ, ಮಹಿಳಾ ಹೋರಾಟಗಾರರಿಗೆ ತಮ್ಮ ಮುಖವಾಣಿಯಾಗಿಯಾದರೂ ಒಂದು ದಿನಪತ್ರಿಕೆ ತರಲು ಸಾಧ್ಯವಾಗಿಲ್ಲ ಅಥವಾ ಸಾಧ್ಯವಾಗದ ಪರಿಸ್ಥಿತಿ ಇದೆಯಲ್ಲಾ ಯಾಕೆಂಬುದನ್ನು ಕೂಡ ಬಹಳ ಗಂಭೀರವಾಗಿ ಪರಿಶೀಲಿಸಬೇಕಾಗಿದೆ. ನಾಳಿನ ಮಹಿಳಾ ಚಳವಳಿ ಇಂಥ ದೊಂದು ಪ್ರಯತ್ನ ಮಾಡುವಲ್ಲಿ ಸಫಲವಾಗಬೇಕಾಗಿದೆ.

ಇವತ್ತಿನ ಮಹಿಳಾ ಚಳವಳಿಯ ಆದ್ಯ ಕೆಲಸವೆಂದರೆ ಮಹಿಳೆಯರ ಸ್ಥಿತಿಗತಿಗಳನ್ನು ಗುರುತಿಸುವುದು. ಎಲ್ಲಿ ಬಡತನ ಹೆಚ್ಚಾಗಿರುತ್ತದೆಯೋ ಅಲ್ಲಿ ಶೋಷಣೆಯೂ ಅಧಿಕ ವಾಗಿರುತ್ತದೆ. ಮಹಿಳೆ ನಿರಂತರವಾಗಿ ಮಾನಸಿಕವಾಗಿ, ದೈಹಿಕವಾಗಿ, ಲೈಂಗಿಕವಾಗಿ ದೌರ್ಜನ್ಯಕ್ಕೊಳಗಾಗುತಿದ್ದಾಳೆ, ಅಪೌಷ್ಠಿಕತೆಯಿಂದ ನರಳುತ್ತಿದ್ದಾಳೆ. ಅನೇಕ ವಲಯಗಳಲ್ಲಿ ಹೆಣ್ಣು ಬಳಸಿ ಬೀಸಾಡುವ ವಸ್ತುವಾಗುತ್ತಿದ್ದಾಳೆ. ಯಾವ ಕಾರ್ಪೊರೇಟ್ ಸಂಸ್ಥೆಗಳಿಗೂ ಹೆಣ್ಣನ್ನು ಸಬಲೀಕರಣಗೊಳಿಸುವ ಉದ್ದೇಶವಿಲ್ಲ, ಆಕೆಯನ್ನು ಬಳಸಿಕೊಂಡು ಉತ್ಪಾದನೆಗೆ ತೊಡಗಿಸಿಕೊಳ್ಳುವುದು ಹೇಗೆಂದು ಯೋಜನೆ ರೂಪಿಸುತ್ತಿವೆ. ಬಂಡವಾಳಶಾಹಿಗಳಿಗೆ ತಾವು ಸಬಲರಾಗುವುದಷ್ಟೇ ಮುಖ್ಯವಾಗಿರುತ್ತದೆ.

ಮಹಿಳಾ ಚಳವಳಿ ಈವರೆವಿಗೂ ಏಕೆ ದೊಡ್ಡ ದನಿಯಾಗಿ ನಿಂತು ಮಹಿಳೆಯರನ್ನು ಬೆಂಬಲಿಸಲಿಲ್ಲ ಎಂದರೆ ಮಹಿಳಾ ಸಮಸ್ಯೆಗಳು ಏಕರೂಪವಾಗಿಲ್ಲ. ಬಾಲ್ಯವಿವಾಹ, ವಿಧವಾ ವಿವಾಹ, ದೇವದಾಸಿ, ಮಾನವಸಾಗಾಟ, ವರದಕ್ಷಿಣೆ ಕಿರುಕುಳ, ಬಡತನ, ನಿರುದ್ಯೋಗ, ಅನಾರೋಗ್ಯ, ವಿಚ್ಛೇದನ, ಆಸಿಡ್‌ದಾಳಿ ಹೀಗೆ ಹಲವು ಹತ್ತು ಬಗೆಯ ಸಮಸ್ಯೆಗಳಿಗೆ ಹೆಣ್ಣು ನಿತ್ಯ ಬಲಿಯಾಗುತಿದ್ದಾಳೆ. ಈ ಎಲ್ಲ ಸಮಸ್ಯೆಗಳನ್ನು ಮಹಿಳಾ ಚಳವಳಿ ಗುರುತಿಸಿಕೊಂಡು ತನ್ನ ತೆಕ್ಕೆಗೆ ತೆಗೆದುಕೊಳ್ಳಬೇಕಿತ್ತು. ಅದು ಈವರೆವಿಗೂ ಸಾಧ್ಯವಾಗಲಿಲ್ಲ. ಇದರ ಪರಿಣಾಮದಿಂದ ಸಣ್ಣ-ಸಣ್ಣ ಪ್ರತಿಭಟನೆಗಳು ಮಹಿಳಾ ಸಮಸ್ಯೆಗಳ ಸಣ್ಣ-ಸಣ್ಣ ಘಟಕಗಳನ್ನು ಪ್ರತಿನಿಧಿಸಿದವು. ಇದರಿಂದ ನಿರೀಕ್ಷಿತ ಬದಲಾವಣೆ ಸಾಧ್ಯವಾಗದೆ ಹೋಯಿತು.

ಅತ್ಯಾಚಾರಕ್ಕೊಳಗಾದ ಮಹಿಳೆಯ ಸಮಸ್ಯೆಯನ್ನು ನಾವು ಗ್ರಹಿಸುತ್ತಿರುವುದು ಅದು ಆಕೆಗೆ ಮಾಡಿದ ಅನ್ಯಾಯ ಎಂದು ಮಾತ್ರ, ಒಟ್ಟು ನೋಟದಲ್ಲಿ ಅದು ಇಡೀ ಹೆಣ್ಣು ಕುಲಕ್ಕಾದ ಅನ್ಯಾಯವೆಂದು ಹೆಣ್ಣಾಗಲಿ-ಗಂಡಾಗಲಿ ಪರಿಭಾವಿಸುತ್ತಿಲ್ಲ. ಅದಕ್ಕೆ ಸಮಾಜ ಸಿದ್ಧವಾಗಿಲ್ಲ ಮತ್ತು ಬದ್ಧವಾಗಿಲ್ಲ.

ದೆಹಲಿಯಲ್ಲಿ ನಡೆದ ನಿರ್ಭಯಾ ಪ್ರಕರಣ ಬಹಳ ಮುಖ್ಯ ಆಗಿರುವುದಾದರೆ ನಮ್ಮ ಊರಿನಲ್ಲಿ ಒಬ್ಬ ದಮನಿತ ಮಹಿಳೆಯ ಮೇಲೆ ನಡೆದ ಅತ್ಯಾಚಾರ ಯಾಕೆ ಮುಖ್ಯ ಅನಿಸುತ್ತಿಲ್ಲ? ನಮ್ಮ ಮಾಧ್ಯಮಗಳ ಕಣ್ಣಿಗೆ ಕಾಣುತ್ತಿಲ್ಲವೇಕೆ? ಏಕೆಂದರೆ ಅವುಗಳನ್ನು ನಮ್ಮ ಮೇಲಾದ ಅತ್ಯಾಚಾರವೆಂದು ಭಾವಿಸುತ್ತಿಲ್ಲ, ಸ್ತ್ರೀ-ಪುರುಷರಿಬ್ಬರೂ ಒಂದಾಗಿ ಪ್ರತಿಭಟಿಸುತ್ತಿಲ್ಲ, ಹಾಗಾದರೆ ನಮ್ಮ ಮಹಿಳಾ ಚಳವಳಿ ಈ ದೇಶದ ಕಟ್ಟಕಡೆಯ ಮಹಿಳೆಯನ್ನು ಮುಟ್ಟಿದೆಯೇ ಅಥವಾ ಮುಟ್ಟಿಲ್ಲವೇ? ದುಡಿಯುವ ವರ್ಗದ ಮಹಿಳೆಗೆ ನಮ್ಮ ಚಳವಳಿ ಯಾವ ಬಗೆಯ ಭರವಸೆಯನ್ನು ಕೊಟ್ಟಿದೆ. ಇಂತಲ್ಲಿ ಮಹಿಳಾ ಚಳವಳಿ ಇದೆಯಾ? ಇದೆ ಎನ್ನುವುದಾದರೆ ಅದು ಯಾವ ಮಹಿಳೆಯರ ಪರವಾಗಿದೆ? ಈ ಎಲ್ಲ ಪ್ರಶ್ನೆಗಳನ್ನು ಮಹಿಳಾವಾದಿಗಳಾದ ನಾವು ಕೇಳಿಕೊಂಡು ಉತ್ತರ ಕಂಡುಕೊಳ್ಳಬೇಕಾಗಿದೆ.

ಮಹಿಳಾ ಚಳವಳಿ ಭಾರತೀಯ ಸಮಾಜದ ಒಳಗಡೆ ಬದಲಾವಣೆ ತರಲು ಪ್ರಯತ್ನ ಮಾಡುವುದಾದರೆ ಅದು ನನ್ನ ಹಳ್ಳಿಯ ಹೆಣ್ಣು ಮಕ್ಕಳನ್ನು ಒಳಗೊಳ್ಳಬೇಕು. ಅಸಂಘಟಿತ ಮಹಿಳೆಯರು ಸಂಘಟಿತರಾಗಬೇಕು. ಅಂದರೆ ಬೇರು ಮಟ್ಟದಲ್ಲಿ ಚಳವಳಿ ಬೆಳೆಸದಿದ್ದರೆ ಕೇವಲ ತೋರಿಕೆಯ ನೆಲೆಯಲ್ಲಿ ಮಹಿಳಾ ಚಳವಳಿ ಕಾಣಿಸುತ್ತದೆ.

■

'ಸಂಕ್ರಮಣ' ಮುಖ್ಯವಾಗಿ ಒಂದು ಎಡಪಂಥೀಯ ವಿಚಾರಧಾರೆಯ ಪತ್ರಿಕೆ. ಮೂಲಭೂತವಾದವನ್ನು ವಿರೋಧಿಸುತ್ತ ಪ್ರಜಾಪ್ರಭುತ್ವದ ಮೌಲ್ಯಗಳಿಗಾಗಿ ಹೋರಾಡಿದ ಪತ್ರಿಕೆ. ತನ್ನ ನಾಡ ಜನರಲ್ಲಿ ವಿಚಾರವಾದ, ಲೋಹಿಯಾವಾದ, ಗಾಂಧಿವಾದಗಳನ್ನು ಬೆಳೆಸಿದ ಪತ್ರಿಕೆ. ಜಾತ್ಯತೀತ ರಾಷ್ಟ್ರ ಕಟ್ಟುವಲ್ಲಿ ಈ ಪತ್ರಿಕೆ ಪ್ರಮುಖ ಪಾತ್ರವಹಿಸಿದೆ.

– ಎಸ್. ಆರ್. ಹಿರೇಮಠ

ಕರ್ನಾಟಕದ ರೈತ ಚಳುವಳಿ: ತಾಳಿಕೆಯ ಮಾರ್ಗ

● ಹಿ. ಶಿ. ರಾಮಚಂದ್ರೇಗೌಡ

'ಚಳುವಳಿ' ಒಂದು ಶಾಶ್ವತ ಜೀವನ ವಿಧಾನವಲ್ಲ. ನಿರೀಕ್ಷಿತ ಜೀವನ ವಿಧಾನವನ್ನು ಆಗು ಮಾಡಿಕೊಳ್ಳಲು ನಡೆಯುವ ಒಂದು ಸಾಮಾಜಿಕ ಪ್ರಕ್ರಿಯೆ. ಒಂದು ಚಳುವಳಿ ಕೊನೆ ಇಲ್ಲದೆ ನಡೆಯುತ್ತಿದೆ ಎಂದರೆ ಅದೊಂದು ರೇಜಿಗೆ. ಅದರ ಅರ್ಥ ಆ ಚಳುವಳಿಗೆ ಕಾರಣ ಭದ್ರವಿಲ್ಲ. ಅಗತ್ಯ ಕೊರತೆಯ ಕಾರಣಕ್ಕೆ, ಆ ಕೊರತೆಯನ್ನು ತುಂಬಿಕೊಳ್ಳಲು ಚಳುವಳಿ ನಡೆಯುತ್ತದೆ. 'ಕೊರತೆ ಮತ್ತು ಕೊರತೆಯನ್ನು ಪೂರೈಸಿಕೊಳ್ಳುವುದು' ಮಾನವ ಜೀವನದ ಸಾಂಸ್ಕೃತಿಕ – ಚಾರಿತ್ರಿಕ ಕಥನ.

ಚಳುವಳಿಯೊಂದು ಸೃಜನಶೀಲತೆ. ವ್ಯಕ್ತಿಯೊ, ಸಮಾಜವೋ ಫ್ರೆಶ್ ಆಗಲು ಸಮಕಾಲೀನವಾಗಲು ಇಂಥ ಚಲನಶೀಲತೆಗೆ ತೊಡಗಿಸಿಕೊಳ್ಳುತ್ತೇವೆ. ಬೆಳೆಯುವ ಸಮಾಜಕ್ಕೆ ಚಳುವಳಿ ಹೊಸ ಜೀವಧಾತುವನ್ನು ತುಂಬುವ ಪ್ರಕ್ರಿಯೆ. ಬದುಕುವ ಅವಶ್ಯಕತೆಗಾಗಿ ಹೋರಾಡುವುದು ಚಳುವಳಿ, ಹೆಚ್ಚಿನದನ್ನು (ಎಕ್ಸಟ್ರಾ) ಪಡೆಯಲು ನಡೆಸುವ ಪ್ರಯತ್ನ ಚಳುವಳಿ ಎಂದು ಕರೆದುಕೊಂಡರೂ ಅದು ಬಿಸಿನೆಸ್. ಮೇಲು ಜಾತಿಯವರು ಮೀಸಲಾತಿಗಾಗಿ ಹೋರಾಟ ಶುರು ಮಾಡಿರುವುದು ಅಂಥ ಬಿಸಿನೆಸ್. ತಳ ವರ್ಗಗಳು ದೇಶದಲ್ಲಿ ಎಲ್ಲರಂತೆ ನೆಲೆ ನಿಲ್ಲಲು ಮಾಡುತ್ತಿರುವ ಚಳುವಳಿ ಸೋಪಜ್ಞವಾದುದು, ಉದ್ಧಾರ ಸ್ವರೂಪವಾದುದು.

ನೆಲೆ–ನೆಲೆ ನಿಲ್ಲು, ಕೊರತೆ–ಕೊರತೆಯನ್ನು ಪೂರೈಸಿಕೊ ಎನ್ನುವುದು ಜೀವನದ ಮೊದಲ ಅಸ್ತಿತ್ವವಾದ. ಇದು ಮನುಷ್ಯನ ಮನದೊಳಗಣ ಹುಟ್ಟುಗುಣ. ಹುಟ್ಟು ಮತ್ತು ಬದುಕನ್ನು ಸಮರ್ಥಿಸಿಕೊಳ್ಳಲು ಇರುವ ಮೂಲ ಮಾರ್ಗ. ಅದನ್ನು ಕಳೆದುಕೊಂಡಿರುವುದಾದರೆ ವ್ಯಕ್ತಿ ಅಥವ ಸಮಾಜ ಸತ್ತು ಹೋದಂತೆ.

ರೈತ ಸತ್ತು ಹೋಗುತ್ತಿದ್ದಾನಲ್ಲ! ಎಲ್ಲಾದರು ಉಂಟೆ, ರೈತ ಸಾಯುವುದು? ಏನಾಗ್ತಾ ಇದೆ ಅಲ್ಲಿ, ಭಾರತದಲ್ಲಿ, ಇಲ್ಲಿ ಕರ್ನಾಟಕದಲ್ಲಿ ಮತ್ತೂ ಬೇರೆ ಬೇರೆ ದೇಶಗಳಲ್ಲಿ. ಇದೊಂದು ವರಲ್ಡ್ ಫಿನಾಮಿನಾವೆ, ರೈತ ವೃತ್ತಿಯೆ ಕಳೆದು ಹೋಗುತ್ತಿದೆಯೆ ಅಥವ ಬೇರೊಬ್ಬ ಸೂರ್ಯ ಹುಟ್ಟುತ್ತಿದ್ದಾನೆಯೆ? ಇದು ಬೇರಿನ ಬುಡದಿಂದ ಯೋಚಿಸಬೇಕಾಗಿರುವ ಗಂಭೀರ ವಿಷಯ. ಭಾರತದ ಸಂದರ್ಭದಲ್ಲೆ ಆಗಲಿ, ಕರ್ನಾಟಕದ ಸಂದರ್ಭದಲ್ಲೇ ಆಗಲಿ ರೈತನನ್ನು ಕೇವಲ ಒಕ್ಕಲಿಗ, ಲಿಂಗಾಯತ, ಕುರುಬ... ಎಂದು ಭಿನ್ನ ಮಾಡಿ ಹೇಳಲಾಗದು. ಇದನ್ನೊಂದು ಅಖಂಡ ಉತ್ಪಾದನಾ ಪದ್ಧತಿ ಮತ್ತು ಜೀವನ ವಿಧಾನ ಎಂದೆ

ಗುರುತಿಸಬೇಕು. ಕೃಷಿ, ಜಗತ್ತಿನ ಮೊದಲ ಕ್ರಾಂತಿಕಾರಕ ಅನ್ವೇಷಣೆ. ಎಲ್ಲ ವೃತ್ತಿಗಳನ್ನು ಒಳಗೊಂಡ, ನಿರ್ವಚಿಸಿದ – ಬಹುಜನರ ಜೀವನ ನಿರ್ವಹಣೆಯಾಗಿತ್ತು.

ರೈತನನ್ನು ಇಂಥ ಟೊಟಾಲಿಟಿಯಲ್ಲಿ ಗುರುತಿಸದ ಹೋದರೆ ನಾವು ಜೀವನ ಧಾರೆಯ ಅಸ್ತಿತ್ವವನ್ನು ಸರಿಯಾಗಿ ಗುರುತಿಸಿದಂತೆ ಆಗುವುದಿಲ್ಲ. ಕೃಷಿ, ಉತ್ಪಾದನಾ ಸಾಮರ್ಥ್ಯ ಮತ್ತು ನಿರ್ವಹಣೆಯ ಬಾಬ್ತು ಆಗಿತ್ತೆ ಹೊರತು ಜಾತಿ ಆಗಿರಲಿಲ್ಲ. ಕುಶಲ ಕರ್ಮಿಗಳು ಕೃಷಿಕನಿಗಿಂತ ಹೆಚ್ಚಿನ ಸಾಮರ್ಥ್ಯ ಹಾಗೂ ಗೌರವಾದರವುಳ್ಳ ಜನಪದ ವಿಜ್ಞಾನಿಗಳಾಗಿದ್ದರು. ಕೃಷಿಯಲ್ಲಿ ಇವರಿಗೆ ಎರಡನೆ ದರ್ಜೆ ಸ್ಥಾನ ಸೂಚಿತವಾದುದು ಜಾತಿ ಎಂಬ ಶನಿ ಆರೋಪಿತ ವಾದ. ಕೃಷಿ ಮ್ಯಾನ್ಯುಯಲ್ ಲೇಬರ್ ಆಗಿದ್ದರೆ, ಕುಶಲಕರ್ಮ ಮೆಂಟಲ್ ಲೇಬರ್ ಆಗಿತ್ತು. ಆಗ ಅಲ್ಲಿ ಒಟ್ಟು ದೇಹ ಕ್ರಿಯಾಶೀಲವಾಗಿತ್ತು. ಈ ಹೊತ್ತಿನಂತೆ ಮನಸ್ಸು, ದೇಹವನ್ನು ಶೋಷಿಸುವ ಘಾತುಕ ಮಿತ್ರನಾಗಿರಲಿಲ್ಲ. ಅದು ಆದದ್ದು ಮನಸ್ಸು ತನ್ನನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡಾಗ. ಜಾತಿಯ ಕಸುಬೆ ಅದಲ್ಲವೆ?

ಮನಸ್ಸು ದೇಹವನ್ನು ವಂಚಿಸಲು ತೊಡಗಿದಂದಿನಿಂದ ಕೃಷಿ ಕ್ಷೇತ್ರದ ಪತನ ಶುರುವಾಯಿತು. ಹೊರದೂಡಲ್ಪಟ್ಟ ದೇಹ ಶುದ್ಧ–ಬದ್ಧ ಮಾದರಿಯಾಗಿಬಿಟ್ಟಿತು. ಆಗ ಅದು ಆಸ್ತಿಯಾಯಿತು, ಅಹಂಕಾರವಾಯಿತು, ಚಲನಶೀಲ ಕುಶಲತೆಯ ಜೊತೆಗೆ ಗುರುತಿಸಿಕೊಳ್ಳದೆ ಒಂದು ಬಗೆಯ ಸ್ಥಳೀಯ ಪ್ರಭುತ್ವವಾಯಿತು. ಬದುಕು ಫಿಕ್ಸ್ ಆಗುವ, ಅದೇ ಮೌಲ್ಯವಾಗುವ ದುರಂತ ಇದು. ಯಜಮಾನಿಕೆ, ಪ್ರಭುತ್ವ, ಆಡಳಿತ ಎನ್ನುವವೆಲ್ಲ ಇಂತ ಫಲಶೃತಿಗಳು. ಹೀಗೆ ಜೀವನ ವಿಧಾನವೊಂದಕ್ಕೆ, ಅದರಲ್ಲೂ ದೇಹ ಪ್ರಧಾನವಾದ ಫಿಕ್ಸ್ ಆಗುವ ದುರಂತ ಇದೆಯಲ್ಲ ಇದನ್ನು ಸಾಮಾಜಿಕ ವಿಗತಿವಾದ ಎಂದು ಹೇಳಬಹುದು. ವಿಗತಿಯ ಕಡೆಗೆ ಚಲಿಸಿದವನು ಸಾಯುತ್ತಾನೆ; ಪ್ರಗತಿಯ ಕಡೆಗೆ ಚಲಿಸಿದವನು ಬದುಕುತ್ತಾನೆ. ಈಗ ನಮ್ಮ ಎದುರು ಸಾಯುತ್ತಿರುವ ರೈತ ಮತ್ತು ನಮ್ಮ ಮುಂದೆಯೇ ತನ್ನ ಗ್ರಾಮ ನೆಲೆಯನ್ನು ಖಾಲಿ ಮಾಡುತ್ತಿರುವ ಕುಶಲಕರ್ಮಿಯ ಜೀವನಗಾಥೆಯಿಂದ ಪ್ರಸ್ತುತ ಸನ್ನಿವೇಶವನ್ನು ಅರಿಯಬಹುದಾಗಿದೆ.

ಬದುಕುವ ದಿಕ್ಕು ಕಾಣುವುದಿಲ್ಲವೆಂದರೆ ಏನರ್ಥ? ಅಂಡಮಾನ್ ದ್ವೀಪದ 'ಜರವಾ' ಬುಡಕಟ್ಟು ಜನರನ್ನು ನೋಡಿ. ಪಾಪ ಎನಿಸುತ್ತದೆಯೇ? ಸ್ವಲ್ಪ ಕಾಲ ಮಾತ್ರ, ಅವರ ಗತಿಯನ್ನು ಅವರೆ ನಿರ್ಮಿಸಿ ಕೇಳುತ್ತಿದ್ದಾರೆ ಎನಿಸುವುದಿಲ್ಲವೆ! ಈ ಹೊತ್ತಿನ ವಿಜಯ ಮಲ್ಯನ ಪವಾಡವನ್ನೇ ನೋಡಿ. ಭಯಂಕರ ಸಾಲ ಮಾಡಿ ದೇಶವನ್ನೇ ಬಿಟ್ಟಿದ್ದಾನೆ. ಕೇಂದ್ರ ಸರ್ಕಾರ ಕೂಡ ಪರೋಕ್ಷವಾಗಿ ಅವನಿಗೆ ಸಹಾಯ ಮಾಡಿದೆ. ಇವನ ರಾಕ್ಷಸ ಸಂತಾನ ಭಾರತದಲ್ಲಿ ಬೇಕಾದಷ್ಟಿದೆ. ಇಂಡಸ್ಟ್ರಿ ಲಾಭದಾಯಕವಾಗಿದ್ದರೆ ಆತ ದಣಿ. ಅದು ಸಿಕ್

ಇಂಡಸ್ಟ್ರಿ ಆದರೆ ಆಪದ್ಧನ ಸಂಗ್ರಹ. ಅವರು ಬದುಕುವ ಅವಕಾಶವನ್ನೆಂದು ಕಳೆದುಕೊಂಡಿಲ್ಲ. ರೈತ ಅವನು ಎಲ್ಲಿಗೆ ಓಡಿ ಹೋಗುತ್ತಾನೆ. ಅವನು ಹಾಕಿದ ಬಂಡವಾಳ ಭುಮಿಯ ಮೇಲೇ ಇದೆ. ಅದು ಹೂಡಿಕೆ ಬಂಡವಾಳವಾಗಿ ಸತ್ತಿದೆ, ಉತ್ಪಾದನಾ ಬಂಡವಾಳವಾಗದೆ ಸೋತಿದೆ. ಈಗವನಿಗೆ ಬದುಕುವ ಬಂಡವಾಳವೂ ಇಲ್ಲವಾಗಿದೆ. ಇದಕ್ಕೆ ಕಾರಣವನ್ನು ಹುಡುಕುವುದೇ ಅವನ ಸೋಲು – ಗೆಲುವಿನ ದಾರಿ.

ನಮ್ಮ ತಿಳುವಳಿಕೆಯ ದುರಂತವೆಂದರೆ ನಾವಿನ್ನೂ ಸ್ಥಳೀಯ ಮಿತಿಯಲ್ಲೆ ಯೋಚಿಸುತ್ತಿದ್ದೇನೆ. ನಮ್ಮ ಮುಂದಿರುವುದು ನಮ್ಮದೇ ದೇಶ ಅಲ್ಲ. ಇಲ್ಲಿನ ಆರ್ಥಿಕತೆ, ರಾಜಕೀಯ ಇಲ್ಲಿಯದಾಗಿಲ್ಲ. ನಮ್ಮದೇ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಂದರ್ಭದಿಂದ ಭಾರತವನ್ನು ಅರ್ಥೈಸಲಾಗುವುದಿಲ್ಲ. ಈಗ ಭಾರತ ಜಾಗತಿಕವಾಗಿದೆ. ನಮಗೆ ತಿಳಿಯಬೇಕಿದೆ ಈ ಕರ್ನಾಟಕ, ಗಂಗರ, ಚಾಲುಕ್ಯರ, ಕದಂಬರ, ಹೊಯ್ಸಳರ ಕರ್ನಾಟಕ ಅಲ್ಲ, ಭಾರತ ನೆಹರೂ ಅಥವ ಇಂದಿರಾ ಗಾಂಧಿ ಕಾಲದ ಭಾರತ ಅಲ್ಲ. ಜಾಗತಿಕ ಮಟ್ಟದಲ್ಲಿಟ್ಟು ಇದನ್ನು ಅರ್ಥೈಸಿಕೊಳ್ಳಬೇಕಿದೆ. ರೈತನನ್ನು ಪ್ರತ್ಯೇಕವಾಗಿ ಕರ್ನಾಟಕ ಸರ್ಕಾರವಾಗಲಿ ಭಾರತ ಸರ್ಕಾರವಾಗಲಿ ರಕ್ಷಿಸುವ ಸ್ಥಿತಿಯಲ್ಲಿ ಇಲ್ಲ. ಅವುಗಳಿಗೆ ಅವುಗಳನ್ನು ರಕ್ಷಿಸಿಕೊಳ್ಳುವ ಪರಿಸ್ಥಿತಿ ಇಲ್ಲ. ಜಾಗತಿಕ ಉದ್ಯಮ ಪತಿಗಳಿಗೆ ದಿಡ್ಡಿ ಬಾಗಿಲು ತೆರೆದಿರುವುದರಿಂದ ಈ ದೇಶದಲ್ಲಿ ಯಾರ್‍ಯಾರು ಭಾರತದ ರಾಜಕೀಯವೂ ಸೇರಿಕೊಂಡಂತೆ – ಎಲ್ಲೆಲ್ಲಿ ಇರಬೇಕು ಎಂಬುದನ್ನು ಆ ಪತಿಗಳು ನಿರ್ಣಯಿಸುತ್ತಾರೆ. ರಾಜಕಾರಣಿಗಳು ಪ್ರಜೆಗಳು ಮತ್ತು ಉದ್ಯಮ ಪ್ರಭುಗಳ ಮಧ್ಯೆ ಇರುವ ಜೋಕರ್‌ಗಳು ಮಾತ್ರ. ಅಂದರೆ ನಮ್ಮ ಅಭಿವೃದ್ಧಿ ನಮ್ಮ ತೀರ್ಮಾನವಲ್ಲ. ನಾವು ನೆಹರು ಕಾಲದಲ್ಲಿ ಇಟ್ಟುಕೊಂಡಿದ್ದ ಪಂಚವಾರ್ಷಿಕ ಯೋಜನೆಗಳಾಗಲಿ, ಮಿಶ್ರ ಆರ್ಥಿಕ – ಕೈಗಾರಿಕಾ ಪದ್ಧತಿಗಳಾಗಲಿ ನಮ್ಮ ಹತ್ತಿರ ಇಲ್ಲ. ಯಾವುದಕ್ಕೂ ನಮ್ಮ ಪುರಾಣದಲ್ಲಿ ಭಗವಂತನನ್ನು ನಂಬಿಕೊಂಡಿದ್ದಂತೆ ಈ ಹೊತ್ತು ನಾವು ದೂರದಲ್ಲೆಲ್ಲಿಯೋ ಇರುವ ಉದ್ಯಮ ಪತಿಯನ್ನೇ ನಂಬಿಕೊಳ್ಳಬೇಕಾಗಿದೆ. ಇದು ಹೊಸ ಪುರಾಣದ ಕಾಲ; ಪ್ರತಿಯೊಬ್ಬನಿಗೂ ಬೇರೆ ಬೇರೆ ಪ್ಲೇಸ್‌ಮೆಂಟ್.

ನಿಡುಗಾಲ ರೈತ ಚಳುವಳಿಯಲ್ಲಿ ಇರುವ ಹಳಬ ರೈತನೊಬ್ಬ ಹೇಳುತ್ತಾನೆ :

ಭೂತಾಯಿ ಮಣ್ಣು ಕೊಟ್ಟವಳೆ
ಆಕಾಶಸ್ವಾಮಿ ಮಳೆ ಕೊಟ್ಟವನೆ
ಸರ್ಕಾರವೇನು ಕೊಡುತ್ತದೆ –

ನೀರು, ವಿದ್ಯುತ್, ಮಾರುಕಟ್ಟೆ – ಕೊಟ್ಟರೆ ಸಾಕು, ನಮಗೆ ಯಾರ ಸಹವಾಸವೂ ಬೇಡ. ಪಾಪ! ಈ ರೈತ ಭಾರಿ ತಪ್ಪು ತಿಳಿದುಕೊಂಡಿದ್ದಾನೆ;

ಭೂಮಿ ನನ್ನ ಸುಪರ್ದಿನಲ್ಲಿ ಇದೆ ಅಂತ. ಭಾರತ ಮೂಲದ ಮೂಲ ಅಸ್ತಿತ್ವ ಘಟಕಗಳನ್ನು ಛಿದ್ರಮಾಡದೆ, ಅಥವ ರೀಪ್ಲೇಸ್ ಮಾಡದೆ 'ಉದ್ಯಮ ಸ್ವಾಮಿ' ಭಾರತದಲ್ಲಿ ಬೃಹದಾಕಾರದಲ್ಲಿ ಬೆಳೆಯಲು ಸಾಧ್ಯವೇ ಇಲ್ಲ. ಅವನೇ ಈ ಹೊತ್ತಿನ ಹಿಂದೂ ಧರ್ಮದ ಸಂಭವಾಮಿ... ಅವನು ನಾಲ್ಕು ವರ್ಣ ವ್ಯವಸ್ಥೆಯನ್ನು ಮಾಡಿ ಸುಖವಾಗಿದ್ದನು. ಈ ಹೊತ್ತಿನವನು ಭಾರತವನ್ನು ಜೀರ್ಣ ವ್ಯವಸ್ಥೆಗೆ ತಂದು ವಾತಾಪಿ–ಇಲವಲನಾಗುತ್ತಾನೆ! ಭೂರಿ ಭೋಜನಕ್ಕಾಗಿ ಸಿದ್ಧವಾಗಿರಿ.

ಈಗ ಭೂಮಿ ರೈತನ ಕೈಯಲ್ಲಿ ಇಲ್ಲ. ಭಾರತದ ಭೂಸ್ವಾಧೀನ ಕಾಯ್ದೆ ಅವನನ್ನು ಕಾಡುತ್ತಿರುವುದು ಸ್ಪಷ್ಟವಾಗಿಯೆ ಕಾಣುತ್ತಿದೆ. ಬೆಂಗಳೂರಿನಲ್ಲಿ ಒಂದು ರೂಪಾಯಿಗೂ ಟೊಮೊಟೊ ಕೊಂಡುಕೊಳ್ಳುತ್ತಿದ್ದಾಗ ಬೆಳಗಾವಿಯಲ್ಲಿ ಒಂದು ಕೆ.ಜಿ. ಟೊಮೊಟೊ ಬೆಲೆ ಕನಿಷ್ಠ ಹದಿನೈದು ರೂಪಾಯಿ ಇರುತ್ತದೆ. ಬೆಂಗಳೂರಿನ ಗ್ರಾಹಕನಿಗೆ ಇಂಥ ಸಂಧರ್ಭದಲ್ಲೂ ಐದು ರೂಪಾಯಿಗೆ ಕೆ.ಜಿ. ಟೊಮೊಟೊ ಸಿಗುವುದಿಲ್ಲ. ಇದರ ಅರ್ಥ ಮಾರುಕಟ್ಟೆ ರೈತನ ಹತ್ತಿರ ಇಲ್ಲ ಎಂದು. ಕುತೂಹಲದ ಸಂಗತಿ ಎಂದರೆ ಅವನ ಬೆಳೆಯನ್ನು ಕೊಳ್ಳುವ ಮೊದಲಿಗರು ಹಳ್ಳಿಯನ್ನು ತೊರೆದು ನಗರ ಸೇರಿರುವ ಭೂರಹಿತ ಕಾರ್ಮಿಕರು. ಸಗಟು ವ್ಯಾಪರಿಗಳು ಇವರನ್ನೇ ಅವಲಂಬಿಸಿ ಖರೀದಿ ಮಾಡುತ್ತಾರೆ. ಕೇಂದ್ರ ಮಾರುಕಟ್ಟೆಗೆ ಹೋಗಿ ತಮ್ಮ ಸರಕನ್ನು ಮಾರಾಟ ಮಾಡುವ ಜಾಣತನ ರೈತರಲ್ಲಿ ಇಲ್ಲ. ರೈತ ಸಮುದಾಯದಿಂದ ಬಂದ ಸಗಟು ವ್ಯಾಪಾರಿಗಳು ಕಡಿಮೆ ಇರುವ ಕೆಲವರು ಈಗಾಗಲೇ ವ್ಯವಸ್ಥಿತವಾಗಿ ಮಾರುಕಟ್ಟೆಯನ್ನು ವಶಪಡಿಸಿಕೊಂಡಿರುವ ದೊಡ್ಡ ವ್ಯಾಪಾರಿಗಳ ಮರ್ಜಿಯಲ್ಲಿ ವ್ಯಾಪಾರ ಮಾಡುವವರಾಗಿದ್ದಾರೆ. ರೈತರಿಗೆ ಅದೊಂದು ಚಕ್ರವ್ಯೂಹ.

ಹೌದು, ಒಂದು ಕಾಲಕ್ಕೆ ಭೂಮಿ ಬಂಡವಾಳವಾಗಿತ್ತು. ಅದು ರಾಜಕೀಯ ಬಂಡವಾಳ, ಜಾತಿ ಬಂಡವಾಳ ಮತ್ತು ಬಹುಸಂಖ್ಯಾತ ಪ್ರಬಲರ ಬಂಡವಾಳವಾಗಿತ್ತು. ಸಾಹುಕಾರರು ಇದ್ದುದು ಹಳ್ಳಿಗಳಲ್ಲಿ; ಲಕ್ಷಾಧಿಪತಿ ಎಂಬುವವನು ನಗರವಾಸಿ. ಈಗ ಕೋಟ್ಯಾಧಿಪತಿ ಎನ್ನುವವನು ವಿಶ್ವವಾಸಿ. ಈಗ ಭೂಮಿ ಬಂಡವಾಳವಾಗಿರುವುದು ರಿಯಲ್ ಎಸ್ಟೇಟ್ ದಂಧೆಯಲ್ಲಿ. ಅದು ರೈತರಿಗೆ ಉತ್ಪಾದನಾ ಬಂಡವಾಳವಲ್ಲ; ಅವನನ್ನು ಭೂಮಿಯಿಂದ ಎತ್ತಂಗಡಿ ಮಾಡಿ ಚಿಲ್ಲರೆ ಸೇವಾ ಕ್ಷೇತ್ರಕ್ಕೆ ದಬ್ಬುವ ನಾಗರೀಕರ ವಹಿವಾಟು, ಉತ್ಪಾದನೆಗಾಗಿ ರೈತ ಬಂಡವಾಳ ಹೂಡುವ ಪರಿಸ್ಥಿತಿಯೆ ಇಲ್ಲ.

ಉಳುಮೆ ಸ್ವಂತದ್ದು, ಗೊಬ್ಬರ ಸ್ವಂತದ್ದು, ಬೀಜ ಸ್ವಂತದ್ದು, ಕ್ರಿಮಿನಾಶಕ ಸ್ವಂತದ್ದು, ಹತ್ತು ಎಕರೆಗೆ ಮೇಲ್ಪಟ್ಟ ರೈತನಿಗೆ ಮಾತ್ರ ಕೃಷಿ ಕಾರ್ಮಿಕರ ಅವಶ್ಯಕತೆಯಿತ್ತು. ಇತರೆಲ್ಲ ರೈತ ಕುಟುಂಬಗಳಲ್ಲಿ ಭೂಮಾಲಿಕ ಮತ್ತು

ಕೂಲಿಕಾರರಲ್ಲಿ ಪರಸ್ಪರ ಕೆಲಸ ವಿನಿಮಯ ಮಾಡಿಕೊಳ್ಳುವ ವ್ಯವಸ್ಥೆಯಾಗಿತ್ತು. ಹಣದ ವಹಿವಾಟು ಕಡಿಮೆ ಇತ್ತು; ಆ ಸ್ಥಾನವನ್ನು ವಸ್ತುಗಳು ಮತ್ತು ದುಡಿಮೆಯ ಶಕ್ತಿಗಳು ನಿರ್ವಹಿಸುತ್ತಿದ್ದವು. ಹಳ್ಳಿಯಲ್ಲಿ ಕೆಲವೊಮ್ಮೆ ಎರಡು ರೂಪಾಯಿ ತಾತ್ಕಾಲಿಕ ಸಾಲವೂ ಸಿಗುತ್ತಿರಲಿಲ್ಲ. ಬಡ್ಡಿ ವ್ಯಾಪಾರ ಎಂಬುದು ನಿಯಂತ್ರಣದಲ್ಲಿತ್ತು. ಭೂಕಾಣಿಕೆ ಇಲ್ಲದವರು ಮಾತ್ರ ಸಾಹುಕಾರನ ಜೀತಕ್ಕೆ ಒಳಗಾಗುತ್ತಿದ್ದರು. ಯಾವುದೇ ಬಗೆಯ ಆಸ್ತಿ-ಅಂತಸ್ತಿನ ಹಕ್ಕು ಇಲ್ಲದ ದಲಿತರ ಜೀವನ ಅತಂತ್ರವಾಗಿತ್ತು.

ಸ್ವಂತ ಎಂದರೆ ಏನು, ಏನೂ ಪ್ರಯೋಜನಕ್ಕೆ ಬಾರದ್ದು ಅಲ್ಲ. ಅದು ಉತ್ಪಾದನೆಯೊಂದಿಗೆ ಇಂಟರ್ ಆಕ್ಟ್ ಮಾಡುತ್ತಿರಬೇಕು. ಈ ಹೊತ್ತು ಭೂಮಿ ರೈತನ ಸ್ವಂತದ್ದು ಅಲ್ಲ. ಅದು ತನ್ನ ಉತ್ಪಾದನೆಗಾಗಿ ದೇಶಿಯ ಸಂಪನ್ಮೂಲವನ್ನು ತೊರೆದು ವಿದೇಶಿ ಸಂಪನ್ಮೂಲಗಳ ಬೆನ್ನು ಬಿದ್ದಿದೆ. ದೈಹಿಕ ದುಡಿಮೆ ಮಾತ್ರ ರೈತನದು; ಉಳಿದುವೆಲ್ಲ ಪರತಂತ್ರವಾದುದು. ಸಹಜವಾಗಿಯೇ ರೈತ ಈಗ ಭೂಮಿ ಇದ್ದೂ ಅದರ ಹೊರಗೆ ಇದ್ದಾನೆ. ಅವನ ಉತ್ಪಾದನಾ ಚಟುವಟಿಕೆಗಳೆಲ್ಲ ನಿಯಂತ್ರಿಸಲ್ಪಡುತ್ತಿವೆ. ಆದ್ದರಿಂದ ಅಂಥ ಪರಕೀಯ ಶಕ್ತಿಗಳಿಂದ ರೈತ ಬಿಡುಗಡೆ ಹೊಂದಬೇಕಾಗಿದೆ. ಎಂದರೆ ಆಧುನಿಕ ವಿಕಾಸ ವ್ಯವಸ್ಥೆಯಿಂದ ಆತ ದೂರ ಸರಿಯಬೇಕಿಲ್ಲ; ಅಂಥ ಆಧುನಿಕತೆಯನ್ನೇ ತನ್ನದಾಗಿಸಿಕೊಳ್ಳಬೇಕು. ಆಧುನಿಕತೆ ಎಂದರೆ ಪಾಶ್ಚಾತ್ಯ ತಂತ್ರಜ್ಞಾನ ಸೌಲಭ್ಯ ಮಾತ್ರ ಎಂದು ತಿಳಿಯಬಾರದು. ಜ್ಞಾನದ ಹೊಸ ಸಂಶೋಧನೆಯೆ ಆಧುನಿಕತೆ. ಜಿ-೮ ರಾಷ್ಟ್ರಗಳ ಶೋಧ ಅನ್ಯದೇಶಗಳ ಶೋಷಣೆಯಿಂದ ಸಾಧ್ಯವಾದದ್ದು. ಇದರಿಂದಲೆ ಆಧುನಿಕತೆ ಎಂಬುದು ಒಂದು ದೊಡ್ಡ ಮೋಸ ಎಂಬುದನ್ನು ಸ್ವಾಥ್ಯ ಚಿಂತಕರು ಹೇಳುತ್ತಿದ್ದಾರೆ.

ಪ್ರಜಾತಂತ್ರ, ಸ್ವಾತಂತ್ರ ಎಂಬವು ಹಿಂದುಳಿದ ಶೋಷಿತ ರಾಷ್ಟ್ರಗಳಿಗೆ ಒಂದು ದೊಡ್ಡ ಮೋಸ. ಕರ್ನಾಟಕದ ಕೃಷಿ ಮತ್ತು ರೈತನ ಸಂದರ್ಭದಲ್ಲಿಯೇ ಇದನ್ನು ಸ್ಪಷ್ಟ ಪಡಿಸಿಕೊಳ್ಳಬಹುದು. ರೈತ ಬೆಳೆ ಬೆಳೆಯುತ್ತಿದ್ದ, ಉಣ್ಣುತ್ತಿದ್ದ, ಮಲಗುತ್ತಿದ್ದ. ಉಳಿದ ಚಟುವಟಿಕೆಗಳು ಅವನಿಗೆ ಪರಕೀಯವಾಗಿದ್ದವು. ಇದನ್ನು ಗಮನಿಸಿಯೆ ಕುವೆಂಪು ಅವರು ಅವನನ್ನು ಉಳುವ ಯೋಗಿ ಎಂದು ಕರೆದರು. ಫಲವನ್ನು ಬಯಸದೆ, ಅತಿಸುಖ ಕೆಳೆಸದೆ ದುಡಿವನು ಗೌರವಕಾಸಿಸದೆ ಎಂದು ಹೇಳಿದರು. ವಾಸ್ತವವೇನೆಂದರೆ ಈ ಹೊತ್ತಿನ ಉದ್ಯಮ ಪತಿಗಳ ಜಗತ್ತು ಈ ಚಿಂತನೆಗೆ ತದ್ವಿರುದ್ಧವಾಗಿದೆ. ಪ್ರತಿಯೊಬ್ಬನೂ ಫಲ ಬಯಸಬೇಕು, ಅತಿ ಸುಖಕ್ಕೆ ಪೈಪೋಟಿ ಮಾಡಬೇಕು, ಅಧಿಕಾರ, ಸಂಪತ್ತಿಗಾಗಿ ಪೈಪೋಟಿ ನಡೆಸಬೇಕು, ಇತರರಿಗೆ ಸಮಾನವಾಗಿ ಬಾಳಬೇಕು. ಏನೇ ಆದರೂ ಸುಖವಾಗಿರಬೇಕು, ಇನ್ನೂ ಮುಂದುವರೆದು ಮಸ್ತ್‌ಮಜಾ ಮಾಡಬೇಕು. Greed is good ಎನ್ನುತ್ತದೆ ಒಂದು ಜಾಹೀರಾತು.

ರೈತ ಸ್ಪರ್ಧಿಸಬೇಕಾದ ಇತರರು ಯಾರು? ನ್ಯಾಯದ ಮಾತು ದೂರ ಇಟ್ಟು ಸಂಪಾದಿಸುವವನು. ತನ್ನನ್ನು ನಾನಾ ವಿಧಗಳಿಂದ ಮೆರೆಸಿಕೊಳ್ಳುವವನು. ಏನು ಹೊಸದು ಬಂದರೂ ಕೊಳ್ಳುವವನು. ಕೊಳ್ಳುವ ಕ್ರೇಜ್ ಯಾರಿಗೆ ಹೆಚ್ಚಿರುತ್ತದೋ ಅವನು ದೇಶದ ಆರ್ಥಿಕ ಚಟುವಟಿಕೆಗಳನ್ನು ಬೆಳೆಸುವವನು. ನಿನ್ನ ವೈಯಕ್ತಿಕ ವಿಗರ್ ಜೊತೆಗೆ ವಿಗರೆಸ್ ಮಾರ್ಕೆಟಿಂಗ್ ಇರಬೇಕು. ಮಾರ್ಕೆಟ್ ಬದುಕಿಸುವವನು ತನ್ನನ್ನು ಬದುಕಿಸಿಕೊಳ್ಳುತ್ತಾನೆ. ಸಾಧ್ಯವಾಗದವನು ಇದ್ದರೂ ಸತ್ತಂತೆ. ಇದೇ ಕಾರಣಕ್ಕೆ ರೈತ ಆ ಇತರರೊಂದಿಗೆ ಪೈಪೋಟಿಗೆ ಬಿದ್ದಿದ್ದಾನೆ. ತನ್ನ ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಚಟುವಟಿಕೆಗಳನ್ನು ಮಾರುಕಟ್ಟೆ ಮನುಷ್ಯರೊಂದಿಗೆ ಸರಿದೂಗಿಸಿಕೊಳ್ಳಲು ತೊಡಗಿದ್ದಾನೆ. ಅವನು ಈಗ –

೧. ತನ್ನ ವೈಭವ, ಮೆರವಣಿಗೆಗೆ ಬಂಡವಾಳ ಹೂಡಬೇಕು. ಇದು ಕೇವಲ ಖರ್ಚು ಅಲ್ಲ.

೨. ಮಕ್ಕಳ ವಿದ್ಯಾಭ್ಯಾಸಕ್ಕೆ ಬಂಡವಾಳ ಹೂಡಬೇಕು.

೩. ತನ್ನ, ಮನೆಯವರು ಆರೋಗ್ಯಕ್ಕೆ ಬಂಡವಾಳ ಹೂಡಬೇಕು.

೪. ರಾಜಕೀಯಕ್ಕೆ ಬಂಡವಾಳ ಹೂಡಬೇಕು.

– ಇತರ

ಈಗ, ಈ ಹೊತ್ತು ಮೇಲಿನ ಯಾವ ಅನುಕೂಲಗಳೂ ಬಂಡವಾಳ ಹೂಡದೆ ಸಿಗುವುದಿಲ್ಲ. ಇದು ದೊಡ್ಡ ಮೊತ್ತ. ಆಸ್ಪತ್ರೆಗೆ ಹೋದರೆ ರೋಗಿಯನ್ನು ವೈದ್ಯ ನೊಂದವನು ಎಂದು ಟ್ರೀಟ್ ಮಾಡುವುದಿಲ್ಲ. ತನಗಾಗಿ ಮತ್ತು ತನ್ನ ಒಡೆಯನಿಗಾಗಿ ಬಂಡವಾಳ ಹೂಡಲು ಬಂದಿರುವವನು ಎಂದು ಗಣಿಸುತ್ತಾನೆ. ಇಂಥ ಎಷ್ಟು ಕೇಸುಗಳನ್ನು ತಿಂಗಳಿಗೆ ಕೊಡುತ್ತಾನೊ ಅದರ ಮೇಲೆ ವೈದ್ಯನ ವೇತನ ನಿಗದಿಯಾಗುತ್ತದೆ. ಕೋಟಿ ಲೆಕ್ಕದಲ್ಲಿ ಎಂ.ಡಿ. ಮಾಡುವವನು ಹಣ ಹೂಡಬೇಕು ಎಂದರೆ ಶಿಕ್ಷಣದ ಬೆಲೆ ಎಷ್ಟು ಎಂಬುದು ಗೊತ್ತಾಗುತ್ತದೆ. ರಾಜಕೀಯದಲ್ಲಿ ನಿಲ್ಲಬೇಕಾದರೆ ಎಷ್ಟು ಬಂಡವಾಳ ಹೂಡಬೇಕು ಎಂಬುದು ಜನ ಸಾಮಾನ್ಯನಿಗೂ ತಿಳಿಯುತ್ತದೆ. ಈ ಹಣವೆಲ್ಲ ಆಯಾ ಕ್ಷೇತ್ರದ ಉದ್ಯಮಿಗೆ ದೊಡ್ಡ ಮಟ್ಟದಲ್ಲಿ ಸಂದಾಯವಾಗುತ್ತದೆ.

ರೈತ ಇದಕ್ಕೆಲ್ಲ ಎಲ್ಲಿಂದ ಬಂಡವಾಳ ಹೂಡಬೇಕು. ಅವನಿಗಿರುವುದು ತುಂಡು ಭೂಮಿ ಮಾತ್ರ ಎಂದಿಟ್ಟುಕೊಳ್ಳಿ. ಮಂಡ್ಯ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಬಹುತೇಕ ರೈತರು ಇಂಥ ತುಂಡು ಭೂಮಿ ಒಡೆಯರು. ಈಗ ಆ ರೈತ ಏನು ಮಾಡುತ್ತಾನೆ. ಆರ್ಥಿಕ ಬಂಡವಾಳ ಉತ್ಪಾದಿಸಲು ಆ ಭೂಮಿಯ ಮೇಲೆ ಅಧಿಕ ಬಂಡವಾಳ ಹೂಡುತ್ತಾನೆ. ಹೆಚ್ಚು ಫಸಲು ಬರಬೇಕು, ಉತ್ತಮ ಮಾರುಕಟ್ಟೆ ಸಿಗಬೇಕು – ಇತ್ಯಾದಿ. ಇದಕ್ಕಾಗಿ ಆತ ಮತ್ತೊಬ್ಬ, ಮಗದೊಬ್ಬ,

ಬಂಡವಾಳಿಗನ ಹತ್ತಿರ ಹೋಗುತ್ತಾನೆ. ಅಧಿಕ ಗೊಬ್ಬರ, ಸ್ಟ್ರಾಂಗ್ ಕೀಟನಾಶಕ, ಬಡದೇಸೀ ತಳಿ ಬೀಜವನ್ನು ಅತ್ತ ತಳ್ಳಿ ದೊಡ್ಡ ದೊಡ್ಡ ಗೊಬ್ಬರ ಯಜಮಾನರು, ಔಷಧಿ ಯಜಮಾನರು, ಬೀಜದ ಯಜಮಾನರಿಂದ ಸಾಲ ಪಡೆಯುತ್ತಾನೆ. ಆದರೆ ಅವನು ಭೂಮಿಯನ್ನು ಹೆಚ್ಚಿಸಲಾರ, ಮಳೆಯನು ಮೆಚ್ಚಿಸಲಾರ. ವಾತಾವರಣವನ್ನು ನಿಯಂತ್ರಿಸಲಾರ. ಈ ಅಂಶಗಳೆ ರೈತನ ಮೂಲ ನೆಲೆಗಳು. ಅವನು ಹೊರಗಿನಿಂದ ತಂದ ಅಂಶಗಳು ನಕಲಿಗಳು ಯಾವಾಗ ಕೃಷಿಗೆ ಅತ್ಯಗತ್ಯವಾದ ಜೀವಾಂಶಗಳು ಕೈಕೊಡುತ್ತವೊ ಆಗ ರೈತನ ಮರಣಶಾಸನ ಬರೆಯಲ್ಪಡುತ್ತದೆ. ಎಷ್ಟು ಕೊಳವೆ ಬಾವಿಗಳನ್ನು ಕೊರೆಸಿದರೇನು ಭೂಮಿ ನೀರು ಕೊಡದಿದ್ದರೆ? ನೀರಿನ ವಿಷಯದಲ್ಲಿ ಅದೂ ಕೂಡ ಅವಲಂಬಿ.

ನಾವು ಗಾಂಧೀಜಿಯನ್ನು ಓದಿದ್ದೇವೆ; 'ಈ ಭೂಮಿ ನಮ್ಮ ಅಗತ್ಯವನ್ನು ಪೂರೈಸಲು ಶಕ್ತವಾಗಿದೆ, ನಮ್ಮ ದುರಾಸೆಯನ್ನಲ್ಲ' ಅಂತ. ಯಾವ ಸಿದ್ಧಾಂತ ಅಭಿವೃದ್ಧಿಯನ್ನು ಮೇಲ್ಮುಖ ಚಲನೆ ಎಂದು ಪ್ರತಿಪಾದಿಸುತ್ತದೆಯೋ ಅದು ಭೂಮಿಯ ಸಮತಲವನ್ನು ಗಮನಿಸುವುದಿಲ್ಲ. ಆದರೆ ದೃಷ್ಟಿಯೇನಿದ್ದರೂ ಮಂಗಳನ ಕಡೆಗೆ. ಸರಳಾರ್ಥದಲ್ಲಿ ಇದನ್ನು ಜ್ಞಾನದ ದಾಹ ಎಂದು ಕರೆಯಬಹುದಾದರೂ ಭೂಮಿಯ ಮೇಲಿದ್ದು ಭೂಮಿಯನ್ನು ಸುರುಳಿಸುತ್ತಿ ಎಸೆಯುವ ರಾಕ್ಷಸ ಪ್ರಯತ್ನ ಸಾಧುವಲ್ಲ. ಅಭಿವೃದ್ಧಿ ಹೀಗೆಯೇ ಇರುತ್ತದೆಯೇ ಎಂದು ಅಮೇರಿಕಾದ ಜ್ಞಾನಿಯೊಬ್ಬರನ್ನು ಹೇಳಿ ತಿಳಿಸುವಂತೆ ಅಮೇರಿಕದಲ್ಲಿರುವ ನನ್ನ ಮಗಳಿಗೆ ಹೇಳಿದ್ದೆ. ಅವಳ ಉತ್ತರ 'ಮನುಷ್ಯ ಹಿಂದಕ್ಕೆ ತಿರುಗಿ ನೋಡುವ ಸ್ಥಿತಿಯಲ್ಲಿ ಇಲ್ಲ' ಎಂದರಂತೆ. 'ಹಿಂದೆ' ಎಂಬುದು ವಿಗತಿಯಾಗಿರುವಂತೆ, ಸುಗತಿಯೂ ಆಗ ಬಾರದೇಕೇ? ಇದಕ್ಕೆ ತಾನೆ ಮನುಷ್ಯನಿಗೆ 'ವಿವೇಕ' ಎಂಬುದು ಸಾಧ್ಯವಾಗಿರುವುದು. ಆದ್ದರಿಂದಲೇ ಈ ಹೊತ್ತಿನ ಅಭಿವೃದ್ಧಿಗೆ ವಿವೇಕವಿಲ್ಲ ಎನ್ನುವುದು.

ವಿವೇಕವಿಲ್ಲದ ಅಭಿವೃದ್ಧಿ 'ಮನುಷ್ಯ'ನನ್ನು ಕಳಚಿಕೊಳ್ಳುತ್ತಾ ಹೋಗುತ್ತದೆ. ಉತ್ಪಾದನೆ ಜಾಸ್ತಿಯಾಗುತ್ತದೆ. ಬಳಕೆಯೂ ಅತಿಯಾಗುತ್ತದೆ. ಆಗ ಭೂಮಿ ತಿಂದು ಮುಗಿಯುತ್ತದೆ. ಹಿಂದೆ ಈ ಭೂಮಿಯ ಉಳಿವಿಗಾಗಿಯೇ ಧರ್ಮ, ಆಧ್ಯಾತ್ಮದಂತಹ ದೇಹ ನಿರಾಕರಣೆಯ ತತ್ವಗಳು ಹುಟ್ಟಿಕೊಂಡಿರಬೇಕು! ಈ ತತ್ವ ಖಂಡಿತ ಬಡವರನ್ನು ಕುರಿತುದಲ್ಲ. ಕಾಲಾನಂತರದಲ್ಲಿ ಅದನ್ನು ತಮ್ಮ ಅನುಕೂಲಕ್ಕಾಗಿ ಶ್ರೀಮಂತರು ಬಡವರಿಗೆ ವರ್ಗಾವಣೆ ಮಾಡಿದ್ದಾರೆ. ಅದು ಈಗ ಬಲವಾಗುತ್ತಿದೆ. ಅತ್ಯಾಧುನಿಕ ಸುಖಲೋಲುಪ ಉತ್ಪನ್ನಗಳು ಹೊರಬರುತ್ತಿರುವುದರಿಂದ ತಮ್ಮ ಸುಖವನ್ನು ಕಾಯ್ದಿರಿಸಿಕೊಳ್ಳಲು ಉಳ್ಳವರು ಇಂಥ ಪ್ರಗತಿ ಚಕ್ರವನ್ನು ಉರುಳಿಸಿದ್ದಾರೆ. ಈ ಬೆಂಕಿಗೆ ಆಸೆಬುರುಕ ಬಡಜನರೆಂಬ ಪತಂಗಗಳು ಹಾರುತ್ತಿವೆ. ಅಂಥವರಲ್ಲಿ ನಮ್ಮ ರೈತ ಕೂಡ ಒಬ್ಬ.

ಇದರ ಅರ್ಥ ರೈತ ಸೇರಿದಂತೆ ಯಾರೂ ವೈರಾಗ್ಯ ತತ್ವವನ್ನು ಅನುಸರಿಸಬೇಕೆಂದಿಲ್ಲ. ಸುಖ, ಸಂತೋಷ, ನೆಮ್ಮದಿ ಎಲ್ಲರಿಗೂ ಬೇಕು. ಆದರೆ ಆ ಸುಖ ಯಾವುದು ಎಂಬುದರ ವಿವೇಕಯುತ ನಿರ್ಣಯ ಬಡವರದಾಗಬೇಕು. ಮೂರನೆಯ ಜಾಗತಿಕ ಯುದ್ಧ ಸಂಭವಿಸಿದರೆ ಅದು ಈ ಬಗೆಯ ಅತಿರೇಕದ ಸುಖವನ್ನು ಕಾಯ್ದಿರಿಸಿಕೊಳ್ಳುವುದಕ್ಕಾಗಿಯೇ ಹೊರತು ಮನುಕುಲದ ಉಳಿವಿಗಾಗಿ ಅಲ್ಲ. ಇಂಥ ಅತಿರೇಕ ಸುಖದ ಮಹಾಮಾದರಿಯೆ ಅಮೇರಿಕ ಮತ್ತದರ ಮಿತ್ರ ಕೂಟ. ಅದನ್ನೇ ಉಳಿದೆಲ್ಲ ದೇಶಗಳು ಅಭಿವೃದ್ಧಿ ಮಾದರಿ ಎಂದು ಅನುಕರಿಸುತ್ತಿರುವುದರಿಂದ ಸುಖಕ್ಕಾಗಿ ಪೈಪೋಟಿಗೆ ತೊಡಗಿರುವುದರಲ್ಲಿ ದುರ್ಬಲನ್ನು ಮೊದಲು ಮುಗಿಸಲಾಗುತ್ತಿದೆ. ಅದರ ಮೊದಲ ಬಲಿಪಶು ರೈತ. ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಪ್ರತ್ಯಕ್ಷ ಹಾಗೂ ಪರೋಕ್ಷ ಮಾರ್ಗದಿಂದ ದೇಶದ ನಿರ್ಧಾರಿತ ಶಕ್ತಿಯಾಗಿದ್ದ ರೈತನನ್ನು ಮುಗಿಸಲಾಗುತ್ತಿದೆ. ಅವನನ್ನೂ, ಅವನದನ್ನೂ ಕಿತ್ತುಕೊಳ್ಳಲಾಗುತ್ತಿದೆ. ಈ ಪ್ರಕ್ರಿಯೆ ಜೀನೊಸೈಡ್‌ಗಿಂತ ಭಿನ್ನವಾದುದೇನಲ್ಲ. ಇದು ಶೋಷಕರ ಹೊಸ ಬತ್ತಳಿಕೆ. ಆನಂತರ ಭೂಮಿ ನವಮಾಲೀಕತ್ವಕ್ಕೆ ವರ್ಗಾವಣೆಯಾಗುತ್ತದೆ. ಶೋಷಕರ ಸಾಮ್ರಾಜ್ಯ ಉದಯವಾಗುತ್ತದೆ. ಆಗ ಉದಯವಾಗಲಿ ನಮ್ಮ ಕನ್ನಡನಾಡು ಎಲ್ಲಿರುತ್ತದೆ!

ಇದನ್ನೆ ಈ ಹೊತ್ತಿನ ಜಾಗತಿಕ ಮೌನಯುದ್ಧ ಎಂದು ಹೇಳುವುದು. ಇದಕ್ಕೆ ರೈತರೆ ಯಾಕೆ ಮೊದಲ ಬಲಿ ಎಂದರೆ ಅವರು ನೆಲವನ್ನು ಹೊಂದಿದವರಾಗಿದ್ದಾರೆ. ಕೃಷಿ ಕಾರ್ಮಿಕರಿಗೆ ಈ ಸ್ಥಿತಿ ಇಲ್ಲ. ಯಾಕೆಂದರೆ ಅವರಲ್ಲಿ ಯಾವ ಬಗೆಯ ಒಡೆತನವೂ ಇಲ್ಲ. ಒಡೆತನಕ್ಕಾದ ಈ ಮೌನಯುದ್ಧ ಬಹುಸಂಖ್ಯಾತ ರೈತರನ್ನು ಮುಗಿಸುತ್ತಿದೆ. ದಿನಾ ಸಾಯುವವರಿಗೆ ಜನ ಅಳದಂತೆ ಮಾಡಿದೆ. ಸದಾ ಸೂತಕದಲ್ಲಿರುವ ರೈತನ ಮನೆಗೆ ಹೋಗಲು ರಾಜಕಾರಣಿಗಳು ಹಿಂದೇಟು ಹಾಕುತ್ತಿದ್ದಾರೆ. ಒಬ್ಬ ದಲಿತ ಹೀರೋ ಹೇಳಿದ ಮಾತು: ರೈತರು ಸಾಯುತ್ತಿದ್ದಾರೆ ಸಾಯಲಿ ಬಿಡಿ. ಕರ್ನಾಟಕದಲ್ಲಿ ರೈತರೆಂದರೆ ಬಹುಸಂಖ್ಯಾತ ಲಿಂಗಾಯತರು ಮತ್ತ ಒಕ್ಕಲಿಗರು. ನಾವು ಸಾಯುತ್ತಿದ್ದೆವು, ಅವರು ಬದುಕಿದ್ದರು. ಈಗ ಸರದಿ ಬದಲಾಗಿದೆ ಅಂತ. ಈ ಅಭಿವೃದ್ಧಿ ಸಿದ್ಧಾಂತ ಜನರನ್ನು ದೇಶಗಳನ್ನು ಹೇಗೆ ಇಬ್ಭಾಗ.. ಭಾಗಭಾಗ ಮಾಡುತ್ತಿದೆ ನೋಡಿ!

ಇಂಥ ಅಭಿವೃದ್ಧಿಯ ವಿಗತಿಗೆ ಪಕ್ಕಾಗಿರುವವರೇ ರೈತರು. ಇದು ಎಲ್ಲ ದೇಶಗಳ ಪರಿಸ್ಥಿತಿ. ಕರ್ನಾಟಕವೂ ಈ ಅಭಿವೃದ್ಧಿಗೆ ರೈತರ ಪ್ರಾಣವನ್ನು ಮೀಸಲಿಡುತ್ತಿದೆ. ಮುಂದಿನ ಸರದಿ ಅನ್ ಸ್ಕಿಲ್ಡ್ ಕಾರ್ಮಿಕರದು. ಉದ್ಯಮ ಪತಿಯ ಲಾಭಕ್ಕೆ ಬೇಕಾದವರು ನೈಪುಣ್ಯ ಹೊಂದಿದ ನೌಕರರು. ಭಾರತದಲ್ಲಿ ಅವರ ಸಂಖ್ಯೆ ಕಡಿಮೆ. ಪುರಾಣ, ಪುಣ್ಯಕಥೆ, ಕಲೆ, ಸಾಹಿತ್ಯ ಇಂಥ ಮಾನವಿಕ ವಿಷಯಗಳ ಬಗ್ಗೆ ಹೇಳಿ, ಭಾರತದಲ್ಲಿ ಕಿತ್ತಾಡುವಷ್ಟು ನಿಪುಣರಿದ್ದಾರೆ. ಹೊಸ ಮಾರ್ಕೆಟಿಂಗ್

ವಸ್ತುಗಳನ್ನು ಉತ್ಪಾದಿಸುವ ನಿಪುಣರ ಸಂಖ್ಯೆ ಹೇಳಿಕೊಳ್ಳುವಂತಿಲ್ಲ. ಅಂದರೆ ಉದ್ಯಮ ಪತಿ ಸಾಮ್ರಾಟರೂ ನೈಪುಣ್ಯದ ಪರಿಕಲ್ಪನೆಯನ್ನೇ ಬದಲಾಯಿಸಿದ್ದಾರೆ. ನಮ್ಮ ಭಾರತದ ಜಾತಿ ಶ್ರೇಷ್ಠರು ಮಾಡಿದ ಹುನ್ನಾರ ಕೂಡ ಇದರ ಅಪ್ಪನೆ ಅಲ್ಲವೆ? ಆದ್ದರಿಂದ ರೈತರು ತಮ್ಮ ಸಮಸ್ಯೆಯನ್ನು ತಮಗೆ ಮಾತ್ರ ಸಂಬಂಧಿಸಿದ್ದು ಎನ್ನುವಂತಿಲ್ಲ. ಈಗ ಜಗತ್ತಿನ ಎಲ್ಲ ಚಟುವಟಿಕೆಗಳೂ ಜಾಗತಿಕ ಫಿನಾಮಿನ. ಪ್ರೊ. ನಂಜುಂಡ ಸ್ವಾಮಿ ಕಾಲದ ಕರ್ನಾಟಕ ರೈತ ಚಳುವಳಿಯನ್ನು ಈ ಹೊತ್ತಿನ ರೈತ ಚಳುವಳಿಯನ್ನೂ ಗಮನಿಸಿ. ಕೆಂಟಕಿ ಚಿಕನ್ ವಿರುದ್ಧದ ಅವರ ಪ್ರತಿಭಟನಾ ಕ್ರಮ ಇಲ್ಲಿನವರಿಗೆ ಸಿಲ್ಲಿಯಾಗಿ ಕಾಣಬಹುದು. ವಾಸ್ತವದಲ್ಲಿ ಅದು ರೈತ ಚಳುವಳಿಗೆ ಜಾಗತಿಕ ತಾತ್ವಿಕತೆ ಮತ್ತು ತೂಕವನ್ನು ತಂದು ಕೊಟ್ಟಿತು.

ಈಗ ರೈತ ಭೂಮಿಗೆ ಹಿಂಸೆ ಕೊಡುತ್ತಿದ್ದಾನೆ. ಭೂಮಿ ಅವನಿಗೆ ಹಿಂಸೆಯಾಗಿದೆ. ಇದರ ಪರಿಣಾಮವೇ ಅವನ ಅಂತ್ಯ. ಹೀಗೇಕೆ ಆತ ಭೂಮಿಗೆ ಹಿಂಸೆ ಕೊಡುತ್ತಿದ್ದಾನೆ? ಅತಿ ಬೆಳೆ ಬೆಳೆದು ಭೂಶಕ್ತಿಗೆ ಮೀರಿದ ಲಾಭ ಪಡೆಯುವುದು ಅವನ ಉದ್ದೇಶ. ಈ ಲಾಭಕೋರತನ ಬಂದದ್ದಾದರೂ ಎಲ್ಲಿಂದ? ಉದ್ಯಮ ಪತಿಯ ಲಾಭ ಪರಿಕಲ್ಪನೆಯಿಂದ. ಲಾಭ ಎಂದರೆ ಉದ್ಯಮಿಗೆ ಉತ್ಪಾದನೆ ಬೆಲೆಗಿಂತ ಹೆಚ್ಚು ಎಂದು ಅಲ್ಲ; ಅದು ಹುಚ್ಚು ಲಾಭದ ಕಲ್ಪನೆ. ಕೈಗಾರಿಕಾ ಕ್ಷೇತ್ರದಲ್ಲಿ ಇದು ಸಾಧ್ಯ. ಅಲ್ಲಿ ಯಂತ್ರವನ್ನೂ, ಕಾರ್ಮಿಕರನ್ನೂ, ಕೊಳ್ಳುವವರನ್ನೂ ಸುಲಿಯಲು ಅವಕಾಶವಿದೆ. ಅವರಿಗೆ ಕಾಸು ಕೊಟ್ಟು ಇವನು ಕೋಣೆ ತುಂಬ ಮಜಾ ಮಾಡಬಹುದು. ಭೂಮಿ ಇರುವುದು ಮಜಾ ಮಾಡಲು ಅಲ್ಲ; ಬದುಕಿಗೆ ಆ ಭೂಮಿ ಕೈಗಾರಿಕೆಯೊಂದಿಗೆ ಪೈಪೋಟಿ ಮಾಡಲಾಗದು. ಹಾಗೆ ಮಾಡ ಹೊರಟರೆ ಅದು ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಅದರ ಪರಿಣಾಮವೇ ತಾನು ಸಾಕಿದ ರೈತ ಮಗುವನ್ನು ತಾನೇ ನಿರಾಕರಿಸುತ್ತಿದೆ.

ಉದ್ಯಮ ಮಾನವನ ಸಿದ್ಧಾಂತದ ದೊಡ್ಡ ದುರಂತವೆಂದರೆ ನೈಸರ್ಗಿಕ ಮೂಲಗಳು ಹೆಚ್ಚು ಹೆಚ್ಚು ಫಲವತಿಯಾಗಬೇಕು, ಹೆಚ್ಚು ಸಂತಾನ ಅಭಿವೃದ್ಧಿಯಾಗಬೇಕು; ಆದರೆ ಮಾನವನ ಉತ್ಪಾದನೆ ಕಡಿಮೆಯಾಗಬೇಕು. ಇವರಿಗೆ ಕುಟುಂಬ ಕಲ್ಯಾಣ ಯೋಜನೆ; ಪ್ರಕೃತಿಗೆ ಕುಟುಂಬ - ಸಂತಾನ ವಿಸ್ತರಣೆ ಯೋಜನೆ. ಇನ್ನೂ ಒಂದು ದುರಂತವನ್ನು ನೋಡಿ; ಪ್ರಕೃತಿಯ ಬೀಜವನ್ನೇ ಹೊರಕ್ಕೆ ತೆಗೆದು ಬೀಜ ಕೊಡದ ಸಸಿಗಳನ್ನು ನಿರ್ಮಿಸುತ್ತಿದ್ದಾನೆ. ಇದು ಹೋರಿಯ ಬೀಜ ಹೊಡೆದು ಅದು ಸಾಯುವವರೆಗೆ ಗೇಯ್ಮೆಗೆ ಇಟ್ಟುಕೊಂಡಂತೆ. ಇಂಥ ಪ್ರಕೃತಿಯ ಮೇಲಿನ ಆಕ್ರಮಣ ಮನುಷ್ಯನನ್ನು ಎಲ್ಲಿಗೊಯ್ಯುತ್ತದೆಯೋ ತಿಳಿಯದು!

ಇದೆಲ್ಲ ಭವಿಷ್ಯಕ್ಕೆ ಹೆದರುವ ಹುಂಬತನದ ಸಿದ್ಧಾಂತವಲ್ಲ. ಏನನ್ನು ಬಿತ್ತಿದರೆ ಏನನ್ನು ಬೆಳೆದುಕೊಳ್ಳಬಹುದು ಎಂಬ ಸರ್ವೈವ್ ಮತ್ತು ಸಸ್‌ಟೈನಬಲ್

ದೃಷ್ಟಿಕೋನ. ರಾಸಾಯನಿಕ ಗೊಬ್ಬರವನ್ನು ಯಥೇಚ್ಛವಾಗಿ ಬಳಸಿ ಯಥೇಚ್ಛವಾಗಿ ಫಸಲು ಪಡೆಯುವ ಕ್ರಿಯೆ ನಿರಂತರ ಸಾಧ್ಯ ಎನ್ನುವುದಾದರೆ ಅಲ್ಲಿ ಭವಿಷ್ಯವಾದಿಯ ಚಿಂತನೆಗೆ ಪ್ರವೇಶವಿಲ್ಲ. ಆದರೆ ಆ ರಾಸಾಯನಿಕಕ್ಕೆ ಬೆಳೆ ಕೊಡಲು ಭೂಮಿ ನಿರಾಕರಿಸಿದೆಯಲ್ಲ! ಭೂಮಿಯ ಈ ಬಗೆಯ ನಿರಾಕರಣೆ ಮನುಷ್ಯನ ಫಸಲಿಗೂ ತಗುಲಿದರೆ ಏನಾಗಬಹುದು! ಜನಪರ ಚಿಂತಕರು ಮತ್ತು ವಿಜ್ಞಾನಿಗಳು ಇಂಥದೊಂದು ಸಂಭವಕ್ಕೆ ತಲ್ಲಣಿಸಿ ಹೋಗಿದ್ದಾರೆ. ಅನೇಕ ದರೋಡೆಕೋರರು ಮಂಗಳ ಗ್ರಹಕ್ಕೆ ದಾಟಿಕೊಂಡು ಮಂಗಳ ಬದುಕು ಬದುಕಲು ಟಿಕೆಟ್ ಬುಕ್ ಮಾಡಿಕೊಂಡಿದ್ದಾರಂತೆ. ಶನಿ ತೊಲಗಿದರೆ ನಮಗೆ ಚಿಂತೆಯಿಲ್ಲ, ನಾವು ಹೇಗಾದರೂ ಬದುಕಿಕೊಳ್ಳುತ್ತೇವೆ; ಪಾರ್ಥೇನಿಯಂ ಬೆಳೆಯೆ ಶಾಶ್ವತವಾದರೆ ಗತಿಯೇನು? ರಾಸಾಯನಿಕಗಳಿಂದ ನಮ್ಮ ಬೆಳೆ ಬೀಜಗಳ ರೆಸಿಸ್ಟೆನ್ಸ್ ಕಡಿಮೆಯಾಗುತ್ತಿದೆ. ಹೊಲದಲ್ಲಿ ಬೆಳೆಯುವ ಬೆಳೆಗಿಂತ ಕಾಡಿನಲ್ಲಿ ಬೆಳೆಯುವ ಬೆಳೆ ಹುಲುಸಾಗುತ್ತಿದೆ ಎಂಬ ಶೊಧ ನಮ್ಮನ್ನು ದಿಕ್ಕುಗೆಡಿಸಿದೆ. ಇದರಿಂದ ಕಾಳಿನ ಬೀಜದ ಜೊತೆಗೆ ಹೆಣ್ಣು-ಗಂಡುಗಳ ಬೀಜಗಳೂ ನಿಷ್ಫಲವಾದರೆ!

ಈಗ ನಮ್ಮ ರೈತನ ಆಯ್ಕೆ, ಹಾಗೇಕೆ ಮನುಕುಲದ ಆಯ್ಕೆ : ನೆಮ್ಮದಿಯ ಜೀವನವೋ ಅಥವ ಮಜಾ ಜೀವನವೋ ಎಂಬುದು. ಹಾಗಿದ್ದಲ್ಲಿ ನೆಮ್ಮದಿಯ ಜೀವನ ರೈತನಿಗೆ ಸಾಕೆ. ಅದು ಈಗ ಇಟ್ಟಾಡುತ್ತಿರುವ ಆಧುನಿಕ ಜೀವನದಿಂದ ಅವನನ್ನು ಹೊರಗಿಟ್ಟಂತೆ ಆಗುವುದಿಲ್ಲವೇ? ಈ ಹೊತ್ತಿನ ಜಾಗತೀಕರಣದ ಜೀವನ ವಿಧಾನದಲ್ಲಿ ಅಂತಹ ಪ್ರತ್ಯೇಕ ಜೀವನ ನಡೆಸಲು ಹೇಗೆ ಸಾಧ್ಯ? ಯಾವ ಮನುಷ್ಯನೂ ಒಂದು ಪಠ್ಯ (text)ಅಲ್ಲವಲ್ಲ. ಸಾಂದರ್ಭಿಕ (Contextanal) ವಾಗಿ ಬದುಕುವುದೆ ಎಲ್ಲ ಜೀವಿಗಳ ಸಾಮಾಜಿಕ ವಾಸ್ತವ ಆಗಿರುವಾಗ ರೈತನಾಗಿದ್ದೂ ಜಾಗತೀಕರಣದ ಸಂದರ್ಭದಲ್ಲಿ ಅವನು ಸುಸ್ಥಿರವಾಗುವುದು ಹೇಗೆ ಎಂಬುದೆ ಈ ಹೊತ್ತು ನಡೆಯಬೇಕಾದ ಫಲಿತ ಚಿಂತನೆ. ಅದರೆಡೆ ನಮ್ಮ ಎಲ್ಲ ಸಮಾಜ ವಿಜ್ಞಾನಿಗಳೂ ಪ್ರಯತ್ನಿಸಬೇಕು. ತಂತ್ರಜ್ಞಾನಿಗಳನ್ನು ಬಿಡಿ. ಅವರು ಯಾವ, ಯಾರ ಒತ್ತಡಕ್ಕೆ ಒಳಗಾಗಿ ನಾಯಿ ಬಸಿರು ತಂದುಕೊಂಡು ಮರಿಗಳನ್ನು ಉತ್ಪಾದಿಸುತ್ತಾರೋ! ಅವುಗಳನ್ನು ಬಂಡವಾಳಿಗರು ಲಾಭದ ಬೆಲೆಗೆ ಮಾರಿಕೊಳ್ಳುತ್ತಾರೆ. ಸಮಾಜವನ್ನು ಯಾಂತ್ರಿಕ ಸೌಲಭ್ಯಗಳ ಮಧ್ಯೆಯೂ ಸುಖಮಯಗೊಳಿಸುವ ಚಿಂತನೆಯನ್ನು ಸಮಾಜ ವಿಜ್ಞಾನಿಗಳು ಮಾಡಬೇಕು. ಈಗ ಮೂರನೆಯ ಜಗತ್ತಿನಲ್ಲಿ ಸತ್ತಂತೆ ಕುಳಿತಿರುವ ಸಮಾಜ ವಿಜ್ಞಾನಗಳ ಬೆಳವಣಿಗೆಗೆ ಚಾಲನೆ ಕೊಡಬೇಕು ಹಾಗೂ ಸಮಾಜವನ್ನು ಉಳಿಸುವ ಕೆಲಸದ ಜವಾಬ್ದಾರಿಯನ್ನು ಹೊರಬೇಕು.

ನಾನು ಹೇಳಿಕೇಳಿ ಸಾಹಿತ್ಯ ಕ್ಷೇತ್ರದ ಸಾಹಿತಿಯಲ್ಲ. ಬರಹದ ಸಾಹಿತ್ಯ, ಕಲಿತವರ ಮತ್ತು ಓದುವವರ ವರ್ಗ ಸಾಹಿತ್ಯ. ನಾನು ಜನಪದ ಸಾಹಿತ್ಯ, ಜಾನಪದ

ಜ್ಞಾನ-ವಿಜ್ಞಾನ ಕ್ಷೇತ್ರಕ್ಕೆ ಸೇರಿದವನು. ಆದ್ದರಿಂದಲೆ ಅಚ್ಚ ಜನಪದರಾದ ರೈತರು ಮತ್ತು ದಲಿತರ ಬಗ್ಗೆ ನನ್ನ ತುಂಬು ಕಾಳಜಿ. ನಮ್ಮ ನಾಡಿನ ಮಹಾಚಿಂತಕರಾದ ವಚನಕಾರರು ಜೀವನ ಮೊದಲು, ಅದರ ಉಪ ಉತ್ಪಾದನೆ ಸಾಹಿತ್ಯ ಎಂಬಂತೆ ನಡೆದುಕೊಂಡ ಜನ ಮಾರ್ಗ (ರಾಜಮಾರ್ಗ ಅಲ್ಲ) ನನಗೆ ಮಾದರಿಯಾಗಿದೆ. ನಾನು ರೈತರು ಮತ್ತು ತಳವರ್ಗಗಳು (ದಲಿತರೂ ಸೇರಿಕೊಂಡಂತೆ) ಜಾಗತೀಕರಣದ ಮಧ್ಯದಲ್ಲಿಯೂ ಧೀರೋದಾತ್ತವಾಗಿ ಬದುಕುವುದು ಹೇಗೆಂದು ಚಿಂತಿಸುತ್ತಿರುತ್ತೇನೆ. ನಾನು ಅಂದುಕೊಳ್ಳುವುದು ಹೀಗೆ:-

೧. ಸಾಮಾಜಿಕ ಜಾಗೃತಿ : ಪ್ರೊ. ಎಂ. ಡಿ. ನಂಜುಂಡಸ್ವಾಮಿ ಮತ್ತು ಆನಂತರದ ಕೆಲ ವರ್ಷಗಳು ರೈತ ಚಳುವಳಿಗಳು ಹೋರಾಟದೊಳಗೆ ಸಾಮಾಜಿಕ ಜಾಗೃತಿಯನ್ನು ಪ್ರಧಾನ ಮಾಡಿಕೊಂಡಿತ್ತು. ರೈತ ಜಾತಿಯನ್ನು ಉಳಿಸಿಕೊಂಡು ರೈತ ಪ್ರತಿನಿಧಿ ಆಗುವುದು ಸಾಧ್ಯವಿಲ್ಲ. ಅವನ ಜಾಗೃತಿ ಮತ್ತು ಬದುಕು ಬೇರೇ ಬಗೆಯದು. ಎಂಬುದನ್ನು ಹೇಳಲಾಗುತ್ತಿತ್ತು. ಜಾತಿ ಯಾ ಹೊತ್ತೂ ಉತ್ಪಾದಕ ಶಕ್ತಿಯಲ್ಲ, ಇರುವುದನ್ನು ಕಿತ್ತುಕೊಂಡು ಹಂಚಿಕೊಳ್ಳುವ ಒಂದು ಕ್ರಮ. ಅದು ಎಂದೂ ರೈತ ಮಕ್ಕಳಿಗೆ ಸಮಾನತೆ ಮತ್ತು ಸ್ವಾಭಿಮಾನವನ್ನು ತಂದು ಕೊಡುವುದಿಲ್ಲ. ಇದು ರೈತನಿಗೆ ಮೊದಲ ಪಾಠವಾಗಬೇಕು. ಅದಿಲ್ಲದಿದ್ದರೆ ರೈತ ಚಳುವಳಿ 'ಮದುವೆಗಂಡಿಗೆ "ಅದೇ" ಇಲ್ಲ. ಎಂಬಂತಾಗುತ್ತದೆ ಎಂದು ಒತ್ತಿ ಒತ್ತಿ ಹೇಳಲಾಗುತ್ತಿತ್ತು. ಚಳುವಳಿ ಆ ಚಿಂತನೆಯ ಉತ್ಪನ್ನವಾಗಬೇಕು ಎಂಬುದು ನನ್ನಂಥವರ ಅಪೇಕ್ಷೆಯಾಗಿತ್ತು. ಈ ಹೊತ್ತೂ "ಅದು" ಬೇಕು.

೨. ಜ್ಞಾನಗಳ ತುಲನಾತ್ಮಕ ನೋಟ : ರೈತ ಮೊದಲು ಎಂಬ ಆತ್ಮವಿಶ್ವಾಸ ಸಹಜವಾಗಿ ಇರಬೇಕು. ಉತ್ಪಾದನಾ ಕ್ರಮದಲ್ಲಾಗಲಿ ಜೀವನ ಕ್ರಮದಲ್ಲಾಗಲು ಮೊದಲು ಅಥವ ಕೊನೆ ಎಂಬುದಿಲ್ಲ. ಪ್ರತಿ ಸಮುದಾಯದ ಜ್ಞಾನ ಇತರ ಸಮುದಾಯಗಳೊಂದಿಗೆ ತುಲನೆಗೊಳ್ಳಬೇಕು ರೈತ ತನ್ನ ದೊಡ್ಡ ಸಮುದಾಯ ಉಳಿಯಬೇಕು ಅನ್ನುತ್ತಾನೆ. ಜಾಗತಿಕ ಪತಿ "ಬೇಸಾಯಕ್ಕೆ ಈಗಿರುವ ಜನ ಹೆಚ್ಚಾಯಿತು, ಅವರಲ್ಲಿ ಹಲವರು ಸೇವಾ ವರ್ಗಕ್ಕೆ ವರ್ಗಾವಣೆಗೊಳ್ಳಬೇಕು. ಕೃಷಿರಂಗ ಪೂರ್ಣ ಉದ್ಯೋಗ, ಉತ್ಪಾದನೆ ಕೊಡಲಾರದು ಹಾಗೂ ಅಧಿಕ ಮಂದಿಯನ್ನು ತಾಳಿಕೊಳ್ಳಲಾಗದು. ಹಳ್ಳಿಯ ಬಡತನ ಕಡಿಮೆಯಾಗಬೇಕು. ಹಳ್ಳಿಗಳ ಬದುಕಿನ ವಿನ್ಯಾಸ ಕೂಡೆ ಬದಲಾಗಬೇಕು. ಮೂಲತಃ ಹಳ್ಳಿಯೇ ಬದಲಾಗಬೇಕು. ಅದು ಈಗ ಪ್ರಾಥಮಿಕ ಉತ್ಪಾದನಾ ಕೇಂದ್ರ ಮಾತ್ರ, ಆ ಉತ್ಪಾದನೆ ಮಾರುಕಟ್ಟೆ ತತ್ವಕ್ಕೆ ಅನುಗುಣವಾಗಿಲ್ಲ. ಆದ್ದರಿಂದಲೇ ಆಧುನಿಕ ಜಗತ್ತಿನಿಂದ ಹಳ್ಳಿಗಳು ಕಡಿದುಕೊಂಡಿವೆ" ಅನ್ನುತ್ತಾನೆ. ಇದು ವಾದವೇ ಆಗಿರಬಹುದು. ಆದರೆ ರೆಲವೆಂಟ್ ಆದ ಜೀವನದ ಬಗ್ಗೆ ರೈತ ಪರಾಮರ್ಶೆಯಿಂದ ತಿಳಿಯಬೇಕು. ಇದಕ್ಕಾಗಿ ಅನ್ಯ ಸಮುದಾಯ ಜ್ಞಾನಗಳ ಬಗ್ಗೆ ರೈತ

ಅಸಡ್ಡೆಯಿಂದ ಮಾತನಾಡಬಾರದು. ಶತೃವನ್ನು ಎದುರಿಸಲು ಮೊದಲ ಹಂತಕ್ಕೆ ಪ್ರತಿಭಟನೆ ಬೇಕು. ಪ್ರತಿಭಟನೆಯೆ ನಿರಂತರವಾದರೆ ನೆಲೆ ನಿಲ್ಲಬೇಕಾದ ಬದುಕಿನ ಹುಡುಕಾಟ ಕಷ್ಟವಾಗುತ್ತದೆ.

೩. ಈ ಹೊತ್ತಿನ ಹಳ್ಳಿಯನ್ನು ಗ್ರಹಿಸುವುದು : ಬ್ರಿಟಿಷ್ ಆಡಳಿತಕ್ಕೆ ಮುಂಚಿನ ಹಳ್ಳಿ, ಬ್ರಿಟಿಷರು ಪುನರ್ ಸಂಘಟಿಸಿದ ಹಳ್ಳಿ–ಇವುಗಳ ಬಗ್ಗೆ ಅರಿವು ಬೇಕು. ಆಧುನಿಕತೆ ಹಳ್ಳಿಗಳನ್ನು ವಿಘಟಿಸಿದೆಯೆ ಹೊರತು, ಸಂಘಟಿಸಿಲ್ಲ. ಹಳ್ಳಿ ಸಮುದಾಯ ಪ್ರಜ್ಞೆಯನ್ನು, ನಗರ ವ್ಯಕ್ತಿ ವಿಘಟನ ತತ್ವವನ್ನೂ ಪ್ರತಿಪಾದಿಸುತ್ತವೆ. ಒಂದು ಸ್ವಾತಂತ್ರ್ಯಕ್ಕೆ ಮಿತಿಯನ್ನು ಹೇರಿದರೆ ಮತ್ತೊಂದು ಸ್ವಾತಂತ್ರ್ಯವನ್ನು ಬರತ್ತಲೆಗೊಳಿಸುತ್ತದೆ. ಮೆಟೀರಿಯಲಿಸ್ಟಿಕ್ ಜೀವನ ಕ್ರಮ ಯಾವಾಗಲೂ ಸ್ವಾತಂತ್ರ್ಯದ ಹದ್ದು ಮೀರಿ ನಡೆಯುವಂಥದಾಗಿರುತ್ತದೆ. ಈ ಎರಡನ್ನೂ ಸಮತೋಲನಗೊಳಿಸಿಕೊಂಡು ಈ ಹೊತ್ತಿನ ಹಳ್ಳಿ ಪುನರ್ ನಿರ್ಮಾಣಗೊಳ್ಳಬೇಕು. ಹಳ್ಳಿಯ ಜಾತಿ ನಿರ್ಬಂಧ ಬೇರೊಂದು ಸಮುದಾಯವನ್ನೂ ವ್ಯಕ್ತಿಯನ್ನೂ ಪ್ರತ್ಯೇಕಗೊಳಿಸಿ ನೋಡುವುದು ಹಳ್ಳಿಯ ವಿಗತಿಯಾಗಿರುತ್ತದೆ.

ಗಾಂಧೀಜಿ ಹಳ್ಳಿ–ಕೇಂದ್ರಿತ ಭಾರತ ಬೇಕು ಎಂಥರು. ನೆಹರು ಮತ್ತು ಅಂಬೇಡ್ಕರ್ ಸುತಾರಾಂ ಒಪ್ಪಲಿಲ್ಲವೇಕೆ ಎಂಬುದರ ಸತ್ಯಾಸತ್ಯತೆ ರೈತ ಚಳುವಳಿಗೆ ಅರ್ಥವಾಗಬೇಕು. ಈಗ ಹಳ್ಳಿಯ ಬಹುತೇಕ ಕುಶಲ ಕರ್ಮಿಗಳು ಊರು ಬಿಟ್ಟಿದ್ದಾರೆ. ಹಳ್ಳಿಯವನು ಕ್ಷೌರಕ್ಕಾಗಿ ಪಟ್ಟಣಕ್ಕೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಮೇಲ್ಜಾತಿ ಮತ್ತು ದಲಿತರ ಮಧ್ಯದ ಉಪಜಾತಿಗಳು ಕೂಡ ಹಳ್ಳಿಯ ತಳವನ್ನು ಖಾಲಿ ಮಾಡುತ್ತಿವೆ. ಹೆಚ್ಚಿನ ಪ್ರಮಾಣದಲ್ಲಿ ಇರುವ ದಲಿತರಲ್ಲಿ ಒಂದು ಭಾಗ ಹಳ್ಳಿಯಿಂದ ಕಳಚಿಕೊಂಡರೆ ಬೇರೆ ಮಾರ್ಗ ಕಾಣದ ದಲಿತರು ಮಾತ್ರ ಹಳ್ಳಿಯಲ್ಲಿ ಇದ್ದಾರೆ. ಅವರು ಈಗ ದಿನಗೂಲಿ; ವ್ಯಕ್ತಿಕೂಲಿಯಾಗಿ ಕೆಲಸ ಮಾಡಲು ಒಪ್ಪದೇ ಕೂಲಿಯೂ ಒಂದು ಕಾಂಟ್ರಾಕ್ಟ್ ಉದ್ಯಮವಾಗಿ ಪರಿಣಮಿಸಿದೆ. ಇದರಿಂದ ಕೂಲಿಗಳ ಮೇಲೆ ಅವಲಂಬನೆಯಾಗಿರುವ ರೈತರು ತತ್ತರಿಸಿದ್ದಾರೆ. ಇಲ್ಲವೆ ಭೂಮಿಯನ್ನು ಬೆತ್ತಲು ಬಿಡುತ್ತಿದ್ದಾರೆ.

ಇದೇ ಪರಿಸ್ಥಿತಿ ಮುಂದುವರಿದರೆ ಹಳ್ಳಿ ಪ್ರಗತಿಯ ತೆಕ್ಕೆಗೆ ಬರುವುದಿಲ್ಲ. ಅಭಿವೃದ್ಧಿ ತಾತ್ವಿಕತೆಯ ನೆಲೆಯಿಂದ ನೋಡಿದಾಗ ಬಹುಸಂಖ್ಯಾತರೆ ಪ್ರಬಲವಾಗಿರುವ ಹಳ್ಳಿಗಳನ್ನ ಸರ್ಕಾರ ತಾತ್ವಿಕವಾಗಿ ಕಡೆಗಣಿಸುತ್ತದೆ. ಸರ್ಕಾರಿ ಅಭಿವೃದ್ಧಿ ಎನ್ನುವುದು ಎಲ್ಲರನ್ನೂ ಸಮಾನವಾಗಿ ನೋಡುತ್ತದೆ. ಖಾಸಗಿ ಅಭಿವೃದ್ಧಿಯಾದರೆ ಅದು ಬಂಡವಾಳ ಇರುವವನ ಅಭಿವೃದ್ಧಿಯಾಗಿರುತ್ತದೆ. ಹಳ್ಳಿ ಯಾವ ಕಾರಣಕ್ಕೂ ಬಹು ಸಂಖ್ಯಾತ ಮೇಲುಜಾತಿಗಳ ಕೇಂದ್ರವಾಗಬಾರದು.

೪. ವೆಚ್ಚದಲ್ಲಿ ಉಳಿತಾಯ : ಲಾಭದಲ್ಲಿ ಉಳಿತಾಯ ಮಾಡುವುದು ಸಾಮಾನ್ಯ ಆರ್ಥಿಕ ಚಟುವಟಿಕೆ. ಆದರೆ ಈಗ ರೈತನಲ್ಲಿ ಲಾಭದ ಮಾತೇ ಇಲ್ಲ.

ಅವನೇನಿದ್ದರೂ ವೆಚ್ಚದಲ್ಲಿ ಉಳಿತಾಯ ಮಾಡಬೇಕಾಗಿದೆ. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಸಮಸ್ಯೆಗಳನ್ನು ಗಮನಿಸಿದರೆ ಮೊದಲನೆಯದು ಕೊಳವೆ ಬಾವಿ ತೆಗೆಸಿ, ನೀರು ಬರದೆ ಹತಾಶರಾಗಿ ಜೀವತೆಗೆದುಕೊಳ್ಳುವುದು. ಎರಡನೆಯ ಸಮಸ್ಯೆ ಮಗಳ ಮದುವೆಗಾಗಿ ಸಾಲ ಮಾಡುವುದು. ಈ ಮದುವೆಗಳು ಸಾಂಪ್ರದಾಯಿಕ, ಶಾಸ್ತ್ರೋಕ್ತ ಆಗಿರುವುದಕ್ಕಿಂತ ಅದ್ದೂರಿ ಮೆರವಣಿಗೆಯಾಗಿರುವುದು. ಹಬ್ಬ ಆಚರಣೆ, ಪೂಜೆಗಳು ಕೂಡ ಆಡಂಬರಗಳಾಗಿವೆ. ಇತ್ತೀಚಿನ ಪ್ರವೃತ್ತಿ ಶೋಕಿ. ಇದು ಹಳ್ಳಿಗರನ್ನೇನೂ ಬಿಟ್ಟಿಲ್ಲ. ಸಾಲ ಮಾಡಿಯಾದರು ಶೋಕಿ ಮಾಡುವ ಪ್ರವೃತ್ತಿ ಹೆಚ್ಚಿದೆ. ಇದಕ್ಕೆ ಮುಖ್ಯ ಕಾರಣ ಮಾರುಕಟ್ಟೆ ಅಕರ್ಷಣೆ ಮತ್ತು ಜಾಹೀರಾತಿನ ಸುಳ್ಳು ಸಂದೇಶ.

ಜೀವನಕ್ಕೆ ಅವಶ್ಯಕವಾದ ಏನನ್ನು ಬಿಟ್ಟುಕೊಡದೆ ರೈತ ನೆಮ್ಮದಿಯ ಬಾಳು ಮಾಡುವ ಕಡೆಗೆ ಯೋಚಿಸಬೇಕು. ಮಕ್ಕಳನ್ನು ಓದಿಸಲು ದುಬಾರಿ ಹಣ ಬೇಕು, ಜೀವನಾವಶ್ಯಕ ವಸ್ತುಗಳು ಕೂಡ ದುಬಾರಿಯಗಿವೆ. ಅವಕ್ಕೂ ಹೆಚ್ಚಿನ ಹಣ ತೆರಬೇಕು. ಆದರೆ ಕದೀಮರು ಮತ್ತು ಶ್ರೀಮಂತರು ಬಳಸುವುದೆಲ್ಲವೂ ನಮಗೂ ಬೇಕು ಅಂದರೆ ಕಷ್ಟವಾಗುತ್ತದೆ. ಇಂಥ ಖರ್ಚಿನ ಸಮಾನ ತತ್ವವನ್ನು ಬಿಟ್ಟು ನೆಮ್ಮದಿ ಜೀವನಕ್ಕಾಗಿ ರೈತ ಸ್ಪರ್ಧಿಸಬೇಕು. ಇಲ್ಲವೆ ಜೀವನ ಕ್ರಮಕ್ಕೆ ತಿಲಾಂಜಲಿ ನೀಡಬೇಕು.

೫. ಸಹಜ–ಸಾವಯವ : ಬದುಕಬೇಕು ಎಂದು ನಿರ್ಧರಿಸಿರುವ ರೈತರಿಗೆ ಈ ಎರಡೂ ಕೃಷಿ ಪದ್ಧತಿಗಳು ಬೆಂಬಲಿಸಿ ಬಂದಿವೆ. ಸಾವಯವ ಕೃಷಿ ಗೈರು ಹಾಜರಿ ರೈತ ಯಜಮಾನರಿಂದ ದುಬಾರಿಯಾಗುತ್ತಿರುವುದು ನಿಜ. ಆದರೆ ಅದು ರಾಸಾಯನಿಕ ಕೃಷಿಗೆ ಒಂದು ಪರ್ಯಾಯ ಎಂಬುದರಲ್ಲಿ ಸಂದೇಹವಿಲ್ಲ. ಸರಳ ಕೃಷಿ ವಿಧಾನ ತುಂಬ ಕಡಿಮೆ ಖರ್ಚಿನಲ್ಲಿ ನಡೆಯುತ್ತದೆ. ಅದು ಹೊಲದ ಬೆಳೆಗಳಿಗೆ ಹೇಗೆ ಅನ್ವಯಿಸುತ್ತದೆ ಎಂಬುದನ್ನು ಕಂಡುಕೊಳ್ಳಬೇಕಿದೆ. ತೋಟದ ಬೆಳೆಗಳಿಗೆ ಈ ಪದ್ಧತಿ ತುಂಬ ಸೂಕ್ತವಾದುದು. ಇತ್ತೀಚಿನ ದಿನಗಳಲ್ಲಿ ಬೆತ್ತಲು ಬೆಳೆ ಲಾಭದಾಯಿಕವಲ್ಲದ ಕಾರಣ ಅನೇಕ ರೈತರು ತೋಟಗಾರಿಕೆ ಬೆಳೆಗಳ ಕಡೆಗೆ ಹೋಗುತ್ತಿರುವುದುಂಟು.

೬. ಸಾಮೂಹಿಕ ಬೇಸಾಯ : ಕಾಲದ ಬೆಳವಣಿಗೆಯಲ್ಲಿ ಕೂಡು ಕುಟುಂಬಗಳು, ಒಕ್ಕಲುಗಳು ಒಂಟಿ ಕುಟುಂಬಗಳಾಗುವ ಅನಿವಾರ್ಯತೆ ಉಂಟಾಗಿದೆ. ಅದರಲ್ಲೂ ಒಂದು ಕುಟುಂಬದಲ್ಲಿ ಆಸ್ತಿ ಪಾಲು ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗಿ ಭೂಮಿ ತುಂಡು ತುಂಡಾಗಿದೆ. ಇಂಥ ಭೂಮಿಯ ಮೇಲೆ ಯಾವುದೇ ಥರದ ಭಂಡವಾಳ ಹೂಡಿದರೂ ಅದು ಸೂಕ್ತ ಪ್ರತಿಫಲವನ್ನ ಕೊಡಲಾರದು. ಮಂಡ್ಯ ಜಿಲೆಯ ರೈತರ ಆತ್ಮಹತ್ಯೆ ಪ್ರಕರಣಗಳನ್ನು ನೋಡಿದರೆ ತುಂಡು ಭೂಮಿಯಿಂದ ತರಕಾರಿ ಬೆಳೆದು ಪೇಟೆಗೆ ಮಾರಿ ಬದುಕು ಸಾಗಿಸುವವರೇ

ಕಂಡು ಬರುತ್ತಿದ್ದಾರೆ. ಆದುದರಿಂದ ಆಸ್ತಿಹಕ್ಕನ್ನು ಬಳಿಸಿಕೊಂಡು ಸಾಮೂಹಿಕ ಬೇಸಾಯದಲ್ಲಿ ತೊಡಗುವುದು ಈ ಹೊತ್ತಿನ ರೈತರ ದೃಷ್ಟಿಯಿಂದ ಹಿತಕರ. ಇದರಿಂದ ಉಳುಮೆ, ಗೊಬ್ಬರ, ಕ್ರಿಮಿನಾಶಕ ಬಳಕೆ, ಒಕ್ಕುವ ಕೆಲಸಗಳಲ್ಲಿ ತುಂಬ ಉಳಿತಾಯವಾಗುತ್ತದೆ. ಇದಕ್ಕೆ ಬಹಳ ಮುಖ್ಯವಾದ ಆಶಯ ರೈತರಲ್ಲಿ ಒಗ್ಗಟ್ಟು.

೭. ಸಹಕಾರ ಗ್ರಾಮ : ಈ ಹೊತ್ತಿನ ಬರಗಾಲದ ಕುಡಿಯುವ ನೀರಿನ ಸಮಸ್ಯೆಯನ್ನು ನೋಡಿ; ಪ್ರಕೃತಿಯನ್ನು ನೆಚ್ಚಿ ಕೆಡುವುದು ಸ್ವಾಭಾವಿಕ ನಡವಳಿಕೆ. ಆದರೆ ಎಲ್ಲದಕ್ಕೂ ಸರ್ಕಾರವನ್ನೇ ನೆಚ್ಚಿ ಕೂರುವ ಹೆಳವತನ ಬಂದಿರುವುದು ಗ್ರಾಮೀಣ ಜನರ ದುರ್ದೈವವೇ ಸರಿ. ನಾನು ಹುಡುಗನಾಗಿದ್ದಾಗ ನೀರಿಗಾಗಿ, ರಸ್ತೆಗಾಗಿ, ಕೆರೆ ಹೂಳೆತ್ತುವುದಕ್ಕಾಗಿ... ಸರ್ಕಾರವನ್ನು ಅವಲಂಬಿಸಿರಲಿಲ್ಲ. ಹಳ್ಳಿಯ ಮನೆಗೊಬ್ಬರಂತೆ ನಿಂತು ಗ್ರಾಮಕ್ಕೆ ಬೇಕಾದ ಕೆಲಸಗಳನ್ನು ಮಾಡಿಕೊಳ್ಳುವುದಿತ್ತು. ಆದರೆ ಈ ಹೊತ್ತು ಪ್ರಜಾಪ್ರಭುತ್ವ ಸರ್ಕಾರವೆಂಬುದು ನವರಾಜಕೀಯ ಯಜಮಾನರ ಗುಲಾಮಗಿರಿ ಎಂಬಂತಾಗಿದೆ. ಜನರು ಕೈ, ಕಾಲು, ಮನ ಎಲ್ಲವನ್ನೂ ಕಳಕೊಂಡವರಂತೆ ಕಾಣುತ್ತಿದ್ದಾರೆ.

ಸರ್ಕಾರದ ಕಡೆಯ ಸೌಲಭ್ಯವನ್ನು ಏಕ ವ್ಯಕ್ತಿಯ ಕಂಟ್ರಾಕ್ಟ್‌ಗೆ ಕೊಡದೆ ಹಳ್ಳಿಯೆ ಹಂಚಿಕೊಂಡು ಕೆಲಸ ಮಾಡಿದರೆ ಅದೊಂದು ಶುಭಾರಂಭವಾಗುತ್ತದೆ. ಕಂಟ್ರಾಕ್ಟರ್ ಎಂದರೆ ಹಳ್ಳಿಗೆ ವಕ್ಕರಿಸಿಕೊಂಡ ಮೊದಲ ರಾಜಕೀಯ ಪುಢಾರಿ. ಈ ಹೊತ್ತಿನ ಹಳ್ಳಿ ಜನರ ಬೇಜವಬ್ದಾರಿತನ ಹಲವು ಅಲೆಮಾರಿಗಳನ್ನು ರಾಜಕೀಯ ನಾಯಕರನ್ನಾಗಿ ಮಾಡುತ್ತಿದೆ. ಆದರೆ ಎಲ್ಲಿಯೂ ಸಾಂಸ್ಕೃತಿಕ ನಾಯಕರು / ಸೇವಕರು ಸೃಷ್ಟಿಯಾಗುತ್ತಿಲ್ಲ. ಯಾಕಂದರೆ ಹಳ್ಳಿ ತನ್ನ ತಲೆಯನ್ನು ನಗರ ಜೀವನಕ್ಕೆ ಅಡ ಇಟ್ಟಿದೆ.

೮. ಸೃಜನಶೀಲತೆಯ ನಾಪತ್ತೆ : ನಾನು ಕಂಡ ಹಾಗೆ ಕಲೆ, ಸಾಹಿತ್ಯ, ಸಂಗೀತ ಮುಂತಾದ ಅಂಶಗಳ ಬಗ್ಗೆ ಹಳ್ಳಿ ನಗರದ ಕಡೆಗೆ ನೋಡುತ್ತ ಕೂತಿರಲಿಲ್ಲ. ಅದರದೇ ಆದ ಎಲ್ಲ ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿತ್ತು. ಈಗ ಅವೆಲ್ಲವನ್ನೂ ಒದರಿ ಬಿಟ್ಟಿದೆ. ನಗರದಿಂದ ಕಲೆ, ಸಾಹಿತ್ಯ, ಸಂಗೀತ ಮತ್ತು ಅಭಿರುಚಿಯನ್ನು ಬಾಡಿಗೆಗೆ ತರುತ್ತಿದೆ. ಇದಕ್ಕಿಂತ ಸಾಂಸ್ಕೃತಿಕ ದಿವಾಳಿತನ ಮತ್ತೊಂದಿಲ್ಲ. ಹಳ್ಳಿಯ ಯುವಕರು ಸ್ವಂತ ಮನಸ್ಸನ್ನು ಕಳೆದುಕೊಳ್ಳುತ್ತಿರುವುದು, ಮುಖ್ಯವಾಗಿ ಗ್ರಾಮದಲ್ಲಿ ಇದ್ದ ಸೌಹಾರ್ದ ಸಂಸ್ಕೃತಿಯ ಅಂಶಗಳನ್ನು ಮರೆತದ್ದು. ಜಾತಿ ಕ್ರಿಮಿನಾಲಜಿ ಹೊರತುಪಡಿಸಿ ಉಳಿದ ಚಿಂತನೆಗಳನ್ನು ಬಳಸಿಕೊಂಡು ಈ ಹೊತ್ತು ಹಳ್ಳಿಗಳು ಸಾಂಸ್ಕೃತಿಕವಾಗಿ ಪುನರುಜ್ಜೀವನಗೊಳ್ಳುವ ಹಲವು ಸಾಧ್ಯತೆಗಳಿವೆ. ಆದರೆ ಮಾನಸಿಕವಾಗಿ ಹಳ್ಳಿಯ ಯುವಕರು ಈಗ ಹಳ್ಳಿಯಲ್ಲಿಲ್ಲ.

ಧರ್ಮ, ದೇವರು, ಪೂಜೆಯ ವಿಷಯ ಕೂಡ ಈಗ ಆಡಂಬರ ಮತ್ತು ಭಯದ ಪ್ರತಿಫಲನವಾಗಿದೆ. ಶ್ರೀಮಂತರ ದೇವರು ಶ್ರೀಮಂತರಂತೆಯೇ ಬಂಡವಾಳಗಾರ. ಬಡವರ ದೇವರು ಸ್ನೇಹಿತ, ವೈದ್ಯ, ಅಪ್ಪ-ಅಣ್ಣನಂತೆ. ಆ ದೇವರನ್ನು ನೀವೇ ನಿಮ್ಮದೇ ಪೂಜೆಯಿಂದ ಪಡೆದುಕೊಳ್ಳಬಹುದು. ದೇವರಾಗಲಿ, ಧರ್ಮವಾಗಲಿ, ಪೂಜೆಯಾಗಲಿ ಸ್ವಂತ ನಿಮ್ಮವೇ ಆಗಿರಲಿ.

೯. ಹಳ್ಳಿಯ ಮಾದರಿ ಏನು : ಹಳ್ಳಿ ಹಳೆಯದು, ಹಳ್ಳಿಯ ಜೀವನ ಹಳೆಯದು. ಹೋಗಲಿ, ಹಳ್ಳಿಯ ಹೊಸ ತಲೆಮಾರಿನ ಚಿಂತಕರೂ ಹಳಬರೆ? ನಗರಾಧಾರಿತ ಚಿಂತನೆ ಮತ್ತು ಜೀವನ ಮಾದರಿಯನ್ನೇ ಹಳ್ಳಿಯವರು ಬದುಕಬೇಕೆ? ತಮ್ಮದೊಂದು ಸಮಕಾಲೀನ ಜೀವನ ಮಾದರಿಯನ್ನು ಕಂಡುಕೊಳ್ಳಲು ದಾಡಿ ಏನು?

ರೈತ ಚಳುವಳಿಯ ಇಲ್ಲಿಯವರೆಗಿನ ನಡೆಯಲ್ಲಿ ನಗರವಾಸಿಗಳ ಜೊತೆಗೆ ಮುಖಾಮುಖಿಯಾಗುವುದು ಇಲ್ಲವೆ ಶರಣಾಗುವ ಎರಡು ಪ್ರಕ್ರಿಯೆಗಳು ಮಾತ್ರ ಕಂಡುಬರುತ್ತಿವೆ. ಹಳ್ಳಿಗೆ ನಗರದಂತೆ ಒಂದು ಪ್ರತ್ಯೇಕ ಅನನ್ಯತೆ ಇದೆ ಎಂಬುದನ್ನು ತೋರಿಸುವುದು ಯವಾಗ? ಇದು ರೈತನಾಯಕರ ಹಾಗೂ ಚಿಂತಕರ ಜವಾಬ್ದಾರಿಯಲ್ಲವೇ? ಅಲ್ಲಲ್ಲಿ ಚಿಕ್ಕ ಪುಟ್ಟ ಪ್ರಯತ್ನಗಳು ನಡೆದರೂ ಅವು ಆದರ್ಶ ಎನ್ನುವ ರೀತಿಯ ರೂಪವನ್ನು ಪಡೆದುಕೊಂಡಿಲ್ಲ. ರೈತನೊಬ್ಬ ತೀರಿಕೊಂಡಾಗ ಅವನ ಶ್ರಾದ್ಧವನ್ನು ಊರಿನಲ್ಲಿ ಸಸಿ ನೆಡುವ ಮೂಲಕ ಆಚರಿಸುವುದು ರೈತ ಜೀವನದ ಒಂದು ಅಮೋಘ ಶೋಧ. ನಾನು ರೈತ ಚಳುವಳಿಯಲ್ಲಿ ಸಕ್ರಿಯನಾಗಿದ್ದಾಗ ಸರಳ ಮದುವೆಯಾದ ದಂಪತಿಗಳಿಗೆ ಕೂಸು ಹುಟ್ಟಿದಾಗ ರೈತರೆಲ್ಲ ತಮ್ಮ ಕೈಲಾದ ಹಣವನ್ನು ಆ ಮಗುವಿನ ಜೀವನಿಧಿ ಎಂದು ಠೇವಣಿ ಇಟ್ಟು ಅದರ ಓದಿಗೆ ನೆರವಾಗಿ ಎಂದು ತಿಳಿಸಿದ್ದೆ. ಗಲಾಟೆಯಲ್ಲಿ ತೊಡಗಿದವರಿಗೆ ಈ ಸಣ್ಣ-ಸೂಕ್ಷ್ಮ ಧ್ವನಿ ಕೇಳುವುದಾದರೂ ಹೇಗೆ?

೧೦. ಗ್ರಾಮ-ನಗರ ಮಧ್ಯದ ಚಲನೆ : ಹಿಂದೆ ಹಳ್ಳಿ-ನಗರಗಳ ಮಧ್ಯೆ ಪರಸ್ಪರ ಚಲನೆ ಸಾಂಕೇತಿಕವಾಗಿತ್ತು. ಈಗ ಅದು ಬಿರುಸಾಗಿದೆ. ಅವಾಂತರಕಾರಿಯೂ ಆಗಿದೆ. ಅಭಿವೃದ್ಧಿ ಚರಿತ್ರೆಯಲ್ಲಿ ಗ್ರಾಮವಾಗಲಿ ನಗರವಾಗಲಿ ಶಾಶ್ವತ ಅಸ್ತಿತ್ವಗಳು ಎಂದು ತಿಳಿಯಬೇಕಾಗಿಲ್ಲ. ನಗರಗಳಲ್ಲಿ ವಿದ್ಯುತ್ ಹಾಗೂ ನೀರು ಕೆಲವಾರಗಳು ನಿಂತರೂ ಅದು ಒಕ್ಕಲೇಳುತ್ತದೆ. ನಗರ ಜೀವನಕ್ಕೆ ಹೋಲಿಸಿದರೆ ಕೊರತೆಗಳ ಮಧ್ಯೆಯೂ ಹಳ್ಳಿಗೆ ಬಾಳಿಕೆಯ ಸತ್ವ ಇದೆ. ಆದರೆ ಪ್ರಗತಿಯಲ್ಲಿ ಹಳ್ಳಿ ದೂರ ಹಾಗೂ ನಗರ ಹತ್ತಿರ ಎಂಬಂತಾಗಬಾರದು. ಅಂದ ಮಾತ್ರಕ್ಕೆ ಈ ಎರಡೂ ಸ್ಥಿತಿಗಳ ಮಧ್ಯದ ಚಲನೆಯನ್ನು ನಿಯಂತ್ರಿಸಲಾಗದು. ಜಾಗತೀಕರಣದ ಈ ಹೊತ್ತಿನ ಪ್ರಕ್ರಿಯೆಯಲ್ಲಿ ಹಳ್ಳಿಯನ್ನೇ ಪ್ರಪಂಚ ಮಾಡಲು ಹೊರಟಿದ್ದಾರೆ.

ನಗರದಲ್ಲಿ ಏನೇನು ಸಾಧ್ಯವೋ ಅದು ಹಳ್ಳಿಯಲ್ಲೂ ಸಾಧ್ಯವಾಗಬೇಕು ಎಂಬುದು ಉದ್ಯಮ ಪತಿಗಳ ಹುನ್ನಾರ. ಯಾಕಂದರೆ ಅವರಿಗೆ ಪ್ರಪಂಚದ ಅಗಲವೆಲ್ಲವೂ ಮಾರುಕಟ್ಟೆಯೆ ಆಗಬೇಕು. ಅಲ್ಲೆಲ್ಲ ತಮ್ಮ ಉತ್ಪಾದಿತ ವಸ್ತುಗಳು ಧಾರಾಳವಾಗಿ ಬಿಕರಿಯಾಗಬೇಕು. ಇದು ಹಳ್ಳಿಯ ಉದ್ಧಾರದ ಮಾತಂತು ಅಲ್ಲ. ಆದರೆ ಹಳ್ಳಿ ತಪ್ಪಿಸಿಕೊಳ್ಳುವಂತಿಲ್ಲ. ಈಗ ಹಳ್ಳಿ ಇಕ್ಕಟ್ಟಿನಲ್ಲಿದೆ. ಅದು ಮೂಲದ ಜಾತಿ ಹಿಡಿತದಿಂದ ತಪ್ಪಿಸಿಕೊಂಡು ಉದ್ಯಮ ಪತಿಯಿಂದ ಬಚಾವಾಗಿ ಉಳಿಯಬೇಕು.

೧೧. ಅದು ಸಾಧ್ಯವೇ? : ಉದ್ಯಮಪತಿ ಜೀವನ ವಿಧಾನವೆ ಭಾರತದ ವಿದ್ಯ ಮಾನವಾದರೆ ಹಳ್ಳಿಗಳು ಕರಗುವುದಂತೂ ನಿಶ್ಚಿತ. ಈಗ ನಡೆಯುತ್ತಿರುವ ಇಂಥ ಒಂದೇ ದಾರಿಯ ಚಲನೆ ಯಾವುದೇ ದೇಶಕ್ಕೆ ಮುಖ್ಯ ಮತ್ತು ಅನಿವಾರ್ಯವಾದರೆ ಜಗತ್ತು ಕೆಲವು ಬೃಹತ್ ಕೇಂದ್ರಗಳಲ್ಲಿ ನೆಲೆಗೊಳ್ಳುವುದು ಸಹಜವಾಗಿ ಬಿಡುತ್ತದೆ; ಈ ಬಗೆಯ ಕೇಂದ್ರೀಕರಣ ತಂದೊಡ್ಡುವ ಅಪಾಯಗಳು ಭಯಂಕರ. ವಿದ್ಯುತ್, ನೀರಿನ ಭಾರಿ ಸಮಸ್ಯೆ ಎದುರಾದರೆ ನಗರದ ಜನ ಎಲ್ಲಿಗೆ ಗುಳೆ ಹೋಗುತ್ತಾರೆ! ಎರಡು ದೇಶಗಳ ಮಧ್ಯೆ ಯುದ್ಧವಾದರೆ ಬಾಂಬ್ ಪಾಯಿಂಟ್ಸ್ ಸುಲಭಲಭ್ಯವಾಗುತ್ತವೆ. ಇದಕ್ಕಿಂತ ವಿನಾಶ ಇನ್ನೊಂದಿರುವುದಿಲ್ಲ. ಒಳಗಿಂದಲೇ ಸೃಷ್ಟಿಯಾಗುವ ಇನ್ನೊಂದು ಘೋರ ಸಮಸ್ಯೆ ನಗರದ ಕಸ. ಇದು ನಗರವನ್ನೇ ಕಸ ಮಾಡಬಹುದು, ಕಾಣದ ಭಯಂಕರ ರೋಗಕ್ಕೆ ಕಾರಣವಾಗಬಹುದು. ಏನೆಲ್ಲದ್ದಕ್ಕಿಂತ ಮನುಷ್ಯ ಮಾರುಕಟ್ಟೆ ಅವಲಂಬಿಯಾಗಿ ಸ್ವತಂತ್ರ ಸೃಜನ ಶಿಲತೆಯನ್ನೇ ಮರೆತು ಬಿಟ್ಟ ಹೆಗ್ಗನಾಗುವುದು.. ಶತಮಾನಗಳು ಬಾಳಲೇ ಬೇಕೆಂದರೆ ನಮ್ಮ ಸಾಧ್ಯತೆ ನಗರವೂ ಹಳ್ಳಿಯೋ.. ಏನದು? ಯೋಚಿಸಿ.

■

‘ಸಂಕ್ರಮಣ’ದ ಇನ್ನೊಂದು ವೈಶಿಷ್ಟ್ಯವೆಂದರೆ ಅನ್ಯ ಭಾಷಾ ಕೃತಿಗಳ ಪರಿಚಯ, ಅನುವಾದ, ಸಮೀಕ್ಷೆ ಇತ್ಯಾದಿಗಳನ್ನು ಪ್ರಕಟಿಸುತ್ತಾ ಬಂದಿರುವುದು. ರಷ್ಯನ್, ಹಿಂದಿ, ತೆಲುಗು, ಒರಿಯಾ, ಮರಾಠಿ, ಉರ್ದು ಹೀಗೆ ಹತ್ತಾರು ಭಾಷೆಗಳ ಉತ್ಕೃಷ್ಟ ಕೃತಿಗಳ ಪರಿಚಯ ಮತ್ತು ತೌಲನಿಕ ದೃಷ್ಟಿ ಕನ್ನಡ ಸಾಹಿತ್ಯದ ಓದುಗನಿಗೆ ದಕ್ಕುವಂತಾಗಿರುವುದು ‘ಸಂಕ್ರಮಣ’ದ ಮೂಲಕ.

– ಆರ್ಕೆ ಮಣಿಪಾಲ

ರೈತ ಚಳುವಳಿ : ರಾಜಕೀಯ ಶಕ್ತಿ

● ಸಿದ್ದನಗೌಡ ಪಾಟೀಲ

ಕರ್ನಾಟಕದ ರೈತ ಚಳುವಳಿಗಳಿಗೆ ಪ್ರಬಲವಾದ ತಳಪಾಯವಿದೆ. ಬ್ರಿಟಿಷ್ ವಸಹಾತು ಆಡಳಿತದ ಸಂದರ್ಭದಲ್ಲಿಯೇ ಕೆಲವು ಸೀಮಿತ ಪ್ರತಿರೋಧಗಳನ್ನು ಹೊರತು ಪಡಿಸಿ ನೋಡಿದರೂ ಸಂಘಟನಾತ್ಮಕ ಪ್ರತಿರೋಧ ಮತ್ತು ಚಳುವಳಿ ಇಂದಿನ ಕರ್ನಾಟಕದ ವ್ಯಾಪ್ತಿಯಲ್ಲಿರುವ ಎಲ್ಲ ಪ್ರದೇಶಗಳಲ್ಲಿ ನಡೆದಿದೆ. ೧೯೫೬ರಲ್ಲಿ ಏಕೀಕರಣಗೊಂಡ ಕರ್ನಾಟಕ ಮೊದಲಿನ ಎಲ್ಲ ಪ್ರದೇಶಗಳಲ್ಲಿಯೂ ರೈತ ಚಳುವಳಿಗಳನ್ನು ಕಂಡಿದೆ. ಏಕೀಕರಣ ಪೂರ್ವದ ಮೈಸೂರು ಸಂಸ್ಥಾನದಲ್ಲಿ ನಡೆದ ನಂಜನಗೂಡು ರೈತ ಚಳುವಳಿ, ನಗರ ಡಿವಿಷನ್ನಿನಲ್ಲಿ ನಡೆದ ರೈತರ ದಂಗೆ, ಕೆಳಕೊಡಗು ರೈತರ ಬಂಡಾಯ (ಕೊಡಗು ಪ್ರತ್ಯೇಕ ರಾಜ್ಯವಾಗಿದ್ದರೂ ಮೈಸೂರು ಸಂಸ್ಥಾನದ ಪ್ರದೇಶಗಳಲ್ಲಿ ಈ ಚಳುವಳಿಗೆ ಪ್ರೇರಣೆ ಪ್ರಭಾವಗಳಿದ್ದವು); ಮುಂದೆ ೧೯೫೧ರಲ್ಲಿ ನಡೆದ ಕಾಗೋಡು ಸತ್ಯಾಗ್ರಹ ಸ್ವಾತಂತ್ರ್ಯ ಹೋರಾಟದ ವಿಸ್ತರಣೆಯಂತಿತ್ತು. ಸ್ವಾತಂತ್ರ್ಯ ಸಿಕ್ಕ ಮೇಲೆ ಶಿವಮೊಗ್ಗ, ಸಾಗರ, ಹೊಸನಗರ, ಸೊರಬ, ತೀರ್ಥಹಳ್ಳಿ ಪ್ರದೇಶಗಳಲ್ಲಿ ನಡೆದ ಈ ರೈತ ಚಳುವಳಿ ಕರ್ನಾಟಕ ಏಕೀಕರಣದ ಪೂರ್ವದಲ್ಲಿಯೇ ರಾಜ್ಯದ ರೈತ ಚಳುವಳಿಗೆ ಪೂರ್ವ ತಯಾರಿಯಂತಿತ್ತು. ಮುಂಬೈ ಕರ್ನಾಟಕ ಪ್ರದೇಶಗಳಲ್ಲಿ ಉತ್ತರ ಕನ್ನಡದಲ್ಲಿ ನಡೆದ ರೈತಚಳುವಳಿ ಬ್ರಿಟಿಷ್ ಸರಕಾರದ ವಿರುದ್ಧದ ಪ್ರಬಲ ಚಳುವಳಿಯಗಿತ್ತು. ಧಾರವಾಡ, ಬೆಳಗಾವಿ, ವಿಜಾಪುರ ಜಿಲ್ಲೆಗಳಿಗೂ ರೈತ ಚಳುವಳಿಗಳು ವಿಸ್ತರಿಸಿದ್ದವು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ತೆಲಂಗಾಣದಲ್ಲಿನ ಕಮ್ಯುನಿಸ್ಟರು ಹೈದರಾಬಾದ್ ನಿಜಾಂ ಸರಕಾರದ ವಿರುದ್ಧ, ಭೂ ಮಾಲೀಕರ ವಿರುದ್ಧ ನಡಿಸಿದ ಸಶಸ್ತ್ರ ಹೋರಾಟ ತೀವ್ರವಾದ ಪ್ರಭಾವವನ್ನು ಬೀರಿತ್ತು ತೆಲಂಗಾಣದ ಸಶಸ್ತ್ರ ಹೋರಾಟದ ಅಂಚಿನ ಪ್ರದೇಶಗಳಾಗಿದ್ದ ಗುಲಬರ್ಗಾ, ಬೀದರ, ರಾಯಚೂರು ಜಿಲ್ಲೆ ನಿಜಾಂ ಸರಕಾರದ ವಿರುದ್ಧ, ಭೂ ಮಾಲಿಕರ ವಿರುದ್ಧ ಹೋರಾಟ ನಡೆಸುತ್ತಿದ್ದ ಹೋರಾಟಗಾರರ ಅಡಗು ತಾಣ, ತರಬೇತಿ ಪ್ರದೇಶಗಳಾಗಿದ್ದವು. ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಮಂಗಳೂರಿನ ಸಮೀಪದ ಕಯ್ಯೂರು ರೈತ ಹೋರಾಟ, ನಾಲ್ಕು ಜನ ಯುವ ರೈತ ಮುಖಂಡರ ನೇಣು ಬ್ರಿಟಿಷ್ ಸರಕಾರದ ವಿರುದ್ಧ ರೈತ ಜನ ಸಮೂಹ ಮಧ್ಯೆ ತೀವ್ರ ಅಸಮಾಧಾನವನ್ನು ಆಕ್ರೋಶವನ್ನೂ

ಉಂಟು ಮಾಡಿದ್ದವು. ಇವೆಲ್ಲವುಗಳ ಪರಿಣಾಮವಾಗಿ ೧೯೫೦ರ ದಶಕದ ಹೊತ್ತಿಗೆ ಕಮ್ಯುನಿಷ್ಟರ, ಸಮಾಜವಾದಿಗಳ ನಾಯಕತ್ವದಲ್ಲಿ ರೈತ ಚಳುವಳಿಗಳು ಸಂಘಟಿತಗೊಂಡು 'ಉಳುವವನಿಗೆ ಭೂಮಿ' ಎಂಬ ಗೇಣಿದಾರರ ಪರವಾದ ಚಳುವಳಿಗಳನ್ನು ಆರಂಭಿಸಿದವು. ಮೊದಲ ಹಂತದಲ್ಲಿ ಬ್ರಿಟಿಷ್ ವಸಹಾತುಶಾಹಿ ವಿರುದ್ಧ, ಜೊತೆಗೆ ಅವರ ಪರವಾಗಿದ್ದ ಭೂ ಮಾಲೀಕರ ವಿರುದ್ಧದ ಪ್ರತಿರೋಧ, ಪ್ರತಿಭಟನೆ ಈ ಚಳುವಳಿಗಳ ಆಶಯಗಳಾಗಿದ್ದರೆ ಸ್ವಾತಂತ್ರ್ಯಾನಂತರ ಮತ್ತು ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಭೂ ಸುಧಾರಣಾ ಕಾನೂನಿನ ಜಾರಿಗಾಗಿ ತೀವ್ರವಾದ ಹೋರಾಟಗಳು ನಡೆದವು. ಅವುಗಳ ಪರಿಣಾಮವಾಗಿಯೇ ೧೯೬೧ ಮತ್ತು ೧೯೭೪ರ ಭೂ ಸುಧಾರಣಾ ಕಾನೂನುಗಳ ಜಾರಿಯಾಗಿದ್ದು. ಸ್ವತಂತ್ರ ಪೂರ್ವದಲ್ಲಿಯೇ ಕಾಂಗ್ರೆಸ್ ಪಕ್ಷ 'ಉಳುವವನಿಗೆ ಭೂಮಿ' ಎಂದು ನಿರ್ಣಯ ಅಂಗೀಕರಿಸಿದ್ದರೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆಯೂ ರೈತ ಸಂಘಟನೆಗಳು, ರೈತ ಸಂಘಟನೆಗಳು, ರೈತ ಸಮುದಾಯ ಕಾಲು ಶತಮಾನ ಹೋರಾಟ ಮಾಡಿದ್ದೇ ಅಂಥ ಒಂದು ಕಾನೂನು ತರಲು ಕಾರಣವಾಯಿತು.

೧೯೭೪ರ ನಂತರ ಒಂದೆಡೆ ಭೂ ಸುಧಾರಣ ಕಾನೂನು, ಭೂಮಿತಿ ಕಾನೂನು ಜಾರಿಗೆ ಹೋರಾಟಗಳು ನಡೆದಿದ್ದರೆ ಇನ್ನೊಂದೆಡೆ ಬೆಳೆಗಾರರ ಸಂಘಟನೆಗಳು ವಿವಿಧ ಪ್ರದೇಶದಲ್ಲಿ ಕ್ರಿಯಾಶೀಲವಾಗಿದ್ದವು. ೧೯೮೦ರಲ್ಲಿ ನವಲಗುಂದ–ನರಗುಂದ ಪ್ರದೇಶದ ರೈತರ ಹೋರಾಟ, ಅಂದಿನ ಗುಂಡೂರಾಯ ಸರಕಾರದಿಂದ ರೈತರ ಮೇಲೆ ನಡೆದ ಗೋಲಿಬಾರ್ ಪ್ರಕರಣ ರೈತ ಚಳುವಳಿಯ ವಿಸ್ತರಣೆಗೆ ಕಾರಣವಾದವು. ಒಂದೆಡೆ ಸಮಾಜವಾದಿ ಚಿಂತನೆಯ ನಾಯಕರಾದ ರುದ್ರಪ್ಪ, ಸುಂದರೇಶ, ನಂಜುಂಡ ಸ್ವಾಮಿಯವರ ರಾಜ್ಯ ರೈತ ಸಂಘ, ಇನ್ನೊಂದೆಡೆ ಸಿ.ಪಿ.ಐ. ಸಿ.ಪಿ.ಎಂ. ನಾಯಕತ್ವದ ಎಡ ಪಂಥೀಯ ರೈತ ಸಂಘಟನೆಗಳು ರೈತರ ಮಧ್ಯೆ ಕೆಲಸ ಮಾಡುತ್ತಿದ್ದವು. ಆದರೆ ಈ ಎರಡೂ ಬಣಗಳ ನಡುವೆ ಐಕ್ಯತೆಯ ಕೊರತೆಯಿಂದಾಗಿ ರೈತ ಚಳುವಳಿ ಎರಡು ಕವಲಾಯಿತು. ೧೯೮೩ರಲ್ಲಿ ಮೊಟ್ಟ ಮೊದಲಬಾರಿಗೆ ಕಾಂಗ್ರೆಸ್ ರಹಿತ ಸರಕಾರ ರಚನೆಯಾದ ಸಂದರ್ಭದಲ್ಲಿ, ಅಂದಿನ ರಾಜ್ಯದ ರಾಜಕೀಯ ಬದಲಾವಣೆಗೆ ಪ್ರಮುಖ ಕಾರಣಗಳಲ್ಲಿ ರೈತ ಚಳುವಳಿಯೂ ಒಂದಾಗಿತ್ತು. ಆದರೆ ಆ ಸಂದರ್ಭದಲ್ಲಿ ನಂಜುಂಡಸ್ವಾಮಿಯವರ ರೈತ ಸಂಘಟನೆ ರಾಜಕೀಯೇತರವಾದ ಚಳುವಳಿಯಾಗಿ ಉಳಿಯಿತು. ರೈತ ಸಮುದಾಯ ಒಂದು ರಾಜಕೀಯ ಶಕ್ತಿಯಾಗುವ ಅವಕಾಶ ತಪ್ಪಿ ಹೋಯಿತು. ೧೯೮೩ರಲ್ಲಿ ಬದಲಾದ ಸಂದರ್ಭದಲ್ಲಿ ಕಮ್ಯುನಿಷ್ಟ ಪಕ್ಷಗಳು ಜನತಾ ಪಕ್ಷಕ್ಕೆ ಬೆಂಬಲಿಸುವ ಅನಿವಾರ್ಯತೆಗೆ ಒಳ ಪಟ್ಟಿದ್ದವು. ಆದರೆ ನಂತರದ ಚುನಾವಣೆಗಳಲ್ಲಿ ನಂಜುಂಡ ಸ್ವಾಮಿಯವರ ನಾಯಕತ್ವದ ರೈತ ಸಂಘ ಚುನಾವಣಾ ರಾಜಕೀಯಕ್ಕೆ

ಪ್ರವೇಶ ಮಾಡಿದರೂ ನಿರೀಕ್ಷಿತ ಪರಿಣಾಮವಾಗಲಿಲ್ಲ. ಅಷ್ಟೋತ್ತಿಗಾಗಲೇ ರಾಜ್ಯದಲ್ಲಿ ಕಾಂಗ್ರೆಸ್ ಹೊರತಾದ ಒಂದು ರಾಜಕೀಯ ಸ್ಪೇಸ್ ನಿರ್ಮಾಣವಾಗಿತ್ತು. ರೈತ ಚಳುವಳಿಗಳು ಒಂದು ರಾಜಕೀಯ ಶಕ್ತಿಯಾಗಿ ರಾಜ್ಯದ ರೈತ ಸಮುದಾಯದ ಹಿತಾಸಕ್ತಿ ಕಾಪಾಡುವ ಐತಿಹಾಸಿಕ ಅವಕಾಶ ಕೈ ತಪ್ಪಿ ಹೋಗಿತ್ತು.

ಪ್ರಸ್ತುತ ಸಂದರ್ಭದಲ್ಲಿ ರೈತ ಸಂಘಟನೆಗಳ ಮೇಲೆ ಅತಿದೊಡ್ಡ ಜವಾಬ್ದಾರಿಯಿದೆ. ಆದರೆ ರೈತ ಸಂಘಟನೆ ಬಣ, ಬಣಗಳಾಗಿ ಒಡೆದು ಹೋಗಿದೆ. ತತ್ವ ಪ್ರಾಧಾನ್ಯತೆಗಿಂತ ವ್ಯಕ್ತಿ ಪ್ರಧಾನ ಸಂಘಟನೆಗಳು ಹೆಚ್ಚಾಗಿವೆ. ಎಡ ಪಂಥೀಯ ರೈತ ಸಂಘಟನೆಗಳು ಹೆಚ್ಚಾಗಿವೆ. ಎಡಪಂಥೀಯ ರೈತ ಸಂಘಟನೆಗಳು ಸ್ವಾತಂತ್ರ್ಯ ಪೂರ್ವದಲ್ಲಿ, ಸ್ವಾತಂತ್ರ್ಯಾ ನಂತರದ ನಾಲ್ಕು ದಶಕಗಳಲ್ಲಿ ಮಹತ್ವದ ಚಳುವಳಿಗಳನ್ನು ನಡೆಸಿದರೂ ಈಗ ಕೆಲವು ಪ್ರದೇಶಕ್ಕೆ ಸೀಮಿತಗೊಂಡಿವೆ. ಎಲ್ಲ ಬಣ, ಪಂಗಡಗಳ ರೈತ ಸಂಘಟನೆಗಳು ತಮ್ಮ ಮಧ್ಯದ ವೈಯಕ್ತಿಕ, ತಾತ್ವಿಕ ಭಿನ್ನತೆಗಳನ್ನು ಬದಿಗಿಟ್ಟು ರೈತ ಸಂಕುಲದ ಉಳಿವಿಗಾಗಿ ಒಂದಾಗಬೇಕಿದೆ. ೧೯೯೫ರಿಂದ ಇಂದಿನವರೆಗೆ ದೇಶದಲ್ಲಿ ಸುಮಾರು ಮೂರುವರೆ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂದು ರೈತ ಮತ್ತು ಕೃಷಿಕ್ಷೇತ್ರ ಎರಡು ವಿಧವಾದ ಸಮಸ್ಯೆಗಳಿಗೆ ಸಿಲುಕಿಕೊಂಡಿದೆ. ಒಂದು ಭೂಮಿಯ ಭೌತಿಕ ಸಮಸ್ಯೆ, ಇನ್ನೊಂದು ಭೂಮಿ ಸಂಬಂಧದ ಸಮಸ್ಯೆ. ಭೂಮಿಯ ಭೌತಿಕ ಸಮಸ್ಯೆಯಲ್ಲಿ ಭೂಮಿಯ ಫಲವತ್ತತೆ. ಬರಗಾಲ, ಬೆಳೆನಾಶ, ಬೆಳೆದ ಬೆಳೆಗೆ ತಕ್ಕ ಪ್ರತಿಫಲವಿಲ್ಲದ ಬೆಳೆ ನೀತಿ ಇವೆಲ್ಲ ಇವೆ. ಇಂದಿನ ಸರಕಾರದ ನೀತಿಗಳು ರೈತನಿಗೆ ಸಹಾಯಧನಕೊಟ್ಟರೂ ಅದೆಲ್ಲ ಬೀಜ, ಗೊಬ್ಬರ, ರಸಾಯನಿಕ ಕಂಪನಿಗಳ ಪಾಲಾಗುತ್ತಿದೆ. ರೈತ ಸ್ವಯಂ ಬೆಳೆನೀತಿಯನ್ನು ನಿರ್ಧರಿಸಲಾಗದ ಸ್ಥಿತಿಗೆ ತಳ್ಳಲ್ಪಟ್ಟಿದ್ದಾನೆ. ಇದರ ಮಧ್ಯೆಯೂ ಐವತ್ತರ ದಶಕದಲ್ಲಿ ಆಹಾರ ಉತ್ಪಾದನೆ ದೇಶದಲ್ಲಿ ೫೦ ದಶಲಕ್ಷ ಟನ್ ಇದ್ದರೆ ಇಂದು ೨೦೦ ದಶಲಕ್ಷ ಟನ್ ದಾಟಿದೆ. ೨೦೨೦ರ ವೇಳೆಗೆ ೩೦೦ ದಶಲಕ್ಷ ಟನ್ ಗುರಿ ಹೊಂದಲಾಗಿದೆ. ಈ ಗುರಿಯನ್ನು ಮುಟ್ಟಲು ರೈತನನ್ನು, ಕೃಷಿ ಭೂಮಿಯನ್ನು ಗುರಿಯಾಗಿ ಇಡಲಾಗಿದೆ. ಅತಿಯಾದ ರಾಸಾಯನಿಕ, ಗೊಬ್ಬರ, ಕೀಟನಾಶಕಗಳ ಬಳಕೆಯಿಂದ ಭೂಮಿಯ ಫಲವತ್ತತೆ ನಾಶವಾಗುತ್ತಿದೆ, ಸರಕಾರ ಬೀಜ, ಗೊಬ್ಬರ, ಕೀಟನಾಶಕ ಕಂಪನಿಗಳ ಪರವಾಗಿರುವುದರಿಂದ ಕೃಷಿಕನಾಗಲೀ, ಕೃಷಿ ಭೂಮಿಯಾಗಲೀ ಅದಕ್ಕೆ ಮುಖ್ಯವಾಗುವುದಿಲ್ಲ. ಇಂದು ರೈತ ಎಲ್ಲ ವಸ್ತುಗಳಿಗೂ ಗ್ರಾಹಕನಾಗಿದ್ದಾನೆ. ಕುಟುಂಬದ ಆರೋಗ್ಯ, ಮಕ್ಕಳ ಶಿಕ್ಷಣವನ್ನು ಒಳಗೊಂಡು ಅವನು ಪಡೆವ ಎಲ್ಲ ವಸ್ತುಗಳಿಗೂ ಸೌಲಭ್ಯಗಳಿಗೂ ರೈತ ಗ್ರಾಹಕನಾಗಿದ್ದಾನೆ.

ಮಾರುಕಟ್ಟೆಯ ಬೆಲೆ ಏರಿಕೆಗೆ ಈ ಗ್ರಾಹಕ ಬಲಿಯಾಗಿದ್ದಾನೆ. ಆದರೆ ಅವನು ಉತ್ಪಾದಕನಾಗಿರುವ ಕ್ಷೇತ್ರದಲ್ಲಿಯೂ ತನ್ನ ಉತ್ಪನ್ನಗಳಿಗೆ ಬೆಲೆ ಇಲ್ಲದೇ ಹಾನಿಗೊಳಗಾಗಿದ್ದಾನೆ. ಇದರ ಪರಿಣಾಮವಾಗಿ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಒಂದು ಸರ್ವೆ ಪ್ರಕಾರ ದೇಶದ ಪ್ರತಿಶತ ೭೦ರಷ್ಟು ಜನ ಪರ್ಯಾಯ ವ್ಯವಸ್ಥೆಯಾದರೆ ಕೃಷಿಯನ್ನು ಬಿಟ್ಟು ಬಿಡುವುದಾಗಿ ಹೇಳಿದ್ದಾರೆ. ೨೦೧೧ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಕೃಷಿ ವ್ಯವಸ್ಥೆಯನ್ನು ಅವಲಂಬಿಸಿದವರ ಸಂಖ್ಯೆ ಶೇ.೪೯ಕ್ಕೆ ಇಳಿದಿದೆ. ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ)ದಲ್ಲಿ ಕೃಷಿ ಕ್ಷೇತ್ರದ ಪಾಲು ಕೇವಲ ಶೇ ೧೩. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಕೃಷಿ ಪಾಲು ೨೦೧೪-೧೫ರಲ್ಲಿ ಶೇ೧೪ ಇದ್ದದ್ದು ಈಗ ಶೇ ೮ಕ್ಕೆ ಇಳಿದಿದೆ. ಇಂದು ದೇಶದಲ್ಲಿ ಸೇವಾವಲಯ ಒಟ್ಟು ಆಂತರಿಕ ಉತ್ಪನ್ನದಲ್ಲಿ ಹೆಚ್ಚಿನ ಕೊಡುಗೆಯನ್ನು ಕೊಡುತ್ತದೆ. ಅಂದರೆ ಈಗ ನಮ್ಮದು ಕೃಷಿ ಪ್ರಧಾನ ದೇಶವಲ್ಲ. ರೈತ ಬೆಳೆದರೆ ದೇಶ ಬದುಕುವುದು ಎಂಬ ಮಾತು ಈಗ ಉಳಿದಿಲ್ಲ. ವಿದೇಶದಿಂದ ಆಹಾರ ಧಾನ್ಯಗಳ ಆಮದು ಇಂದು ನಮ್ಮ ದೇಶದ ಮಾರುಕಟ್ಟೆಯ ವ್ಯವಸ್ಥೆಯ ಜೀವಾಳವಾಗಿದೆ. ಕೃಷಿ ವ್ಯವಸ್ಥೆಯನ್ನು ಉದ್ದೇಶ ಪೂರಕವಾಗಿಯೇ ನಿರ್ಲಕ್ಷಿಸಲಾಗುತ್ತಿದೆ. ರೈತ ಭೂಮಿಯಿಂದ ಹೊರ ಬೀಳಬೇಕೆನ್ನುವುದೇ ಇಂದಿನ ಜಾಗತೀಕರಣ ವ್ಯವಸ್ಥೆಯ ಹುನ್ನಾರ. ಒಟ್ಟಿನಲ್ಲಿ ಭೂಮಿ ಉಳುಮೆ ನೀತಿ, ಬೆಳೆ ನೀತಿ, ಬೆಲೆ ನೀತಿಗಳ ಚಕ್ರವ್ಯೂಹದಲ್ಲಿ ರೈತ ಸಿಕ್ಕು ಒದ್ದಾಡುತ್ತಿದ್ದಾನೆ.

ರೈತರ ಇನ್ನೊಂದು ಪ್ರಮುಖ ಸಮಸ್ಯೆಯೆಂದರೆ ಭೂಮಿ ಸಂಬಂಧದ ಸಮಸ್ಯೆ. ಭೂಮಿಯನ್ನು ನಿರ್ವಹಿಸಲಾಗದ ಸ್ಥಿತಿಗೆ ರೈತನನ್ನು ತಳ್ಳಿದ ನಮ್ಮ ಸರಕಾರಗಳು. ಈಗ ಭೂಮಿಯಿಂದ ರೈತನ ಸಂಬಂಧವನ್ನೇ ಕಡಿದು ಹಾಕುವ ಹುನ್ನಾರ ನಡೆಸಿವೆ. ಅಂದರೆ ಕೃಷಿ ವ್ಯವಸ್ಥೆಯಲ್ಲಿನ ಕೃಷಿಕರನ್ನು ಹೊರದೂಡುವುದು. ಕಳೆದ ಶತಮಾನದ ೬-೭ನೇ ದಶಕದಲ್ಲಿ ಭೂ ಸುಧಾರಣೆ, ಭೂಮಿತಿಗಾಗಿ ಹೋರಾಟಗಳು ನಡೆದು ಭೂ ಸುಧಾರಣೆ ಜಾರಿಯಾಗಿ ೧೯೭೪ರ ಭೂ ಸುಧಾರಣಾ ಕಾನೂನಿನಿಂದಾಗಿ ರಾಜ್ಯದಲ್ಲಿ ೩೨ ಲಕ್ಷ ಭೂ ರಹಿತ ಕುಟುಂಬಗಳು ಉಳುಮೆಗಾಗಿ ಭೂಮಿಯನ್ನೂ, ವಸತಿಗಾಗಿ ನಿವೇಶನಗಳನ್ನೂ ಪಡೆದಿದ್ದರು. ಆದರೆ ಇಂದು ಭೂ ಸುಧಾರಣೆಗೆ ಪರ್ಯಾಯವಾಗಿ ಭೂ ಸ್ವಾಧೀನ ನೀತಿ ಪ್ರಾಧಾನ್ಯತೆ ಪಡೆದಿದೆ. ಅಂದು ಉಳುವವನಿಗೆ ಭೂಮಿ ಎಂದಿದ್ದರೆ, ಇಂದು ಆಳುವವನಿಗೆ ಭೂಮಿ. ಅಂದರೆ ಆಳುವವರು ಭೂಮಿ ಸ್ವಾಧೀನ

ಪಡೆದು ಅದನ್ನು ಕಂಪೆನಿಗಳಿಗೆ ಕೊಟ್ಟು ಮತ್ತೆ ಕಂಪನಿ ಸರಕಾರ ಸ್ಥಾಪಿಸುತ್ತಿದ್ದಾರೆ. ಅಂದು ಈಸ್ಟ್ ಇಂಡಿಯಾ ಕಂಪನಿಯಾಗಿದ್ದರೆ ಇಂದು ಬಹುರಾಷ್ಟ್ರೀಯ ಕಂಪನಿಗಳು. ಆರಂಭದಲ್ಲಿ ವಿಶೇಷ ಆರ್ಥಿಕವಲಯ (ಎಸ್.ಈ.ಝಡ್)ಗಳಿಗೆ ಭೂಮಿ, ಕೈಗಾರಿಕೆಗೆ ಭೂಮಿ ಹೀಗೆ ಕೃಷಿಯೇತರ ವಲಯಕ್ಕೆ ವಿವೇಚನಾ ರಹಿತವಾಗಿ ಭೂಮಿ ಸ್ವಾಧೀನ ಪಡಿಸಿಕೊಳ್ಳುವ ಸರಕಾರಗಳು ಮುಂದೆ ಕೃಷಿಯನ್ನೇ ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸಿ ಭಾರತದಲ್ಲಿ ಕಾರ್ಪೋರೇಟ್ ಕೃಷಿಯನ್ನು ಜಾರಿಗೆ ತರುವ ನೀಲ ನಕ್ಷೆ ಸಿದ್ಧಪಡಿಸುತ್ತವೆ. ಅಲ್ಲಿಗೆ ರೈತ ಶಾಶ್ವತವಾಗಿ ಭೂಮಿಯಿಂದ ಹೊರಬೀಳುತ್ತಿದ್ದಾನೆ. ಬ್ರಿಟಿಷರು ೧೮೯೪ರಲ್ಲಿ ಜಾರಿಗೆ ತಂದ ಭೂಸ್ವಾಧೀನ ಕಾನೂನನ್ನು ಮಾರ್ಪಡಿಸಿ, ೨೦೧೩ರ ಭೂಸ್ವಾಧೀನ ಕಾನೂನು ಈಗ ಜಾರಿಯಲ್ಲಿದೆ. ಹಿಂದಿನ ಕಾಂಗ್ರೆಸ್ ಪಕ್ಷ ಗ್ಯಾಟ್ ಒಪ್ಪಂದವನ್ನು ಒಳಗೊಂಡು ಬಹುತೇಕ ಆರ್ಥಿಕ ನೀತಿಗಳನ್ನು ವಿಶ್ವವ್ಯಾಪಾರ ಸಂಘಟನೆಯ ಮಾರ್ಗದರ್ಶನದಂತೆ ರೂಪಿಸಿದ್ದರೂ ೨೦೦೪ರಲ್ಲಿ ಯು.ಪಿ.ಎ. ಸರಕಾರಕ್ಕೆ ಬೆಂಬಲಿಸಿದ್ದ ಎಡಪಕ್ಷಗಳ ಒತ್ತಡದಿಂದಾಗಿ ಹೊಸ ಭೂಸ್ವಾಧೀನ ಕಾನೂನಿಗೆ ಚಾಲನೆ ಕೊಟ್ಟು ೨೦೧೩ರಲ್ಲಿ ಕಾನೂನಾಗಿ ಮಾರ್ಪಟ್ಟಿತು. ಈ ಕಾನೂನು ಒಂದು ಹಂತದವರೆಗೂ ವಿವೇಚನಾ ರಹಿತವಾದ ಭೂಸ್ವಾಧೀನ ನೀತಿಯಿಂದ ರೈತರನ್ನು ಕಾಪಾಡುತ್ತದೆ. ಆದರೆ ಕೇಂದ್ರದ ಮೋದಿಯವರ ಬಿ.ಜೆ.ಪಿ. ಸರಕಾರ ಈಗಾಗಲೇ ಸುಗ್ರೀವಾಜ್ಞೆಗಳ ಮೂಲಕ ಭೂಸ್ವಾಧೀನ ಕಾನೂನಿಗೆ ತಿದ್ದು ಪಡಿಮಾಡಲು ಹೊರಟಿದೆ. ರಾಜ್ಯ ಸಭೆಯಲ್ಲಿ ಬಿ.ಜೆ.ಪಿ. ಬಣಕ್ಕೆ ಬಹುಮತವಿಲ್ಲದ ಕಾರಣ ಈ ಸುಗ್ರೀವಾಜ್ಞೆಗಳು ಮೂಲೆ ಸೇರಿದೆ. ವ್ಯಾಪಾರಿಗರ ಪಕ್ಷವಾದ ಬಿ.ಜೆ.ಪಿ. ಕಾರ್ಪೋರೇಟ್ ಕಂಪನಿಗಳಿಗೆ ಪೂರಕವಾದ ಭೂಸ್ವಾಧಿನ ಕಾನೂನು ತರಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಮುಂಬರುವ ದಿನಗಳಲ್ಲಿ ಬರಿ ಕೈಗಾರಿಕೆಗಳಿಗೆ ಮಾತ್ರ ಭೂಮಿಯಲ್ಲಿ ಕೃಷಿಗಾಗಿಯೇ ಭೂಮಿಯನ್ನು ರೈತನಿಂದ ಕಸಿದ ಕಾರ್ಪೋರೇಟ್ ಕಂಪನಿಗಳಿಗೆ ಕೊಡಲಾಗುತ್ತದೆ. ಅದಕ್ಕೆ ಪೂರಕವಾಗಿ ಇಂದು ರೈತನನ್ನು ಆತ್ಮಹತ್ಯೆಗೆ ತಳ್ಳಲಾಗುತ್ತದೆ.

ಕೃಷಿಯನ್ನು, ಕೃಷಿಕನನ್ನೂ ಉಳಿಸಿಕೊಳ್ಳಲು ರೈತ ಚಳುವಳಿಗಳು ಈಗ ಎಚ್ಚೆತ್ತುಕೊಳ್ಳಬೇಕಾಗಿದೆ. ಭೂಮಿ ಮತ್ತು ರೈತನ ಸಂಬಂಧವನ್ನು ಉಳಿಸಿಕೊಳ್ಳುವುದು ಈಗ ರೈತ ಚಳುವಳಿಗಳ ಜವಾಬ್ದಾರಿ. ಭೂಮಿ ಸಂಬಂಧವನ್ನು ಕಳೆದುಕೊಂಡ ಮೇಲೆ ರೈತ ರೈತನಾಗಿ ಉಳಿಯುವುದಿಲ್ಲ. ಆಗ ರೈತ ಸಂಘಟನೆಗಳ ಅಸ್ತಿತ್ವವೂ ಉಳಿಯುವುದಿಲ್ಲ. ಕಾರಣ ಇಂದು ವಿವಿಧ ಬಣಗಳಾಗಿ ಕೇವಲ ಪ್ರತಿಕ್ರಿಯೆಗಳಿಗೆ ಸೀಮಿತಗೊಂಡ ರೈತ ಚಳುವಳಿಗಳು ಒಂದಾಗಿ ಪರ್ಯಾಯ ಕ್ರಿಯೆಗೆ ಇಳಿಯಬೇಕು.

ನನ್ನ ಅಭಿಪ್ರಾಯದಲ್ಲಿ ಕಾರ್ಪೋರೇಟ್ ಕೃಷಿಗೆ ಸಹಕಾರಿ ಕೃಷಿಯನ್ನು ಎದುರಿಗೆ ನಿಲ್ಲಿಸಬೇಕು. ರೈತನಿಗೆ ರೈತನೇ ಸಹಕಾರ ನೀಡಬೇಕು. ಸಮಾಜವಾದಿ ಪರಿಕಲ್ಪನೆಯ ಈ ಸಹಕಾರಿ ವ್ಯವಸ್ಥೆ ಭಾರತದಲ್ಲಿ ಯಶಸ್ವಿಯಾಗಿಲ್ಲ. ಬಂಡವಾಳ ವಾದಿ ವ್ಯವಸ್ಥೆ, ವ್ಯಕ್ತಿವಾದಿ ಮನೋಭಾವನೆಯ ಶಕ್ತಿಗಳು ಸಹಕಾರಿ ವ್ಯವಸ್ಥೆ ನಮ್ಮ ದೇಶದಲ್ಲಿ ವಿಫಲವಾಗಲು ಕಾರಣವಾಗಿದೆ. ಇಂದು ರೈತ ಸಂಘಟನೆಗಳು, ರೈತ ಚಳುವಳಿಗಳು ಸರಕಾರಗಳ ರೈತ ವಿರೋಧಿ ನೀತಿಗಳಿಗೆ ಪ್ರತಿರೋಧ ವ್ಯಕ್ತಪಡಿಸುತ್ತಲೇ ಪರ್ಯಾಯ ವ್ಯವಸ್ಥೆಯೊಂದನ್ನು ನಿರ್ಮಿಸಬೇಕಾದ ಅವಶ್ಯ ಕಥೆಯಿದೆ. ಈಗಾಗಲೇ ಭೂಮಿಯ ಮೇಲಿನ ಹಕ್ಕನ್ನು, ಸಂಬಂಧವನ್ನು ಕಳೆದುಕೊಳ್ಳುತ್ತಿರುವ ರೈತನಿಗೆ ಬದುಕನ್ನು, ಭರವಸೆಯನ್ನು ಕೊಡಬೇಕಿದೆ. ಅದಕ್ಕಾಗಿ ರೈತ ಸಂಘಟನೆಗಳು ಎಲ್ಲ ಭಿನ್ನಮತವನ್ನು ಬದಿಗಿರಿಸಿ ಒಂದಾಗಬೇಕಿದೆ. ಆತ್ಮಹತ್ಯೆಗೆ ಇಳಿವ ರೈತ ಅನಾಥ ಪ್ರಜ್ಞೆಗೆ ಒಳಗಾಗುತ್ತಾನೆ ಎಂಬ ಸತ್ಯವನ್ನು ಮನಗಾಣಬೇಕು. ಇಷ್ಟು ಜಾತಿ, ಇಷ್ಟು ಧರ್ಮ, ಜಾತಿ-ಧರ್ಮಕ್ಕೆ ಇರುವ ಸಾವಿರಾರು ದೇವರು. ಜಾತಿ ಸಂಘ, ಧರ್ಮದ ಸಂಘಟನೆ ಇಷ್ಟೆಲ್ಲ ಇದ್ದರೂ ರೈತನನ್ನು ಯಾವ ಜತಿ, ಧರ್ಮ ದೇವರು ಕಾಪಾಡುತ್ತಿಲ್ಲ. ಅವನು ಅನಾಥ ಪ್ರಜ್ಞೆಗೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಯಾವ ಜಾತಿ, ಧರ್ಮ, ದೇವರು ಮಾಡಲಾಗದ ಕೆಲಸವನ್ನು ಸಂಘಟಿತ ರೈತ ಚಳುವಳಿಗಳು ಮಾಡಬಹುದು. ನೇಣಿನಹಗ್ಗ ಹಿಡಿದು ಹೊರಟ ರೈತನಿಗೆ ಬಾರಕೋಲು ಹಿಡಿದು ವಿಧಾನ ಸೌಧ, ಪಾರ್ಲಿಮೆಂಟಿನತ್ತ ನಡೆಯುವಂತೆ ಮಾಡುವ ಅಪಾರ ಶಕ್ತಿ ಇರುವುದು ರೈತ ಚಳುವಳಿಗೆ. ಈ ರೈತ ಚಳುವಳಿ ಕೇವಲ ಬೇಡಿಕೆಗೆ ಸೀಮಿತವಾಗದೆ ಒಂದು ರಾಜಕೀಯ ಶಕ್ತಿಯಾಗಿ ಸಮಾನಶೋಷಿತ ಜನ ಸಮೂಹದ ಜೊತೆಗೂಡಿ ಪ್ರಭುತ್ವವನ್ನೇ ಕೈವಶ ಮಾಡಿಕೊಳ್ಳುವ ಗುರಿ ಕನಸು ಹೊಂದಿರಬೇಕು.

■

ಸೃಜನಶೀಲತೆಯನ್ನು ಉಳಿಸಿಕೊಳ್ಳುವ, ಸಿದ್ಧಾಂತಗಳ ನಿರ್ಮಿತಿಯಲ್ಲಿ ನೆರವಾಗುವ, ಅಭಿವ್ಯಕ್ತಿಯ ವಿಭಿನ್ನ ಸಾಧ್ಯತೆಯನ್ನು ಅರಸುವ ನೆಲೆಯಲ್ಲಿ ಸಾಹಿತ್ಯ ಪತ್ರಿಕೆಗಳು ಸಾಂಸ್ಕೃತಿಕವಾಗಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ.

– ಎನ್. ಎಸ್. ಶ್ರೀಧರಮೂರ್ತಿ

ಮಾಧ್ಯಮಗಳು : ಸಂಕಷ್ಟ ಮತ್ತು ಜವಾಬ್ದಾರಿ

● ಆರ್. ಪೂರ್ಣಿಮಾ

ಜನಮಾನಸವನ್ನು ಸಮಕಾಲೀನ ಬೆಳವಣಿಗೆಗಳ ಜೊತೆ ಬೆಸೆಯುವ ಮಾಧ್ಯಮಗಳು ಎಂದಾದರೂ ಸಂಕಷ್ಟಗಳಿಂದ ಹೊರತಾಗಿವೆಯೇ ಎಂದು ಕೇಳಿದರ ಎಂದಿಗೂ ಇಲ್ಲ ಎಂದು ಹೇಳಬಹುದು; ಹಾಗೆಯೇ ಮಾಧ್ಯಮಗಳು ಜವಾಬ್ದಾರಿಯಿಂದ ದೂರವಾಗಿವೆಯೇ ಎಂದು ಕೇಳಿದರೆ ಎಂದಿಗೂ ಕೂಡದು ಎಂದು ಹೇಳಬೇಕು. ಮಾಧ್ಯಮಗಳು ಆಳುವವರನ್ನು ಪ್ರಶ್ನಿಸುವುದರಿಂದ ಸಂಕಷ್ಟಗಳು ಇದ್ದೇ ಇರುತ್ತವೆ; ಮಾಧ್ಯಮಗಳು ಜನರಿಗೆ ಉತ್ತರದಾಯಿ ಆಗಿರುವುದರಿಂದ ಜವಾಬ್ದಾರಿ ಇದ್ದೇ ಇರಬೇಕಾಗುತ್ತದೆ. ಸಂಕಷ್ಟ ಮತ್ತು ಜವಾಬ್ದಾರಿ ಇಲ್ಲದ ಮಾಧ್ಯಮಗಳನ್ನು ಎಲ್ಲಾದರೂ ಕಂಡರೆ ಎಲ್ಲೋ ಏನೋ ಸರಿಯಾಗಿಲ್ಲ ಎಂದೇ ತಿಳಿಯಬೇಕು.

ಜಗತ್ತಿನ ಯಾವ ಭಾಗದಲ್ಲಾದರೂ ಆಗಲಿ ಮಾಧ್ಯಮಗಳು ಹುಟ್ಟಿರುವುದು ಪ್ರಜಾಪ್ರಭುತ್ವ, ಸ್ವತಂತ್ರ ಚಿಂತನೆ, ದಬ್ಬಾಳಿಕೆಗೆ ವಿರೋಧ, ಆಳುವವರನ್ನು ಪ್ರತಿಭಟಿಸುವ ಮನೋಭಾವ ಇವುಗಳ ಜೊತೆಗೆ. ಪ್ರಭುತ್ವವನ್ನು ಪ್ರಶ್ನಿಸುವುದೇ ಪತ್ರಿಕೆಯ ಹುಟ್ಟಿಗೆ ಕಾರಣ ಎಂದು ಹೇಳಬಹುದು. ಭಾರತದಲ್ಲಿ ರಾಷ್ಟ್ರೀಯ ಚಳವಳಿಯ ಭಾಗವಾಗಿ ಪತ್ರಿಕೆಗಳು ಹುಟ್ಟಿ ಬೆಳೆದವು. ಪತ್ರಿಕೆಗಳು ಹೋರಾಟದ ಅಸ್ತ್ರಗಳಾದ್ದರಿಂದಲೇ ಗಾಂಧೀಜಿಯವರಿಂದ ಮೊದಲುಗೊಂಡು ರಾಷ್ಟ್ರೀಯ ಹೋರಾಟದ ಬಹುಪಾಲು ನೇತಾರರು ಪತ್ರಕರ್ತರಾಗಿದ್ದರು.

ಗಾಂಧೀಜಿಯವರಿಗೂ ಪತ್ರಿಕೆಗಳೇ ಸತ್ಯಾಗ್ರಹದ ಪ್ರಬಲ ಅಸ್ತ್ರಗಳಾಗಿದ್ದವು. ಹಲವಾರು ಪತ್ರಿಕೆಗಳನ್ನು ಆರಂಭಿಸಿ, ಸತತವಾಗಿ ಬರೆದ ಅವರು ನಮ್ಮ ದೇಶದ ಬಹು ದೊಡ್ಡ ಪತ್ರಿಕಾ ಹೋರಾಟಗಾರ. ಆ ಕಾಲದಲ್ಲೂ ಅವರು ಪತ್ರಿಕೆಗಳಲ್ಲಿ ಬರೆದದ್ದೆಲ್ಲಾ ದೇಶದ ಮೂಲೆಮೂಲೆಯನ್ನು ತಲುಪುತ್ತಿತ್ತು. ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ಮೊದಲು ಆರಂಭಿಸಿದ ಹೋರಾಟಕ್ಕೆ 'ಇಂಡಿಯನ್ ಒಪೀನಿಯನ್' ಪತ್ರಿಕೆ ಮುಖವಾಣಿಯಾಗಿತ್ತು. 'ಇಂಡಿಯನ್ ಒಪೀನಿಯನ್ ಪತ್ರಿಕೆ ಇಲ್ಲದೆ ಸತ್ಯಾಗ್ರಹ ಅನ್ನುವುದೇ ಹುಟ್ಟುತ್ತಿರಲಿಲ್ಲ' ಎಂದು ಅವರೇ ಒಂದೆಡೆ ಹೇಳಿಕೊಂಡಿದ್ದಾರೆ. ಭಾರತಕ್ಕೆ ಬಂದ ಮೇಲೆ ಅವರು ಯಂಗ್ ಇಂಡಿಯ, ನವಜೀವನ, ಹರಿಜನ ಪತ್ರಿಕೆಗಳನ್ನು, ನಂತರ ಹರಿಜನ ಬಂಧು, ಹರಿಜನ ಸೇವಕ ಪತ್ರಿಕೆಗಳನ್ನು ನಡೆಸಿದರು. ಪತ್ರಕರ್ತ– ಸಂಪಾದಕರಾಗಿ ಸುಮಾರು ೪೦ ವರ್ಷಗಳ ಕಾಲ ಸತತವಾಗಿ ಬರೆದ ಅವರು 'ಪತ್ರಿಕೆಗಳಲ್ಲಿ ಪ್ರತಿದಿನ ನನ್ನ

ಹೃದಯ ಆತ್ಮಗಳನ್ನು ತೆರೆದುಕೊಂಡಿದ್ದೇನೆ' ಎಂದು ಹೇಳಿದ್ದಾರೆ. ಬಾಲಗಂಗಾಧರ ತಿಲಕರ 'ಕೇಸರಿ' ಪತ್ರಿಕೆಯೂ ದೇಶದ ಅನೇಕ ಭಾಷೆಗಳಿಗೆ ಅನುವಾದಗೊಳ್ಳುತ್ತಿತ್ತು.

ರಾಷ್ಟ್ರೀಯ ಹೋರಾಟ ಕಾಲದಲ್ಲಿ ಭಾರತದ ಪತ್ರಿಕೆಗಳೆಲ್ಲ ಸಾಮ್ರಾಜ್ಯಶಾಹಿ ಆಡಳಿತವನ್ನು ಉಗ್ರವಾಗಿ ವಿರೋಧಿಸಿದ್ದರಿಂದ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿದ್ದವು. ಪತ್ರಿಕೆಗಳಿಗೆ ನಿರ್ಬಂಧ ಹೇರುವುದು, ಸಂಪಾದಕರನ್ನು ಗಡೀಪಾರು ಮಾಡುವುದು, ಅವರನ್ನು ಬಂಧಿಸಿ ಸೆರೆಮನೆಗೆ ಅಟ್ಟುವುದು, ಮುದ್ರಣಾಲಯಗಳನ್ನು ಮುಚ್ಚಿ ಮುಟ್ಟುಗೋಲು ಹಾಕಿಕೊಳ್ಳುವುದು ಎಲ್ಲವೂ ದೇಶದಾದ್ಯಂತ ನಡೆದವು. ಕನ್ನಡ ಪತ್ರಿಕಾರಂಗದಲ್ಲೂ ಇದಕ್ಕೆ ಹಲವಾರು ಉದಾಹರಣೆಗಳಿವೆ. ಪ್ರಭುತ್ವದ ದಬ್ಬಾಳಿಕೆಯನ್ನು ಎದುರಿಸುವುದು ಪತ್ರಿಕೆಗಳ ಜವಾಬ್ದಾರಿ ಮತ್ತು ಆ ಕಾರಣ ಸಂಕಷ್ಟ ತಪ್ಪಿದ್ದಲ್ಲ. ಆದರೆ ಭಾರತೀಯ ಪತ್ರಿಕಾರಂಗ ಅದಕ್ಕೆ ಹೆದರಲಿಲ್ಲ ಎನ್ನುವುದೇ ಬಹಳ ಮುಖ್ಯ. ಪತ್ರಿಕೆಗಳನ್ನು ಹತ್ತಿಕ್ಕಲು ಬ್ರಿಟಿಷರು ತಂದ ಕಾಯಿದೆಗಳು ಈಗಲೂ ಚಾಲ್ತಿಯಲ್ಲಿವೆ ಎನ್ನುವುದೇ ದೊಡ್ಡ ವಿಪರ್ಯಾಸ.

ಭಾರತದಲ್ಲಿ ಪತ್ರಿಕೆಗಳು ಹೋರಾಟದ ಅಸ್ತ್ರಗಳಾಗಿ, ದೇಶಭಕ್ತರ ವಲಯದ ಪ್ರಮುಖ ಚಟುವಟಿಕೆಯಾಗಿತ್ತು. ಹಾಗಿದ್ದರೂ ದೆಹಲಿ, ಕೊಲ್ಕತ್ತ, ಮುಂಬೈ, ಮದ್ರಾಸ್ ಮುಂತಾದ ಸ್ಥಳಗಳಲ್ಲಿ ಕೆಲವು ಶ್ರೀಮಂತರು ಕಂಪೆನಿಗಳ ಮೂಲಕ ಪತ್ರಿಕೆಗಳನ್ನು ಪ್ರಕಟಿಸಿ ಅದನ್ನೊಂದು ಉದ್ಯಮವಾಗಿ ಬೆಳೆಸುತ್ತಿದ್ದರು. ಮುಖ್ಯವಾಗಿ ಇಂಗ್ಲಿಷ್ ಪತ್ರಿಕೆಗಳಾದ ಇವುಗಳ ರಾಷ್ಟ್ರಪ್ರೇಮವನ್ನೂ ಪ್ರಶ್ನಿಸುವಂತಿರಲಿಲ್ಲ. ಸ್ವಾತಂತ್ರ್ಯ ಬಂದ ನಂತರ ದೇಶದ ಪತ್ರಿಕಾರಂಗದ ಸ್ವರೂಪ ಮತ್ತು ಆಶಯ ಗಮನಾರ್ಹವಾಗಿ ಬದಲಾದವು. ಹೋರಾಟದ ಅಸ್ತ್ರಗಳಾಗಿದ್ದ ಪತ್ರಿಕೆಗಳು ಉದ್ಯಮದ ಸ್ವರೂಪ ಪಡೆದು, ಪತ್ರಿಕೋದ್ಯಮ ವಿಸ್ತಾರವಾಗಿ ಬೆಳೆಯಿತು. ಬಂಡವಾಳ ಹೂಡಿದ ಉದ್ಯಮ, ಸಹಜವಾಗಿ ಪತ್ರಿಕೆಯನ್ನು ಒಂದು ಉತ್ಪನ್ನವಾಗಿ ಪರಿಗಣಿಸಿತು; ಮಾರುಕಟ್ಟೆಯ ವಿಸ್ತರಣೆ, ಜಾಹೀರಾತು ಮೂಲಕ ಲಾಭದ ಗಳಿಕೆ, ಪತ್ರಿಕೆಗಳ ಹೆಚ್ಚು ಪ್ರಸರಣದ ಮೂಲಕ ಶಕ್ತಿಸಾಮರ್ಥ್ಯ ಪ್ರದರ್ಶನ ಇವುಗಳನ್ನು ಬಯಸಿತು. ಆದರೆ ಸ್ವಾತಂತ್ರ್ಯ ಬಂದ ನಂತರ ದೇಶ ಕಟ್ಟುವ ಕೆಲಸ ಹೇಗಿದೆ ಎಂಬುದನ್ನು ಗಮನಿಸಲು ಮರೆಯಲಿಲ್ಲ. ದಾಸ್ಯವನ್ನು ಕಿತ್ತೊಗೆದು ಸ್ವಾತಂತ್ರ್ಯ ಗಳಿಸಿದ ಮೇಲೆ ಜನರೇ ಆಡಳಿತ ನಡೆಸುವ ಪ್ರಯೋಗದ ಕಷ್ಟನಷ್ಟಗಳು, ಸರ್ಕಾರದ ಗೆಲುವು ಸೋಲುಗಳು, ರಾಜಕಾರಣಿಗಳ ಭ್ರಷ್ಟಾಚಾರ, ಬಡಜನರ ಉದ್ಧಾರದ ವಿಳಂಬ, ಭ್ರಮನಿರಸನಗಳು ಎಲ್ಲವನ್ನೂ ಪತ್ರಿಕೆಗಳು ಗಮನಿಸಿ ವಿಶ್ಲೇಷಣೆ ನಡೆಸಿ ಜವಾಬ್ದಾರಿ ನಿರ್ವಹಿಸಿದವು. ಇದು ಆಳುವ ಸರ್ಕಾರಗಳಿಗೆ ಇಷ್ಟವಾಗಲಿಲ್ಲ ಎನ್ನುವುದನ್ನು ಹೇಳಬೇಕಿಲ್ಲ.

ಸ್ವಾತಂತ್ರ್ಯ ಬಂದು ಕಾಲು ಶತಮಾನ ಕಳೆದ ಮೇಲೆ ಭಾರತೀಯ ಪತ್ರಿಕೋದ್ಯಮಕ್ಕೆ ದೊಡ್ಡ ಆಂತರಿಕ ಅಗ್ನಿಪರೀಕ್ಷೆ ಎದುರಾಯಿತು. ಸರ್ವಾಧಿಕಾರಕ್ಕೆ ಮೊದಲ ಶತ್ರು ಪತ್ರಿಕಾ ಸ್ವಾತಂತ್ರ್ಯ, ಅದನ್ನು ಹರಣ ಮಾಡುವುದೇ ಅದರ ಮೊದಲ ಕೆಲಸ ಎನ್ನುವುದು ಮತ್ತೊಮ್ಮೆ ಸಾಬೀತಾಯಿತು. ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ೧೯೭೫ ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಪತ್ರಿಕೆಗಳ ಕೈಬಾಯಿ ಕಟ್ಟಲು ಯತ್ನಿಸಿದರು. ಸುದ್ದಿಗಳನ್ನು ಪ್ರಕಟಿಸುವ ಮೊದಲು ಆಡಳಿತದ ಒಪ್ಪಿಗೆ ಪಡೆಯುವ ಸೆನ್ಸಾರ್‌ಷಿಪ್ ಜಾರಿಗೆ ಬಂದು ಪತ್ರಿಕೆಗಳನ್ನು ಅತೀವ ಸಂಕಷ್ಟಕ್ಕೆ ಗುರಿ ಪಡಿಸಿತು. ವಿರೋಧ ಪಕ್ಷಗಳ ನಾಯಕರು, ಜನಪರ ಹೋರಾಟಗಾರರ ಹಾಗೆ ಹಲವಾರು ಪತ್ರಕರ್ತರೂ ಬಂಧನಕ್ಕೊಳಗಾದರು. ಸರ್ಕಾರದ ಈ ಮಿತಿಯಿಲ್ಲದ ದಬ್ಬಾಳಿಕೆಯನ್ನು ಎದುರಿಸುವುದು, ಉದ್ಯಮವನ್ನು ಉಳಿಸಿಕೊಳ್ಳಲು ಮಾಲೀಕರು ಪಡುತ್ತಿದ್ದ ಬವಣೆಗೆ ಜೊತೆಯಾಗುವುದು ಮುಂತಾದ ಸಂಕಷ್ಟಗಳನ್ನು ತುರ್ತುಪರಿಸ್ಥಿತಿಯ ಅವಧಿ ಪತ್ರಕರ್ತರಿಗೆ ತಂದಿಟ್ಟಿತು. ಆಗ ಗಲಿಬಿಲಿಗೊಂಡ, ಕಕ್ಕಾಬಿಕ್ಕಿಯಾದ ಪತ್ರಕರ್ತರು ಜೀವ ಮತ್ತು ಉದ್ಯೋಗ ಉಳಿಸಿಕೊಳ್ಳಲು ಕಸರತ್ತು ಮಾಡಬೇಕಾಯಿತು; ನಂತರ 'ಸರ್ಕಾರ ಒಂದು ಚೂರು ನಡು ಬಗ್ಗಿಸಲು ಹೇಳಿದರೆ ನೀವು ಪೂರ್ತಿ ತೆವಳಿಬಿಟ್ಟಿರಿ' ಎಂಬ ಮೂದಲಿಕೆಯನ್ನೂ ಕೇಳಬೇಕಾಯಿತು! ಅಷ್ಟಾಗಿಯೂ 'ಇಂಡಿಯನ್ ಎಕ್ಸ್‌ಪ್ರೆಸ್' ಬಳಗದ ಮಾಲೀಕ ರಾಮನಾಥ ಗೋಯೆಂಕ ಅವರಂಥ ಕೆಲವರು ಸರ್ವಾಧಿಕಾರವನ್ನು ಎದುರಿಸಲು ತಮ್ಮ ಪತ್ರಿಕೆಗಳನ್ನು ಅಸ್ತ್ರಗಳನ್ನಾಗಿ ಬಳಸಿದರೆನ್ನುವುದು ಬಹಳ ಮುಖ್ಯ.

ತುರ್ತು ಪರಿಸ್ಥಿತಿಯ ನಂತರ ದೇಶದಲ್ಲಿ ಏನೇನೋ ಬದಲಾದ ಹಾಗೆ ಪತ್ರಿಕೋದ್ಯಮವೂ ಬದಲಾಯಿತು. ಮುಂದಿನ ಹದಿನೈದು ವರ್ಷಗಳಲ್ಲಿ ದೇಶದ ಮೂಲೆಮೂಲೆಗಳಲ್ಲಿ ಬೆಳೆದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳವಳಿಗಳಿಗೆ ಪತ್ರಿಕೋದ್ಯಮ ಸಾಕಷ್ಟು ಗಮನ, ಬೆಂಬಲ ಮತ್ತು ಪ್ರಚಾರ ಕೊಟ್ಟವು. ಆದರೆ ಪತ್ರಿಕಾ ಸಂಸ್ಥೆಗಳ ಆಡಳಿತವರ್ಗಗಳು ಸಂಕಷ್ಟಗಳನ್ನು ಮೈಮೇಲೆ ಎಳೆದುಕೊಳ್ಳಲು ಇಚ್ಛಿಸದೆ, ಎಲ್ಲ ಸರ್ಕಾರಗಳೊಂದಿಗೆ ಹೊಂದಿಕೊಳ್ಳುವ, ಎಲ್ಲ ರಾಜಕೀಯ ಪಕ್ಷಗಳನ್ನು ಬೆಂಬಲಿಸುವ ನಿರಾಕ್ರಮಣ ನಿಲುವನ್ನು ತಳೆದಾಗ, ಅಲ್ಲಿ ನೌಕರರಾದ ಪತ್ರಕರ್ತರು ಏನು ಮಾಡಬೇಕು? ಹೊಂದಿಕೊಂಡು ಹೋಗುವುದೇ ಅವರಿಗೆದುರಾದ ದೊಡ್ಡ ಸಂಕಷ್ಟ ಎನ್ನಬಹುದು.

ನಮ್ಮ ದೇಶ ತೊಂಬತ್ತರ ದಶಕದಲ್ಲಿ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣವನ್ನು ತ್ರಿಕರಣಪೂರ್ವಕವಾಗಿ ಒಪ್ಪಿಕೊಂಡಮೇಲೆ, ಪತ್ರಿಕೋದ್ಯಮದ ರೂಪರೇಷೆ ಇನ್ನಷ್ಟು ಬದಲಾಗುವುದು ಅನಿವಾರ್ಯವಾಯಿತು. ಜಾಗತೀಕರಣ ಮತ್ತು ಅದರೊಂದಿಗೆ ಬಂದ ಮಾಹಿತಿ ತಂತ್ರಜ್ಞಾನದ ಕ್ರಾಂತಿ ಎರಡೂ

ಪತ್ರಿಕೋದ್ಯಮದ ಚಹರೆಯನ್ನೇ ಬದಲಾಯಿಸಿವೆ. ಹೊಸ ಸಹಸ್ರಮಾನದಲ್ಲಿ ದೃಶ್ಯ ಮಾಧ್ಯಮದ ಅಗಾಧ ಬೆಳವಣಿಗೆ ಅದಕ್ಕೆ ತಕ್ಕಂತೆ ತನ್ನದೇ ನಿಯಮಗಳನ್ನು ರೂಪಿಸಿಕೊಂಡು ಮುದ್ರಣ ಮಾಧ್ಯಮಕ್ಕೆ ಹೊಸ ಸವಾಲುಗಳನ್ನು ಎಸೆದಿದೆ. ಅವುಗಳನ್ನು ಎದುರಿಸಿ ಅಸ್ತಿತ್ವ ಮತ್ತು ಅಸ್ಮಿತೆ ಉಳಿಸಿಕೊಳ್ಳುವ ಸಂಕಷ್ಟ ಉದ್ದಕ್ಕೂ ಇದ್ದೇ ಇರುತ್ತದೆ. ಫೇಸ್‌ಬುಕ್, ಟ್ವಿಟರ್, ವಾಟ್ಸಾಪ್‌ಗಳೂ ಸೇರಿ ನವಮಾಧ್ಯಮ ಕ್ಷಣಕ್ಷಣಕ್ಕೆ ಹಾಕುವ ಸವಾಲುಗಳು ಮತ್ತು ಅವುಗಳಲ್ಲಿ ಹಿಂದೆಂದೂ ಕಾಣದಂಥ ಸಮುದಾಯದ ಪಾಲ್ಗೊಳ್ಳುವಿಕೆ ಇವುಗಳನ್ನು ಗಮನಿಸದೆ ಇಂದು ಮುದ್ರಣ ಮಾಧ್ಯಮ ಮತ್ತು ದೃಶ್ಯ ಮಾಧ್ಯಮ ಕೆಲಸ ಮಾಡಲು ಸಾಧ್ಯವಿಲ್ಲ. ಪತ್ರಿಕಾಲಯಗಳು ಮತ್ತು ಟಿವಿ ವಾಹಿನಿಗಳ ಕಾರ್ಯಾಲಯಗಳೆಲ್ಲ ಇಂದು ತಂತ್ರಜ್ಞಾನ ಕಾರ್ಖಾನೆಗಳಂತೆ ಕಾಣುವುದರ ಮಧ್ಯೆ ಮುಖ್ಯವಾದುದೇನೋ ಕಳೆದು ಹೋಗಿರುವಂತೆ ಭಾಸವಾಗುತ್ತಿದೆ.

ನಲವತ್ತು ವರ್ಷಗಳ ಹಿಂದೆ ಪ್ರತಿಯೊಂದು ಭಾಷೆಯಲ್ಲೂ ಬೆಳೆದ ಸಾಂಸ್ಕೃತಿಕ ಚಳವಳಿಗಳನ್ನು ಪೋಷಿಸುವ ಜವಾಬ್ದಾರಿಯನ್ನು ಪತ್ರಿಕೆಗಳು ನಿರ್ವಹಿಸಿದ್ದವು. ಸಾಹಿತ್ಯ, ರಂಗಭೂಮಿ, ಚಿತ್ರಕಲೆ, ಸುಗಮಸಂಗೀತ, ಚಲನಚಿತ್ರಗಳಲ್ಲಿ ಹುಟ್ಟಿದ ಹೊಸ ಆಶಯಗಳ ಚಳವಳಿಗಳಿಗೆ ಪತ್ರಿಕೆಗಳೇ ವೇದಿಕೆಯಾಗಿದ್ದವು. ಈ ಸಾಂಸ್ಕೃತಿಕ ಜವಾಬ್ದಾರಿಯನ್ನು ಇಂದಿನ ಮಾಧ್ಯಮಗಳು ಮರೆತೇಬಿಟ್ಟಿವೆ ಎಂದು ಅನೇಕರು ಕೊರಗುವುದರಲ್ಲಿ ನಿಜವಿದೆ. ಕೆಲವು ಪತ್ರಿಕೆಗಳ ಅಪವಾದ ಬಿಟ್ಟರೆ ಇಂದು ಬಹುತೇಕ ಪತ್ರಿಕೆಗಳಿಗೆ ಮತ್ತು ದೃಶ್ಯಮಾಧ್ಯಮಕ್ಕೆ 'ಸಂಸ್ಕೃತಿ' ಎಂದರೆ ಕಮರ್ಷಿಯಲ್ ಸಿನಿಮಾ ಮಾತ್ರ, ಏಕೆಂದರೆ, ಇದೇ ಅವುಗಳ ಆದಾಯದ ಪ್ರಮುಖ ಮೂಲ ಎನ್ನುವುದೂ ಎಲ್ಲರಿಗೆ ಗೊತ್ತು. ಜೀವನಶೈಲಿ ಮತ್ತು ಮನರಂಜನೆಗೆ ಮಾಧ್ಯಮಗಳಲ್ಲಿ ಸಿಗುವ ಪ್ರಾಶಸ್ತ್ಯ ನೋಡಿದರೆ, ನಮ್ಮ ಸಮಾಜದಲ್ಲಿ ಯಾವ ಸಮಸ್ಯೆಯೂ ಇಲ್ಲವೇನೋ ಎಂಬ ಭ್ರಮೆ ಹುಟ್ಟುತ್ತದೆ. ಆದರೆ ರೈತರ ಆತ್ಮಹತ್ಯೆಗಳು ಮಾಧ್ಯಮಗಳ ಆತ್ಮಸಾಕ್ಷಿಯನ್ನು ಅಣಕ ಮಾಡದೇ ಇರುವುದಿಲ್ಲ.

ಜಗತ್ತಿನಾದ್ಯಂತ ಆಗುತ್ತಿರುವಂತೆ, ನಮ್ಮ ದೇಶದಲ್ಲೂ ಪ್ರಮುಖ ರಾಜಕಾರಣಿಗಳು, ಉದ್ಯಮಪತಿಗಳು ಮಾಧ್ಯಮಗಳ ಮಾಲೀಕರಾಗುವುದು ಹೆಚ್ಚುತ್ತಿದೆ. ಇದು ಯಾವುದಕ್ಕೆ ಬಂಡವಾಳ ಹೂಡಿಕೆ ಎನ್ನುವುದನ್ನು ಊಹಿಸಬಹುದು. ಯಾವ ರಾಜಕೀಯ ಪಕ್ಷ, ಯಾವ ರಾಜಕೀಯ ಪಕ್ಷದ ಸರ್ಕಾರ ಎಂಬುದನ್ನು ಅವಲಂಬಿಸಿಯೇ ಮಾಧ್ಯಮ ಸಂಸ್ಥೆಗಳ, ಮುಖ್ಯವಾಗಿ ದೃಶ್ಯ ಮಾಧ್ಯಮದ ಕಾರ್ಯನೀತಿ ಮತ್ತು ಕಾರ್ಯಶೈಲಿ ಎರಡೂ ನಿರ್ಧಾರವಾಗುತ್ತಿವೆ. ಇವುಗಳ ನೆರಳಿನಲ್ಲಿ ಪತ್ರಕರ್ತರು ತಮ್ಮ ವೈಯಕ್ತಿಕ ವರ್ಚಸ್ಸು ಮತ್ತು ಹಣಕಾಸು

ಎರಡನ್ನೂ ಹೆಚ್ಚಿಸಿಕೊಳ್ಳಲು ಯತ್ನಿಸುವುದೂ ಹೆಚ್ಚುತ್ತಿದೆ. ಮಾಲೀಕರು ಬಿಡಿ, ಪತ್ರಕರ್ತರೂ ಪಕ್ಷಗಳ ವಕ್ತಾರರಾಗಿ, ಅದರ ಫಲಗಳನ್ನು ಪಡೆಯುವುದು ಎಲ್ಲರಿಗೂ ತಿಳಿದಿದೆ. ಮಾಧ್ಯಮ ರಂಗ ಸರ್ಕಾರಕ್ಕೆ ಶಾಶ್ವತ ವಿರೋಧ ಪಕ್ಷದಂತೆ ಕೆಲಸ ಮಾಡಬೇಕಿತ್ತು. ಬದಲಿಗೆ ದಲ್ಲಾಳಿ ಕೆಲಸ ಮಾಡುತ್ತಿರುವುದು, ಚುನಾವಣೆಗೆ ಟಿಕೆಟ್, ನಾಮಕರಣಗಳಿಂದ ಹಿಡಿದು ಭೂ ಅವ್ಯವಹಾರಗಳ ತನಕ ಎಲ್ಲ ಬಗೆಯ ರಾಜಕೀಯ ಭ್ರಷ್ಟಾಚಾರಗಳಲ್ಲಿ ಪತ್ರಕರ್ತರೂ ಪಾಲುದಾರರಾಗುವುದು ಯಾರಿಗೆ ಗೊತ್ತಿಲ್ಲ? ಇತ್ತೀಚೆಗೆ ಸಚಿವರೊಬ್ಬರು ಪತ್ರಕರ್ತರಿಗೆ "ಪ್ರಾಸ್ಟಿಟ್ಯೂಟ್"ಗಳು ಎಂದು ಬಿರುದು ಕೊಟ್ಟರಲ್ಲ? 'ನನ್ನ ಎಂಜಲು ತಿಂದು ಈಗ ನನ್ನ ವಿರುದ್ಧವೇ ಬರೆಯುತ್ತೀರಾ' ಎಂದು ಬ್ಯಾಂಕ್‌ಗಳಿಗೆ ನಾಮ ತೀಡಿದ ಉದ್ಯಮಿಯೊಬ್ಬರು ಇತ್ತೀಚೆಗೆ ಹೂಂಕರಿಸಿದರಲ್ಲ? ಈ ಕಳಂಕವನ್ನು ತೊಳೆದುಕೊಳ್ಳುವ ಸವಾಲು ಎದುರಿಸುವುದೇ ಇಂದಿನ ದೊಡ್ಡ ಸಂಕಷ್ಟ. ಸದ್ಯ ದೇಶದ ಎಲ್ಲ ಪತ್ರಕರ್ತರೂ ಹೀಗಿಲ್ಲ ಎನ್ನುವ ಸಮಾಧಾನವೇ ಮಾಧ್ಯಮದ ಮರ್ಯಾದೆ ಉಳಿಸಬೇಕು.

ಮಾಧ್ಯಮ ರಂಗ ತನ್ನ ಕಳಂಕದ ಸಂಕಷ್ಟ ಕಳೆದುಕೊಳ್ಳುವ ಬಗೆಯನ್ನು, ಜವಾಬ್ದಾರಿಯನ್ನು ನೆನಪಿಸಿಕೊಳ್ಳುವ ರೀತಿಯನ್ನು ಬೇರೆ ಯಾರೋ ಬರೆದುಕೊಡಲು ಬರುವುದಿಲ್ಲ. ಪತ್ರಕರ್ತರು ರೂಪಿಸಿಕೊಂಡಿರುವ ಅನೀತಿಸಂಹಿತೆಯನ್ನು ಅವರೇ ಅಳಿಸಿಹಾಕಬೇಕು. ಸರ್ಕಾರಗಳ ಆಮಿಷಗಳು, ಸಂಸ್ಥೆಯ ಮಾಲೀಕವರ್ಗದ ಒತ್ತಡಗಳ ನಡುವೆ ವೃತ್ತಿಯ ಸಾಮಾಜಿಕ ಜವಾಬ್ದಾರಿಯನ್ನು ಕಾಪಾಡಿಕೊಳ್ಳುವುದು ಪತ್ರಕರ್ತರ ಎದುರಿಗಿರುವ ದೊಡ್ಡ ಸವಾಲು. ಆದರೆ ಅದೇ ಅವರ ಹೃದಯ ಮತ್ತು ತಲೆಯಲ್ಲಿ ಇರಬೇಕಾದ 'ಸಾಫ್ಟ್‌ವೇರ್' ಅಲ್ಲವೇ? ಐದು ವರ್ಷದ ಹೆಣ್ಣುಮಕ್ಕಳಿಗೆ ತಾಳಿ ಕಟ್ಟುವ ಬಗ್ಗೆ, ದಲಿತ ಹೆಣ್ಣುಮಕ್ಕಳನ್ನು ಮರಕ್ಕೆ ನೇಣು ಹಾಕುವ ಬಗ್ಗೆ ಬರೆಯದೇ ಸುಮ್ಮನಿರುವುದು ಸರಿಯೇ? ಅಪ್ರಿಯವಾದ ಸತ್ಯಗಳನ್ನೂ ಹೇಳುವುದು ಪತ್ರಕರ್ತರ ಕರ್ತವ್ಯವಲ್ಲವೇ? ಸುದ್ದಿ ಎನ್ನುವ ದೊಡ್ಡ ಸರಕು ಮಾರುಕಟ್ಟೆಯಲ್ಲಿ ಪ್ರಾಮಾಣಿಕತೆಯನ್ನು ಬಿಕರಿ ಮಾಡದೇ ರಕ್ಷಿಸಿಕೊಳ್ಳುವುದು ಹೇಗೆ?

■

ಸಮ್ಮೇಳನದಲ್ಲಿ ಪಾಲ್ಗೊಂಡವರು

ರಾಜಧಾನಿ ಬೆಂಗಳೂರು

ನ್ಯಾಮೂ. ಶಿವರಾಜ ಪಾಟೀಲ; ಜಿ. ಎಸ್. ಸಿದ್ಧಲಿಂಗಯ್ಯ; ಮನು ಬಳಿಗಾರ; ಎಚ್.ಎಸ್.ಎಂ. ಪ್ರಕಾಶ; ಚಂದ್ರಶೇಖರ ಪಾಟೀಲ; ನೀಲಾ ಪಾಟೀಲ; ಕೆ.ಎಸ್. ಪಾರ್ಥಸಾರಥಿ; ಬಿ.ಎನ್. ಸುಮಿತ್ರಾ ಬಾಯಿ; ಬಿ.ಎಲ್. ಶಂಕರ; ಪ್ರಮೀಳಾ ನೇಸರಗಿ; ಅಗ್ನಿ ಶ್ರೀಧರ; ಸಿ.ಎನ್. ರಾಮಚಂದ್ರನ್; ಬಿ. ಸುರೇಶ; ತುಮಕೂರು ಚಂದ್ರಕಾಂತ; ವಿ.ಪಿ. ನಿರಂಜನಾರಾಧ್ಯ; ಹೇಮಲತಾ ಮಹಿಷಿ; ಸಿದ್ದನಗೌಡ ಪಾಟೀಲ; ಆರ್. ಪೂರ್ಣಿಮಾ; ರವೀಂದ್ರ ರೇಶ್ಮೆ; ಚಂದ್ರಶೇಖರ ಕಂಬಾರ; ಗಿರೀಶ ಕಾರ್ನಾಡ; ಕೆ. ಮರುಳ ಸಿದ್ದಪ್ಪ; ಬರಗೂರು ರಾಮಚಂದ್ರಪ್ಪ; ಎಸ್.ಜಿ. ಸಿದ್ಧರಾಮಯ್ಯ; ಆರ್.ಜಿ. ಹಳ್ಳಿ ನಾಗರಾಜ; ರಾಜಶೇಖರ ಮಠಪತಿ (ರಾಗಂ); ಸುಜಾತಾ ಕುಮಟಾ; ಸಿ.ಎಸ್. ದ್ವಾರಕಾನಾಥ; ಕೆ. ಪುಟ್ಟಸ್ವಾಮಿ; ಸು.ಶಿ. ಕಾಡನಕುಪ್ಪೆ; ಜಿ.ಆರ್. ನಾಗೇಶ; ಕೆ. ಶರೀಫಾ; ನೇ.ಭ. ರಾಮಲಿಂಗಶೆಟ್ಟಿ; ಜಿ.ಎನ್. ರಂಗನಾಥ ರಾವ್; ಕೆ.ಎಸ್. ಪರಮೇಶ್ವರ; ವೆಂಕಟೇಶ ಮೂರ್ತಿ ಶಿರೂರ; ಸತೀಶ ಹಂಪಿಹೊಳಿ; ಮೃತ್ಯುಂಜಯ ದೊಡ್ಡವಾಡ; ಕಲಾದೇಗುಲ ಶ್ರೀನಿವಾಸ; ಎಸ್. ಸುನೀತಾ; ಸ್ಪರ್ಶ; ಜ್ಯೋತಿ ರವಿಪ್ರಕಾಶ; ರಾಜಶೇಖರ ನುಲಿ; ಮಾಳವಿಕಾ ಅವಿನಾಶ; ಮಾಲತಿ ಪಟ್ಟಣಶೆಟ್ಟಿ; ದೊಡ್ಡರಂಗೇಗೌಡ; ಎಚ್.ಎಸ್. ವೆಂಕಟೇಶಮೂರ್ತಿ; ಬಿ.ಆರ್. ಲಕ್ಷ್ಮಣರಾವ್; ಎಂ.ಎನ್. ವ್ಯಾಸರಾವ್; ಜಯಂತ ಕಾಯ್ಕಿಣಿ; ಅ.ನಾ. ಪ್ರಸನ್ನ; ಟಿ.ಎನ್. ಸೀತಾರಾಮ; ಎಸ್.ವಿ. ಪ್ರಭಾವತಿ; ಅಗ್ರಹಾರ ಕೃಷ್ಣಮುರ್ತಿ; ವಿಜಯಾ ಸುಬ್ಬರಾಜ; ಜರಗನಹಳ್ಳಿ ಶಿವಶಂಕರ; ಎಂ.ಆರ್. ಕಮಲ; ಬಿಳುಮನೆ ರಾಮದಾಸ; ಡಿ.ಸಿ. ರಾಜಪ್ಪ; ಲತಾ ಗುತ್ತಿ; ಯೋಗಗುರು ಎಚ್.ಎಫ್. ನಾಯ್ಕರ; ಎನ್. ದೇವರಾಜ; ಬಸವರಾಜ ಸಾದರ; ಮೋಹನದೇವ ಆಳ್ವ; ವಿಜಯಾ; ಬಿ.ಆರ್. ಪಾಟೀಲ; ಟಿ.ಎನ್. ದಕ್ಷಿಣಾಮೂರ್ತಿ; ಎಚ್.ಎಲ್. ಪುಷ್ಪಾ; ಉದಯ ಧರ್ಮಸ್ಥಳ; ಆರ್. ಸದಾಶಿವಯ್ಯ; ನಾರಾಯಣ ಘಟ್ಟ; ರಾಂಕೆಂ ಹನುಂತಯ್ಯ; ಭಾಗ್ಯ ಕೃಷ್ಣಮೂರ್ತಿ; ಆರ್. ಲಕ್ಷ್ಮೀ ನಾರಾಯಣ; ವಾಸುದೇವ ಶೆಟ್ಟಿ; ಬಾಕಿನ; ಮೀನಾ ಪಾಟೀಲ; ಡಿಸ್‌ಮ್ಯಾಕ್ಸ್ ಸದಾನಂದ; ಎನ್.ಎನ್. ಕಾತರಕಿ; ಮೋಹನ ಕೊಂಡಜ್ಜಿ; ಟಿ.ಟಿ. ಕಸ್ತೂರಿ; ಇಂದಿರಾ ಕೃಷ್ಣಪ್ಪ; ನಾಗವೇಂದ್ರಸ್ವಾಮಿ ಚಿದರವಳ್ಳಿ; ರುದ್ರಪ್ಪ ಹನಗವಾಡಿ; ನಿರ್ಮಲಾ ಯಲಿಗಾರ; ಸಮತಾ ದೇಶಮಾನೆ; ಅಕ್ಷತಾ ಎನ್. ಗೌಡ; ಶಿವರಾಮಯ್ಯ; ಸಂಪಿಗೆ ತೋಂಟದಾರ್ಯ; ಮಂಗಳೂರು ವಿಜಯ; ಕೃಷ್ಣ ಮಾಸಡಿ; ಶೂದ್ರ ಶ್ರೀನಿವಾಸ; ಬಿ.ಟಿ. ಲಲಿತಾ ನಾಯಕ; ಸಿ. ವೀರಣ್ಣ; ರಂಗಾರೆಡ್ಡಿ ಕೋಡಿರಾಂಪುರ; ಚಂದ್ರಶೇಖರ ಆಲೂರ; ಪದ್ಮರಾಜ ದಂಡಾವತಿ; ಶಾಂತಕುಮಾರ ಪ್ರಜಾವಾಣಿ; ಯಡೂರು ಮಹಾಬಲ; ಈರಪ್ಪ ಕಂಬಳಿ; ಸನತ್ ಬೆಳಗಲಿ; ಗುರುಮೂರ್ತಿ ಪೆಂಡಕೂರ; ಜಿ.ಎಚ್.ಹನ್ನೆರಡು ಮಠ; ಶ್ರೀಪತಿ ಮಂಜಿನಬೈಲು; ಎನ್.ಎಸ್. ಶಂಕರ; ವಿ. ಕೃಷ್ಣಮೂರ್ತಿರಾವ್; ಜಯಲಕ್ಷ್ಮಿ ಪಾಟೀಲ; ಎಂ.ಎಲ್. ಶಂಕರಲಿಂಗಪ್ಪ; ಎಲ್.ಎನ್. ಮುಕುಂದರಾಜ; ಟಿ. ಪದ್ಮ; ಎ. ಶ್ರೀಲತಾ; ಇಂದಿರಾ ಜಮಲದನ್ನಿ;

ರೂಪಶ್ರೀ ಕಲ್ಲಿಗನೂರು; ಬಿ. ಎಸ್. ದಿವಾಕರ; ಪುಂಡಲೀಕ ಕಲ್ಲಿಗನೂರು; ಜಯಪ್ರಕಾಶ ಇಟ್ಟಗಿ; ಗಂಗಾಧರ ಪಂಡಿತ; ಟಿ. ಗೋವಿಂದರಾಜು; ಶಂಕರ ಹೂಗಾರ; ಆರ್. ವೆಂಕಟರಾಜು; ಎಚ್.ಎ. ಪಾರ್ಶ್ವನಾಥ; ಅರವಿಂದ ದಳವಾಯಿ; ಲೋಕಪಾಲ ಜೈನ್; ಜೀವನ್ಮುಖಿ ಸುರೇಶ; ಮಾಯಣ್ಣ; ತಿಮ್ಮಯ್ಯ; ಈ ಬಸವರಾಜು; ಚಂದ್ರಪ್ರಭ ಕಠಾರಿ; ಎಚ್.ಆರ್. ಬಸವರಾಜು; ಸುರೇಶ ಬೆಟಗೇರಿ; ಮಹೇಶ ತಿಪ್ಪಶೆಟ್ಟಿ; ಎಸ್.ಸಿ. ರಂಗನಾಥ; ಲಿಂಗೇಶ ಹುಣಸೂರ; ಗುರುಲಿಂಗ ಅಮ್ಮಣಗಿ; ಸಂಪಿಗೆ ತೋಂಟದಾರ್ಯ; ಸಿ. ಚಿಕ್ಕತಮ್ಮಯ್ಯ; ಬೆ.ರ.ರಂಗರಾಜು; ಸಿದ್ದಯ್ಯ; ಮಧು ಬಿಲ್ಲಿನಕೋಟೆ; ಕೆ.ಎಸ್. ತತ್ಪುರುಷ; ಅರವಿಂದ ಕೆ.ಬಿ.; ಸಂಗಮೇಶ ಉಪಾಸೆ; ಪುಂಡಲೀಕ ಹಾಲಂಬಿ; ಪ್ರಕಾಶ ಆಂಬರಕರ; ಎ. ಮುರಿಗೆಪ್ಪ; ಎಚ್. ಎಂ. ಭಾರತೇಶ; ಅಂ.ಬಿ. ಬಾಣದ; ಕಾ.ವೆಂ.ಶ್ರೀನಿವಾಸ ಮೂರ್ತಿ; ಎಂ.ಎಸ್. ರುದ್ರೇಶ್ವರ ಸ್ವಾಮಿ; ರುದ್ರೇಶ ಅದರಂಗಿ; ಲತಾ ಗುತ್ತಿ; ಎಂ.ಆರ್. ಕಮಲ; ಕಂನಾಡಿಗಾ ನಾರಾಯಣ; ಕೊ.ವೆಂ.ರಾಮಕೃಷ್ಣೇಗೌಡ; ಭೈರಮಂಗಲ ರಾಮೇಗೌಡ; ಹೆಬ್ಬಗೋಡಿ ಗೋಪಾಲ; ಡಾ. ಪದ್ಮಿನಿ; ಕೆ.ಎಂ.ರೇವಣ್ಣ; ಬಿ.ಎನ್. ಪರಡ್ಡಿ; ವೆಂಕೋಬರಾವ ಹೊಸಕೋಟೆ; ಸಿ.ಎನ್. ಮೃತ್ಯುಂಜಯ; ಕೆ.ಬಿ. ಮಹಾದೇವಪ್ಪ; ಅರುಣಕುಮಾರ; ಮನೋಹರ ಎಸ್; ಶಿವಣ್ಣ; ವಿರೂಪಾಕ್ಷಯ್ಯ; ಸದಾಶಿವ ಪಾಟೀಲ; ಬಿ.ಶೃಂಗೇಶ್ವರ; ಕೆ.ಎಲ್.ನಟರಾಜ; ಜಗದೀಶ ಎಸ್.; ಕೆ. ದಿವಾಕರ; ಗುರುಲಿಂಗಯ್ಯ; ಎಸ್. ವೈ. ಗುರುಶಾಂತ; ಸುಬ್ಬು ಹೊಲೆಯಾರ್; ಕೆ. ಸುಬ್ರಮಣ್ಯ; ಕೆ.ಪಿ. ಮಂಜುನಾಥ; ಚಂದ್ರಶೇಖರ; ಸುಗಂಧರಾಜೇ ಅರಸು; ಬಸವರಾಜು ಮೇರ್‌ವೇ; ಜಿ.ಎ. ನರಗುಂದ; ಕೆ.ವಿ. ಸರಸ್ವತಿ; ಮಂಜುನಾಥ ಮಾಗೊಡಿ; ರಮೇಶ ಸಿ.; ಬಿ. ನಿಜಗುಣ ಮೂರ್ತಿ; ಜಿ.ಆರ್. ನಾಗರಾಜು; ಜಿ. ಶಿವಕುಮಾರ; ಆಲಿಬಾಬಾ; ವಿ.ಬಿ. ಮಠದ; ಭಾಸ್ಕರ ಕೆ.ಎನ್.; ಶಾಂತಕುಮಾರ; ವಿ.ಜಿ. ಹರಿವಾಣ; ಜಗದೀಶರೆಡ್ಡಿ ಕೆ.; ಕೊಟ್ರಯ್ಯ ಹಿರೇಮಠ; ವಿಶುಕುಮಾರ; ಎ.ಜೆ. ಸದಾಶಿವ; ಮಾರ್ಕಂಡಪುರ ಶ್ರೀನಿವಾಸ; ಮಹಾಲಿಂಗೇಶ್ವರ ಭಟ್; ಜಯಂತಿ ವೀರಪ್ಪ ಮೊಯಿಲಿ; ಕರೀಗೌಡ ಬೀಚನಹಳ್ಳಿ; ಬಿ.ಕೆ. ಚಂದ್ರಶೇಖರ; ಸಪ್ನ ನಿತಿನ್ ಶಾ; ಪಿ. ಸದಾಶಿವ; ಅನಿಲ ಗೋಕಾಕ; ಡಿ. ಎನ್. ಮುನಿಕೃಷ್ಣ; ನಿಡುಮಾಮಿಡಿ ಸ್ವಾಮಿಗಳು; ಮರಿಮಲ್ಲಯ್ಯ; ಗುಬ್ಬಿ ರೇವಣಾರಾಧ್ಯ; ರಮಾನಂದ ಜ.; ಅರವಿಂದ ದಳವಾಯಿ; ಜಿ. ನಾರಾಯಣ ಮೂರ್ತಿ; ಪ್ರಕಾಶ ಮೂಗಿ; ವಿ.ಡಿ. ಜೇವಿನಮರದ; ಮಾರಪ್ಪ ದಸಂಸ; ಮೋಹನರಾಜ ದಸಂಸ; ಡಾ. ಶ್ರೀಪ್ರಕಾಶ; ಮುನಿರಾಜಯ್ಯ; ಪಾಲನೇತ್ರ; ವಿಭೂತಿ ಹಳ್ಳಿ; ಪ್ರದೀಪ; ಭಾರತಿ ಪ್ರಕಾಶ; ನಾಗರಾಜ ಮೂರ್ತಿ; ಬಿ. ಹರೀಶ ಕುಮಾರ; ಶಾಂತರಾಜ ಮಳವಳ್ಳಿ; ಡ್ರೈವರ್ ರಮೇಶ; ರವಿ ಶಿರಿಯಣ್ಣವರ; ಕನ್ನಡ ಕೃಷ್ಣ; ದೊಡ್ಡೇಗೌಡ; ಕಾಂತರಾಜಪುರ ಸುರೇಶ; ರಾಜಶೇಖರ ಹತಗುಂದಿ; ಕೆ. ರಾಜಕುಮಾರ; ಜಿ. ನರಸಿಂಹ ರೆಡ್ಡಿ; ಮೃತ್ಯುಂಜಯ ಸಾಲಿಮಠ; ಯಲಗುರೇಶ ಸಂಕನಾಳ.

ಬೆಂಗಳೂರು ವಲಯ

ಸತ್ಯನಾರಾಯಣ ಅಣತಿ; ಎನ್.ಎಚ್. ಪಟೇಲ; ರಾಜೇಂದ್ರ ಚೆನ್ನಿ; ಪ್ರಕಾಶ ಹಲಗೇರಿ; ಎಸ್.ಎಂ. ಮಹೇಶ್ವರ ಮೂರ್ತಿ; ಜಿ.ಸಿ. ಜಗದೀಶ; ಕೆ.ಪಿ. ದೇವೇಂದ್ರಯ್ಯ; ಕೆ.ಎಂ.ಪಂಚಾಕ್ಷರಯ್ಯ; ಯು.ಎನ್. ಸಂಗನಾಳ ಮಠ; ಕೆ. ಸಿದ್ಧಪ್ಪ; ಜಿ. ಮುರಿಗೆಪ್ಪ ಗೌಡ; ಪಿ.ಎಂ. ಸಿದ್ದಯ್ಯ; ಸಿ.ವಿ. ಪಾಟೀಲ;

ಬಿ.ಜಿ. ಚನ್ನೇಶ ಹೊನ್ನಾಳಿ; ರಾಮಪ್ಪ ದೊಣ್ಣೇರ; ಶಿವಪ್ರಸಾದ; ಸೈಯದ ಅಹಮದ; ಎಂ.ಜಿ. ಈಶ್ವರ; ಶ್ರೀಕಂಠ ಕೂಡಿಗೆ; ಚಂದ್ರಶೇಖರ ತಾಳ್ಯ; ಕುಮಾರ ಚಲ್ಯ; ಕಡಕೋಳ ಮಲ್ಲಿಕಾರ್ಜುನ; ಎಚ್. ಎ. ಭಿಕ್ಷಾವರ್ತಿಮಠ; ಬಾಮ ಬಸವರಾಜಯ್ಯ; ಸಿರಾಜ ಅಹಮದ; ಡಿ.ಎಸ್. ನಾಗಭೂಷಣ; ಸವಿತಾ ನಾಗಭೂಷಣ; ಸಾ.ಮ.ಶಿವಮಲ್ಲಯ್ಯ; ಎಂ.ಸಿ.ಲಲಿತಾ; ಮಹೇಶ್ವರಪ್ಪ; ವಿ. ಹನುಮಂತಪ್ಪ; ಕಲೀಂ ಬಾಷ; ಅಮರ ನಾರಾಯಣ ಸ್ವಾಮಿ; ಸುರೇಶ ರಾಜೆನವರ; ಶರಣಪ್ಪ; ವಿ.ಬಿ. ದೇಶಪಾಂಡೆ.

ಮೈಸೂರು ವಲಯ

ಮುಜಾಫರ್ ಅಸ್ಸಾದಿ; ಬಿ.ಎನ್. ಶ್ರೀರಾಮ; ಪದ್ಮಾ ಶ್ರೀರಾಮ; ಹಾಲತಿ ಸೋಮಶೇಖರ; ಹಿ.ಶಿ. ರಾಮಚಂದ್ರೇಗೌಡ; ನಂದಿನಿ ಜಯರಾಮ; ಬೋರೇಗೌಡ ಚಿಕ್ಕಮರಳಿ; ಬಿ.ಎ. ಷಂಸುದ್ದೀನ್; ಕುಸುಮಾ ಆಯರಹಳ್ಳಿ; ಜಿ.ಪಿ. ಬಸವರಾಜ; ಕೆ.ಎಸ್. ಭಗವಾನ್; ಉದಯಕುಮಾರ ಹಬ್ಬು; ಜಯಪ್ರಕಾಶ ಮಾವಿನಕುಳಿ; ವೈದೇಹಿ; ಮುರಳೀಧರ ಉಪಾಧ್ಯ; ಬಿ. ಸೋಮಶೇಖರ; ಪಿ.ಪಿ. ಗಿರಿಧಾರ; ಗಂಗಾರಾಂ ಚಂಡಾಳ; ಪ್ರವೀಣ ಬಿ.ಎಂ.; ಪ್ರಶಾಂತ ಬೆಳ್ತಂಗಡಿ; ನಂಜುಂಡಸ್ವಾಮಿ ಎಚ್.ಎ.; ಕೃಪ. ಗಣೇಶ; ಮಮತಾ ಅರಸಿಕೆರೆ; ಮಮತಾ ರಾಣಿ; ನಳಿನ ಡಿ; ಬೂದನೂರು ಪುಟ್ಟಸ್ವಾಮಿ; ಬಾಲಕೃಷ್ಣ ಶೆಟ್ಟಿ; ಸುತ್ತೂರು ಶ್ರೀಗಳು; ಜಿ.ಟಿ. ವೀರಪ್ಪ; ಜ್ಞಾನಪ್ರಕಾಶ ಸ್ವಾಮೀಜಿ; ಶಿವರಾಮು ಕಾಡನಕುಪ್ಪೆ; ಎಸ್.ಆರ್. ಪಾಟೀಲ.

ಬೆಳಗಾವಿ ವಲಯ

ಚೆನ್ನವೀರ ಕಣವಿ; ರಮೇಶ ಧಾನವಾಡಕರ; ಸಿದ್ಧಲಿಂಗ ಪಟ್ಟಣಶೆಟ್ಟಿ; ಗಿರಡ್ಡಿ ಗೋವಿಂದರಾಜ; ಎಚ್.ಎಸ್. ಅನುಪಮಾ; ಆರ್. ಸುನಂದಮ್ಮ; ಗಂಗಾಧರ ಹಿರೇಗುತ್ತಿ; ಶಿವಶಂಕರ ಹಿರೇಮಠ; ಸುಕನ್ಯಾ ಮಾರುತಿ; ಚಂದ್ರಕಾಂತ ಬೆಲ್ಲದ; ಐ.ಜಿ. ಸನದಿ; ಜಯರಾಮ ಹೆಗಡೆ; ಧರಣೇಂದ್ರ ಕುರಕುರಿ; ತಾರಾ ಹೆಗಡೆ; ಟಿ.ಜಿ. ಭಟ್ಟ ಹಾಸಣಗಿ; ಹ.ವೆಂ. ಕಾಖಂಡಿಕಿ; ಮೋಹನ ಹಬ್ಬು; ಬಿ.ಕೆ.ಎಸ್. ವರ್ಧನ್; ಕಿರಣ ಬಾಳಗೋಳ; ಅಶೋಕ ನರೋಡೆ; ಪ್ರಕಾಶ ಖಾಡೆ; ಕಲ್ಲೇಶ ಕುಂಬಾರ; ವಿಜಯಕಾಂತ ಪಾಟೀಲ; ಸತೀಶ ಕುಲಕರ್ಣಿ; ಚೆನ್ನಪ್ಪ ಕಟ್ಟಿ; ಚನ್ನಪ್ಪ ಅಂಗಡಿ; ಮಂಜುನಾಥ ಬಮ್ಮನಕಟ್ಟಿ; ರಾಘವೇಂದ್ರ ಪಾಟೀಲ; ಸತೀಶ ಕುಲಕರ್ಣಿ; ಚೆನ್ನಪ್ಪ ಕಟ್ಟಿ; ರೇವಣಸಿದ್ಧ ಪೂಜಾರ; ಹೇಮಾ ಪಟ್ಟಣಶೆಟ್ಟಿ; ಎಂ.ಬಿ.ಹೂಗಾರ; ರಾಘವೇಂದ್ರ ಬಳ್ಳಾರಿ; ವಿಜಯಾ ಗುತ್ತಲ; ನಿರ್ಮಲಾ ಶೆಟ್ಟರ; ಹಜರತ ಅಲಿ ದೇಗಿನಾಳ; ಬಸವರಾಜ ಗಣಪ್ಪನವರ; ಎಚ್.ಎಫ್. ಯೋಗಪ್ಪನವರ; ಆರ್.ಕೆ. ಬಾಗವಾನ; ಎಚ್.ಎಂ. ಹಳ್ಳೆಮ್ಮನವರ; ಸಂಕಮ್ಮ ಜಿ.ಎಸ್.; ರಾಮಚಂದ್ರ ಗೆದ್ದಣ್ಣವರ; ಲಕ್ಷ್ಮೀಕಾಂತ ಇಟ್ನಾಳ; ಮೋಹನ ಕಳಸದ; ಶಾಂತಲಾ ಹಿರೇಮಠ; ವೀರಭದ್ರ ಕೌದಿ; ಶಾಂತಲಾ ಕೌದಿ; ಮಲ್ಲಿಕಾರ್ಜುನ ಗುಮ್ಮಗೋಳ; ಮುರ್ತುಜಾಬೇಗಂ ಕೊಡಗಲಿ; ಎಸ್.ಆರ್.ರಾವಳ; ಸತೀಶ ಕಾಖಂಡಿಕಿ; ಶಂಕರ ಹೂಗಾರ; ವೀರಣ್ಣ ಮಡಿವಾಳರ; ಎಸ್.ವೈ.ಹಂಜಿ; ಬಸವರಾಜ ಕುಂಬಾರ; ಬಾಬು ಕುಲಕರ್ಣಿ; ಕೆ. ಲಕ್ಷ್ಮಣರಾವ್; ಸತೀಶ ಪಾಟೀಲ; ಕೆ.ಎ. ದೊಡಮನಿ; ಅಕ್ಷತಾ ಕೃಷ್ಣಮೂರ್ತಿ; ವೀರಲಿಂಗನಗೌಡ್ರ; ಕೆ.ಬಿ.ಪವಾರ; ವಿಠ್ಠಲ ಭಂಡಾರಿ; ಬಸವರಾಜ ಗುರಿಕಾರ; ಎ.ಬಿ.

ಹಿರೇಮಠ; ಲಿಂಬನಗೌಡ ಪಾಟೀಲ; ಎನ್.ಜಿ. ಕರೂರ; ದೀನಬಂಧು ಹಳ್ಳಿಗೇರಿ; ವಿ.ಜಿ. ನಾಯಕ; ಎಂ.ಎಚ್. ಹರಿದಾಸ; ಎ.ಎಂ. ಮದರಿ; ಅಶೋಕ ಚಂದರಗಿ; ಶಿವಾನಂದ ಶೆಲ್ಲಿಕೇರಿ; ಎಸ್.ಎಸ್. ಅಂಗಡಿ; ಎಸ್.ಎಸ್. ಇಂಜನಗೇರಿ; ಶಿವರುದ್ರಪ್ಪ ಬೆಕ್ಕಿನಾಳ; ಆನಂದ ಕುಂಚನೂರ; ವಿರೂಪಾಕ್ಷಪ್ಪ ಪಡಿಗೋದಿ; ಲಿಂಗರಾಜ ಸೊಟ್ಟಪ್ಪನವರ; ಸತ್ಯರಾಜು ಆರ್.; ಎಸ್.ಡಿ. ಹಿರೇರಡ್ಡಿ; ಗು.ಮಾ. ವೀರಣ್ಣ; ಶಿ.ಗು. ಹಿರೇಮಠ; ಕಾಶ್ಯಪ ಪರ್ಣಕುಟಿ; ಜಿ.ವಿ. ವೀರಭದ್ರಯ್ಯನವರ; ಚಂದ್ರಶೇಖರ ಕುಳೇನೂರ; ಮರಳೀಹಳ್ಳಿ; ಬಾಳಾಸಾಹೇಬ ಲೋಕಾಪುರ; ಎಂ.ಡಿ.ಬಿರಾದಾರ; ಉದಯಚಂದ್ರ ದಿಂಡಾವರ; ದೊಡ್ಡಣ್ಣ ಬಜಂತ್ರಿ.

ಕಲಬುರಗಿ ವಲಯ

ಕೆ.ಬಿ. ಬ್ಯಾಳಿ; ಅಲ್ಲಮಪ್ರಭು ಬೆಟ್ಟದೂರ; ಎಚ್.ಎಸ್.ಪಾಟೀಲ; ಬಿ.ಎಂ. ಪುಟ್ಟಯ್ಯ; ಕೆ. ನೀಲಾ; ಬಸವರಾಜ ಸಬರದ; ಕೆ. ನೀಲಾ; ಕುಂ. ವೀರಭದ್ರಪ್ಪ; ಹೊ.ಮ. ಪಂಡಿತಾರಾಧ್ಯ; ಕಾಶೀನಾಥ ಅಂಬಲಗೆ; ಸಿದ್ಧರಾಮ ಹೊನಕಲ್; ತಿಮ್ಮನಗೌಡ್ರು; ಅಂದಾನೆಪ್ಪ ಬೆಣಕಲ್; ಮಹಾಂತೇಶ ಮಲ್ಲನಗೌಡರ; ವೀರೇಶ ಬಡಿಗೇರ; ಬಿ.ಎನ್. ಸೋಲಾಪುರೆ; ಮೃತ್ಯುಂಜಯ ರುಮಾಲೆ; ಹಣಮಗೌಡ ಪೋಲಿಸ ಪಾಟೀಲ; ಸೋಮಶೇಖರ ಹನ್ಮಂತಪ್ಪ; ಕೆ. ರಾಮಚಂದ್ರ; ಹನುಮಂತಪ್ಪ ಕುರಿ; ಸಿದ್ರಾಮರೆಡ್ಡಿ ಇಟಗಿ; ಮುನಿಯಪ್ಪ ಹುಬ್ಬಳ್ಳಿ.

ಹೊರ ಕರ್ನಾಟಕ

ಕಮಲಾ ಹೆಮ್ಮಿಗೆ; ಪ್ರಕಾಶ ಪರ್ವತಿಕರ; ಧರ್ಮದಾಸ ಬಾರ್ಕಿ; ಎ.ಕೆ. ಜಯವೀರ; ಗಿರೀಶ ಜಕಾಪುರೆ; ಪುರುಷೋತ್ತಮ ಬಿಳಿಮಲೆ; ತೇಜಸ್ವಿ ಕಟ್ಟೀಮನಿ; ಬಸವರಾಜ ಡೋಣೂರ.

*(ಟಿಪ್ಪಣಿ : ಬರುತ್ತೇನೆ ಅಂತ ಬರೆದವರು; ಅನಿವಾರ್ಯವಾಗಿ ಬಾರದವರು; ದೇಣಿಗೆ ಕೊಟ್ಟವರು; ಪ್ರತಿನಿಧಿಗಳಾದವರು; ಚಂದಾದಾರರು – ಎಲ್ಲ ಸೇರಿದ್ದಾರೆ ಈ ಪಟ್ಟಿಯಲ್ಲಿ. – **ಚಂಪಾ**)*

■



ಶಿವರಾಜ ಪಾಟೀಲ ಮನು ಬಳಿಗಾರ ನೀಲಾ ಪಾಟೀಲ



ಸಮಾರೋಪ : ೧೪ ಮಾರ್ಚ್ ೨೦೧೬

'ಹಸುರು' ವಸ್ತುಗಳನ್ನೇ ಖರೀದಿಸಿ ಮಾಲಿನ್ಯ ನಿಯಂತ್ರಣಕ್ಕೆ ಸಹಕರಿಸಿ

ಹಸುರು ಬದುಕಿನಲ್ಲಿ ಖುಷಿಯಿದೆ; ನೆಮ್ಮದಿ ಇದೆ. ಈ ಭೂಮಿಗೆ ರಕ್ಷಣೆ ಇದೆ

ಏನಿದು ಹಸುರು ಬಳಕೆ?

- ನಮ್ಮ ನಿತ್ಯ ಜೀವನದ ಅಗತ್ಯಗಳಿಗಾಗಿ ದಿನವೂ ಏನೆಲ್ಲ ಖರೀದಿಸುತ್ತೇವೆ.. ಆಹಾರ ಪದಾರ್ಥಗಳು, ಮನೆ ಬಳಕೆಯ ವಸ್ತುಗಳು, ಉಡುಗೆ-ತೊಡುಗೆಗಳು, ಸಾಧನ ಸಲಕರಣೆಗಳು, ವಾಹನಗಳು, ಗ್ರಾಹಕ ಬಳಕೆಯ ಉತ್ಪನ್ನಗಳು... ಇವೆಲ್ಲವೂ ಬಳಕೆಯಾದ ಮೇಲೆ ಎಲ್ಲಿಗೆ ಹೋಗುತ್ತವೆ? ಒಮ್ಮೆ ಯೋಚಿಸಿ. ಮರುಬಳಕೆಯಾಗಿಯೋ, ವಿಷ ಉಣಿಸದೆ ನೆಲದಲ್ಲಿ ಕರಗಿಯೋ ಇವೆಲ್ಲ ವಸ್ತುಗಳೂ ವಿಲೇವಾರಿ ಆಗುವಂತಿದ್ದರೆ ಎಷ್ಟು ಚೆನ್ನಾಗಿರುತ್ತದೆ ಅಲ್ಲವೆ? ಹೀಗೆ ಮಾಲಿನ್ಯವನ್ನು ನಿಯಂತ್ರಿಸುವ, ಪರಿಸರ ರಕ್ಷಿಸುವ, ನಮ್ಮ ಆರೋಗ್ಯವನ್ನೂ ಕಾಪಾಡುವ ಹಾಗೆ ಬದುಕನ್ನು ರೂಪಿಸಿಕೊಳ್ಳುವುದೇ ಹಸುರು ಬಳಕೆ.

ಹಸುರು ಬದುಕಿಗೆ ನೀವೇನು ಮಾಡಬೇಕು?

- ಪ್ರತಿದಿನ ಖರೀದಿಗೆ ಮನೆಯಿಂದ ಹೊರಡುವಾಗಲೇ ಏನು ಬೇಕು ಎಂಬುದನ್ನು ಪಟ್ಟಿ ಮಾಡಿಕೊಳ್ಳಿ; ವಸ್ತುಗಳನ್ನು ತರಲು ಬಟ್ಟೆಯ ಚೀಲವನ್ನು ಇಟ್ಟುಕೊಂಡೇ ಹೊರಡಿ.
- ಖರೀದಿ ಮಾಡುವಾಗ ದೊಡ್ಡ ಅಥವಾ ಮರುಬಳಕೆ ಮಾಡಬಹುದಾದ ಪ್ಯಾಕುಗಳನ್ನೇ ಖರೀದಿಸಿ:
- ಸ್ಥಳೀಯ ತರಕಾರಿ, ದಿನಸಿ ಉತ್ಪನ್ನಗಳನ್ನೇ ಖರೀದಿಸಿ; ಸರಕು ಸಾಗಾಟ ಕಡಿಮೆ ಮಾಡಿದಷ್ಟೂ ಪರಿಸರಕ್ಕೆ ಉತ್ತಮ.
- ನಿತ್ಯಜೀವನದಲ್ಲಿ ರಾಸಾಯನಿಕಗಳ ಬಳಕೆ ಕಡಿಮೆ ಮಾಡಿ. ಬದಲಿಗೆ, ಈಗ ಮಾರುಕಟ್ಟೆಯಲ್ಲಿ ಸಿಗುವ ನೂರಾರು ನಿಸರ್ಗದತ್ತ ಉತ್ಪನ್ನಗಳನ್ನು ಆಯ್ಕೆ ಮಾಡಿಕೊಳ್ಳಿ.
- ಜೈವಿಕ ಇಂಧನದ ಬಳಕೆಗಾಗಿ ನೀವೂ ಮುಂದಾಗಿ; ಪಾಳು ಜಾಗದಲ್ಲಿ, ಬೀದಿ ಬದಿಯಲ್ಲಿ ಜೈವಿಕ ಇಂಧನ ಕೊಡುವ ಗಿಡಮರಗಳನ್ನು ಬೆಳೆಯಿರಿ.
- ಆದಷ್ಟೂ ಪ್ಲಾಸ್ಟಿಕ್ ಬಳಕೆಯನ್ನು ತಗ್ಗಿಸಿ; ತ್ಯಾಜ್ಯಗಳನ್ನು ಮರುಬಳಕೆಗೆ ಕೊಡಿ.
- ಕಚೇರಿಯಲ್ಲಿ ಕಾಗದದ ಬಳಕೆಯನ್ನು ಮಿತಗೊಳಿಸಿ. ಪ್ರಿಂಟ್ ತೆಗೆಯಲೇ ಬೇಕಾದಾಗ ಎರಡೂ ಬದಿ ಬಳಸಿ.
- ಮನೆ-ಕಚೇರಿಗಳಲ್ಲಿ ವಿದ್ಯುತ್ ಬಳಕೆ ನಿಯಂತ್ರಿಸಿ; ಸಿಎಫ್‌ಎಲ್/ಎಲ್‌ಇಡಿ ಬಲ್ಬುಗಳನ್ನು ಬಳಸಿ. ಸ್ನಾನಕ್ಕಾಗಿ ಸೌರ ಶಕ್ತಿಯ ವಾಟರ್ ಹೀಟರ್ ಬಳಸಿ.
- ಮನೆಯ, ಕಚೇರಿಯ ಕಸವನ್ನು ವಿಂಗಡಿಸಿ, ಮರುಬಳಕೆಗೆ ಕೊಡಿ. ಗ್ರಾಹಕರಾದ ನಾವು ಕಸವನ್ನೂ ನಿರ್ವಹಣೆ ಮಾಡಿದಾಗಲೇ ಹಸುರು ಬಳಕೆದಾರರಾಗುತ್ತೇವೆ!

ಹಸುರು ಖರೀದಿ
ಸಂಸ್ಕೃತಿ ಬೆಳೆಸಿಕೊಳ್ಳೋಣ.

ಕೊಳ್ಳುಬಾಕ ಪ್ರವೃತ್ತಿಗೆ
ಕಡಿವಾಣ ಹಾಕೋಣ.

ನಿಸರ್ಗದೊಂದಿಗೆ
ಸಹಬಾಳ್ವೆ ನಡೆಸೋಣ

ಪರಿಸರ ಮಾಲಿನ್ಯಕ್ಕೆ
ವಿದಾಯ ಹೇಳೋಣ!

ಮಂಡಳಿಯ ಫೇಸ್‌ಬುಕ್
ಪುಟಕ್ಕೆ ಭೇಟಿ ನೀಡಿ
www.facebook.com/kspcbofficial

ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿಸಿದವರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು 560001

www.kspcb.gov.in